ಮಂಗಳವಾರ, ನವೆಂಬರ್ 18, 2025| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರತಿಭಟನೆ...
ಎಸ್‌ಐಆರ್ ಕಾರ್ಯದ ಹೊರೆಯಿಂದ ಮುಕ್ತಿ ನೀಡಬೇಕು ಎಂದು ಬೂತ್ ಮಟ್ಟದ ಅಧಿಕಾರಿಗಳು ಕೋಲ್ಕತ್ತದಲ್ಲಿ ಮುಖ್ಯ ಚುನಾವಣಾ ಅಧಿಕಾರಿಗಳ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು



ಸಿನ್ನರ್‌ಗೆ ಕಿರೀಟ
ಇಟಲಿಯ ಯಾನಿಕ್ ಸಿನ್ನರ್ ಅವರು ಟ್ಯೂರಿನ್‌ನಲ್ಲಿ ನಡೆದ ‘ಎಟಿಪಿ ಫೈನಲ್ಸ್’ನಲ್ಲಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರನ್ನು ಸೋಲಿಸಿ ಕಿರೀಟವನ್ನು ಮುಡಿಗೇರಿಸಿಕೊಂಡರು



ಹೆಚ್ಚುವರಿ ವಿದ್ಯುತ್ ಉತ್ಪಾದನೆಗೆ ದಾರಿ

ಕುಸುಮ್–ಸಿ: ಈ ಮುಂಚೆ 3,900 ಮೆಗಾವಾಟ್ ಉತ್ಪಾದನೆಗೆ ಅವಕಾಶ ಇತ್ತು

• ಎ.ಎಂ. ಸುರೇಶ

ಬೆಂಗಳೂರು: ಕುಸುಮ್–ಸಿ ಯೋಜನೆಯಡಿ ರಾಜ್ಯದಲ್ಲಿ ಇನ್ನೂ 750 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದನೆಗೆ ಕೇಂದ್ರ ಸರ್ಕಾರ ಅವಕಾಶ ಕಲ್ಪಿಸಿದೆ. ಈ ಯೋಜನೆಯಡಿ ವಿದ್ಯುತ್ ಉತ್ಪಾದಿಸಲು ಮುಂದೆ ಬರುವ ಖಾಸಗಿಯವರಿಗೆ ಕೇಂದ್ರ ಸರ್ಕಾರವು ಪ್ರತಿ ಮೆಗಾವಾಟ್‌ಗೆ ₹1.05 ಕೋಟಿ ಸಹಾಯಧನ ನೀಡಲಿದೆ.

‘ಈ ಮುಂಚೆ ಕುಸುಮ್– ಸಿ ಅಡಿಯಲ್ಲಿ 3,900 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದನೆಗೆ ಅವಕಾಶ ಇತ್ತು. ಈ ಪೈಕಿ 2,400 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಟೆಂಡರ್ ಕರೆಯಲಾಗಿದೆ. 1,500 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದನೆಗೆ ಟೆಂಡರ್ ಕರೆಯುವ ಹಂತದಲ್ಲಿ ಇದ್ದೇವೆ’ ಎಂದು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ (ಬೆಸ್ಕಾಂ) ಎನ್.ಶಿವಶಂಕರ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಮುಖ್ಯಾಂಶಗಳು

- ಮೂರು ಹಂತದಲ್ಲಿ ಯೋಜನೆ ಜಾರಿ
- ಖಾಸಗಿ ಜಾಗ ಸಿಗದ ಕಡೆ ಕೆರೆಯ ಸುತ್ತಲಿನ ಜಾಗ ಬಳಕೆ
- ರೈತರಿಗೆ ಗುಣಮಟ್ಟದ ವಿದ್ಯುತ್ ನೀಡುವ ಉದ್ದೇಶ

ಮೂರನೇ ಹಂತದಲ್ಲಿ 750 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದಿಸಲಾಗುತ್ತದೆ. ಇದರಲ್ಲಿ ಕಂಪನಿವಾರು ಹಂಚಿಕೆಯಾಗಬೇಕು. ಬೆಸ್ಕಾಂ ವ್ಯಾಪ್ತಿಯಲ್ಲಿ 300 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಅವಕಾಶ ಸಿಗಲಿದೆ. ಒಂದು ಮೆಗಾವಾಟ್ ಸೌರ ವಿದ್ಯುತ್ ಉತ್ಪಾದನೆಗೆ ₹3.5 ಕೋಟಿಯಿಂದ ₹4 ಕೋಟಿ ವೆಚ್ಚವಾಗಲಿದೆ. ಕೇಂದ್ರ ಸರ್ಕಾರ ನೀಡುವ ಸಹಾಯ ಧನದ ಸದುಪಯೋಗವನ್ನು ಖಾಸಗಿಯವರು ಪಡೆಯಬಹುದು ಎಂದು ಅವರು ವಿವರಿಸಿದರು.



ಶಿವಶಂಕರ್

ಮೊದಲ ಹಂತದಲ್ಲಿ ಟೆಂಡರ್ ಆಗಿರುವ 2,400 ಮೆಗಾವಾಟ್ ವಿದ್ಯುತ್ ಉತ್ಪಾದನೆಗೂ ಸಹಾಯಧನ ಸಿಗಲಿದೆ. ಆದರೆ, ಈಗ ಟೆಂಡರ್ ಆಗುವ ಹಂತದಲ್ಲಿರುವ 1,500 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಸಹಾಯಧನ ಸಿಗುವುದಿಲ್ಲ.

ಮೊದಲ ಹಂತದ ಉತ್ಪಾದನೆ ಪ್ರಕ್ರಿಯೆಯ ಸಂಪೂರ್ಣ ಗುರಿಯನ್ನು 2026ರ ಮಾರ್ಚ್ ವೇಳೆಗೆ ತಲುಪುವ ಯೋಜನೆ ಇದೆ. ಎರಡನೇ ಹಂತದಲ್ಲಿ 1,500 ಮೆಗಾವಾಟ್ ವಿದ್ಯುತ್ ಉತ್ಪಾದನೆ ಕಾರ್ಯ ಶುರುವಾಗಲು ಹತ್ತು ತಿಂಗಳು ಬೇಕಾಗಬಹುದು. ವಿದ್ಯುತ್ ವಿತರಣೆಯ ಉಪ ಕೇಂದ್ರಗಳ ವ್ಯಾಪ್ತಿಯಲ್ಲಿ, ಸೌರ ವಿದ್ಯುತ್ ಉತ್ಪಾದನೆಗೆ ಸ್ಥಳಗಳನ್ನು ಗುರುತಿಸಲಾಗುತ್ತದೆ. ಅಂತಹ ಕಡೆ ಖಾಸಗಿಯವರು ಸೌರ ವಿದ್ಯುತ್ ಉತ್ಪಾದನಾ ಘಟಕಗಳನ್ನು ಆರಂಭಿಸಬಹುದು.



ಒಂದು ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಸುಮಾರು ನಾಲ್ಕು ಎಕರೆ ಜಾಗ ಬೇಕಾಗುತ್ತದೆ. ಜಾಗವನ್ನು 25 ವರ್ಷಕ್ಕೆ ಗುತ್ತಿಗೆ ಪಡೆಯಬಹುದು. ಒಂದು ಎಕರೆಗೆ ವರ್ಷಕ್ಕೆ ₹25 ಸಾವಿರ ಬಾಡಿಗೆ ನಿಗದಿಪಡಿಸಲಾಗಿದೆ. ಈ ದರವನ್ನು ನೀಡಿ ಖಾಸಗಿಯವರು ರೈತರಿಂದ ಜಮೀನು ಪಡೆಯ ಬಹುದು. ಒಂದು ವೇಳೆ ಸರ್ಕಾರಿ ಜಾಗ ಇದ್ದರೆ, ಇನ್ನೂ ನೀಡಲಾಗುತ್ತದೆ. ಈ ರೀತಿ ಉತ್ಪಾದನೆ ಆಗುವ ಪ್ರತಿ ಯೂನಿಟ್ ವಿದ್ಯುತ್‌ಗೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು (ಕೆಇಆರ್‌ಸಿ) ಗರಿಷ್ಠ ₹3.17 ದರ ನಿಗದಿ ಮಾಡಿದೆ. ಆ ಪ್ರಕಾರ ಖರೀದಿ ಮಾಡಿ, ಆಯಾ ಫೀಡರ್‌ಗಳ ವ್ಯಾಪ್ತಿಯಲ್ಲಿ ಬರುವ ರೈತರ ಪಂಪ್‌ಸೆಟ್‌ಗಳಿಗೆ ಪೂರೈಸಲಾಗುತ್ತದೆ. ಇದರಿಂದ ರೈತರಿಗೆ ಹಗಲಿನಲ್ಲಿ ಗುಣಮಟ್ಟದ ವಿದ್ಯುತ್ ಪೂರೈಕೆಯಾಗಲಿದೆ. ಅಲ್ಲದೆ ವಿದ್ಯುತ್ ಪರಿವರ್ತಕಗಳ ಮೇಲಿನ ಒತ್ತಡ ಕಡಿಮೆಯಾಗಲಿದೆ ಎಂದು ಶಿವಶಂಕರ್ ತಿಳಿಸಿದರು.

ಬೆಂಗಳೂರು ಸುತ್ತಮುತ್ತ ಖಾಸಗಿ ಜಾಗ ಸಿಗುತ್ತಿಲ್ಲ. ಹೀಗಾಗಿ ಸಣ್ಣ ನೀರಾವರಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಒಪ್ಪಿಗೆ ಪಡೆದು ಕೆರೆಗಳ ಸುತ್ತಲಿನ ಜಾಗವನ್ನು ಬಳಸಿಕೊಂಡು ಸೌರ ವಿದ್ಯುತ್ ಘಟಕಗಳನ್ನು ಆರಂಭಿಸಲಾಗುತ್ತಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೂಲಿಬೆಲೆ ಕೆರೆಯ ಜಾಗದಲ್ಲಿ ಈಗಾಗಲೇ ಐದು ಮೆಗಾವಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ.

300 ಮೆಗಾವಾಟ್ ಉತ್ಪಾದನೆ ಶುರು

ಕುಸುಮ್-ಸಿ ಯೋಜನೆಗೆ ಈ ವರ್ಷದ ಜೂನ್ 11ರಂದು ರಾಜ್ಯದಲ್ಲಿ ಚಾಲನೆ ನೀಡಿದ್ದು, ಈಗಾಗಲೇ ಸುಮಾರು 300 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದನೆಯಾಗುತ್ತಿದೆ. ರಾಜ್ಯದ ಐದೂ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಸೌರ ವಿದ್ಯುತ್ ಘಟಕಗಳನ್ನು ಆರಂಭಿಸುವ ಕಾರ್ಯ ಪ್ರಗತಿಯಲ್ಲಿದೆ. ಜಾಗದ ಕೊರತೆಯಿಂದಾಗಿ ಕೆಲವೆಡೆ ನಿರೀಕ್ಷಿತ ಮಟ್ಟದಲ್ಲಿ ಗುರಿ ತಲುಪಲು ಸಾಧ್ಯವಾಗಿಲ್ಲ ಎಂದು ಇಂಧನ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಸುದ್ದಿ 2 ನಿಮಿಷ

ಜಾತಿವಾರು ಸಮೀಕ್ಷೆ ಸುಳ್ಳು ವರದಿ: ಆಯೋಗ ದೂರು

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ–2025ರ (ಜಾತಿವಾರು ಸಮೀಕ್ಷೆ) ಸುಳ್ಳು ಅಂಕಿಅಂಶಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿರುವ ಕಿಡಿಗೇಡಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಕೋರಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯ ಕಾರ್ಯದರ್ಶಿ ಕೆ.ಎ.ದಯಾನಂದ್ ಅವರು ಹೈಗ್ರೌಂಡ್ಸ್ ಠಾಣೆಗೆ ದೂರು ನೀಡಿದ್ದಾರೆ.

ರಾಜ್ಯದಲ್ಲಿ ಸೆ.22ರಿಂದ ಅ.31ರವರೆಗೆ ಸಮೀಕ್ಷೆ ನಡೆಸಲಾಗಿತ್ತು. ಸಮೀಕ್ಷೆಯಲ್ಲಿ ಭಾಗವಹಿಸದ ಜನರಿಗೆ ಆನ್‌ಲೈನ್ ಮೂಲಕ ಭಾಗವಹಿಸಲು ಇದೇ ನ.30ರವರೆಗೆ ಅವಕಾಶ ನೀಡಲಾಗಿದ್ದು, ಸಮೀಕ್ಷಾ ಕಾರ್ಯ ಇನ್ನೂ ಪ್ರಗತಿಯಲ್ಲಿದೆ. ಹೈಕೋರ್ಟ್‌ನಲ್ಲಿ ಹಲವು ಪ್ರಕರಣಗಳು ವಿಚಾರಣೆ ಹಂತದಲ್ಲಿವೆ. ಮಾಹಿತಿ ಸೋರಿಕೆಯಾಗದಂತೆ ಸಲ್ಲಿಸಿದ ಅಫಿಡವಿಟ್ ಪ್ರಕಾರ ಗೋಪ್ಯತೆ ಕಾಪಾಡಲಾಗಿದೆ. ಆದರೆ, ಕೆಲ ವಾಟ್ಸ್‌ಆ್ಯಪ್ ಗುಂಪುಗಳಲ್ಲಿ ‘ಕರ್ನಾಟಕದ ಜಾತಿ ಗಣತಿ ವರದಿ’ ಎಂಬ ಶೀರ್ಷಿಕೆ ಅಡಿ ವಿವಿಧ ಜಾತಿಗಳ ಒಟ್ಟು ಜನಸಂಖ್ಯೆಯನ್ನು ನಮೂದಿಸಿ ಹಂಚಿಕೊಂಡಿದ್ದಾರೆ. ಈ ಕುರಿತು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಬೇಕು ಎಂದು ಕೋರಿದ್ದಾರೆ.

‘ಆಯೋಗದ ಗಮನಕ್ಕೆ ಬಂದ ಮೊದಲ ಮೊಬೈಲ್ ನಂಬರ್ ಚಿಕ್ಕಮಗಳೂರಿನ ಶಿವ ಅವರಿಗೆ ಸೇರಿದ್ದು, ಅವರನ್ನು ತನಿಖೆಗೆ ಒಳಪಡಿಸಬೇಕು. ಈ ಕೃತ್ಯದ ಹಿಂದೆ ಇರುವವರನ್ನು ಪತ್ತೆ ಮಾಡಬೇಕು. ಸಾರ್ವಜನಿಕರಲ್ಲಿ ಗೊಂದಲ ಮೂಡಿಸುವ ಇಂತಹ ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಮನವಿ ಮಾಡಿದ್ದಾರೆ.



‘ತೋಂಟದ ಸಿದ್ಧಲಿಂಗಶ್ರೀ’ ಪುಸ್ತಕ ಪ್ರಶಸ್ತಿ ಪ್ರಕಟ

ವಿಜಯಪುರ: ವಿಜಯಪುರದ ಕನ್ನಡ ಪುಸ್ತಕ ಪರಿಷತ್ತು ಪ್ರಸಕ್ತ ಸಾಲಿನ ‘ಡಾ. ತೋಂಟದ ಸಿದ್ಧಲಿಂಗ ಶ್ರೀ’ ಪುಸ್ತಕ ಪ್ರಶಸ್ತಿಗೆ ಐದು ಕೃತಿಗಳನ್ನ ಆಯ್ಕೆ ಮಾಡಿದ್ದು, ನವೆಂಬರ್ 19ರಂದು ನಡೆಯುವ ಸಮಾರಂಭದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು ಎಂದು ಪರಿಷತ್ತಿನ ಅಧ್ಯಕ್ಷ ಪ.ಗು.ಸಿದ್ದಾಪುರ ತಿಳಿಸಿದ್ದಾರೆ.

ಮಂಗಳೂರಿನ ರಾಜಶೇಖರ ಹಳೆಮನಿ ಅವರ ‘ಒಡಲುಗೊಂಡವರು’ ಕಾದಂಬರಿ, ವಿಜಯಪುರದ ರಮೇಶ ಕತ್ತಿ ಅವರ ‘ಬಿರುನೆಲದ ಕಾವ್ಯ’ ಕೃತಿ, ಬೆಂಗಳೂರಿನ ಮಹಾದೇವ ಬಸರಕೋಡ ಅವರ ‘ಸುರದೇನು’ ಕೃತಿ, ತಾಳಿಕೋಟೆಯ ಸುಜಾತಾ ಚಲವಾದಿ ಅವರ ‘ಲಚಮವ್ವ’ ಕಥಾ ಸಂಕಲನ ಮತ್ತು ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾಲಯದ ಅಧಿಕಾರಿ ಮಲ್ಲಿಕಾರ್ಜುನ ಶೆಲ್ಲಿಕೇರಿ ಅವರ ‘ಹವೇಲಿ ದೊರೆಸಾನಿ’ ಕೃತಿಗಳು ಪ್ರಶಸ್ತಿಗೆ ಆಯ್ಕೆಯಾಗಿವೆ. ಪ್ರಶಸ್ತಿಯು ತಲಾ ₹10 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ.

‘ತೋಂಟದ ಸಿದ್ಧಲಿಂಗಶ್ರೀ’ ಸಮಗ್ರ ಪ್ರಶಸ್ತಿಗೆ ಮುಂಬೈನ ಸುಖಲಾಕ್ಷಿ ವೈ. ಸುವರ್ಣ, ಹೈದರಾಬಾದ್‌ನ ಪೊಟ್ಲೂರಿ ಹರಿಕೃಷ್ಣ, ಬಾಗಲಕೋಟೆಯ ಬಸವರಾಜ ಗವಿಮಠ, ಧಾರವಾಡದ ಚನ್ನಪ್ಪ ಅಂಗಡಿ ಮತ್ತು ಅಕ್ಕಲಕೋಟದ ವಿದ್ಯಾ ಕಲ್ಯಾಣಶೆಟ್ಟಿ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಗಳು ತಲಾ ₹ 2 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ.

ಸಾರ್ವಜನಿಕ ಹಿತಾಸಕ್ತಿಗೆ ಹಾನಿ: ಹೈಕೋರ್ಟ್ ಕಳವಳ

‘ರಾಜಕಾರಣಿ ನೇಮಕ ತರವಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಕಂಪನಿ ಅಥವಾ ಸಾರ್ವಜನಿಕ ವಲಯದ ಉದ್ಯಮಕ್ಕೆ ರಾಜಕಾರಣಿಯನ್ನು ಅಧ್ಯಕ್ಷರನ್ನಾಗಿ ನೇಮಿಸುವ ನಿರ್ಧಾರ ತರವಲ್ಲ’ ಎಂದಿರುವ ಹೈಕೋರ್ಟ್, ‘ಇದು ಕಾರ್ಮಿಕರ ದುಃಖವನ್ನು ಹೆಚ್ಚಿಸುವುದಲ್ಲದೆ ಸಾರ್ವಜನಿಕ ಹಿತಾಸಕ್ತಿಗೆ ಹಾನಿ ಉಂಟು ಮಾಡುತ್ತದೆ’ ಎಂದು ಕಳವಳ ವ್ಯಕ್ತಪಡಿಸಿದೆ.

ಪ್ರಕರಣವೊಂದರಲ್ಲಿ ಮಂಡ್ಯದ ನಾಗರಾಜಪ್ಪ (80) ಸಲ್ಲಿಸಿದ್ದ ರಿಟ್ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಡಿ.ಕೆ.ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ, 2008ರಿಂದ 2012ರವರೆಗೆ ಮೈಶುಗರ್ ಕಂಪನಿ ಅಧ್ಯಕ್ಷರಾಗಿದ್ದ ನಾಗರಾಜಪ್ಪ ಅವರ ಅವಧಿಯಲ್ಲಿನ ₹127 ಕೋಟಿ ನಷ್ಟದ ಬಗ್ಗೆ ಉಪ ಲೋಕಾಯುಕ್ತ ತನಿಖೆಗೆ ಆದೇಶ ನೀಡಿರುವುದನ್ನು ರದ್ದುಗೊಳಿಸಲು ನಿರಾಕರಿಸಿದೆ.

‘ಏಷ್ಯಾದ ಅತಿದೊಡ್ಡ ಸಕ್ಕರೆ ಕಾರ್ಖಾನೆಗಳಲ್ಲಿ ಒಂದಾದ ಮೈಶುಗರ್‌ಗೆ ಅರ್ಜಿದಾರರನ್ನು ರಾಜಕೀಯ ಕಾರಣಗಳಿಗಾಗಿ ಅಧ್ಯಕ್ಷರನ್ನಾಗಿ ನೇಮಿಸಿದ್ದು ಸರ್ಕಾರದ ಕೆಟ್ಟ ನಿರ್ಧಾರ’ ಎಂದು ಹೇಳಿರುವ ನ್ಯಾಯಪೀಠ, ‘ಸರ್ಕಾರಿ ಕಂಪನಿ ಅಥವಾ ಸಾರ್ವಜನಿಕ ವಲಯದ ಉದ್ಯಮದ ಅಧ್ಯಕ್ಷ ಹುದ್ದೆಗೆ ಉತ್ತಮ ಜ್ಞಾನವುಳ್ಳ ಮತ್ತು ವೃತ್ತಿಪರ ಶ್ರೇಷ್ಠತೆ ಹೊಂದಿದ ಅರ್ಹ ವ್ಯಕ್ತಿಗಳನ್ನು ಮಾತ್ರವೇ ನೇಮಿಸಬೇಕು’ ಎಂದು ತಿಳಿಸಿದೆ.

‘ಉಪ ಲೋಕಾಯುಕ್ತರು ಈಗಾಗಲೇ ನೀಡಿರುವ ವರದಿಯಲ್ಲಿ ಯಾವುದೇ ದೋಷ ಕಂಡುಬಂದಿಲ್ಲ. ಮೈಶುಗರ್ ಅಧ್ಯಕ್ಷರಾಗಿ ಅರ್ಜಿದಾರರು ತೆಗೆದುಕೊಂಡ ನಿರ್ಧಾರಗಳಿಂದ ಉಂಟಾದ ನಷ್ಟವನ್ನು ಸರಿದೂಗಿಸಿಕೊಳ್ಳಲು ಅಥವಾ ವಸೂಲು ಮಾಡಲು ಸೂಕ್ತ ಕ್ರಮ ಕೈಗೊಳ್ಳುವ ಶಿಫಾರಸುಗಳನ್ನು ಸರ್ಕಾರದ ವಿವೇಚನೆಗೆ ಬಿಡಲಾಗಿದೆ’ ಎಂದು ನ್ಯಾಯಪೀಠ ವಿವರಿಸಿದೆ.



ತಿಮರೋಡಿ ಗಡಿಪಾರು ಆದೇಶ ರದ್ದು

ಮಹೇಶ್ ಶೆಟ್ಟಿ ತಿಮರೋಡಿ ಅವರನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ಒಂದು ವರ್ಷದ ಅವಧಿಗೆ ಗಡಿಪಾರು ಮಾಡಿ ಪುತ್ತೂರು ಉಪ ವಿಭಾಗಾಧಿಕಾರಿ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

ಮಾನ್ವಿ ತಾಲ್ಲೂಕಿಗೆ ಗಡಿಪಾರು ಮಾಡಿ ಸೆಪ್ಟೆಂಬರ್ 18ರಂದು ಹೊರಡಿಸಿದ್ದ ಆದೇಶ ಪ್ರಶ್ನಿಸಿ ಮಹೇಶ್ ಶೆಟ್ಟಿ ತಿಮರೋಡಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪ್ರಕಟಿಸಿತು.

ಅರ್ಜಿಯನ್ನು ಭಾಗಶಃ ಪುರಸ್ಕರಿಸಿರುವ ನ್ಯಾಯಪೀಠ, ‘ಪ್ರಕರಣವನ್ನು ಹೊಸದಾಗಿ ಪರಿಗಣಿಸಿ ಸೂಕ್ತ ಆದೇಶ ಹೊರಡಿಸಿ’ ಎಂದು ಪುತ್ತೂರು ಉಪವಿಭಾಗಾಧಿಕಾರಿಗೆ ನಿರ್ದೇಶಿಸಿದೆ. ಈ ಹಿಂದಿನ ವಿಚಾರಣೆಯಲ್ಲಿ ಗಡಿಪಾರು ಆದೇಶವನ್ನು ಸಮರ್ಥಿಸಿಕೊಂಡಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ‘ಸ್ಥಳೀಯ ನಿವಾಸಿಯಾಗಿರುವ ಮಹೇಶ್ ಶೆಟ್ಟಿ ತಿಮರೋಡಿ ಸೌಜನ್ಯ ಚಳವಳಿ ಹೆಸರಲ್ಲಿ ಏನು ಮಾಡುತ್ತಿದ್ದಾರೆ ಎಂಬುದು ಸಾರ್ವಜನಿಕರಿಗೆ ಗೊತ್ತಿದೆ’ ಎಂದು ನ್ಯಾಯಪೀಠಕ್ಕೆ ಅರುಹಿದ್ದರು.

ಇದನ್ನು ಅಲ್ಲಗಳೆದಿದ್ದ ತಿಮರೋಡಿ ಪರ ಪದಾಂಕಿತ ಹಿರಿಯ ವಕೀಲ ತಾರಾನಾಥ ಪೂಜಾರಿ ‘ರಾಜ್ಯ ಸರ್ಕಾರ ತಿಮರೋಡಿ ವಿರುದ್ಧದ ಭಾವನೆ ಹೊಂದಿದೆ. ಅವರ ವಿರುದ್ಧ ಕ್ರಿಮಿನಲ್ ಪ್ರಕರಣಗಳು ಬಾಕಿ ಇವೆ ಎಂಬುದರ ಕುರಿತಾದ ಯಾವುದೇ ವಿವರಗಳನ್ನು ಸಮರ್ಪಕವಾಗಿ ಒದಗಿಸಿಲ್ಲ’ ಎಂದು ಪ್ರತಿಪಾದಿಸಿದ್ದರು. ತಿಮರೋಡಿ ವಿರುದ್ಧ ಹೈಕೋರ್ಟ್ ವಕೀಲ ಎಂ.ಆರ್. ಬಾಲಕೃಷ್ಣ ವಕಾಲತ್ತು ವಹಿಸಿದ್ದರು.

ಬೆಟ್ಟದ ನಂದಿಗೆ ಮಜ್ಜನ

ಚಿತ್ರ ಅನೂಪ್ ರಾಘ.ಟಿ.



ಮೈಸೂರಿನ ಚಾಮುಂಡಿ ಬೆಟ್ಟದ ನಂದಿ ವಿಗ್ರಹಕ್ಕೆ ಸೋಮವಾರ 20ನೇ ವರ್ಷದ ಮಹಾಭಿಷೇಕವು ಅದ್ದೂರಿಯಾಗಿ ನಡೆಯಿತು. ಒಮ್ಮೆ ಕೆಂಪು ವರ್ಣದಲ್ಲಿ, ಮತ್ತೊಮ್ಮೆ ಶ್ವೇತ, ಅರಿಸಿನದ ಬಣ್ಣಗಳಲ್ಲಿ ಕಂಗೊಳಿಸಿತು

‘ಬವೇರಿಯಾ ಜೊತೆ ಪಾಲುದಾರಿಕೆ: ಶೀಘ್ರ ಅಂತಿಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಮತ್ತು ಜರ್ಮನಿಯ ಬವೇರಿಯಾ ಪ್ರಾಂತ್ಯವು ಮಾಹಿತಿ ತಂತ್ರಜ್ಞಾನ, ವೈಮಾಂತರಿಕ್ಷ, ರಕ್ಷಣೆ, ಸಂಶೋಧನೆ ಮತ್ತು ಅಭಿವೃದ್ಧಿ, ಸೆಮಿಕಂಡಕ್ಟರ್, ನವೋದ್ಯಮ ಮುಂತಾದ ಕ್ಷೇತ್ರಗಳಲ್ಲಿ ಅಪಾರ ಪ್ರಗತಿ ಸಾಧಿಸಿದ್ದು, ದ್ವಿಪಕ್ಷೀಯ ಸಹಭಾಗಿತ್ವ ಮತ್ತು ಹೂಡಿಕೆಗೆ ಯಥೇಚ್ಛ ಅವಕಾಶಗಳಿವೆ. ಈ ಸಂಬಂಧ ನೀಲನಕ್ಷೆ ರೂಪಿಸಿ, ಶೀಘ್ರ ಅಂತಿಮರೂಪ ನೀಡಲಾಗುವುದು’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

ವಿಧಾನಸೌಧದಲ್ಲಿ ತಮ್ಮನ್ನು ಭೇಟಿಯಾದ ಬವೇರಿಯಾದ ಪ್ರಾಂತೀಯ ಸಂಸತ್ತಿನ ಅಧ್ಯಕ್ಷೆ ಐಲ್ ಏಗ್ನರ್ ನೇತೃತ್ವದ ನಿಯೋಗದ ಜತೆ ಅವರು ಮಾತುಕತೆ ನಡೆಸಿದರು. ‘ಕರ್ನಾಟಕವು ಬವೇರಿಯಾದ ಅತ್ಯುನ್ನತ ಪಾಲುದಾರ ಆಗಬೇಕೆಂದು ಈ ನಿಯೋಗದ ಸದಸ್ಯರು ಬಯಸಿದ್ದಾರೆ. ಈ ಸಂಬಂಧ ವಿಸ್ತೃತ ಚರ್ಚೆ ನಡೆಯಬೇಕಾದ ಅಗತ್ಯವಿದ್ದು, ತಂತ್ರಜ್ಞಾನ ವಿನಿಮಯ ಮಾಡಿಕೊಳ್ಳಲು ಪರಿಸ್ಥಿತಿ ನಿಚ್ಚಳವಾಗಿದೆ. ಸೂಪರ್ ಕಂಪ್ಯೂಟಿಂಗ್, ಕ್ವಾಂಟಂ ತಂತ್ರಜ್ಞಾನ ಕ್ಷೇತ್ರಗಳಲ್ಲೂ ಬವೇರಿಯಾ ಮುಂಚೂಣಿಯಲ್ಲಿದೆ. ನಾವು ಕೂಡ ಕ್ವಾಂಟಂ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ನೀತಿ ರೂಪಿಸಿದ್ದೇವೆ’ ಎಂದಿದ್ದಾರೆ.

‘ಬೆಂಗಳೂರಿನಲ್ಲಿ 20 ವರ್ಷಗಳಿಂದಲೂ ತನ್ನ ಪ್ರತಿನಿಧಿ ಕಚೇರಿಯನ್ನು ಹೊಂದಿರುವ ಬವೇರಿಯಾದಲ್ಲಿ ಉನ್ನತ ಶಿಕ್ಷಣ ಚೆನ್ನಾಗಿದೆ. ಅಲ್ಲಿನ ವಿಶ್ವವಿದ್ಯಾಲಯಗಳು ನಾವು ನಿರ್ಮಿಸುತ್ತಿರುವ ಕ್ವಿನ್ ಸಿಟಿಯಲ್ಲಿ ಕ್ಯಾಂಪಸ್ ತೆರೆಯಬಹುದು ಮತ್ತು ಸ್ಥಳೀಯ ವಿಶ್ವವಿದ್ಯಾಲಯಗಳೊಂದಿಗೆ ಜ್ಞಾನಾಧಾರಿತ ಒಡಂಬಡಿಕೆ ಮಾಡಿಕೊಳ್ಳಬಹುದು. ಜರ್ಮನಿಯಲ್ಲಿ ಭಾರತದ 200ಕ್ಕೂ ಹೆಚ್ಚು ಮತ್ತು ಭಾರತದಲ್ಲಿ ಅಲ್ಲಿನ 2 ಸಾವಿರಕ್ಕೂ ಹೆಚ್ಚು ಕಂಪನಿಗಳು ನೆಲೆಯೂರಿವೆ’ ಎಂದು ಅವರು ಹೇಳಿದ್ದಾರೆ.

‘ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯ ಯುವತಿಯರು ತಾಂತ್ರಿಕ ಶಿಕ್ಷಣ ಪಡೆಯುತ್ತಿರುವುದು ಅವರಿಗೆ ಅಚ್ಚರಿ ಮೂಡಿಸಿದೆ. ತಮ್ಮಲ್ಲೂ ಇಂತಹ ಕ್ರಮಗಳನ್ನು ಅಳವಡಿಸಿಕೊಳ್ಳಲು ಅವರು ಆಸಕ್ತಿ ತೋರಿಸಿದ್ದಾರೆ’ ಎಂದರು.

‘ಭಾರತ– ಚೀನಾ ಗಡಿ: ಪರಿಸ್ಥಿತಿ ಸುಧಾರಣೆ’

ನವದೆಹಲಿ: ಭಾರತ ಮತ್ತು ಚೀನಾದ ಗಡಿ ಭದ್ರತಾ ಪಡೆಗಳ ಸಿಬ್ಬಂದಿಯು ಕಳೆದ ಒಂದು ವರ್ಷದಲ್ಲಿ 1,100ಕ್ಕೂ ಅಧಿಕ ಸಲ ಪರಸ್ಪರ ಮಾತುಕತೆ ನಡೆಸಿದ್ದಾರೆ ಎಂದು ಸೇನಾ ಮುಖ್ಯಸ್ಥರಾದ ಜನರಲ್ ಉಪೇಂದ್ರ ದ್ವಿವೇದಿ ಸೋಮವಾರ ಹೇಳಿದ್ದಾರೆ.



‘ಎರಡೂ ಕಡೆಯವರು ಪ್ರತಿದಿನ ಸರಾಸರಿ ಮೂರು ಸಲ ಮಾತುಕತೆ ನಡೆಸಿದ್ದಾರೆ. ತಾವು ಪಹರೆ ನಡೆಸುತ್ತಿರುವ ಪ್ರದೇಶಗಳಲ್ಲಿ ಗಡಿಗೆ ಸಂಬಂಧಿಸಿದಂತೆ ಇರುವ ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಈ ಮಾತುಕತೆ ನಡೆದಿದೆ. 2024ರ ಅಕ್ಟೋಬರ್ ಬಳಿಕ ಗಡಿ ಭಾಗದಲ್ಲಿನ ಪರಿಸ್ಥಿತಿಯಲ್ಲಿ ಸಾಕಷ್ಟು ಸುಧಾರಣೆ ಕಂಡುಬಂದಿದೆ’ ಎಂದಿದ್ದಾರೆ.



ಪಾವಗಡ ತಾಲ್ಲೂಕಿನ ವೈ.ಎನ್. ಹೊಸಕೋಟೆಯಲ್ಲಿ ಸೋಮವಾರ ಸಾಂಪ್ರದಾಯಿಕ ಗೋವಿನ ಹಬ್ಬವನ್ನು ಆಚರಿಸಲಾಯಿತು

ಗೋವಿನ ಹಬ್ಬದ ಸಂಭ್ರಮ

ಪಾವಗಡ (ತುಮಕೂರು): ತಾಲ್ಲೂಕಿನ ವೈ.ಎನ್ ಹೊಸಕೋಟೆಯಲ್ಲಿ ಸೋಮವಾರ ಸಾಂಪ್ರದಾಯಿಕ ಗೋವಿನ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ಫಸಲು ಕಟಾವಿಗೆ ಬರುವ ಮುನ್ನದಿನ, ಕರುಗಳನ್ನು ಪೂಜಿಸುವುದು ವಾಡಿಕೆ. ಈ ಹಬ್ಬದಂದು ಉತ್ಸವ ಮೂರ್ತಿಗಳ ಸುತ್ತ ಜಾನುವಾರು ಪ್ರದಕ್ಷಿಣೆ ಹಾಕುವುದರಿಂದ ರೋಗರುಜಿನ ಬರುವುದಿಲ್ಲವೆಂಬ ನಂಬಿಕೆ ಈ ಭಾಗದಲ್ಲಿದೆ. ಗೌಡ ಗೊಂಚುಗಾರ, ಗುರಿಕಾರ, ತಳವಾರ, ಕುರುಬ ಗೌಡ, ಗೊಲ್ಲ ಗೌಡ, ಮನೆಗಾರರು ಭಾಗವಹಿಸಿದ್ದರು.

ಐಸಿಎಲ್ ಫಿನ್‌ಕಾರ್ಪ್‌ನಿಂದ ಹೊಸ ಎನ್‌ಸಿಡಿ

‘ಬಿಹಾರದಲ್ಲಿ 84 ಲಕ್ಷ ಮತ ಕಳ್ಳತನ’

ಬೀದರ್: ‘ಬಿಹಾರದಲ್ಲಿ 84 ಲಕ್ಷ ಮತಗಳ ಕಳ್ಳತನವಾಗಿದೆ. ವಿಧಾನಸಭೆ ಚುನಾವಣೆಗೂ ಮುನ್ನ ಮತದಾರರ ಪಟ್ಟಿಯಿಂದ 65 ಲಕ್ಷ ಮತದಾರರ ಮತಗಳನ್ನು ತೆಗೆದು, ಹೊಸದಾಗಿ 25 ಲಕ್ಷ ಮತದಾರರ ಹೆಸರು ಸೇರಿಸಿದ್ದಾರೆ’ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಆರೋಪಿಸಿದರು.

ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 100 ಸೀಟುಗಳಲ್ಲಿ ಸ್ಪರ್ಧಿಸಿದೆ. ಇದರಲ್ಲಿ 90ರಲ್ಲಿ ಗೆದ್ದಿದೆ. ಬಿಹಾರವೇನೂ ಅಮೆರಿಕನಾ? ಬೆಂಗಳೂರಿನಲ್ಲಿ ಟಾರ್ಚ್ ಹಾಕಿ ಹುಡುಕಿದರೆ ಮನೆ ಮನೆಯಲ್ಲಿ ಬಿಹಾರಿಗಳು ಸಿಗುತ್ತಾರೆ. ಬಿಜೆಪಿ ಬಿಹಾರದಲ್ಲಿ 90 ಸೀಟು ಗೆಲ್ಲಲು ಅವರೇನು ಸಾಧನೆ ಮಾಡಿದ್ದಾರೆ ಎಂದು ನಗರದಲ್ಲಿ ಸೋಮವಾರ ಪ್ರಶ್ನಿಸಿದರು.

ಚುನಾವಣಾ ಆಯೋಗವು ಎಸ್‌ಐಆರ್ ಹೆಸರಿನಲ್ಲಿ 65 ಲಕ್ಷ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಿದೆ. ಚುನಾವಣೆಗೆ ಒಂದು ತಿಂಗಳು ಇರುವಾಗ ಹೆಣ್ಣು ಮಕ್ಕಳ ಖಾತೆಗೆ ₹10 ಸಾವಿರ ಜಮೆ ಮಾಡಿದ್ದಾರೆ. ಬಿಜೆಪಿ ಕೇಂದ್ರದಲ್ಲಿ 11 ವರ್ಷಗಳಿಂದ ಆಡಳಿತ ನಡೆಸುತ್ತಿದೆ. ಹೀಗೆ ಹಣ ಕೊಡುವ ಉದ್ದೇಶ ಏನು ಎಂದು ಕೇಳಿದರು.

‘ರಮಣಶ್ರೀ ಪ್ರಶಸ್ತಿ’ ಪ್ರದಾನ ಸಮಾರಂಭದಲ್ಲಿ ಸಚಿವ ಎಂ.ಬಿ. ಪಾಟೀಲ

ಇಂಗ್ಲಿಷ್ ಕೃತಿಗಳಿಗೆ ₹5 ಕೋಟಿ ದೇಣಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಸವಾದಿ ಶರಣರು ಮತ್ತು ಅನುಭವ ಮಂಟಪದಲ್ಲಿನ ಚಿಂತನೆಗಳನ್ನು ಕುರಿತು ಜಾಗತಿಕ ಮಟ್ಟದಲ್ಲಿ ಇಂಗ್ಲಿಷ್‌ನಲ್ಲಿ ಪುಸ್ತಕಗಳನ್ನು ಪ್ರಕಟಿಸಲು ₹5 ಕೋಟಿ ದೇಣಿಗೆ ನೀಡುತ್ತೇನೆ’ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ರಮಣಶ್ರೀ ಪ್ರತಿಷ್ಠಾನ ಏರ್ಪಡಿಸಿದ್ದ ‘ರಮಣಶ್ರೀ ಪ್ರಶಸ್ತಿ’ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಉತ್ತರ ಕರ್ನಾಟಕದ ಸಾಧಕರಾದ ಫ.ಗು.ಹಳಕಟ್ಟಿ, ಸರ್ ಸಿದ್ದಪ್ಪ ಕಂಬಳಿ, ಲಿಂಗರಾಜ ದೇಸಾಯಿ, ಬಂತನಾಳದ ಪೂಜ್ಯರು, ಸಿದ್ಧೇಶ್ವರ ಸ್ವಾಮೀಜಿ ಅವರ ಬಗ್ಗೆ ಪುಸ್ತಕಗಳು ಪ್ರಕಟವಾಗಬೇಕು. ಬೆಂಗಳೂರು ಭಾಗದ ಸರ್ ಪುಟ್ಟಣ್ಣ ಚೆಟ್ಟಿ ಅಂಥವರ ಬಗ್ಗೆಯೂ ತಿಳಿಯಬೇಕು. ಈ ಮೂಲಕ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎನ್ನುವ ಭೇದ ಅಳಿಯಬೇಕು’ ಎಂದು ಅವರು ಸಲಹೆ ನೀಡಿದರು.



ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ರಮಣಶ್ರೀ ಪ್ರತಿಷ್ಠಾನದ ವತಿಯಿಂದ ವಿವಿಧ ಸಾಧಕರಿಗೆ ಸನ್ಮಾನ ಮಾಡಲಾಯಿತು. ವಿಶ್ವೇಶ್ವರ ಭಟ್, ಎಸ್ ಷಡಕ್ಷರಿ, ಬಸವರಾಜ ಬೊಮ್ಮಾಯಿ, ಎಂ.ಬಿ. ಪಾಟೀಲ, ಸಿ. ಸೋಮಶೇಖರ ಪಾಲ್ಗೊಂಡಿದ್ದರು

‘ಫ.ಗು.ಹಳಕಟ್ಟಿ ಅವರು ಇಲ್ಲದೆ ಹೋಗಿದ್ದರೆ ಬಸವ ಧರ್ಮವಾಗಲಿ, ವಚನ ಸಾಹಿತ್ಯವಾಗಲಿ, ನೂರಾರು ವಚನಕಾರರಾಗಲಿ ಬೆಳಕಿಗೆ ಬರುತ್ತಿರಲಿಲ್ಲ. ಅವರು ಮತ್ತು ಬಂತನಾಳದ ಪೂಜ್ಯರು ಸರ್ವಸ್ವವನ್ನೂ ತ್ಯಾಗ ಮಾಡಿ ವಚನ ಯುಗದ ಬಗ್ಗೆ ಬೆಳಕು ಚೆಲ್ಲುವ ಮಹಾನ್ ಕೆಲಸ ಮಾಡಿಹೋಗಿದ್ದಾರೆ. ಹಳಕಟ್ಟಿ ಅವರು ಆರಂಭಿಸಿದ್ದ ‘ಶಿವಾನುಭವ’ ಪತ್ರಿಕೆಯನ್ನು ಸದ್ಯದಲ್ಲೇ ಪುನಾರಂಭ ಮಾಡಲಾಗುವುದು’ ಎಂದರು.

ಲೇಖಕ ಎಸ್.ಷಡಕ್ಷರಿ ಅವರ ‘ಕ್ಷಣ ಹೊತ್ತು ಆಣಿಮುತ್ತು- ಭಾಗ 15’ ಪುಸಕ್ತವನ್ನು ಈ ಸಂದರ್ಭದಲ್ಲಿ ಜನಾರ್ಪಣೆ ಮಾಡಲಾಯಿತು.

ರೈಲ್ವೆ ಖಾತೆಯ ರಾಜ್ಯ ಸಚಿವ ವಿ.ಸೋಮಣ್ಣ, ‘ವಿಶ್ವವಾಣಿ’ಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಸಿ. ಸೋಮಶೇಖರ, ಸಾಹಿತಿ ಗೊ.ರು. ಚನ್ನಬಸಪ್ಪ ಉಪಸ್ಥಿತರಿದ್ದರು.

ಬಸವಣ್ಣನವರಂತೆ ಆಗೋಣ: ಬೊಮ್ಮಾಯಿ

‘ನಾವ್ಯಾರೂ ದೇವರಾಗಲು ಬಂದಿಲ್ಲ. ಬಸವಣ್ಣನ ಹಾಗೇ ಒಳ್ಳೆಯ ಮಾನವ ಆಗಬೇಕು. ಶರಣ ಸಾಹಿತ್ಯ ದೊಡ್ಡ ಪ್ರಮಾಣದಲ್ಲಿ ಬೆಳೆದಿದ್ದರೆ ಅದಕ್ಕೆ ಗೊ.ರು. ಚನ್ನಬಸಪ್ಪ ಅವರು ಕಾರಣ’ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

‘ಬಸವಣ್ಣ ಜಾಗತಿಕ ವ್ಯಕ್ತಿ. ಅದಕ್ಕೇ ಅವರನ್ನು ಜಗಜ್ಯೋತಿ ಬಸವೇಶ್ವರ ಎಂದು ಕರೆಯುತ್ತಾರೆ. ಜಗತ್ತಿಗೆ ಜ್ಯೋತಿ ಕೊಡುವ ಶಕ್ತಿ ಬಸವಣ್ಣ’ ಎಂದರು.

ಫಲ ಕೊಡದ ಅರಣ್ಯ ಇಲಾಖೆ ಕಾರ್ಯಾಚರಣೆ: ಕೆಆರ್‌ಎಸ್ ಡ್ಯಾಂನಿಂದ ನೀರಿನ ಹರಿವು ಇಳಿಕೆ

ಶಿವನಸಮುದ್ರ: ಕಾಲುವೆಗೆ ಬಿದ್ದ ಕಾಡಾನೆ

ಪ್ರಜಾವಾಣಿ ವಾರ್ತೆ

ಮಳವಳ್ಳಿ (ಮಂಡ್ಯ): ತಾಲ್ಲೂಕಿನ ಶಿವನಸಮುದ್ರ (ಬ್ಲಫ್) ಬಳಿಯ ‘ಪಯೋನಿಯರ್ ಜಂಕೋ ಲಿಮಿಟೆಡ್ ವಿದ್ಯುತ್ ಉತ್ಪಾದನಾ ಕೇಂದ್ರ’ದ ಕಾಲುವೆಗೆ ಕಾಡಾನೆ ಬಿದ್ದಿದ್ದು, ಮೂರು ದಿನಗಳಿಂದ ಮೇಲೆ ಬರಲು ಸಾಧ್ಯವಾಗದೆ ಪರದಾಡುತ್ತಿದೆ.

ಖಾಸಗಿ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ನೀರು ಪೂರೈಸುವ ಸುಮಾರು 20 ಅಡಿ ಆಳದ ಕಾಲುವೆ ಗೇಟ್ ಮೂಲಕ ಶನಿವಾರ ರಾತ್ರಿ ಕಾಡಾನೆಯು ನೀರು ಕುಡಿಯಲು ಇಳಿದಿದೆ. ಆದರೆ, ನೀರಿನ ಹರಿವಿನ ರಭಸಕ್ಕೆ ಕಾಲುವೆಯಿಂದ ಮೇಲೆ ಬರಲು ಸಾಧ್ಯವಾಗದೆ ಅಲ್ಲಿಯೇ ಓಡಾಡುತ್ತಿದೆ.

ಭಾನುವಾರ ಬೆಳಿಗ್ಗೆ ಆನೆಯ ಓಡಾಟವನ್ನು ಗಮನಿಸಿದ ಕೇಂದ್ರದ ಸಿಬ್ಬಂದಿ, ಆನೆ ವಾಪಸ್ ಹೋಗಬಹುದೆಂದು ಕಾದರು. ಆದರೆ, ಸಂಜೆವರೆಗೂ ಅದು ಮೇಲೆ ಬರಲಿಲ್ಲ. ಆಗ, ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ವಿಷಯ ತಿಳಿಸಿದರು.



ಮಳವಳ್ಳಿ ತಾಲ್ಲೂಕಿನ ಶಿವನಸಮುದ್ರ (ಬ್ಲಫ್) ಬಳಿಯ ಖಾಸಗಿ ವಿದ್ಯುತ್ ಉತ್ಪಾದನಾ ಕೇಂದ್ರದ ಕಾಲುವೆಗೆ ಕಾಡಾನೆ ಬಿದ್ದಿದ್ದು ರಕ್ಷಣಾ ಕಾರ್ಯ ನಡೆದಿದೆ

ಸೋಮವಾರ ಬೆಳಿಗ್ಗೆ ಕಾರ್ಯಾಚರಣೆ ಆರಂಭಿಸಿದ ಅಧಿಕಾರಿಗಳು ಕಾಡಾನೆಯು ಕಾಲುವೆಯಿಂದ ಮೇಲೆ ಬರುವಂತೆ ಮಾಡಲು ಪ್ರಯತ್ನ ನಡೆಸುತ್ತಿದ್ದಾರೆ. ಸಂಜೆಯಾದರೂ ಆನೆಯು ಗೇಟ್‌ನಿಂದ ಹೊರಕ್ಕೆ ಬಾರದಿರುವುದರಿಂದ, ಕೆಆರ್‌ಎಸ್ ಜಲಾಶಯದಿಂದ ನೀರಿನ ಹರಿವಿನ ಪ್ರಮಾಣವನ್ನು ಕಡಿಮೆ ಮಾಡಲು ಜಿಲ್ಲಾಧಿಕಾರಿ ಕುಮಾರ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ ಎನ್ನಲಾಗಿದೆ.

‘ಆನೆಯು ಆಹಾರವಿಲ್ಲದೇ ಆತಂಕದಲ್ಲಿರುವುದನ್ನು ಗಮನಿಸಿದ ಅಧಿಕಾರಿಗಳು ಕಬ್ಬು ತರಿಸಿ ಕಾಲುವೆಗೆ ಹಾಕಿದ್ದಾರೆ. ಆನೆಯ ಪ್ರಜ್ಞೆ ತಪ್ಪಿಸಿ ಕ್ರೇನ್ ಮೂಲಕ ಮೇಲೆತ್ತುವ ಪ್ರಯತ್ನಕ್ಕೂ ಮುಂದಾಗಿದ್ದಾರೆ. ಎರಡು ಕ್ರೇನ್‌ಗಳನ್ನು ತರಲಾಗಿದೆ’ ಎಂದು ಸ್ಥಳೀಯರು ಮಾಹಿತಿ ನೀಡಿದ್ದಾರೆ.

‘ನಿನ್ನೆಯಿಂದ ಕಾರ್ಯಾಚರಣೆ ಸ್ಥಳದಲ್ಲೇ ಇದ್ದೇನೆ. ರಕ್ಷಣಾ ಕಾರ್ಯ ನಿರಂತರವಾಗಿ ನಡೆದಿದೆ’ ಎಂದು ಮಂಡ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಿ.ರಘು ತಿಳಿಸಿದರು.

ರಹಸ್ಯ ಕಾರ್ಯಾಚರಣೆ: ಆರೋಪ

‘ಕಾಡಾನೆ ಕಾಲುವೆಗೆ ಬಿದ್ದು ಮೂರು ದಿನವಾದರೂ ರಕ್ಷಿಸದ ಬಗ್ಗೆ ಸಾರ್ವಜನಿಕರಿಂದ ಟೀಕೆಗಳು ವ್ಯಕ್ತವಾದ ಬಳಿಕ ಕಾರ್ಯಾಚರಣೆ ಆರಂಭವಾಗಿದೆ. ಮಾಹಿತಿಯನ್ನು ಗೋಪ್ಯವಾಗಿಡಲೆಂದೇ ವಿದ್ಯುತ್ ಉತ್ಪಾದನಾ ಕೇಂದ್ರದ ಸ್ಥಳೀಯ ಉದ್ಯೋಗಿಗಳಿಗೆ ರಜೆ ನೀಡಲಾಗಿದೆ’ ಎಂಬ ಆರೋಪ ಕೇಳಿಬಂದಿದೆ.

‘ಕಾರ್ಯಾಚರಣೆ ಸ್ಥಳಕ್ಕೆ ತೆರಳಲು ಮುಂದಾದ ಸ್ಥಳೀಯರು ಹಾಗೂ ಮಾಧ್ಯಮದವರನ್ನು ತಡೆಯಲಾಗುತ್ತಿದೆ. ಯಾವ ವೈಫಲ್ಯಗಳನ್ನು ಮುಚ್ಚಿಡಲು ಇಂಥ ರಹಸ್ಯ ಕಾರ್ಯಾಚರಣೆ ನಡೆಸಲಾಗುತ್ತಿದೆ’ ಎಂದು ಮಲ್ಲಿಕ್ಯಾತನಹಳ್ಳಿಯ ರವಿ ಪ್ರಶ್ನಿಸಿದ್ದಾರೆ.



prajavani.net | prajavani

ಮಂಗಳವಾರ, ನವೆಂಬರ್ 18, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 318 | ಪುಟ 16

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಸೆನ್ಸೆಕ್ಸ್ 84,950 | ನಿಫ್ಟಿ 26,013 | $/₹ 88.59 | ಚಿನ್ನ (Std. 10g) ₹1,28,700 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,66,800 (ಬೆಂಗಳೂರು)

ಸಂಪುಟ ಪುನರ್ ರಚನೆ ಸಂಚಲನ

ಮಲ್ಲಿಕಾರ್ಜುನ ಖರ್ಗೆ ಜತೆ ಒಂದು ಗಂಟೆ ಸಮಾಲೋಚಿಸಿದ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ. ಶಿವಕುಮಾರ್ ಅವರು ತಮ್ಮ ದಂಡು ದರ್ಬಾರಿನೊಂದಿಗೆ ರಾಜಧಾನಿಯಲ್ಲಿ ತಮ್ಮದೇ 'ತಂತ್ರಗಾರಿಕೆ'ಯನ್ನು ಹೊಸೆದಿದ್ದು, ಕರ್ನಾಟಕದ ರಾಜಕೀಯದಲ್ಲಿ ಸಂಚಲನಕ್ಕೆ ನಾಂದಿ ಹಾಡಿದೆ.

ಎರಡೂವರೆ ವರ್ಷ ಪೂರ್ಣಗೊಂಡ ಬಳಿಕ ಅಧಿಕಾರ ಹಸ್ತಾಂತರವಾಗಲಿದೆ ಎಂಬ ವದಂತಿಗಳಿಗೆ ಇತಿಶ್ರೀ ಹಾಡುವ ಸಂಕಲ್ಪ ಬಲದೊಂದಿಗೆ ದಿನಬಿಟ್ಟು ದಿನ ಎರಡು ಬಾರಿ ದೆಹಲಿಗೆ ದೌಡಾಯಿಸಿದ್ದ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿದರು. 'ನವೆಂಬರ್ ಕ್ರಾಂತಿ'ಯ ಗೊಂದಲಗಳಿಗೆ ತೆರೆ ಎಳೆದು, ಅಧಿಕಾರ ಮುಂದುವರಿಕೆ ಕುರಿತು ತಮ್ಮ ಹಕ್ಕನ್ನು ಅವಧಿಪೂರ್ಣವಾಗುವವರೆಗೆ ಪ್ರತಿಷ್ಠಾಪಿಸುವತ್ತ ಮುಂದಡಿಯನ್ನೂ ಇಟ್ಟಿದ್ದಾರೆ.

ಇದೇ ಅವಧಿಯಲ್ಲಿ ಮುಖ್ಯಮಂತ್ರಿ ಗಾದಿ ಹಿಡಿದೇ ತೀರಬೇಕೆಂಬ ಛಲ ತೊಟ್ಟಿರುವ ಡಿ.ಕೆ. ಶಿವಕುಮಾರ್, ಕೂಡ ನಾಯಕರ ಮನೆಗೆ ಎಡತಾಕಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರನ್ನು ಭೇಟಿ ಮಾಡಿ ತಮ್ಮ ಆಕಾಂಕ್ಷೆಯನ್ನೂ ತೋಡಿಕೊಂಡರು. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಭೇಟಿಗೆ ಯತ್ನಿಸಿದರೂ ಅದು ಸಾಧ್ಯವಾಗಲಿಲ್ಲ. ರಾಹುಲ್ ಭೇಟಿಯ ಮಹಾ ನಿರೀಕ್ಷೆಯಲ್ಲಿ ಮಂಗಳವಾರ ಮತ್ತೆ ಇಲ್ಲಿಗೆ ಬರಲಿರುವ ಶಿವಕುಮಾರ್, ಮತ್ತೊಂದು ಸುತ್ತಿನ ಪ್ರಯತ್ನ ಆರಂಭಿಸುವ ಸಾಧ್ಯತೆಯೂ ಇದೆ ಎನ್ನಲಾಗಿದೆ.

ಕರ್ನಾಟಕದ ನಾನಾ ಹಕ್ಕೊತ್ತಾಯಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಲು ರಾಷ್ಟ್ರ ರಾಜಧಾನಿಗೆ ಸೋಮವಾರ ಬಂದಿದ್ದ ಸಿದ್ದರಾಮಯ್ಯ ಅವರು ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಸುಮಾರು ಒಂದು ಗಂಟೆ ಚರ್ಚಿಸಿದರು. ಪುನರ್ ರಚನೆ ಬಗ್ಗೆ ಅವರಲ್ಲಿ ಪ್ರಸ್ತಾಪಿಸಿದರು.

'ನವೆಂಬರ್ 20ಕ್ಕೆ ಸರ್ಕಾರಕ್ಕೆ ಎರಡೂವರೆ ವರ್ಷ ಆಗಲಿದೆ. ಹೈಕಮಾಂಡ್ ನಾಯಕರು ಈ ಹಿಂದೆ ಸೂಚಿಸಿದ್ದಂತೆ ಸಂಪುಟ ಪುನರ್ ರಚನೆ ಮಾಡಲು ಈಗ ಸಿದ್ಧನಿದ್ದೇನೆ. ಪ್ರಸ್ತುತ ಸಂಪುಟದಲ್ಲಿ ಎರಡು ಸ್ಥಾನಗಳು ಖಾಲಿ ಇವೆ. ಕನಿಷ್ಠ ಎಂಟು ಅಥವಾ ಗರಿಷ್ಠ 12 ಸಚಿವರನ್ನು ಸಂಪುಟದಿಂದ ಕೈಬಿಡಬಹುದು. ಆಗ ಹಿರಿಯರಿಗೆ ಹಾಗೂ ಹೊಸಬರಿಗೆ ಅವಕಾಶ ನೀಡಬಹುದು' ಎಂದು ಸಿದ್ದರಾಮಯ್ಯ ಅವರು ಖರ್ಗೆ ಅವರಿಗೆ ಮನವರಿಕೆ ಮಾಡಿಕೊಟ್ಟರು ಎಂದು ಮೂಲಗಳು ತಿಳಿಸಿವೆ.

'ಸಂಪುಟದಲ್ಲಿ ಎಷ್ಟು ಬದಲಾವಣೆ ಮಾಡಬಹುದು, ಯಾರನ್ನು ಕೈಬಿಡಬಹುದು, ಯಾರನ್ನು ಸೇರ್ಪಡೆ ಮಾಡಬಹುದು ಎಂಬ ಬಗ್ಗೆ ಖರ್ಗೆ ಮಾಹಿತಿ ಪಡೆದುಕೊಂಡರು. ರಾಹುಲ್ ಗಾಂಧಿ ಜತೆಗೆ ಸಮಾಲೋಚಿಸಿ ಈ ಬಗ್ಗೆ ತಿಳಿಸುವೆ ಎಂದು ಖರ್ಗೆ ತಿಳಿಸಿದರು' ಎಂದು ಮೂಲಗಳು ಹೇಳಿವೆ.

'ಪುನರ್ ರಚನೆಯ ಪ್ರಸ್ತಾಪಕ್ಕೆ ಎಐಸಿಸಿ ಅಧ್ಯಕ್ಷರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನೂ ಕೂರಿಸಿಕೊಂಡು ಸಭೆ ನಡೆಸಿ ತೀರ್ಮಾನಕ್ಕೆ ಬರೋಣ ಎಂದೂ ತಿಳಿಸಿದ್ದಾರೆ' ಎಂದು ಮುಖ್ಯಮಂತ್ರಿ ಆಪ್ತ ಮೂಲಗಳು ತಿಳಿಸಿವೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಸವರಾಜ ರಾಯರಡ್ಡಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಎಚ್‌.ಸಿ. ಮಹದೇವಪ್ಪ ಮತ್ತು ಇತರೆ ಸಚಿವರು ಹಾಗೂ ಶಾಸಕರುಗಳ ಜೊತೆಗೆ ದೆಹಲಿಯ ಕರ್ನಾಟಕ ಭವನದಲ್ಲಿ ಭೋಜನ ಸವಿದರು

'ಹೈಕಮಾಂಡ್ ಸೂಚನೆ ನೀಡಿದರೆ ಮುಂದಡಿ'

'ಹೈಕಮಾಂಡ್ ನಾಯಕರು ಸೂಚಿಸಿದರೆ ಸಚಿವ ಸಂಪುಟ ಪುನರ್ ರಚನೆ ಮಾಡುತ್ತೇನೆ' ಎಂದು ಸಿದ್ದರಾಮಯ್ಯ ತಿಳಿಸಿದರು.

ಖರ್ಗೆ ಭೇಟಿಗೆ ಮುನ್ನ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಅವರು ಎಷ್ಟು ಜನರನ್ನು ಬದಲಾವಣೆ ಮಾಡಬೇಕೆಂದು ಹೇಳಿದರೆ ಅಷ್ಟು ಮಾಡುವೆ. ಈ ಬಗ್ಗೆ ಚರ್ಚಿಸಲು ಖರ್ಗೆ ಅವರನ್ನು ಭೇಟಿ ಮಾಡುತ್ತಿದ್ದೇನೆ' ಎಂದರು.

'ಸಚಿವ ಸಂಪುಟ ಪುನರ್ ರಚನೆ ಬಗ್ಗೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಮಾತನಾಡಿಲ್ಲ. ಖರ್ಗೆ ಅವರು ಕೇಳಿದರೆ ಮಾತನಾಡುವೆ' ಎಂದರು.

▶6

ಗುಡುಗಿದ ಡಿ.ಕೆ. ಸಹೋದರರು

ಅಧಿಕಾರ ಹಸ್ತಾಂತರ ವಿಷಯದ ಬಗ್ಗೆ ಸ್ಪಷ್ಟತೆ ಸಿಗುವ ಮೊದಲೇ ಸಚಿವ ಸಂಪುಟ ಪುನರ್ ರಚನೆಯತ್ತ ಹೆಜ್ಜೆ ಇಟ್ಟಿರುವ ಸಿದ್ದರಾಮಯ್ಯ ಬಣದ ಬಗ್ಗೆ ಡಿ.ಕೆ. ಶಿವಕುಮಾರ್ ಸಹೋದರರು ಕಿಡಿಕಿಡಿಯಾಗಿದ್ದಾರೆ.

'ಅವರು (ಸಿದ್ದರಾಮಯ್ಯ ಬಣದವರು) ಈಗ ಆಟ ಆರಂಭಿಸಿದ್ದಾರೆ. ನಾವು ಅದಕ್ಕೆ ಅಂತ್ಯ ಹಾಡುತ್ತೇವೆ ಎಂದು ಸಹೋದರರು ಆಪ್ತರ ಮುಂದೆ ಗುಡುಗಿದ್ದಾರೆ' ಎಂದು ಗೊತ್ತಾಗಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭಾನುವಾರ ಸಂಜೆ ಭೇಟಿ ಮಾಡಿದ್ದ ಶಿವಕುಮಾರ್ ಸುದೀರ್ಘವಾಗಿ ಸಮಾಲೋಚಿಸಿದ್ದರು.

▶6

ಹಸೀನಾಗೆ ಮರಣ ದಂಡನೆ

ಪ್ರಜಾವಾಣಿ ವಾರ್ತೆ/ಪಿಟಿಐ

ಢಾಕಾ/ನವದೆಹಲಿ: 2024ರಲ್ಲಿ ಬಾಂಗ್ಲಾದೇಶದಲ್ಲಿ ನಡೆದ ದಂಗೆಯ ಸಂದರ್ಭದಲ್ಲಿ ಅಲ್ಲಿನ ಆಗಿನ ಪ್ರಧಾನಿ ಶೇಖ್ ಹಸೀನಾ 'ಮಾನವೀಯತೆ ವಿರುದ್ಧ ಅಪರಾಧ ಎಸಗಿದ್ದಾರೆ' ಎಂದು ತೀರ್ಮಾನಿಸಿರುವ ಬಾಂಗ್ಲಾದೇಶದಲ್ಲಿರುವ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಯು, 78 ವರ್ಷದ ಹಸೀನಾ ಅವರಿಗೆ ಸೋಮವಾರ ಮರಣ ದಂಡನೆ ವಿಧಿಸಿದೆ.

ಮೀಸಲಾತಿ ನೀಡುವಲ್ಲಿ ತಾರತಮ್ಯ ಎಸಗಲಾಗುತ್ತಿದೆ ಎಂದು ಆರೋಪಿಸಿ ವಿದ್ಯಾರ್ಥಿಗಳು ಕಳೆದ ಜುಲೈನಲ್ಲಿ ದೇಶದಾದ್ಯಂತ ತೀವ್ರ ಪ್ರತಿಭಟನೆ ಆರಂಭಿಸಿದ್ದರು. ಪ್ರತಿಭಟನಕಾರರನ್ನು ನಿಯಂತ್ರಿಸಲು ಅವರ ಮೇಲೆ ಗುಂಡು ಹಾರಿಸಲು ಸೇನೆ ಮತ್ತು ಪೊಲೀಸರಿಗೆ ಹಸೀನಾ ಅವರು ಆದೇಶಿಸಿದ್ದರು.

ಆಗಸ್ಟ್ 5ರಂದು ಢಾಕಾದಲ್ಲಿ ನಡೆದಿದ್ದ ಪ್ರತಿಭಟನೆ ವೇಳೆ ಆರು ಮಂದಿ ಪ್ರತಿಭಟನಕಾರರ ಮೇಲೆ ಗುಂಡು ಹಾರಿಸಲು ಮತ್ತು ಅವರ ಹತ್ಯೆ ಮಾಡಲು ಆದೇಶ ನೀಡಿದ್ದ ಪ್ರಕರಣಕ್ಕೆ ಸಂಬಂಧಿಸಿ ಹಸೀನಾ ಅವರಿಗೆ ಮರಣ ದಂಡನೆ ವಿಧಿಸಲಾಗಿದೆ.

ಪ್ರತಿಭಟನೆಯು ತೀವ್ರಗೊಳ್ಳುತ್ತಿದ್ದಂತೆ ಹಸೀನಾ ಸೇರಿದಂತೆ ಹಲವು ಹಿರಿಯ ಪೊಲೀಸ್ ಅಧಿಕಾರಿಗಳು ಆಗಸ್ಟ್‌ನಲ್ಲಿಯೇ ಬಾಂಗ್ಲಾವನ್ನು ತೊರೆದಿದ್ದರು. ಹಸೀನಾ ಅವರು ಭಾರತದಲ್ಲಿ ಆಶ್ರಯ ಪಡೆದುಕೊಂಡಿದ್ದಾರೆ. ಹಸೀನಾ ಅವರು ಪಲಾಯನ ಮಾಡಿದ ಬಳಿಕ ಸರ್ಕಾರ ಪತನವಾಗಿತ್ತು. ಸದ್ಯ ಮಧ್ಯಂತರ ಸರ್ಕಾರ ಅಧಿಕಾರದಲ್ಲಿದೆ.

'ಹಸೀನಾ ಅವರೇ ಪ್ರತಿಭಟನೆಯನ್ನು ದಮನ ಮಾಡುವ ಸಲುವಾಗಿ ನಡೆಸಿದ ಹಿಂಸೆಯ 'ಮಾಸ್ಟರ್‌ಮೈಂಡ್' ಆಗಿದ್ದಾರೆ. ಹಸೀನಾ ಅವರೇ ತಪ್ಪಿತಸ್ಥರು ಎಂಬುದನ್ನು ಯಾವುದೇ ಸಂಶಯಕ್ಕೆ ಎಡೆ ಇಲ್ಲದಂತೆ ಸಾಬೀತು ಮಾಡಲಾಗಿದೆ' ಎಂದು ನ್ಯಾಯಮಂಡಳಿ ಅಭಿಪ್ರಾಯಪಟ್ಟಿದೆ.

ಮೃತರ ಕುಟುಂಬಗಳ ಸಂತಸ: ಪ್ರತಿಭಟನೆ ವೇಳೆ ಮೃತಪಟ್ಟವರ ಮತ್ತು ಗಾಯಾಳುಗಳ ಕುಟುಂಬದವರು ತೀರ್ಪಿನ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ. ಐಜಿಪಿ ಮಾಮೂನ್ ಅವರಿಗೆ ವಿಧಿಸಿರುವ ಶಿಕ್ಷೆಯ ಪ್ರಮಾಣದ ಬಗ್ಗೆ ಬೇಸರ ವ್ಯಕ್ತಪಡಿಸಿರುವ ಕುಟುಂಬಗಳು, ಈ ಕುರಿತು ಸುಪ್ರೀಂ ಕೋರ್ಟ್ ಮೊರೆ ಹೋಗುವುದಾಗಿ ಹೇಳಿವೆ. ಹಸೀನಾ ಅವರನ್ನು ಭಾರತವು ವಿಳಂಬ ಮಾಡದೆಯೇ ಬಾಂಗ್ಲಾದೇಶಕ್ಕೆ ವಾಪಸು ಕಳುಹಿಸಬೇಕು ಎಂದೂ ಒತ್ತಾಯಿಸಿವೆ.

▶6

'ನಾನು ಭಯಪಡುವುದಿಲ್ಲ'

ಜನಾದೇಶವನ್ನೇ ಪಡೆಯದ ಸರ್ಕಾರವು ಈ ನ್ಯಾಯಮಂಡಳಿಯನ್ನು ರಚಿಸಿದೆ. ಇಂಥ ಮೋಸದ ನ್ಯಾಯಮಂಡಳಿಯು ನೀಡಿದ ತೀರ್ಪು ಇದು. ಈ ತೀರ್ಪು ರಾಜಕೀಯ ಪ್ರೇರಿತವಾಗಿದ್ದು, ಪಕ್ಷಪಾತಿಯಾಗಿದೆ. ಮರಣದಂಡನೆ ವಿಧಿಸಿರುವುದು ಅಸಹ್ಯಕರ. ಜನರಿಂದ ಆಯ್ಕೆಯಾಗಿದ್ದ ಪ್ರಧಾನಿಯೊಬ್ಬರನ್ನು ಮತ್ತು ಅವಾಮಿ ಲೀಗ್ ಪಕ್ಷವನ್ನು ಅಳಿಸಿ ಹಾಕುವ ಉದ್ದೇಶವು ಮಧ್ಯಂತರ ಸರ್ಕಾರಕ್ಕಿದೆ ಎಂಬುದನ್ನು ಇದು ತೋರಿಸುತ್ತದೆ. ಎಲ್ಲ ಸಾಕ್ಷ್ಯಗಳನ್ನು ನ್ಯಾಯಯುತವಾಗಿ ತುಲನೆ ಮಾಡುವ ನ್ಯಾಯಮಂಡಳಿಯ ಮುಂದೆ ನನ್ನ ಮೇಲೆ ಆರೋಪ ಹೊರಿಸಿದವರನ್ನು ಎದುರಿಸಲು ನಾನು ಭಯಪಡುವುದಿಲ್ಲ

ಶೇಕ್ ಹಸೀನಾ, ಬಾಂಗ್ಲಾದ ಮಾಜಿ ಪ್ರಧಾನಿ



ಮಾಜಿ ಗೃಹ ಸಚಿವರಿಗೂ ಮರಣ ದಂಡನೆ

- ಹಸೀನಾ ಅವರಿಗೆ ಶಿಕ್ಷೆಯಾದ ಪ್ರಕರಣದಲ್ಲಿಯೇ ಮಾಜಿ ಗೃಹ ಸಚಿವ ಅಸದುಝ್ಝಮಾನ್ ಖಾನ್ ಕಮಾಲ್ ಅವರಿಗೂ ಮರಣದಂಡನೆ ವಿಧಿಸಲಾಗಿದೆ. ಕಮಾಲ್ ಅವರೂ ಬಾಂಗ್ಲಾದಿಂದ ಪಲಾಯನ ಮಾಡಿದ್ದಾರೆ
- ಇದೇ ಪ್ರಕರಣದಲ್ಲಿ ಮಾಜಿ ಐಜಿಪಿ ಚೌಧರಿ ಅಬ್ದುಲ್ಲಾ ಅಲ್–ಮಾಮೂನ್ ಅವರಿಗೆ ಐದು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ಇವರು ಸರ್ಕಾರದ ಪರ ಸಾಕ್ಷಿಯಾಗಿದ್ದರು
- 'ಹಸೀನಾ ಹಾಗೂ ಕಮಾಲ್ ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು' ಎಂದು ನ್ಯಾಯಮಂಡಳಿ ಆದೇಶಿಸಿದೆ. ಇವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಪ್ರತಿಭಟನೆ ವೇಳೆ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ನೀಡಬೇಕು ಎಂದು ಪ್ರಾಸಿಕ್ಯೂಟರ್ ವಾದಿಸಿದ್ದರು

ಪ್ರಧಾನಿ ಎದುರು ಐದು ಬೇಡಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೋಮವಾರ ಇಲ್ಲಿ ಭೇಟಿ ಮಾಡಿ ರಾಜ್ಯದ ಐದು ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಸಲ್ಲಿಸಿದರು.

ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ, ಕಬ್ಬು ಬೆಳೆಗೆ ವೈಜ್ಞಾನಿಕ ದರ ನಿಗದಿ, ₹2,100 ಕೋಟಿ ಪ್ರವಾಹ ಪರಿಹಾರ ಹಾಗೂ ಪ್ರಮುಖ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ತೀರುವಳಿಗಳನ್ನು ನೀಡಲು ಮನವಿ ಪತ್ರದಲ್ಲಿ ಒತ್ತಾಯಿಸಿದರು.

ಭಾರಿ ಮಳೆಯಿಂದಾಗಿ ರಾಜ್ಯದ 14.5 ಲಕ್ಷ ಹೆಕ್ಟೇರ್ ಬೆಳೆ ನಾಶವಾಗಿದ್ದು, 19 ಲಕ್ಷ ರೈತರಿಗೆ ನಷ್ಟ ಉಂಟಾಗಿದೆ. ಇದಲ್ಲದೇ ಸಾವಿರಾರು ಮನೆಗಳು, ರಸ್ತೆ ಹಾಗೂ ಶಾಲೆಗಳು ಹಾನಿಗೀಡಾಗಿದ್ದು ಎನ್‌ಡಿಆರ್‌ಎಫ್ ವತಿಯಿಂದ ಪರಿಹಾರ ನೀಡಬೇಕು. ಇನ್ಪುಟ್ ಸಬ್ಸಿಡಿಯ ಕೊರತೆಗಳನ್ನು ನೀಗಿಸಲು 'ರಕ್ಷಣೆ ಮತ್ತು ಪರಿಹಾರ'ದಡಿ ₹614.9 ಕೋಟಿ ಹಾಗೂ ಸಾರ್ವಜನಿಕ ಮೂಲಸೌಕರ್ಯಗಳ ಪುನರ್ ನಿರ್ಮಾಣಕ್ಕಾಗಿ ₹1,521 ಕೋಟಿ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

▶10

ಜೆಜೆಎಂ: ₹570 ಕೋಟಿಯಷ್ಟೇ ಬಿಡುಗಡೆ

ಜಲ ಜೀವನ ಮಿಷನ್ ಯೋಜನೆಯಡಿ 2025-26ರ ಅಂತ್ಯದವರೆಗೆ ಕರ್ನಾಟಕಕ್ಕೆ ಕೊಡಬೇಕಾದ ಪಾಲಿನಲ್ಲಿ ₹13,004.63 ಕೋಟಿಯನ್ನು ಇನ್ನೂ ಬಿಡುಗಡೆ ಮಾಡಿಲ್ಲ ಎಂದು ಸಿದ್ದರಾಮಯ್ಯ ತಿಳಿಸಿದರು.

'2024-25ರ ಹಣಕಾಸು ವರ್ಷದಲ್ಲಿ ರಾಜ್ಯಕ್ಕೆ 3,804 ಕೋಟಿ ಹಂಚಿಕೆಯಾಗಿದೆ. ಈವರೆಗೆ ಕೇವಲ 570.66 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಅವರು ದೂರಿದರು.



2025-26ನೇ ಸಾಲಿನಲ್ಲಿ ಕೇಂದ್ರದಿಂದ ಯೋಜನೆಯಡಿ ಹಣ ಬಿಡುಗಡೆಯಾಗಿಲ್ಲ. ಆದರೂ ರಾಜ್ಯ ಮುಂಗಡವಾಗಿ ₹1,500 ಕೋಟಿ ಬಿಡುಗಡೆ ಮಾಡಿದೆ. ಪ್ರಸ್ತುತ ₹1,700 ಕೋಟಿ ಮೊತ್ತದ ಬಿಲ್‌ಗಳು ಪಾವತಿಗೆ ಬಾಕಿ ಇವೆ ಮತ್ತು ₹2,600 ಕೋಟಿ ಮೊತ್ತದ ಬಿಲ್ಲುಗಳು ಸಲ್ಲಿಕೆಯಾಗಬೇಕಿದೆ. ಹಾಗಾಗಿ, ಯೋಜನೆಯಡಿ ರಾಜ್ಯಕ್ಕೆ ಬಾಕಿ ಇರುವ ಕೇಂದ್ರದ ಪಾಲಿನ ಹಣವನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಅವರು ಆಗ್ರಹಿಸಿದರು.

ದೆಹಲಿ ಸ್ಫೋಟ: ಸಹ ಸಂಚುಕೋರ ಸೆರೆ

ನವದೆಹಲಿ (ಪಿಟಿಐ): ದೆಹಲಿಯ ಕೆಂಪುಕೋಟೆ ಸಮೀಪ ಸಂಭವಿಸಿದ ಕಾರು ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಸಹ ಸಂಚುಕೋರ ಜೈಸಿರ್ ಬಿಲಾಲ್ ವಾನಿ ಎಂಬವನನ್ನು ಎನ್‌ಐಎ ಶ್ರೀನಗರದಲ್ಲಿ ಬಂಧಿಸಿದೆ.

ವಿವರ ▶7

ಕೊಪ್ಪಳ: ಅತ್ಯಾಚಾರ ಆರೋಪ: ಐವರ ಸೆರೆ

ಕೊಪ್ಪಳ: ಕೊಡಬೇಕಿದ್ದ ಬಾಕಿ ಹಣ ಪಡೆದುಕೊಳ್ಳಲು ಹೊಸಪೇಟೆಯಿಂದ ಬಂದಿದ್ದ ಮಹಿಳೆ ಮೇಲೆ ಭಾನುವಾರ ರಾತ್ರಿ ನಾಲ್ವರು ಸಾಮೂಹಿಕ ಅತ್ಯಾಚಾರ ಎಸಗಿದ ಆರೋಪ ಕೇಳಿಬಂದಿದ್ದು, ಜಿಲ್ಲೆಯ ಯಲಬುರ್ಗಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವಿವರ ▶5

ಚಿನಕುರುಳಿ — ಪ್ರಕಾಶ್ ಶೆಟ್ಟಿ



ಚುನಾವಣೆ: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅವಧಿ ಮುಗಿಯಲಿರುವ ರಾಜ್ಯದ 187 ನಗರ ಸ್ಥಳೀಯ ಸಂಸ್ಥೆಗಳಿಗೆ ಸಕಾಲದಲ್ಲಿ ಚುನಾವಣೆ ನಡೆಸಲು ಅನುವಾಗುವಂತೆ ವಾರ್ಡ್‌ವಾರು ಮೀಸಲಾತಿ ಜೊತೆಗೆ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳ ಅಂತಿಮ ಮೀಸಲಾತಿ ಅಧಿಸೂಚನೆ ಹೊರಡಿಸಲು ನಿರ್ದೇಶಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಪ್ರಸಕ್ತ ವರ್ಷದ ಅಂತ್ಯಕ್ಕೆ ಅವಧಿ ಮುಕ್ತಾಯಗೊಳ್ಳಲಿರುವ ರಾಜ್ಯದ 47 ನಗರಸಭೆ, 91 ಪುರಸಭೆ, 49 ಪಟ್ಟಣ ಪಂಚಾಯಿತಿ ಸೇರಿ ಒಟ್ಟು 187 ನಗರ ಸ್ಥಳೀಯ ಸಂಸ್ಥೆಗಳ ಮೀಸಲಾತಿಗೆ ಸಂಬಂಧಿಸಿದಂತೆ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ಆಕ್ಷೇಪಣೆ ಸಲ್ಲಿಸುವಂತೆ ಸರ್ಕಾರದ ಪರ ವಕೀಲರಿಗೆ ನಿರ್ದೇಶಿಸಿತು. ವಿಚಾರಣೆಯನ್ನು ಡಿಸೆಂಬರ್ 11ಕ್ಕೆ ಮುಂದೂಡಲಾಗಿದೆ.

ಅರ್ಜಿಯಲ್ಲಿ ಏನಿದೆ?: 'ಕಲಬುರಗಿ ಜಿಲ್ಲೆ ಶಹಬಾದ ತಾಲ್ಲೂಕಿನ ವಾಡಿ ಪುರಸಭೆಯ ಅವಧಿ 2020ರ ನವೆಂಬರ್‌ನಲ್ಲಿ ಮತ್ತು ಬಾಗಲಕೋಟೆ ಜಿಲ್ಲೆ ಮಹಾಲಿಂಗಪುರ ಪುರಸಭೆ ಅವಧಿ ಇದೇ ವರ್ಷದ ಸೆಪ್ಟೆಂಬರ್‌ನಲ್ಲಿ ಕೊನೆಗೊಂಡಿದೆ. ಅಕ್ಟೋಬರ್‌ನಲ್ಲಿ 59 ನಗರ ಸ್ಥಳೀಯ ಸಂಸ್ಥೆಗಳ ಅವಧಿ ಮುಗಿದಿದೆ. ಉಳಿದ 126 ನಗರ ಸ್ಥಳೀಯ ಸಂಸ್ಥೆಗಳ ಅವಧಿ ನವೆಂಬರ್ ಮತ್ತು ಡಿಸೆಂಬರ್‌ಗೆ ಅಂತ್ಯವಾಗಲಿದೆ' ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

'ಇವೆಲ್ಲವುಗಳಿಗೆ ಮೀಸಲಾತಿ ನಿಗದಿಗೆ ಕೋರಿದ್ದರೂ ಇನ್ನೂ ನಿಗದಿಯಾಗಿಲ್ಲ' ಎಂದು ಅರ್ಜಿಯಲ್ಲಿ ದೂರಲಾಗಿದೆ.

ತೆಲಂಗಾಣದ 45 ಮಂದಿ ಸಾವು

ಸೌದಿ ಅರೇಬಿಯಾದಲ್ಲಿ ಬಸ್ ಅಪಘಾತ • ಉಮ್ರಾ ಯಾತ್ರಿಕರ ದುರಂತ ಅಂತ್ಯ

ಪ್ರಜಾವಾಣಿ ವಾರ್ತೆ/ಪಿಟಿಐ

ಹೈದರಾಬಾದ್/ ಜೆದ್ದಾ: ಸೌದಿ ಅರೇಬಿಯಾದ ಮಕ್ಕಾದಿಂದ ಮದೀನಾಕ್ಕೆ ಉಮ್ರಾ ಯಾತ್ರಿಕರನ್ನು ಕರೆದೊಯ್ಯುತ್ತಿದ್ದ ಬಸ್‌ವೊಂದು ಡೀಸೆಲ್ ಸಾಗಾಟದ ಟ್ಯಾಂಕರ್‌ಗೆ ಡಿಕ್ಕಿಯಾಗಿ ಹೊತ್ತಿ ಉರಿದು, ತೆಲಂಗಾಣದ 45 ಮಂದಿ ಮೃತಪಟ್ಟಿದ್ದಾರೆ.

ಭಾರತೀಯ ಕಾಲಮಾನ ಸೋಮವಾರ ಬೆಳಿಗ್ಗೆ 4ಕ್ಕೆ ದುರಂತ ಸಂಭವಿಸಿದೆ. ಟ್ಯಾಂಕರ್‌ಗೆ ಅಪ್ಪಳಿಸಿದ ಬಸ್‌ಗೆ ಕ್ಷಣಾರ್ಧದಲ್ಲಿ ಬೆಂಕಿ ಆವರಿಸಿದ್ದು, ಪ್ರಯಾಣಿಕರು ಸಜೀವ ದಹನಗೊಂಡರು ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಮೃತರೆಲ್ಲರೂ ಉಮ್ರಾ ನಿರ್ವಹಿಸಲು (ಮಕ್ಕಾ ಹಾಗೂ ಮದೀನಾ ತೀರ್ಥಯಾತ್ರೆ) ಈಚೆಗೆ ಸೌದಿ ಅರೇಬಿಯಾಕ್ಕೆ ತೆರಳಿದ್ದರು ಎಂದು ಹೈದರಾಬಾದ್ ಪೊಲೀಸ್ ಕಮಿಷನರ್ ವಿ.ಸಿ.ಸಜ್ಜನರ್ ಹೇಳಿದ್ದಾರೆ.

'ಉಮ್ರಾ ಯಾತ್ರೆಗಾಗಿ 54 ಮಂದಿಯ ತಂಡ ನವೆಂಬರ್ 9ರಂದು ಸೌದಿ ಅರೇಬಿಯಾದ ಜೆದ್ದಾಕ್ಕೆ ತೆರಳಿತ್ತು. ಆ ತಂಡ ನವೆಂಬರ್ 23ರಂದು ಹೈದರಾಬಾದ್‌ಗೆ ವಾಪಸಾಗಬೇಕಿತ್ತು' ಎಂದು ಸುದ್ದಿಗಾರರಿಗೆ ತಿಳಿಸಿದರು.

'54 ಯಾತ್ರಿಕರಲ್ಲಿ ನಾಲ್ವರು ಭಾನುವಾರ ಕಾರಿನಲ್ಲಿ ಪ್ರತ್ಯೇಕವಾಗಿ ಮದೀನಾಕ್ಕೆ ಪ್ರಯಾಣ ಬೆಳೆಸಿದರೆ, ಇನ್ನೂ ನಾಲ್ವರು ಮಕ್ಕಾದಲ್ಲೇ ಉಳಿದುಕೊಂಡರು. ಬಸ್‌ನಲ್ಲಿ 46 ಮಂದಿ ಪ್ರಯಾಣಿಸುತ್ತಿದ್ದರು. ಒಬ್ಬರು ಬದುಕುಳಿದಿದ್ದು, ಅವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

▶6



ಬಸ್ ಅಪಘಾತದಲ್ಲಿ ಮೃತಪಟ್ಟವರ ಕುಟುಂಬದ ಸದಸ್ಯರಿಂದ ಹೈದರಾಬಾದ್ ಪೊಲೀಸರು ಮಾಹಿತಿ ಕಲೆಹಾಕಿದರು —ಪಿಟಿಐ ಚಿತ್ರ

ಮೃತರಲ್ಲಿ 10 ಮಕ್ಕಳು

- ಮದೀನಾದಿಂದ 160 ಕಿ.ಮೀ ದೂರದ ಮುಫ್ರಿಹತ್ ಎಂಬಲ್ಲಿ ದುರಂತ
- 17 ಪುರುಷರು, 18 ಮಹಿಳೆಯರು ಹಾಗೂ 10 ಮಕ್ಕಳು ಮೃತರು
- ಸೌದಿ ಅರೇಬಿಯಾದಲ್ಲೇ ಅಂತ್ಯ ಸಂಸ್ಕಾರಕ್ಕೆ ನಿರ್ಧಾರ
- ಮೃತರ ಕುಟುಂಬದವರಿಗೆ ತಲಾ ₹5 ಲಕ್ಷ ಪರಿಹಾರ ಘೋಷಿಸಿದ ತೆಲಂಗಾಣ ಸರ್ಕಾರ
- ಸೌದಿಗೆ ತೆರಳಲಿರುವ ಸಚಿವ ಅಜರುದ್ದೀನ್ ನೇತೃತ್ವದ ತಂಡ

ಒಂದೇ ಕುಟುಂಬದ 18 ಮಂದಿ

ಹೈದರಾಬಾದ್‌ನ ವಿದ್ಯಾನಗರದಲ್ಲಿ ನೆಲಸಿರುವ ಒಂದೇ ಕುಟುಂಬದ, ಮೂರು ತಲೆಮಾರುಗಳಿಗೆ ಸೇರಿದ 18 ಮಂದಿ ಮೃತರಲ್ಲಿ ಸೇರಿದ್ದಾರೆ. ಇವರಲ್ಲಿ 9 ಮಕ್ಕಳೂ ಇದ್ದಾರೆ. 70 ವರ್ಷದ ಸಲಾವುದ್ದೀನ್ ಶೇಖ್ ಅವರು ಪತ್ನಿ, ಪುತ್ರರು, ಸೊಸೆಯಂದಿರು, ಪುತ್ರಿಯರು, ಅಳಿಯಂದಿರು ಮತ್ತು ಮೊಮ್ಮಕ್ಕಳೊಂದಿಗೆ ಉಮ್ರಾಗೆ ತೆರಳಿದ್ದರು. ರೈಲ್ವೆ ಇಲಾಖೆಯ ನಿವೃತ್ತ ಉದ್ಯೋಗಿ ಸಲಾವುದ್ದೀನ್ ಅವರಿಗೆ ತಲಾ ಮೂವರು ಪುತ್ರಿಯರು ಮತ್ತು ಪುತ್ರರು ಇದ್ದಾರೆ ಎಂದು ಅವರ ಸಂಬಂಧಿಕರೊಬ್ಬರು ತಿಳಿಸಿದರು. ಅವರ ಒಬ್ಬ ಪುತ್ರ ಅಮೆರಿಕದಲ್ಲಿದ್ದು, ಇವರೊಂದಿಗೆ ಉಮ್ರಾಗೆ ತೆರಳಿಲ್ಲ. ಕುಟುಂಬದ ಇತರ ಎಲ್ಲರೂ ಸೌದಿಗೆ ಪ್ರಯಾಣಿಸಿದ್ದರು.

ಹುಬ್ಬಳ್ಳಿ ವ್ಯಕ್ತಿ ಮೃತ

ಹುಬ್ಬಳ್ಳಿ: ಸೌದಿ ಅರೇಬಿಯಾದ ಮಕ್ಕಾ-ಮದೀನಾ ರಸ್ತೆಯಲ್ಲಿ ಸಂಭವಿಸಿದ ಬಸ್ ಅಪಘಾತದಲ್ಲಿ ಹುಬ್ಬಳ್ಳಿಯ ಗಣೇಶಪೇಟೆಯ ಸಣ್ಣ ಮಸೀದಿ ಸಮೀಪದ ಅಬ್ದುಲ್ ಗನಿ ಶಿರಹಟ್ಟಿ (52) ಎಂಬವರು ಮೃತಪಟ್ಟಿದ್ದಾರೆ ಎಂದು ಕುಟುಂಬದ ಮೂಲಗಳು ದೃಢಪಡಿಸಿವೆ. ಅಬ್ದುಲ್ ಗನಿ ಅವರು 20 ವರ್ಷಗಳಿಂದ ದುಬೈನಲ್ಲಿರುವ ಅಬುಧಾಬಿ ಇಂಟರ್‌ನ್ಯಾಷನಲ್ ಹೋಟೆಲ್‌ನಲ್ಲಿ ಚಾಲಕರಾಗಿದ್ದರು. ಅಲ್ಲಿಯೇ ನೆಲಸಿದ್ದ ಅವರು, ನವೆಂಬರ್ 9ರಂದು ದುಬೈನಿಂದ ಮಕ್ಕಾ-ಮದೀನಾಕ್ಕೆ ಹೈದರಾಬಾದ್‌ನ ಸ್ನೇಹಿತರ ಜೊತೆ ಸೇರಿ ಪ್ರಯಾಣ ಕೈಗೊಂಡಿದ್ದರು. ಅವರಿಗೆ ಪತ್ನಿ, ಪುತ್ರ ಮತ್ತು ಮೂವರು ಪುತ್ರಿಯರು ಇದ್ದಾರೆ.

▶6



ಮದೀನಾದಲ್ಲಿ ನಡೆದ ಅಪಘಾತದಲ್ಲಿ ಭಾರತೀಯರು ಮೃತಪಟ್ಟ ಸುದ್ದಿ ತಿಳಿದು ತೀವ್ರ ದುಃಖವಾಗಿದೆ. ನಮ್ಮ ಅಧಿಕಾರಿಗಳು ಸೌದಿ ಅರೇಬಿಯಾದ ಅಧಿಕಾರಿಗಳೊಂದಿಗೆ ನಿಕಟ ಸಂಪರ್ಕದಲ್ಲಿದ್ದಾರೆ

ನರೇಂದ್ರ ಮೋದಿ, ಪ್ರಧಾನಿ

ಅಗ್ಗದ 'ಕಿಯೋ' ಕಂಪ್ಯೂಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ತಂತ್ರಜ್ಞಾನ ಇಲಾಖೆಯು, ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮದ (ಕಿಯೋನಿಕ್ಸ್) ಸಹಯೋಗದಲ್ಲಿ ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಿರುವ ಕೃತಕ ಬುದ್ಧಿಮತ್ತೆ (ಎ.ಐ) ಆಧಾರಿತ ಸಣ್ಣ ಗಾತ್ರದ ಅಗ್ಗದ ಕಂಪ್ಯೂಟರ್ 'ಕಿಯೋ' ಅನ್ನು ಪರಿಚಯಿಸಿದೆ.

ಇದೇ 18ರಿಂದ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ ದಲ್ಲಿ (ಬಿಐಇಸಿ) ಆರಂಭವಾಗುವ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯಲ್ಲಿ (ಬಿಟಿಎಸ್) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಕಿಯೋ' ಅನಾವರಣ ಮಾಡುವರು.

ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, 'ದೇಶದಲ್ಲಿ ಶೇಕಡ 10ಕ್ಕಿಂತ ಕಡಿಮೆ ಜನರು ಕಂಪ್ಯೂಟರ್ ಹೊಂದಿದ್ದಾರೆ. ರಾಜ್ಯದಲ್ಲಿ ಇದರ ಪ್ರಮಾಣ ಶೇಕಡ 15ರಷ್ಟಿದೆ. ಸ್ಮಾರ್ಟ್ ಫೋನ್‌ಗಳ ಬಳಕೆ ವ್ಯಾಪಕವಾಗಿದ್ದರೂ, ಶೈಕ್ಷಣಿಕ ಉದ್ದೇಶ, ಕೋಡಿಂಗ್, ಆನ್‌ಲೈನ್ ತರಗತಿಗಳು ಮತ್ತು ಹೈಬ್ರಿಡ್ ಕಲಿಕೆಗೆ ಕಂಪ್ಯೂಟರ್‌ಗಳು ಅಗತ್ಯ ಎಂಬುದನ್ನು ಅಧ್ಯಯನಗಳು ತಿಳಿಸಿವೆ' ಎಂದು ಹೇಳಿದರು.

ಸೂಕ್ತ ಸಾಧನಗಳ ಲಭ್ಯತೆಯ ಕೊರತೆಯಿಂದಾಗಿ ಶೇಕಡ 60ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಆನ್‌ಲೈನ್ ಕಲಿಕೆಯಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಹೆಚ್ಚಿನ ವಿದ್ಯಾರ್ಥಿಗಳು ಶಾಲೆ, ಕಾಲೇಜು ತೊರೆಯಲು ಇದು ಕೂಡ ನೇರ ಕಾರಣವಾಗಿದೆ ಎಂದರು

▶6



ತಂತ್ರಜ್ಞಾನ ಶೃಂಗಸಭೆ ಕುರಿತ ಪತ್ರಿಕಾಗೋಷ್ಠಿಯಲ್ಲಿ ರಾಹುಲ್ ಸಂಕನೂರ, ಎನ್. ಮಂಜುಳಾ, ಪ್ರಿಯಾಂಕ್ ಖರ್ಗೆ, ಶರತ್ ಬಚ್ಚೇಗೌಡ, ಸಂಜೀವ್ ಗುಪ್ತ ಅವರು ಕಿಯೋ ಕಂಪ್ಯೂಟರ್ ಪರಿಚಯಿಸುವ ಭಿತ್ತಿಚಿತ್ರ ಪ್ರದರ್ಶಿಸಿದರು —ಪ್ರಜಾವಾಣಿ ಚಿತ್ರ

- ತಂತ್ರಜ್ಞಾನ ಮತ್ತು ನಾವೀನ್ಯತೆ ಮೂಲಕ ಭವಿಷ್ಯ ರೂಪಿಸುವ ಧ್ಯೇಯಕ್ಕೆ (ಫ್ಯೂಚರೈಸ್ಡ್ ಥೀಮ್) ಅನುಗುಣವಾಗಿ ಹತ್ತು ವಿಚಾರಗೋಷ್ಠಿಗಳು
- ಕ್ವಾಂಟಂ ಕಂಪ್ಯೂಟಿಂಗ್ ಮತ್ತು ಜೈವಿಕ ತಂತ್ರಜ್ಞಾನದಂತಹ ವೈಜ್ಞಾನಿಕ ಸಂಶೋಧನೆ ಅಥವಾ ಎಂಜಿನಿಯರಿಂಗ್ ನಾವೀನ್ಯತೆ ಆಧರಿಸಿದ ಕಂಪನಿಗಳು ಮತ್ತು ನವೋದ್ಯಮಗಳನ್ನು ಸ್ಥಾಪಿಸಿ, ಬೆಳೆಸುವ ಉದ್ದೇಶ
- ಶೃಂಗಸಭೆಯಲ್ಲಿ ಮಾಹಿತಿ ತಂತ್ರಜ್ಞಾನ (ಐ.ಟಿ), ನವೋದ್ಯಮ ಮತ್ತು ಬಾಹ್ಯಾಕಾಶ ತಂತ್ರಜ್ಞಾನ ನೀತಿಗಳ ಘೋಷಣೆ

ಕಿರು ಮೃಗಾಲಯದಲ್ಲಿ ಐದನೇ ದಿನವೂ ಮುಂದುವರಿದ ಆತಂಕ

ಕೃಷ್ಣಮೃಗ: ಸಾವಿನ ಸಂಖ್ಯೆ 31ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಸಮೀಪದ ಭೂತರಾಮನ ಹಟ್ಟಿಯಲ್ಲಿರುವ ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ ಸೋಮವಾರ ಮತ್ತೊಂದು ಕೃಷ್ಣಮೃಗ ಸಾವನ್ನಪ್ಪಿದ್ದು, ಈವರೆಗಿನ ಸಾವಿನ ಸಂಖ್ಯೆ 31ಕ್ಕೆ ಏರಿದೆ. ಸೋಂಕಿನ ತೀವ್ರತೆ ಹೆಚ್ಚುತ್ತಿದೆ.

'ಮೃಗಾಲಯದಲ್ಲಿ ನಾವು ಪೋಷಿಸುತ್ತಿದ್ದ ಒಟ್ಟು 38ರ ಪೈಕಿ 30 ಕೃಷ್ಣಮೃಗಗಳು ನಾಲ್ಕು ದಿನಗಳ ಅವಧಿಯಲ್ಲಿ ಮೃತಪಟ್ಟಿವೆ. ಇನ್ನೊಂದು ಕೃಷ್ಣಮೃಗವು ಸೋಮವಾರ ನಸುಕಿನಲ್ಲಿ ಮೃತಪಟ್ಟಿದೆ. ಬಾಕಿ ಉಳಿದಿರುವ ಏಳು ಕೃಷ್ಣಮೃಗಗಳ ಮೇಲೆ ನಿಗಾ ವಹಿಸಿ, ಚಿಕಿತ್ಸೆಯನ್ನೂ ಮುಂದುವರಿಸಿದ್ದೇವೆ' ಎಂದು ಮೃಗಾಲಯದ ಅಧಿಕಾರಿಯೊಬ್ಬರು ತಿಳಿಸಿದರು.

'ಇತರ ಪ್ರಾಣಿಗಳಿಗೆ ಸೋಂಕು ಹರಡದಂತೆ ತಡೆಯಲು ಸೋಂಕು ನಿವಾರಕ ಸಿಂಪಡಣೆ ಸೇರಿದಂತೆ ಸೂಕ್ತ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಲಾಗಿದೆ. ಪಶು ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ಕೃಷ್ಣಮೃಗಗಳ ಮೇಲೆ ನಿಗಾ ವಹಿಸಿದ್ದಾರೆ. ಮೃತ ಪ್ರಾಣಿಗಳ ಒಳ ಅಂಗಾಂಗಗಳ ಮಾದರಿಗಳನ್ನು ಪರೀಕ್ಷೆಗೆ ಕಳುಹಿಸಲಾಗಿದೆ' ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ ಚವ್ಹಾಣ ತಿಳಿಸಿದರು.

'ವೈದ್ಯರು, ಅಧಿಕಾರಿಗಳ ನಿರ್ಲಕ್ಷ್ಯ'

'ಕೃಷ್ಣಮೃಗಗಳ ಸಾವಿನ ಪ್ರಕರಣದಲ್ಲಿ ಮೃಗಾಲಯದ ವೈದ್ಯ ಮತ್ತು ಸಿಬ್ಬಂದಿ ನಿರ್ಲಕ್ಷ್ಯ ವಹಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಮೃತ ಪ್ರಾಣಿಗಳ ಒಳ ಅಂಗಾಂಗಗಳ ಪರೀಕ್ಷೆ ಮತ್ತು ತನಿಖಾ ವರದಿಯ ನಿರೀಕ್ಷೆಯಲ್ಲಿದ್ದೇವೆ. ಸಿಬ್ಬಂದಿ ಲೋಪ ದೃಢಪಟ್ಟರೆ, ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಲಾಗುವುದು' ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಕೆ.ರಂಗಸ್ವಾಮಿ ಹೇಳಿದರು.

ಮೃಗಾಲಯಕ್ಕೆ ಸೋಮವಾರ ಭೇಟಿ ನೀಡಿದ ಅವರು, 'ವೈದ್ಯಕೀಯ ತಂಡವು ಪ್ರಾಣಿಗಳ ಆರೋಗ್ಯವನ್ನು ನಿಯಮಿತವಾಗಿ ತಪಾಸಣೆ ಮಾಡಬೇಕು. ಇಲ್ಲಿ ಅದು ಪಾಲನೆಯಾಗಿಲ್ಲ. ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸುನೀಲ ಪನ್ವಾರ್ ಕೂಡ ಭಾನುವಾರ ಭೇಟಿ ನೀಡಿದ್ದು, ವರದಿ ಸಲ್ಲಿಸಲಿದ್ದಾರೆ. ಅವರ ವರದಿ ಆಧರಿಸಿ, ತಪ್ಪು ಯಾರದ್ದು ಎಂಬುದು ಪರಿಶೀಲಿಸಲಾಗುವುದು' ಎಂದರು.

'ಅಳಿವಿನಂಚಿನಲ್ಲಿ ಇರುವ ಈ ಕೃಷ್ಣಮೃಗಗಳ ಪ್ರಬೇಧವನ್ನು ಸಂರಕ್ಷಿಸಿ, ಸಂಖ್ಯೆ ಹೆಚ್ಚಿಸಲು ಇಲ್ಲಿ ಇರಿಸಲಾಗಿದೆ. ಇಷ್ಟೊಂದು ಸಂಖ್ಯೆಯಲ್ಲಿ ಅವು ಮೃತಪಟ್ಟಿರುವುದು ಚಿಂತೆಗೀಡು ಮಾಡಿದೆ' ಎಂದರು.

▶6



ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ ಏಳು ಕೃಷ್ಣಮೃಗಗಳು ಸೋಮವಾರ ಕ್ರಿಯಾಶೀಲವಾಗಿದ್ದವು

ಚಿತ್ರ: ಏಕನಾಥ ಅಗಸಿಮನಿ

ಗುಜರಾತ್‌ನಲ್ಲಿ ತೆಗೆದುಕೊಂಡಿದ್ದ ಕ್ರಮ, ನೀಡಿದ ಚಿಕಿತ್ಸೆಯ ಮಾಹಿತಿ ಪಡೆದು, ಬೆಳಗಾವಿಯಲ್ಲೂ ಅದನ್ನೇ ಮುಂದುವರಿಸಲಾಗಿದೆ

ಸುನೀಲ ಪನ್ವಾರ್, ಸದಸ್ಯ ಕಾರ್ಯದರ್ಶಿ, ಕರ್ನಾಟಕ ಮೃಗಾಲಯ ಪ್ರಾಧಿಕಾರ

ಕೃಷ್ಣಮೃಗಗಳ ಸಾವಿಗೆ ಕಾರಣ ತಿಳಿಯಲು ಸಮಗ್ರ ತನಿಖೆಗೆ ಸೂಚಿಸಲಾಗಿದೆ. ಸಿಬ್ಬಂದಿ ನಿರ್ಲಕ್ಷ್ಯ ಸಾಬೀತಾದಲ್ಲಿ ಕ್ರಮ ಕೈಗೊಳ್ಳಲಾಗುವುದು

ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ

ಹೊಸಪೇಟೆ, ಗದಗದಲ್ಲೂ ನಿಗಾ

ಹೊಸಪೇಟೆ/ಗದಗ: ಹೊಸಪೇಟೆಯ ಕಮಲಾಪುರ ಸಮೀಪದ ಹಂಪಿ ಮೃಗಾಲಯದಲ್ಲಿ 50ಕ್ಕೂ ಹೆಚ್ಚು ಮತ್ತು ಗದಗ ಜಿಲ್ಲೆಯ ಬಿಂಕದಕಟ್ಟಿಯಲ್ಲಿ 70ಕ್ಕೂ ಹೆಚ್ಚು ಕೃಷ್ಣಮೃಗಗಳಿದ್ದು, ಅವುಗಳ ಮೇಲೂ ನಿಗಾ ವಹಿಸಲಾಗಿದೆ.

'ಹಂಪಿ ಮೃಗಾಲಯದಲ್ಲಿ ಕೃಷ್ಣಮೃಗಗಳಿಗೆ ಯಾವುದೇ ರೀತಿಯಲ್ಲೂ ಅಪಾಯವಾಗದಂತೆ ನಿಗಾ ವಹಿಸಲಾಗಿದೆ. ಇಲ್ಲಿ ಸುತ್ತಮುತ್ತ ಕಾಡು ಇರುವ ಕಾರಣ ಪ್ರಾಣಿಗಳಿಗೆ ಸೋಂಕು ತಗಲುವ ಸಾಧ್ಯತೆ ಕಡಿಮೆ ಇದೆ' ಎಂದು ಮೃಗಾಲಯದ ವಲಯ ಅರಣ್ಯ ಅಧಿಕಾರಿ ಭರತ್‌ರಾಜ್ ತಿಳಿಸಿದರು.

'ಬಿಂಕದಕಟ್ಟಿ ಮೃಗಾಲಯ ದಲ್ಲಿ ಕೃಷ್ಣಮೃಗಗಳು ಆರೋಗ್ಯ ವಾಗಿವೆ. ಆದರೂ ಮುಂಜಾಗ್ರತಾ ಕ್ರಮವಾಗಿ ಇತರ ಪ್ರಾಣಿಗಳ ರಕ್ತದ ಮಾದರಿ ಸಂಗ್ರಹಿಸಿ ಬೆಂಗಳೂರಿನ ಪ್ರಯೋಗಾಲಯಕ್ಕೆ ಕಳುಹಿಸಿಕೊಡುವ ಯೋಚನೆಯಿದೆ' ಎಂದು ಮೃಗಾಲಯದ ವಲಯ ಅರಣ್ಯಾಧಿಕಾರಿ ಸ್ನೇಹಾ ಕೊಪ್ಪಳ ತಿಳಿಸಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ





ಬಸವನಗುಡಿಯಲ್ಲಿ ಸೋಮವಾರ ಯುವತಿಯರು ಸಂಭ್ರಮದಿಂದ ಕಡಲೆಕಾಯಿ ಖರೀದಿಸಿದರು (ಎಡಚಿತ್ರ). ಕಡಲೆಕಾಯಿ ಪರಿಷೆ ಉದ್ಘಾಟನಾ ಸಮಾರಂಭದಲ್ಲಿ 'ಬಸವಣ್ಣ'ನಿಗೆ ಕಡಲೆಕಾಯಿ ಗಿಡ ತಿನ್ನಿಸಿದರು ಚಿತ್ರಗಳು: ಪ್ರಶಾಂತ್ ಎಚ್‌.ಜಿ.

ಈ ಬಾರಿ 5 ದಿನ ಕಡಲೆಕಾಯಿ ಪರಿಷೆ

ಸಚಿವ ರಾಮಲಿಂಗಾರೆಡ್ಡಿ ಅವರಿಂದ ಚಾಲನೆ

ಐದು ದಿನಗಳ ಪರಿಷೆ ಸುಂಕ ● ಪ್ಲಾಸ್ಟಿಕ್ ಮುಕ್ತ ವಾತಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿಯ ದೊಡ್ಡ ಬಸವಣ್ಣನಿಗೆ ಕಡಲೆಕಾಯಿ ತುಲಾಭಾರ ಹಾಗೂ ಐದು ಎತ್ತುಗಳಿಗೆ ಕಡಲೆಕಾಯಿ ಗಿಡ ತಿನ್ನಿಸುವ ಮೂಲಕ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು ಐದು ದಿನಗಳ ಪರಿಷೆಗೆ ಸೋಮವಾರ ಚಾಲನೆ ನೀಡಿದರು.

ಪ್ರತಿ ವರ್ಷವೂ ಕಾರ್ತಿಕ ಮಾಸದ ಕೊನೆಯ ಸೋಮವಾರದಂದು ಕಡಲೆಕಾಯಿ ಪರಿಷೆ ಶುರುವಾಗುತ್ತದೆ. ಎರಡು ದಿನಗಳ ಕಡಲೆಕಾಯಿ ಪರಿಷೆಯನ್ನು ಮೊದಲ ಬಾರಿಗೆ ಐದು ದಿನಕ್ಕೆ (ನವೆಂಬರ್ 21ರವರೆಗೆ) ವಿಸ್ತರಿಸಲಾಗಿದೆ. ಭದ್ರತೆ, ಕುಡಿಯುವ ನೀರು, ಶೌಚಾಲಯದಂತಹ ಮೂಲಸೌಕರ್ಯ ಒದಗಿಸಲಾಗಿದೆ.

ಮೊದಲ ದಿನವೇ ನಿರೀಕ್ಷೆಗೂ ಮೀರಿ ಜನ ಜಮಾಯಿಸಿದ್ದರು. ಎತ್ತ ಕಣ್ಣು ಹಾಯಿಸಿದರೂ ಬಗೆಬಗೆಯ ಕಡಲೆಕಾಯಿಗಳನ್ನು ರಾಶಿ ಹಾಕಲಾಗಿದೆ. ರಸ್ತೆಯ ಎರಡೂ ಬದಿ ಕಡಲೆಕಾಯಿ ರಾಶಿ ಹಾಕಿಕೊಂಡು ವ್ಯಾಪಾರ ಮಾಡಲಾಗುತ್ತಿದೆ. ಮಕ್ಕಳು, ವಿದ್ಯಾರ್ಥಿಗಳು ಕಡಲೆಕಾಯಿ ಸವಿಯುತ್ತಾ ಸಂತಸ ವ್ಯಕ್ತಪಡಿಸಿದರು. ನೆರೆ ರಾಜ್ಯಗಳಿಂದಲೂ ವ್ಯಾಪಾರಿಗಳು ಬಂದಿದ್ದು, ಲಾಭದ ನಿರೀಕ್ಷೆಯಲ್ಲಿದ್ದಾರೆ.

> ಪ್ಲಾಸ್ಟಿಕ್ ಬಳಕೆ ಮಾಡುವ ಅಂಗಡಿಗಳನ್ನು ಕಡ್ಡಾಯವಾಗಿ ಮುಚ್ಚಬೇಕೆಂದು ಹಾಗೂ ಬ್ಯಾನರ್‌ಗಳನ್ನು ಹಾಕದಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ
>
> **ರಾಮಲಿಂಗಾರೆಡ್ಡಿ**, ಮುಜರಾಯಿ ಇಲಾಖೆ ಸಚಿವ

ವ್ಯಾಪಾರಿಗಳು ಕಾಗದ ಅಥವಾ ಬಟ್ಟೆ ಚೀಲಗಳಲ್ಲಿ ಕಡಲೆಕಾಯಿ ನೀಡುತ್ತಿದ್ದರು. ಪ್ಲಾಸ್ಟಿಕ್ ಮುಕ್ತ ವಾತಾವರಣ ಇತ್ತು.

ಬುಲ್ ಟೆಂಪಲ್ ರಸ್ತೆ, ಗಾಂಧಿ ಬಜಾರ್, ಎನ್‌.ಆರ್. ರಸ್ತೆಗಳು ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದವು. ಎಲ್ಲೆಡೆ ಹೂವಿನ ಅಲಂಕಾರ ಮಾಡಲಾಗಿದೆ. ಅಂಗಡಿಯವರು ಬಟ್ಟೆ ಬ್ಯಾಗ್‌ಗಳನ್ನು ಬಳಸಲು ಮತ್ತು ಸಾರ್ವಜನಿಕರಿಗೆ 'ಪರಿಷೆಗೆ ಬನ್ನಿ, ಕೈ ಚೀಲ ತನ್ನಿ'ಎಂಬ ಘೋಷಣೆಯೊಂದಿಗೆ ಸ್ವಯಂ ಸೇವಾ ಸಂಸ್ಥೆಗಳ ಸಹಕಾರದೊಂದಿಗೆ ಪ್ಲಾಸ್ಟಿಕ್ ಮುಕ್ತ ಪರಿಷೆಗೆ ಜಾಗೃತಿ ಮೂಡಿಸಿದರು.

ಬುಲ್ ಟೆಂಪಲ್ ರಸ್ತೆಯಲ್ಲಿ ಬೀದಿ ಬದಿ ವ್ಯಾಪಾರಿಗಳಿಂದ ಯಾವುದೇ ಸುಂಕ ಸಂಗ್ರಹಿಸುತ್ತಿಲ್ಲ. ಆರೋಗ್ಯ, ಸ್ವಚ್ಛತೆ, ನೈರ್ಮಲ್ಯಕ್ಕೆ ಒತ್ತು ನೀಡಲಾಗಿದ್ದು, ನೂಕು ನುಗ್ಗಲು ಉಂಟಾಗದಂತೆ ತಡೆಯಲು ಪೊಲೀಸ್ ಇಲಾಖೆ ಅಗತ್ಯ ಕ್ರಮ ಕೈಗೊಂಡಿದೆ.

ಬಸವನಗುಡಿಯ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನ ಎನ್‌ಎಸ್‌ಎಸ್ ಘಟಕವು ಪತ್ರಿಕೆಗಳಿಂದ 50 ಸಾವಿರ ಪರಿಸರಸ್ನೇಹಿ ಕಾಗದದ ಚೀಲಗಳನ್ನು ತಯಾರಿಸಿ ಪರಿಷೆಯಲ್ಲಿನ ಮಾರಾಟಗಾರರಿಗೆ ವಿತರಿಸಿತು.

ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಸಚಿವ ರಾಮಲಿಂಗಾರೆಡ್ಡಿ, 'ಐತಿಹಾಸಿಕ ಬಸವನಗುಡಿ ಕಡಲೆಕಾಯಿ ಪರಿಷೆಯಲ್ಲಿ ಕಳೆದ ವರ್ಷ 5 ಲಕ್ಷಕ್ಕೂ ಹೆಚ್ಚಿನ ಜನ ಪಾಲ್ಗೊಂಡಿದ್ದರು. ಈ ವರ್ಷ ಇನ್ನೂ ಹೆಚ್ಚಿನ ಮಂದಿ ಭೇಟಿ ನೀಡುವ ಸಾಧ್ಯತೆಯಿದೆ. ಹಾಗಾಗಿ, ಅಗತ್ಯ ಭದ್ರತಾ ಸಿಬ್ಬಂದಿ, ಮಾರ್ಷಲ್‌ಗಳ ನಿಯೋಜನೆ, ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ, ಕುಡಿಯುವ ನೀರಿನ ವ್ಯವಸ್ಥೆ, ತುರ್ತು ಚಿಕಿತ್ಸಾ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಸೇರಿ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆ' ಎಂದು ಹೇಳಿದರು.

ಸಂಸದ ತೇಜಸ್ವಿ ಸೂರ್ಯ ಮಾತನಾಡಿ, 'ಲಕ್ಷಾಂತರ ಮಂದಿ ಭಾಗವಹಿಸುವ ಪರಿಷೆಯು ಸಣ್ಣ ವ್ಯಾಪಾರಿಗಳ ಉತ್ತಮ ವ್ಯಾಪಾರ-ವಹಿವಾಟಿಗೂ ಕಾರಣವಾಗಿದೆ. ಪೋಷಕರು ಮಕ್ಕಳನ್ನು ಪರಿಷೆಗೆ ಕರೆದುಕೊಂಡು ಬನ್ನಿ, ಇಲ್ಲಿನ ಕಥೆ ಹೇಳಿ, ಸಾಂಸ್ಕೃತಿಕ ವೈಭವ ತೋರಿಸುವ ಮೂಲಕ ಪರಂಪರೆ ಉಳಿಸಬೇಕು' ಎಂದು ಕರೆ ನೀಡಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಯು.ಬಿ.ವೆಂಕಟೇಶ್ ಮಾತನಾಡಿ, 'ಮೈಸೂರು ದಸರಾದಲ್ಲಿ ದೀಪಾಲಂಕಾರ ಮಾಡಿದವರನ್ನು ಕರೆಸಿ ಬಸವನಗುಡಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ದೀಪಾಲಂಕಾರ ಮಾಡಲಾಗಿದೆ' ಎಂದರು.

ಶಾಸಕರಾದ ಉದಯ್ ಗರುಡಾಚಾರ್, ಎಲ್‌.ಎ.ರವಿಸುಬ್ರಹ್ಮಣ್ಯ, ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ, ರಾಜ್ಯ ಧಾರ್ಮಿಕ ಪರಿಷತ್ ಸದಸ್ಯರಾದ ಕೆ.ಎಂ ನಾಗರಾಜ್, ರಾಜೇಂದ್ರ ಕುಮಾರ್, ಶರತ್ ಬಿ. ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಕುಡಿಯುವ ನೀರು, ಶೌಚಾಲಯದಂತಹ ಮೂಲಸೌಕರ್ಯ
- ನೂಕು ನುಗ್ಗಲು ತಡೆಯಲು ಕ್ರಮ

ಕೆಂಪಾಂಬುಧಿ ಕೆರೆಯಲ್ಲಿ ತೆಪ್ಪೋತ್ಸವ

ದೊಡ್ಡ ಬಸವಣ್ಣ ದೇವಾಲಯದ ಆವರಣದಲ್ಲಿ ಕಿಕ್ಕೇರಿ ಕೃಷ್ಣಮೂರ್ತಿ ಅವರಿಂದ ಹಾಗೂ ನರಸಿಂಹಸ್ವಾಮಿ ಉದ್ಯಾನದಲ್ಲಿ ವಿಜಯ ವಿಠಲ ಶಾಲೆಯ ವತಿಯಿಂದ ಸಂಗೀತ ಕಾರ್ಯಕ್ರಮ ಜರುಗಿದವು. ಜತೆಗೆ, ಕೆಂಪಾಂಬುಧಿ ಕೆರೆಯಲ್ಲಿ ತೆಪ್ಪೋತ್ಸವ ನೇರವೇರಿತು. ಮಂಗಳವಾರ ಸಂಜೆ 7 ಗಂಟೆಗೆ ನಾಗರಾಜ್ ಕೋಟೆ ಅವರಿಂದ ಹಾಸ್ಯ ಸಂಜೆ ಕಾರ್ಯಕ್ರಮ ಜರುಗಲಿದೆ.

ಸುದ್ದಿ 2 ನಿಮಿಷ

ಜಿಬಿಎ ಎದುರು ಪ್ರತಿಭಟನೆ: ಎಚ್ಚರಿಕೆ

ರಾಜರಾಜೇಶ್ವರಿ ನಗರ: ಮುಖ್ಯರಸ್ತೆ ಕಾಮಗಾರಿ ಸ್ಥಗಿತಗೊಂಡಿರುವುದರಿಂದ ಆಗುತ್ತಿರುವ ಸಮಸ್ಯೆ ಬಗೆಹರಿಯದಿದ್ದರೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಗುವುದು ಎಂದು ಯಶವಂತಪುರ ಶಾಸಕ ಎಸ್‌.ಟಿ.ಸೋಮಶೇಖರ್ ಎಚ್ಚರಿಸಿದ್ದಾರೆ.

ಉತ್ತರಹಳ್ಳಿ ಮುಖ್ಯರಸ್ತೆಯಿಂದ ಕೋಡಿಪಾಳ್ಯ ಮುಖ್ಯ ರಸ್ತೆ, ಕನಕಪುರ ಮುಖ್ಯರಸ್ತೆಯ ಹಾಲಿಡೇ ವಿಲೇಜ್ ರಸ್ತೆಯಲ್ಲಿ ನಡೆಯುತ್ತಿರುವ ವೈಟ್ ಟಾಪಿಂಗ್ ಕಾಮಗಾರಿಯನ್ನು ಗುತ್ತಿಗೆದಾರರು ಸ್ಥಗಿತಗೊಳಿಸಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಕಾಮಗಾರಿ ಕೂಡಲೇ ಪುನರಾರಂಭಿಸಿ ಬೇಗನೇ ಮುಗಿಸಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಬಿಎ ಮುಖ್ಯ ಆಯುಕ್ತರಿಗೆ ಪತ್ರ ಬರೆದು ಎಚ್ಚರಿಕೆ ನೀಡಿದ್ದಾರೆ.

ಈ ರಸ್ತೆಯಲ್ಲಿ ಅನೇಕ ಅಪಾರ್ಟ್‌ಮೆಂಟ್‌ಗಳು, ಶಾಲೆಗಳು ಇವೆ. ವೈಟ್ ಟಾಪಿಂಗ್‌ಗೆ ಅನುದಾನ ಬಿಡುಗಡೆಯಾಗಿದೆ. ಕಾರ್ಯಾದೇಶವಾಗಿ ವರ್ಷವೇ ಕಳೆದಿದ್ದರೂ, ಇದುವರೆಗೂ ಕಾಮಗಾರಿ ಕುಂಟುತ್ತಾ ಸಾಗಿದೆ ಎಂದು ಆರೋಪಿಸಿದ್ದಾರೆ. ಮುಖ್ಯ ಆಯುಕ್ತರ ಗಮನಕ್ಕೆ ತಂದರೂ ಸಮಸ್ಯೆ ಬಗೆಹರಿದಿಲ್ಲ. ಸ್ಥಳ ಪರಿಶೀಲನೆ ಮಾಡಿ ಸಮಸ್ಯೆ ಬಗೆಹರಿಸುವುದಾಗಿ ಆಶ್ವಾಸನೆ ನೀಡಿದರೂ ಕೆಲಸ ಶುರುವಾಗುತ್ತಿಲ್ಲ. ವಿಧಾನಮಂಡಲ ಅಧಿವೇಶನದಲ್ಲಿ ಈ ಬಗ್ಗೆ ಚರ್ಚಿಸಿ ಗುತ್ತಿಗೆದಾರರ ಗಮನಕ್ಕೆ ತಂದರೂ ಕಾಮಗಾರಿ ಸ್ಥಗಿತಗೊಳಿಸಿ ತಮಾಷೆ ನೋಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಸರ್ಕಾರಿ ಶಾಲೆ ಮುಚ್ಚುವ ನಿರ್ಧಾರಕ್ಕೆ ಖಂಡನೆ



ಬೆಂಗಳೂರು: ರಾಜ್ಯದ 25 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚಲು ಹೊರಟಿರುವ ಸರ್ಕಾರದ ನೀತಿ ಖಂಡಿಸಿ, ಎಐಡಿಎಸ್‌ಒ ವಿದ್ಯಾರ್ಥಿ ಸಂಘಟನೆಯಿಂದ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು. ರಾಜ್ಯ ಸರ್ಕಾರದ ವಿರುದ್ಧ ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು.

ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಮಾತನಾಡಿ, 'ಸರ್ಕಾರದ ಆದೇಶದ ಪ್ರಕಾರ 800 ಶಾಲೆಗಳನ್ನು ಮ್ಯಾಗ್ನೆಟ್ ಶಾಲೆಗಳು ಎಂದು ಗುರುತಿಸಲಾಗಿದೆ. ಅಂದರೆ, ಕರ್ನಾಟಕ ಪಬ್ಲಿಕ್ ಶಾಲೆಯ ಸುತ್ತಮುತ್ತಲಿನ 1ರಿಂದ 5 ಕಿ.ಮೀ. ವ್ಯಾಪ್ತಿಯ, 50ಕ್ಕಿಂತ ಕಡಿಮೆ ದಾಖಲಾತಿ ಹೊಂದಿರುವ ಶಾಲೆಗಳನ್ನು ತನ್ನಲ್ಲಿ ವಿಲೀನಗೊಳಿಸಿಕೊಳ್ಳಲಿದೆ. ಈ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುತ್ತದೆ' ಎಂದು ಆಕ್ರೋಶ ಹೊರಹಾಕಿದರು.

'ಚನ್ನಪಟ್ಟಣ ತಾಲ್ಲೂಕಿನ ಹೊಂಗನೂರಿನ ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ, ಹೊಂಗನೂರಿನ ಆರು ಕಿ.ಮೀ. ವ್ಯಾಪ್ತಿಯ 7 ಪ್ರಾಥಮಿಕ ಶಾಲೆಗಳನ್ನು ವಿದ್ಯಾರ್ಥಿ, ಉಪಾಧ್ಯಾಯರು ಮತ್ತು ಪರಿಕರಗಳ ಸಹಿತ ವಿಲೀನಗೊಳಿಸಲು ಸರ್ಕಾರವು ಆದೇಶ ಹೊರಡಿಸಿದೆ. ಇದರಲ್ಲಿ 110ಕ್ಕೂ ಅಧಿಕ ಸಂಖ್ಯೆಯ ದಾಖಲಾತಿ ಹೊಂದಿರುವ ಶಾಲೆಗಳನ್ನು ಮುಚ್ಚಲು ಹೊರಟಿರುವುದು ಅತ್ಯಂತ ಖಂಡನೀಯ' ಎಂದರು.

ಮುದ್ದೆ ಮೆದ್ದು ಸ್ಪರ್ಧೆ ಗೆದ್ದ ಅಕ್ಕ, ತಮ್ಮ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ನಾಟಿಕೋಳಿ ಸಾರು, ರಾಗಿಮುದ್ದೆ ಉಣ್ಣುವ ಸ್ಪರ್ಧೆಯಲ್ಲಿ ಅಕ್ಕ 10 ಮುದ್ದೆ, ತಮ್ಮ 12 ಮುದ್ದೆ ಉಂಡು ಪ್ರಥಮ ಸ್ಥಾನ ಗಳಿಸಿದರು.

ಕನ್ನಡ ರಾಜ್ಯೋತ್ಸವದ ಅಂಗವಾಗಿ ಭಾನುವಾರ ಎಚ್‌ಎಸ್‌ಆರ್ ಬಡಾವಣೆಯಲ್ಲಿ ನಾಟಿ ಕೋಳಿ ಸಾರು, ರಾಗಿ ಮುದ್ದೆ ಉಣ್ಣುವ ಸ್ಪರ್ಧೆ ನಡೆಯಿತು.

ವೈಟ್‌ಫೀಲ್ಡ್‌ನ ಅಜಯಕುಮಾರ್ 12 ಮುದ್ದೆ ಉಣ್ಣುವ ಮೂಲಕ ಪ್ರಥಮ ಬಹುಮಾನವಾಗಿ ಬಂದ ಟಗರನ್ನು ಪಡೆದರು. ಇವರ ಸಹೋದರಿ ಸೌಮ್ಯಾ ಮಹಿಳೆಯರ ವಿಭಾಗದಲ್ಲಿ 10 ಮುದ್ದೆ ತಿಂದು ಸೀರೆ, ಟಿ.ವಿ ಮತ್ತು ₹5000 ನಗದು ಬಹುಮಾನ ಪಡೆದರು.

ಅತ್ತಿಬೆಲೆಯ ರಮೇಶ್ 9 ಮುದ್ದೆ ತಿಂದು ಎರಡನೇ ಸ್ಥಾನದೊಂದಿಗೆ ಕುರಿಯನ್ನು ಬಹುಮಾನವಾಗಿ ಪಡೆದರು. ಕೋಲಾರದ ಯಶವಂತ ಕುಮಾರ್ 8½ ಮುದ್ದೆ ಉಂಡು ತೃತೀಯ ಸ್ಥಾನ ಗಳಿಸಿ, ನಾಲ್ಕು ನಾಟಿ ಕೋಳಿಗಳನ್ನು ಬಹುಮಾನವಾಗಿ ಪಡೆದರು.



ಪುರುಷರ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಅಜಯಕುಮಾರ್



ಮಹಿಳಾ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ವೈಟ್‌ಫೀಲ್ಡ್‌ನ ಸೌಮ್ಯಾ

ಮಹಿಳೆಯರ ವಿಭಾಗದಲ್ಲಿ ಚಿಕ್ಕನಾಯಕನಹಳ್ಳಿಯ ಚಂದ್ರಕಲಾ 9 ಮುದ್ದೆ ತಿಂದು ದ್ವಿತೀಯ ಸ್ಥಾನ ಪಡೆದು ಮಿಕ್ಸರ್ ಗ್ರೈಂಡರ್, ₹4 ಸಾವಿರ ನಗದು ಮತ್ತು ಸೀರೆಯನ್ನು ಬಹುಮಾನವಾಗಿ ಪಡೆದರು. ಯಲಹಂಕದ ಪುಷ್ಪ 8 ½ ಮುದ್ದೆ ಉಂಡು ತೃತೀಯ ಸ್ಥಾನ ದೊಂದಿಗೆ ಕಿಚನ್ ಸೆಟ್, ₹3 ಸಾವಿರ ನಗದು ಮತ್ತು ಸೀರೆಯನ್ನು ಪಡೆದರು.

16 ಜನ ಮಹಿಳೆಯರೂ ಸೇರಿದಂತೆ ಒಟ್ಟು 68 ಜನ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. 45 ನಿಮಿಷದ ಅವಧಿ ನೀಡಲಾಗಿತ್ತು. ಮುದ್ದೆಯ ಜೊತೆಗೆ ನಾಟಿ ಕೋಳಿ ಫ್ರೈ, ಕಬಾಬ್, ಮೊಟ್ಟೆ, ಸಲಾಡ್ ನೀಡಲಾಗಿತ್ತು. ವಕೀಲ ಅನಿಲ್ ರೆಡ್ಡಿ ಕಾರ್ಯಕ್ರಮ ಆಯೋಜಿಸಿದ್ದರು.

ಪ್ರಥಮ ಸ್ಥಾನ ಗಳಿಸಿದ ಸೌಮ್ಯ ಮಾತನಾಡಿ, 'ಕಳೆದ ವರ್ಷದ ಸ್ಪರ್ಧೆ ಯಲ್ಲೂ ಪ್ರಥಮ ಸ್ಥಾನ ಗಳಿಸಿದ್ದೆ, ಈಗಲೂ ಪ್ರಥಮ ಸ್ಥಾನ ಗಳಿಸಿದ್ದೇನೆ. ಜೊತೆಗೆ ತಮ್ಮನನ್ನು ಸ್ಪರ್ಧೆಗೆ ಕರೆ ತಂದಿದ್ದೆ. ಅವನೂ ಪ್ರಥಮ ಸ್ಥಾನ ಗಳಿಸಿ ರುವುದು ಖುಷಿ ತಂದಿದೆ' ಎಂದರು.

ವಕೀಲ ನಾರಾಯಣಸ್ವಾಮಿ, ಸ್ಥಳೀಯ ಕಾಂಗ್ರೆಸ್ ಮುಖಂಡ ಕೂಡ್ಲುಗೇಟ್ ರವೀಂದ್ರ, ಕೆಪಿಸಿಸಿ ಸದಸ್ಯ ಸಯ್ಯದ್ ಸರ್ದಾರ್, ಲೋಕಾಯುಕ್ತ ಡಿವೈಎಸ್ಪಿ ಎಲ್‌.ವೈ.ರಾಜೇಶ್ ಭಾಗವಹಿಸಿದ್ದರು.

'ರಾಗಿ ಮಹತ್ವ ಸಾರುವ ಪ್ರಯತ್ನ'

ಬಹುಮಾನ ವಿತರಿಸಿದ ಲೇಖಕ ಶೂದ್ರ ಶ್ರೀನಿವಾಸ್, 'ಜನಪದ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯಿಂದ ರಾಗಿ ಬೆಳೆದು ಬಂದಿದೆ. ಯುವ ಜನಾಂಗ ಪಾಶ್ಚಾತ್ಯ ತಿನಿಸುಗಳಿಗೆ ಮನಸೋತು, ಆರೋಗ್ಯಕರವಾದ ದೇಸಿ ಆಹಾರವನ್ನು ತ್ಯಜಿಸುತ್ತಿರುವುದು ಕಳವಳಕಾರಿ. ಇಂತಹ ಸ್ಪರ್ಧೆಗಳ ಮೂಲಕ ರಾಗಿಯ ಮಹತ್ವವನ್ನು ಸಾರುವ ಕಾರ್ಯ ಶ್ಲಾಘನೀಯ' ಎಂದರು.



ಕರ್ನಾಟಕ ಜಾನಪದ ಪರಿಷತ್ತು ನೀಡುವ ಎಚ್‌.ಎಲ್‌. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿಯನ್ನು ಜಾನಪದ ಕಲಾವಿದ ಟಿ. ಲಕ್ಷ್ಮೀಪತಿ ಅವರಿಗೆ ಸೋಮವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದಾನ ಮಾಡಲಾಯಿತು. ಎಸ್‌.ಜಿ. ಸಿದ್ಧರಾಮಯ್ಯ, ಆದಿತ್ಯ ನಂಜರಾಜ್, ಸೌಮ್ಯನಾಥ ಸ್ವಾಮೀಜಿ, ಡಾ.ಸಿ.ಎನ್‌. ಮಂಜುನಾಥ್, ಹಿ.ಚಿ. ಬೋರಲಿಂಗಯ್ಯ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಧಾರಾವಾಹಿಗಳಲ್ಲೂ ಜನಪದ ಇರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಟಿ.ವಿ ಧಾರಾವಾಹಿಗಳಲ್ಲಿ ಹೆಣ್ಣುಮಕ್ಕಳನ್ನು ವಿಲನ್ ರೀತಿ ಬಿಂಬಿಸಿ ದ್ವೇಷ ಬಿತ್ತುವ ಬದಲು ಜನಪದ, ಸಾಹಿತ್ಯ, ಗಾದೆ, ಒಗಟುಗಳ ಮೂಲಕ ಜನರಲ್ಲಿ ಕಲೆ, ಸಂಸ್ಕೃತಿಯ ಒಲವು ಹೆಚ್ಚಿಸಿ' ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್‌. ಮಂಜುನಾಥ್ ಸಲಹೆ ನೀಡಿದರು.

ಕರ್ನಾಟಕ ಜಾನಪದ ಪರಿಷತ್ತು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ 2025ನೇ ಸಾಲಿನ ನಾಡೋಜ ಎಚ್‌.ಎಲ್‌. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿಯನ್ನು ತಮಿಳುನಾಡಿನ ತೆರುಕೂತು ಕಲಾವಿದ ಟಿ.ಲಕ್ಷ್ಮೀಪತಿ ಅವರಿಗೆ ಪ್ರದಾನ ಮಾಡಿ ಮಾತನಾಡಿದರು.

'ಜನರು ಹೆಚ್ಚಾಗಿ ನೋಡುವ ಟಿ.ವಿ ಧಾರಾವಾಹಿಗಳಲ್ಲಿ ಮೌಲ್ಯಾಧಾರಿತ ವಿಷಯಗಳಿಗೆ ಆದ್ಯತೆ ನೀಡಬೇಕು. ಜನಪದ ಮಹತ್ವದ ವಿಚಾರವನ್ನು ಸೇರಿಸಿದಾಗ ಅದು ನಮ್ಮ ಕಲೆ, ಸಂಸ್ಕೃತಿಯನ್ನು ಗೌರವಿಸಿದಂತೆ. ಜನಪದ ಕಲೆಯನ್ನು ಉಳಿಸಿ ಬೆಳೆಸುವ ಪ್ರಯತ್ನ ನಮ್ಮಿಂದಲೇ ಆಗಬೇಕು' ಎಂದರು.

ಸಾಹಿತಿ ಎಸ್‌.ಜಿ.ಸಿದ್ದರಾಮಯ್ಯ ಮಾತನಾಡಿ, 'ನಾಗೇಗೌಡರು ನೆಲ ಸಂಸ್ಕೃತಿ, ಮೂಲ ಬೇರನ್ನು ಮರೆಯಲಿಲ್ಲ. ಲೇಖಕರಾಗಿ, ಜನಪದ ವಿದ್ವಾಂಸರಾಗಿ ಜಾನಪದ ಲೋಕ ಹಾಗೂ ಪರಿಷತ್ತನ್ನು ಸ್ಥಾಪಿಸಿ ಕಲೆ ಉಳಿಸಲು ಶ್ರಮಿಸಿದರು' ಎಂದು ಹೇಳಿದರು.

ಸಫಾರಿ ವಾಹನಕ್ಕೆ ಜಾಲರಿ

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದ ಸಫಾರಿ ವಾಹನದ ಮೇಲೆ ಚಿರತೆ ದಾಳಿ ನಡೆಸಿ ಮಹಿಳಾ ಪ್ರವಾಸಿಯೊಬ್ಬರನ್ನು ಗಾಯಗೊಳಿಸಿದ ಘಟನೆ ನಂತರ ಸಫಾರಿ ಬಸ್‌ಗಳಿಗೆ ಸುರಕ್ಷಿತ ಜಾಲರಿ ಅಳವಡಿಸಲಾಗಿದೆ.

ಸಫಾರಿ ವಾಹನಗಳಿಗೆ ಅಳವಡಿಸಿದ್ದ ಹಳೆಯ ಜಾಲರಿಗಳನ್ನು ತೆರವುಗೊಳಿಸಿ ಕಿಟಕಿಗಳಿಗೆ ಹೊಸ ಜಾಲರಿಗಳನ್ನು ಅಳವಡಿಸಿದ್ದಾರೆ. ಕಿಟಕಿಗೆ ಅಂಟಿಕೊಂಡಂತೆ ಈ ಜಾಲರಿ ಅಳವಡಿಸಲಾಗಿದ್ದು, ಯಾವುದೇ ಪ್ರಾಣಿಯ ಮುಖ ಇಲ್ಲವೇ ಕಾಲು ತೂರಿ ಸಾಧ್ಯವಿಲ್ಲದಂತೆ ಎಚ್ಚರಿಕೆ ವಹಿಸಲಾಗಿದೆ. ಸ್ಥಗಿತಗೊಂಡಿದ್ದ ಸಫಾರಿಯನ್ನು ಸೋಮವಾರದಿಂದ ಆರಂಭಿಸಲಾಗಿದೆ.

ನ.13ರಂದು ಬನ್ನೇರುಘಟ್ಟ ಉದ್ಯಾನಕ್ಕೆ ಬಂದಿದ್ದ ಚೆನ್ನೈನ ವಹೀದಾ ಬಾನು ಅವರು ಉದ್ಯಾನದ ವಾಹನದಲ್ಲಿ ಸಫಾರಿ ವೀಕ್ಷಿಸಲು ತೆರಳಿದ್ದರು. ಕಿಟಕಿ ಪಕ್ಕ ಕುಳಿತಿದ್ದ ಅವರ ಮೇಲೆ ಚಿರತೆ ದಾಳಿ ನಡೆಸಿತ್ತು. ಮಹಿಳೆಯ ಕೈಯನ್ನು ಮುಂಗಾಲುಗಳಿಂದ ಬಲವಾಗಿ ಹಿಡಿದು ಬಾಯಿ ಹಾಕಿತ್ತು. ಮಹಿಳೆಯ ಪಕ್ಕ ಕುಳಿತವರು ತಕ್ಷಣ ಆಕೆಯನ್ನು ಚಿರತೆಯ ಹಿಡಿತದಿಂದ ಬಿಡಿಸಿಕೊಂಡಿದ್ದರು. ಚಿರತೆ ಬಾಯಿಯೊಳಗೆ ಮಹಿಳೆಯ ದುಪಟ್ಟಾ (ವೇಲ್) ಮಾತ್ರ ಸಿಕ್ಕಿತ್ತು.

ಈ ಘಟನೆ ನಂತರ ಎಚ್ಚೆತ್ತುಕೊಂಡಿದ್ದ ಉದ್ಯಾನದ ಅಧಿಕಾರಿಗಳು ಹವಾನಿಯಂತ್ರಣ ವ್ಯವಸ್ಥೆ ಇಲ್ಲದ ವಾಹನಗಳ ಸಫಾರಿಯನ್ನು ಸ್ಥಗಿತಗೊಳಿಸಿದ್ದರು.

ಚಿರತೆ ಹಾಗೂ ಇನ್ನಿತರ ವನ್ಯಮೃಗಗಳ ಸಫಾರಿಯೊಳಗೆ ಹೇಗೆ ಎಚ್ಚರಿಕೆಯಿಂದ ಚಾಲನೆ ಮಾಡಬೇಕು ಹಾಗೂ ಯಾವ ಸುರಕ್ಷಿತ ಕ್ರಮಗಳನ್ನು ಅನುಸರಿಸಬೇಕು ಎಂಬ ಬಗ್ಗೆ ಸಫಾರಿ ವಾಹನ ಚಾಲಕರಿಗೆ ತರಬೇತಿ ನೀಡಲಾಗಿದೆ ಎಂದು ಉದ್ಯಾನದ ಕಾರ್ಯನಿರ್ವಹಣಾಧಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಮಕ್ಕಳ ವಚನ ಮೇಳದ ಉದ್ಘಾಟನೆ: ಶಿವಸಿದ್ದೇಶ್ವರ ಸ್ವಾಮೀಜಿ, ಸಿದ್ಧಯ್ಯ ಸ್ವಾಮೀಜಿ, ಅತಿಥಿಗಳು: ಎಸ್‌. ಟಿ. ಸೋಮಶೇಖರ್, ಕೆ.ವಿ. ನಾಗರಾಜಮೂರ್ತಿ, ಗಂಗಾಬಿಕೆ ಮಲ್ಲಿಕಾರ್ಜುನ್, ಅಧ್ಯಕ್ಷತೆ: ಮಹೇಶ್ ಬೆಲ್ಲದ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 9.30

ಸಂಗೀತ ಸಮ್ಮೇಳನ: ಪ್ರಾತ್ಯಕ್ಷಿಕೆ: ಎಂ.ಆರ್‌. ಸತ್ಯನಾರಾಯಣ ಮತ್ತು ತಿರುಮಲೆ ಶ್ರೀನಿವಾಸ, ಗಾಯನ: ಅಭಿರಾಮ ಭಟ್ ಮತ್ತು ತಂಡ, ಪಟ್ಟಾಭಿರಾಮ ಪಂಡಿತ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್‌. ರಸ್ತೆ, ಬೆಳಿಗ್ಗೆ 10ರಿಂದ

'ಸಂತವಾಣಿ'– ಚಲನಚಿತ್ರಗಳು, ಪುಸ್ತಕಗಳು, ಉಪನ್ಯಾಸಗಳು, ಸಂಗೀತ, ನೃತ್ಯ, ನಾಟಕ ಮತ್ತು ವಿಚಾರಗೋಷ್ಠಿಗಳು: 'ಗುರಬಾನಿ' ಉಪನ್ಯಾಸ: ಚಿರಂಜೀವ್ ಸಿಂಘ್, 'ಗೌಡೀಯ ಸಂಪ್ರದಾಯ': ಮಧು ಪಂಡಿತ್ ದಾಸ್, 'ವಾರ್ಕರಿ ಸಂಪ್ರದಾಯ': ಅಭಯ ಜಿ. ತಿಲಕ್, 'ರಮಾನಂದ ಸಂಪ್ರದಾಯ': ತುಳಸಿದಾಸ್ ಪರೌಹಾ, 'ಚರ್ಚ್ ಪರಂಪರೆಯ ಸಮೂಹ ಗಾಯನ: ಸೇಂಟ್ ಜಾನ್ ದಿ ಇವಾಂಜೆಲಿಸ್ಟ್, ಚರ್ಚ್ ಸಂಗೀತ: ಆರ್ಚ್‌ಡಯೋಸಿಸ್, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10ರಿಂದ

'ಸಂಪತ್ತಿಗೆ ಸವಾಲ್' ನಾಟಕ ಪ್ರದರ್ಶನ: ಆಯೋಜನೆ: ನಿಸರ್ಗ ಸಂಗೀತ ವಿದ್ಯಾಲಯ, ರಂಗ ಕಲಾವಿದರ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

'ವಿದ್ಯಾಶಂಕರ ಪ್ರಶಸ್ತಿ', 'ವಿದ್ಯಾಶಂಕರ ಪುರಸ್ಕಾರ' ಪ್ರದಾನ: ಸಾನ್ನಿಧ್ಯ: ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ನಲ್ಲೂರು ಪ್ರಸಾದ್ ಆರ್‌.ಕೆ., ಪ್ರಶಸ್ತಿ ಪ್ರದಾನ: ಡಿ.ವಿ. ಪರಮಶಿವಮೂರ್ತಿ, ಪ್ರಶಸ್ತಿ, ಪುರಸ್ಕಾರ ಸ್ವೀಕರಿಸುವವರು: ಸಂಗಮೇಶ ಸವದತ್ತಿಮಠ, ಜಯಲಲಿತಾ, ಅತಿಥಿ: ಕಾ.ವೆಂ. ಶ್ರೀನಿವಾಸಮೂರ್ತಿ, ಆಯೋಜನೆ: ಡಾ.ಎಸ್‌. ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4.30

'ವಿಜಯ ಜ್ಯೋತಿ ಗಾನವೈಭವ' 1,166 ಗಾಯಕರಿಂದ ಸಮೂಹ ಗಾಯನ: ಉದ್ಘಾಟನೆ: ವೂಡೇ ಪಿ. ಕೃಷ್ಣ, ಅತಿಥಿಗಳು: ಕೆ. ಶಿವಚಿತ್ತಪ್ಪ, ಮಲ್ಲೇಪುರಂ ಜಿ. ವೆಂಕಟೇಶ್, ಹುಲಿಕಲ್ ನಟರಾಜ್, ಪ್ರಭಾಕರ ಸಂಗೂರಮಠ, ತಿಮ್ಮಪ್ಪ ಎಚ್‌. ಗೌಡ, ಕಾ.ವೆಂ. ಶ್ರೀನಿವಾಸಮೂರ್ತಿ, ಉಪಸ್ಥಿತಿ: ಬಂಡ್ಲಹಳ್ಳಿ ವಿಜಯಕುಮಾರ್, ಅಧ್ಯಕ್ಷತೆ: ಶ್ರೀರಾಮಚಂದ್ರ, ಆಯೋಜನೆ ಮತ್ತು ಸ್ಥಳ: ವಿಜಯ ಜ್ಯೋತಿ ಸಮೂಹ ಶಿಕ್ಷಣ ಸಂಸ್ಥೆಯ ಆವರಣ, ಬಾಗಲೂರು, ಸಂಜೆ 5

ಸರ್ ಸಿ.ವಿ. ರಾಮನ್ ವಿಜ್ಞಾನ ದತ್ತಿ ಉಪನ್ಯಾಸ: 'ಇಂದಿನ ಕಾಲಮಾನಕ್ಕೆ ಕೃತಕ ಬುದ್ಧಿಮತ್ತೆ'? ಕುರಿತು: ಡಿ.ಎಂ.ಸುರೇಶ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್‌.ಆರ್‌. ಕಾಲೊನಿ, ಸಂಜೆ 5

ಜಾನಪದ ಹಬ್ಬ-2025: ಉದ್ಘಾಟನೆ: ಉಮಾಶ್ರೀ, ಅತಿಥಿಗಳು: ಮಳವಳ್ಳಿ ಮಹದೇವಸ್ವಾಮಿ, ಪ್ರೇಮಾವತಿ ಎಸ್‌. ಕೆ., ಅಧ್ಯಕ್ಷತೆ: ಎಜಾಜ್ ಅಹಮದ್ ಖಾನ್, ಆಯೋಜನೆ ಮತ್ತು ಸ್ಥಳ: ಸರ್ಕಾರಿ ರಾಂನಾರಾಯಣ್ ಚೆಲ್ಲಾರಾಂ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಬೆಳಿಗ್ಗೆ 10.30




ಉಮಾಶ್ರೀ

ಕರ್ನಾಟಕ ರಾಜ್ಯೋತ್ಸವ: ಅಧ್ಯಕ್ಷತೆ: ಚಿನ್ನಪ್ಪ ರಾಜಪ್ಪ ಪಾಟೀಲ, ಅತಿಥಿ: ಸುಂದರಶ್ರೀ, ಸನ್ಮಾನಿತರು: ತುಂಬಾಡಿ ರಾಮಯ್ಯ, ಕಲಾಜೀವಿ ಪ್ರಶಸ್ತಿ ಸ್ವೀಕರಿಸುವವರು: ನಾಗೇಂದ್ರ ಜೋಯಿಸ್ ಡಿ.ಕೆ., ಉಪಸ್ಥಿತಿ: ಸುಂದರರಾಜ್ ಕೆ., ಗೌರವ ಪುರಸ್ಕಾರ ಸ್ವೀಕರಿಸುವವರು: ಹ.ರಾ. ಅನುಪಮಾ, ಉಮಾದೇವಿ ಎಸ್‌., ಭೀಮಸೇನಾಚಾರ್ ಜೋಶಿ, ಚಿಟ್ಟಿಬಾಬು ಎಂ., ಕೆ. ರಾಮಚಂದ್ರ, ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 5.30

'ಕಾರ್ತಿಕ ಮಾಸ ಮಹಾತ್ಮೆ' ಧಾರ್ಮಿಕ ಪ್ರವಚನ: ಪ್ರಸನ್ನಾಚಾರ್ ತಂತ್ರಸಾರ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರ ಬಡಾವಣೆ, ಸಂಜೆ 6

'ಬಿಲ್ಲಹಬ್ಬ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಸುಬ್ರಾಯ ಹೆಬ್ಬಾರ್, ರಾಘವೇಂದ್ರ ಹಂದ್ರಮನೆ, ಕಾರ್ತಿಕ ಧಾರೇಶ್ವರ, ಮುಮ್ಮೇಳ: ದಿನೇಶ್ ಕನ್ನಾರು, ಗೀತಾ ಹೆಗಡೆ, ನಿಹಾರಿಕಾ ಭಟ್, ದೇವರಾಜ ಕರಬ, ಅರ್ಪಿತಾ ಹೊಳ್ಳ, ಸಿಂಧುಶ್ರೀ ಹೆಬ್ಬಾರ್, ಆಯೋಜನೆ: ಸಿರಿಕಲಾ ಮೇಳ, ಸ್ಥಳ: ನರಸಿಂಹಸ್ವಾಮಿ ಉದ್ಯಾನ, ಕತ್ರಿಗುಪ್ಪೆ, ಸಂಜೆ 6

'ವಚನ ದನಿ-ಶಬ್ದದಿಂದ ನಿಶ್ಯಬ್ದದೆಡೆಗೆ' ರಂಗಪ್ರಸ್ತುತಿ: ಪರಿಕಲ್ಪನೆ, ಸಂಗೀತ, ಗಾಯನ: ಬಾಪು ಪದ್ಮನಾಭ, ನಿರ್ದೇಶನ: ಟಿ.ಎಸ್‌. ನಾಗಾಭರಣ, ಆಯೋಜನೆ: ಬೆನಕ-50, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಸಂಜೆ 6.30



ನಾಗಾಭರಣ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

‘ವರದಿ ಆಧರಿಸಿ ಮುಂದುವರಿಯಿರಿ’

ಓಲಾ ಉದ್ಯೋಗಿ ಸಾವಿನ ಪ್ರಕರಣದಲ್ಲಿ ರಾಜ್ಯಕ್ಕೆ ಹೈಕೋರ್ಟ್‌ ನಿರ್ದೇಶನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಓಲಾ ಎಲೆಕ್ಟ್ರಿಕ್ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಡ್ ಕಂಪನಿಯ ಮೃತ ಉದ್ಯೋಗಿ ಕೆ.ಅರವಿಂದ್ ಸಾಯುವ ಮುನ್ನ ಬರೆದಿಟ್ಟಿದ್ದರು ಎನ್ನಲಾದ ಆತ್ಮಹತ್ಯೆ ಪತ್ರದ ಕುರಿತಂತೆ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಏನು ತಿಳಿಸುತ್ತದೆಯೋ ಅದನ್ನು ಆಧರಿಸಿ ತನಿಖೆ ಮುಂದುವರಿಸಿ’ ಎಂದು ಹೈಕೋರ್ಟ್‌, ರಾಜ್ಯ ಪ್ರಾಸಿಕ್ಯೂಷನ್‌ಗೆ ಆದೇಶಿಸಿದೆ.

‘ಅರವಿಂದ್ ಸಾವಿನ ಆರೋಪದಡಿ ನಮ್ಮ ವಿರುದ್ಧ ದಾಖಲಿಸಲಾಗಿರುವ ಎಫ್‌ಐಆರ್ ಮತ್ತು ಈ ಸಂಬಂಧ 30ನೇ ಎಸಿಎಂಎಂ ಕೋರ್ಟ್‌ನಲ್ಲಿ ನಡೆಯುತ್ತಿರುವ ನ್ಯಾಯಿಕ ವಿಚಾರಣೆ ರದ್ದುಗೊಳಿಸಬೇಕು’ ಎಂದು ಕೋರಿ ಕಂಪನಿಯ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಸುಬ್ರತ್ ಕುಮಾರ್ ದಾಸ್, ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಭವಿಶ್ ಅಗರವಾಲ್ ಮತ್ತು ಓಲಾ ಕಂಪನಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರತಿವಾದಿ ಅಶ್ವಿನ್ ಕಣ್ಣನ್ (ಮೃತ ಅರವಿಂದ್ ಸಹೋದರ) ಪರ ವಕೀಲ ಪಿ.ಪ್ರಸನ್ನ ಕುಮಾರ್, ‘ಅರವಿಂದ್ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಬರೆದಿದ್ದ ಪತ್ರವನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಾಗಿದೆ. ಕೈಬರಹದ ತಜ್ಞರ ವರದಿಗಾಗಿ ಕಾಯಲಾಗುತ್ತಿದೆ’ ಎಂದರು.

ಇದಕ್ಕೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಂ.ಎಸ್.ಶ್ಯಾಮಸುಂದರ್, ‘ಈ ಪ್ರಕರಣವು ಭಾರತೀಯ ದಂಡ ಸಂಹಿತೆ–1860ರ (ಆತ್ಮಹತ್ಯೆಗೆ ಕುಮ್ಮಕ್ಕು ನೀಡಿದ ಆರೋಪ) ಕಲಂ 306ಕ್ಕೆ ಅನ್ವಯ ಆಗುವುದಿಲ್ಲ’ ಎಂದು ಪುನರುಚ್ಚರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಅಂತಿಮ ವರದಿ ಕೈಸೇರಲಿ. ಒಂದು ವೇಳೆ ಪ್ರಾಸಿಕ್ಯೂಷನ್ ದೋಷಾರೋಪ ಪಟ್ಟಿ ಸಲ್ಲಿಸಿದರೆ ಅದನ್ನು ಸಕ್ಷಮ ನ್ಯಾಯಾಲಯದಲ್ಲಿ ಪ್ರಶ್ನಿಸಿ. ಆಗ ಬೇಕಿದ್ದರೆ ಈ ಅರ್ಜಿಯನ್ನು ವಜಾಗೊಳಿಸುತ್ತೇನೆ’ ಎಂದು ಶ್ಯಾಮಸುಂದರ್ ಅವರಿಗೆ ಸೂಚಿಸಿತು.

ಅಂತೆಯೇ, ‘ಎಫ್‌ಎಸ್‌ಎಲ್ ವರದಿಯನ್ನು ಆಧರಿಸಿ ತನಿಖೆ ಮುಂದುವರಿಸಿ’ ಎಂದು ರಾಜ್ಯ ಪ್ರಾಸಿಕ್ಯೂಷನ್ ಪರ ವಕೀಲ ಕೆ.ರಾಹುಲ್ ರೈ ಅವರಿಗೆ ನಿರ್ದೇಶಿಸಿ, ವಿಚಾರಣೆಯನ್ನು ಡಿಸೆಂಬರ್ 5ಕ್ಕೆ ಮುಂದೂಡಿತು. ‘ಅರ್ಜಿದಾರರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು’ ಎಂಬ ಈ ಹಿಂದಿನ ಆದೇಶವನ್ನು ಇದೇ ವೇಳೆ ನ್ಯಾಯಪೀಠ ವಿಸ್ತರಿಸಿತು.

ಪ್ರಕರಣವೇನು?: ‘ನನಗೆ ಕೆಲಸದ ಸ್ಥಳದಲ್ಲಿ ಕಿರುಕುಳ ನೀಡಲಾಗುತ್ತಿದೆ, ಸಂಬಳ ಬಾಕಿ ಉಳಿಸಿಕೊಳ್ಳಲಾಗಿದೆ ಹಾಗೂ ಕಂಪನಿ ಮಾಲೀಕರು ಸವಲತ್ತುಗಳನ್ನು ನಿರಾಕರಿಸಿದ್ದಾರೆ’ ಎಂದು ಆರೋಪಿಸಿ ಕೆ.ಅರವಿಂದ್ ಪತ್ರವೊಂದನ್ನು ಬರೆದಿಟ್ಟು 2025ರ ಸೆಪ್ಟೆಂಬರ್ 28ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಸಂಬಂಧ ಕೆ.ಅರವಿಂದ್ ಅವರ ಸಹೋದರ ಅಶ್ವಿನ್ ನೀಡಿರುವ ದೂರಿನ ಮೇರೆಗೆ, ಭಾರತೀಯ ನ್ಯಾಯ ಸಂಹಿತೆ–2023ರ (ಬಿಎನ್‌ಎಸ್) ಕಲಂ 108 ಹಾಗೂ 3(5)ರ ಅಡಿ ಅರ್ಜಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಉದ್ಯಮಿಯಿಂದ ಕಿರುಕುಳ: ವಿಚಾರಣೆಗೆ ಹಾಜರಾಗಲು ನಟಿಗೆ ಸೂಚನೆ

ಬೆಂಗಳೂರು: ಕಿರುಕುಳ ಹಾಗೂ ಮಾನಸಿಕ ಹಿಂಸೆ ನೀಡಿದ್ದಾರೆ ಎಂದು ಆರೋಪಿಸಿ ಎ.ವಿ.ಆರ್ ಗ್ರೂಪ್‌ನ ವ್ಯವಸ್ಥಾಪಕ ನಿರ್ದೇಶಕ ಅರವಿಂದ್ ವೆಂಕಟೇಶ್‌ರೆಡ್ಡಿ ಅವರ ವಿರುದ್ಧ ದಾಖಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗುವಂತೆ ನಟಿಗೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.

ಅ.10ರಂದು ರಾಜರಾಜೇಶ್ವರಿನಗರ ಠಾಣೆಗೆ ನಟಿ ದೂರು ನೀಡಿದ್ದರು. ಭಾರತೀಯ ನ್ಯಾಯ ಸಂಹಿತೆ 78(2), 79, 352, 351(2), 3(5) ಅಡಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಹೆಚ್ಚಿನ ತನಿಖೆಗಾಗಿ ಪ್ರಕರಣವನ್ನು ಗೋವಿಂದರಾಜನಗರ ಠಾಣೆಗೆ ವರ್ಗಾವಣೆ ಮಾಡಲಾಗಿತ್ತು. ಪ್ರಕರಣದ ತನಿಖೆಗೆ ವಿಶೇಷ ತಂಡ ರಚಿಸಲಾಗಿತ್ತು. ಶನಿವಾರ ಮುಂಜಾನೆ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಅರವಿಂದ್ ಅವರನ್ನು ಪೊಲೀಸರು ಬಂಧಿಸಿದ್ದರು. ಅಂದೇ ಸಂಜೆ ಜಾಮೀನು ಲಭಿಸಿದ್ದರಿಂದ ರೆಡ್ಡಿ ಅವರು ಬಿಡುಗಡೆ ಆಗಿದ್ದರು.

‘ಅರವಿಂದ್ ಅವರು ನನ್ನನ್ನು ಹಿಂಬಾಲಿಸುವುದು, ಲೊಕೇಷನ್ ಪರಿಶೀಲನೆ ಮಾಡುವುದು, ಫೋಟೊಗಳನ್ನು ಮಾರ್ಫ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವ ಮೂಲಕ ಕಿರುಕುಳ ನೀಡಿದ್ದಾರೆ. ಅಲ್ಲದೇ ತಂದೆ–ತಾಯಿಗೆ ಬೆದರಿಕೆ ಹಾಕಿದ್ದಾರೆ’ ಎಂದು ನಟಿ ದೂರಿನಲ್ಲಿ ಉಲ್ಲೇಖಿಸಿದ್ದರು.

‘ದೂರಿನಲ್ಲಿ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಯಾವುದಾದರೂ ಪೂರಕ ದಾಖಲೆಗಳಿದ್ದರೆ ಸಲ್ಲಿಸುವಂತೆ ದೂರುದಾರೆಗೆ ತಿಳಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಸದರನ್ ಟ್ರಾವೆಲ್ಸ್ ಮೈಲಿಗಲ್ಲು...

ಪ್ರಜಾವಾಣಿ ಚಿತ್ರ



ಸದರನ್ ಟ್ರಾವೆಲ್ಸ್‌ನ ಜಯನಗರ ಶಾಖೆಯನ್ನು ಸಂಸದ ತೇಜಸ್ವಿ ಸೂರ್ಯ ಸೋಮವಾರ ಉದ್ಘಾಟಿಸಿ, ಮೈಲಿಗಲ್ಲಿನ ಚಿತ್ರವನ್ನು ಬಿಡುಗಡೆ ಮಾಡಿದರು. ರಾಶಿ ಗ್ರೂಪ್ ಆಫ್ ಕಂಪನೀಸ್‌ನ ಅಧ್ಯಕ್ಷ ಸಿ. ನರಸಿಂಹನ್, ಸದರನ್ ಟ್ರಾವೆಲ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಮೋಹನ್ ಉಪಸ್ಥಿತರಿದ್ದರು

ಚೀಮಸಂದ್ರದಲ್ಲಿ ಬಸವೇಶ್ವರಸ್ವಾಮಿ ರಥೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕಾರ್ತಿಕ ಮಾಸದ ಕಡೆ ಸೋಮವಾರದ ಪ್ರಯುಕ್ತ ಚೀಮಸಂದ್ರ ಗ್ರಾಮದ ಇತಿಹಾಸ ಪ್ರಸಿದ್ಧ ಶ್ರೀಬಸವೇಶ್ವರಸ್ವಾಮಿಯ ರಥೋತ್ಸವವು ಅದ್ದೂರಿಯಾಗಿ ನಡೆಯಿತು.

ಉತ್ಸವದಲ್ಲಿ ದೇವರಿಗೆ ವಿಶೇಷ ಪೂಜೆ, ಅಭಿಷೇಕ ಹಾಗೂ ಮಹಾಮಂಗಳಾರತಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಗಳು ನೆರವೇರಿದವು.

ಇದೇ ವೇಳೆ ಶ್ರೀವಲ್ಲಿದೇವಸೇನಾ ಶ್ರೀಸುಬ್ರಮಣ್ಯಸ್ವಾಮಿ ಮತ್ತು ಶ್ರೀಅಯ್ಯಪ್ಪಸ್ವಾಮಿ ಹಾಗೂ ಶ್ರೀಆಂಜನೇಯಸ್ವಾಮಿಯ ಹೂವಿನ ಪಲ್ಲಕ್ಕಿ ಮೆರವಣಿಗೆ ಜರುಗಿತು.

ರಥೋತ್ಸವಕ್ಕೆ ಮಾಜಿ ಸಚಿವ ಅರವಿಂದ ಲಿಂಬಾವಳಿ ಚಾಲನೆ ನೀಡಿದರು.

ಮಹದೇವಪುರ, ಬಿ.ನಾರಾಯಣ ಪುರ, ಸೋಲೂರು, ಕೊಳತ್ತೂರು, ಆವಲಹಳ್ಳಿ, ಚೀಮಸಂದ್ರ ಸುತ್ತಮುತ್ತಲಿನ ಬಡಾವಣೆಗಳ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡರು.

ಮಹದೇವಪುರ ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ಹೂಡಿ ಪಿಳ್ಳಪ್ಪ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಿಲ್ಪ ನಾಗರಾಜ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಕೆಂಪರಾಜ್, ಗ್ರಾಮ ಪಂಚಾಯಿತಿ ಸದಸ್ಯರಾದ ಸಿ. ರಾಜಣ್ಣ, ಮಂಜುನಾಥ್, ಶ್ರೀನಿವಾಸ್, ನಂಜಪ್ಪ, ಮುಖಂಡರಾದ ಸಿ.ಎಸ್ ಜಯರಾಮಯ್ಯ, ಚೇತನ್, ಅರ್ಚಕ ಚೇತನ್ ಆರಾಧ್ಯ ಮತ್ತಿತರರು ಉಪಸ್ಥಿತರಿದ್ದರು.



ಚೀಮಸಂದ್ರದಲ್ಲಿ ಭಕ್ತರು ಶ್ರೀಬಸವೇಶ್ವರಸ್ವಾಮಿಯ ರಥವನ್ನು ಎಳೆದರು

ಚಿನ್ನಸ್ವಾಮಿ, ವರಲಕ್ಷ್ಮಿಗೆ ಮೈಕೊ ಕನ್ನಡ ಬಳಗದ ‘ಕಿಟೆಲ್, ಕುವೆಂಪು ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಷ್ ಸಂಸ್ಥೆಯ ಮೈಕೊ ಕನ್ನಡ ಬಳಗ ಸಂಶೋಧನಾ ಕ್ಷೇತ್ರಕ್ಕೆ ನೀಡುವ 2025ನೇ ಸಾಲಿನ ರೆ.ಫೆ. ಕಿಟೆಲ್ ಪ್ರಶಸ್ತಿಗೆ ಹಂಪಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಎನ್. ಚಿನ್ನಸ್ವಾಮಿ ಸೋಸಲೆ ಹಾಗೂ ಸಾಹಿತಿಗಳಿಗೆ ನೀಡುವ ‘ರಾಷ್ಟ್ರಕವಿ ಕುವೆಂಪು ಪ್ರಶಸ್ತಿ’ಗೆ ಎಸ್. ಎಲ್. ವರಲಕ್ಷ್ಮಿ ಮಂಜುನಾಥ್ ಆಯ್ಕೆಯಾಗಿದ್ದಾರೆ.

ಇದೇ 19ರಂದು ಮಧ್ಯಾಹ್ನ 1.30ಕ್ಕೆ ಬಿಡದಿ ಘಟಕದಲ್ಲಿ ನಡೆಯುವ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಬಾಷ್ ಗ್ಲೋಬಲ್ ಸಾಫ್ಟ್‌ವೇರ್ ಟೆಕ್ನಾಲಜೀಸ್‌ನ ವ್ಯವಸ್ಥಾಪಕ ನಿರ್ದೇಶಕ ದತ್ತಾತ್ರಿ ಸಾಲಗಾಮೆ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕೆ.ಎಸ್. ರಾಜಣ್ಣ ಅತಿಥಿಯಾಗಿ ಭಾಗವಹಿಸಲಿದ್ದು, ಬಳಗದ ಗೌರವ ಅಧ್ಯಕ್ಷೆ ಪದ್ಮಿನಿ ನಾಗರಾಜು, ಮೈಕೊ ಎಂಪ್ಲಾಯೀಸ್ ಅಸೋಸಿಯೇಷನ್ ಅಧ್ಯಕ್ಷ ಸುರೇಶಗೌಡ, ಬಳಗದ ಅಧ್ಯಕ್ಷ ರಾಮತೀರ್ಥ ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಅನುಚಿತ ವರ್ತನೆ: ಗಾರೆ ಕೆಲಸಗಾರನ ಸೆರೆ

ಬೆಂಗಳೂರು: ಮನೆಗೆ ನುಗ್ಗಿ ತಾಯಿ ಹಾಗೂ ಮಗಳ ಜತೆಗೆ ಅನುಚಿತವಾಗಿ ವರ್ತಿಸಿದ್ದ ಗಾರೆ ಕೆಲಸಗಾರನನ್ನು ತಲಘಟ್ಟಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಆವಲಹಳ್ಳಿ ನಿವಾಸಿ ತರಬೇಶ್(30) ಬಂಧಿತ.

ಠಾಣಾ ವ್ಯಾಪ್ತಿಯ ಮನೆಯೊಂದರಲ್ಲಿ ತಾಯಿ ಹಾಗೂ ಮಗಳು ಇದ್ದರು. ಆ ಸಂದರ್ಭದಲ್ಲಿ ಏಕಾಏಕಿ ಮನೆಗೆ ನುಗ್ಗಿದ ಗಾರೆ ಕೆಲಸಗಾರ, ಅನುಚಿತವಾಗಿ ವರ್ತಿಸಿದ್ದಾನೆ. ಆರೋಪಿಯ ವರ್ತನೆಯಿಂದ ಗಾಬರಿಗೊಂಡ ತಾಯಿ ಹಾಗೂ ಮಗಳು ಜೋರಾಗಿ ಕಿರುಚಿಕೊಂಡರು. ಅಕ್ಕಪಕ್ಕದ ಮನೆಯವರು ಸ್ಥಳಕ್ಕೆ ಬರುವಷ್ಟರಲ್ಲಿ ಆರೋಪಿ ಪರಾರಿ ಆಗಿದ್ದ.

ಮಹಿಳೆ ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ರಸ್ತೆ ಮಧ್ಯೆ ಹೊತ್ತಿ ಉರಿದ ಕಾರು

ಪ್ರಜಾವಾಣಿ ವಾರ್ತೆ

ಮಾಗಡಿ: ಅಣ್ಣಯ್ಯನ ಪಾಳ್ಯದ ಬಳಿ ಸೋಮವಾರ ಸಂಜೆ ಚಲಿಸುತ್ತಿದ್ದ ಕಾರಿನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡು ರಸ್ತೆ ಮಧ್ಯೆಯೇ ಕಾರು ಸಂಪೂರ್ಣ ಸುಟ್ಟುಹೋಗಿದೆ. ಕಾರಿನಲ್ಲಿದ್ದ ಯಾರಿಗೂ ಯಾವುದೇ ರೀತಿಯ ಅಪಾಯವಾಗಿಲ್ಲ.

ಎಲ್ಲರೂ ಸುರಕ್ಷಿತವಾಗಿ ಪಾರಾಗಿದ್ದಾರೆ. ಆದರೆ, ಈ ಘಟನೆಯಿಂದ ಸ್ಥಳದಲ್ಲಿ ಕೆಲವು ತಾಸು ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಮಾಗಡಿ – ಗುಡೇಮಾರನಹಳ್ಳಿ ಮುಖ್ಯರಸ್ತೆಯ ಟೋಲ್ ಸಮೀಪ ಚಲಿಸುತ್ತಿದ್ದ ಕಾರಿನಲ್ಲಿ ಬೆಂಕಿ ಕಾಣಿಸಿಕೊಂಡ ತಕ್ಷಣ ಕಾರಿನಲ್ಲಿದ್ದವರು ಕೆಳಗೆ ಇಳಿದಿದ್ದಾರೆ. ನೋಡ ನೋಡುತ್ತಿದ್ದಂತೆಯೇ ಬೆಂಕಿಯ ಕೆನ್ನಾಲಿಗೆ ಕಾರನ್ನು ಆವರಿಸಿದೆ. ಕ್ಷಣಾರ್ಧದಲ್ಲಿ ರಸ್ತೆ ಮಧ್ಯದಲ್ಲಿಯೇ ಕಾರು ಧಗಧಗನೇ ಉರಿದು ಸುಟ್ಟು ಹೋಗಿದೆ.

ಬೆಂಕಿ ಹೊತ್ತಿಕೊಳ್ಳಲು ನಿಖರ ಕಾರಣ ತಿಳಿದುಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಕಾರಿನಲ್ಲಿದ್ದ ಹವಾನಿಯಂತ್ರಿತ ವ್ಯವಸ್ಥೆಯಲ್ಲಿ ಸಮಸ್ಯೆ ಉಂಟಾಗಿ ಬೆಂಕಿ ಹೊತ್ತಿಕೊಂಡಿರಬಹುದು ಎಂದು ಸ್ಥಳೀಯರು ತಿಳಿಸಿದ್ದಾರೆ.

ಸ್ಥಳೀಯರು ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದರು. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರೂ ಕಾರು ಬಹುತೇಕ ಸುಟ್ಟು ಹೋಗಿದೆ.

ಜನವರಿಯಲ್ಲಿ ಕೇರಳ ಸಾಹಿತ್ಯ ಉತ್ಸವ

ಬೆಂಗಳೂರು: ಕೇರಳದ ಕೋಯಿಕ್ಕೋಡ್‌ನಲ್ಲಿ ಕೇರಳ ಸಾಹಿತ್ಯ ಉತ್ಸವದ(ಕೆಎಲ್‌ಎಫ್) 9ನೇ ಆವೃತ್ತಿಯು 2026ರ ಜ.22ರಿಂದ 25ರವರೆಗೆ ನಡೆಯಲಿದೆ.

ಬುಕರ್ ಪ್ರಶಸ್ತಿ ಪುರಸ್ಕೃತ ಕನ್ನಡದ ಸಾಹಿತಿ ಬಾನು ಮುಷ್ತಾಕ್, ದೀಪಾ ಭಾಸ್ತಿ ಸಹಿತ ದೇಶ, ಹೊರ ದೇಶಗಳ ಸಾಹಿತಿಗಳು, ನೊಬೆಲ್ ಪ್ರಶಸ್ತಿ ಪುರಸ್ಕೃತರು, ಇತಿಹಾಸ ತಜ್ಞರು, ವಿಜ್ಞಾನಿಗಳು, ತತ್ವಜ್ಞಾನಿಗಳು, ಉದ್ಯಮಿಗಳು, ಕಲಾವಿದರು ಸಾಹಿತ್ಯ ಉತ್ಸವದಲ್ಲಿ ಭಾಗವಹಿಸಲಿದ್ದಾರೆ ಎಂದು ಸಂಘಟನಾ ಸಮಿತಿಯ ಮುಖ್ಯ ಸಂಚಾಲಕ ರವಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಮುದ್ರತೀರದಲ್ಲಿ ಆಯೋಜನೆಗೊಂಡಿರುವ ಉತ್ಸವದಲ್ಲಿ 15 ದೇಶಗಳ 400ಕ್ಕೂ ಹೆಚ್ಚು ಭಾಷಣಕಾರರು 250 ಅಧಿವೇಶನಗಳಲ್ಲಿ ಭಾಗವಹಿಸಲಿದ್ದಾರೆ. ರಾಜಕೀಯ, ಇತಿಹಾಸ, ಸಮಕಾಲೀನ ಸಂಸ್ಕೃತಿ, ವಿಜ್ಞಾನ ಮತ್ತು ತತ್ವಶಾಸ್ತ್ರ ಮುಂತಾದ ವಿಷಯಗಳ ಬಗ್ಗೆ ಚರ್ಚೆಗಳು ನಡೆಯಲಿವೆ ಎಂದರು.

ನಿಧನ ವಾರ್ತೆ

ಸತ್ಯನಾರಾಯಣ



ಬೆಂಗಳೂರು: ಟಿಪಿಎಂಎಲ್‌ನ ಪ್ಯಾಕಿಂಗ್ ವಿಭಾಗದಲ್ಲಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿದ್ದ ಸತ್ಯನಾರಾಯಣ (ಸತ್ಯ) ಅವರು ಭಾನುವಾರ ಬೆಳಿಗ್ಗೆ ನಿಧನರಾಗಿದ್ದಾರೆ. ಅವರಿಗೆ ಮಗ, ಮಗಳು ಇದ್ದಾರೆ.

ಭಾನುವಾರ ಸಂಜೆ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಕಸದಿಂದ ಸಾವಿರಾರು ಮನೆಗಳಿಗೆ ಬೆಳಕು

ಸಂಸ್ಕರಣೆಯಾಗದ ಪ್ಲಾಸ್ಟಿಕ್, ಹಾಸಿಗೆ, ಬಟ್ಟೆ, ಪೀಠೋಪಕರಣ, ಭೂಭರ್ತಿ ಪ್ರದೇಶದ ಆರ್‌ಡಿಎಫ್‌ನಿಂದ ವಿದ್ಯುತ್ ಉತ್ಪಾದನೆ

- **₹314.74 ಕೋಟಿ** ಕಸದಿಂದ ವಿದ್ಯುತ್ ಘಟಕ ನಿರ್ಮಾಣದ ಒಟ್ಟು ವೆಚ್ಚ
- **600 ಟನ್** ಪ್ರತಿದಿನ ಸಂಸ್ಕರಣೆ ಆಗುತ್ತಿರುವ ತ್ಯಾಜ್ಯ (ಆರ್‌ಡಿಎಫ್)
- **11.5 ಮೆಗಾವಾಟ್** ಪ್ರತಿದಿನ ಉತ್ಪಾದನೆ ಆಗುತ್ತಿರುವ ವಿದ್ಯುತ್
- **1,68,036 ಟನ್** 2024ರ ಜೂನ್‌ನಿಂದ ನವೆಂಬರ್ 6ರವರೆಗೆ ಸಂಸ್ಕರಿಸಲಾಗಿರುವ ತ್ಯಾಜ್ಯ
- **54 ದಶಲಕ್ಷ ಯೂನಿಟ್** ಘಟಕದಲ್ಲಿ ಈವರೆಗೆ ಉತ್ಪಾದಿಸಲಾಗಿರುವ ವಿದ್ಯುತ್


• ಆರ್. ಮಂಜುನಾಥ್

ಬೆಂಗಳೂರು: ಕಸದಿಂದ ರಸ, ಗೊಬ್ಬರ... ಇದೆಲ್ಲ ಆಯಿತು. ಮನೆಗಳಿಂದ ಹೊರಬಿದ್ದ ತ್ಯಾಜ್ಯದಿಂದ ಮನೆಗಳಿಗೆ ಬೆಳಕು ನೀಡುವ ಸಮಯ ಇದು. ಬೇಡವೆಂದು ಹೊರಗೆಸೆದ ಸಾಮಗ್ರಿಗಳಿಂದಲೇ ದೀಪಗಳು ಬೆಳಗುತ್ತಿವೆ. ರಾಜ್ಯದಲ್ಲೇ ಮೊಟ್ಟ ಮೊದಲ ಬಾರಿಗೆ, ಬೆಂಗಳೂರಿನ ಕಸದಿಂದ ಉತ್ಪಾದಿಸಿದ ವಿದ್ಯುತ್, 25 ಸಾವಿರಕ್ಕೂ ಹೆಚ್ಚು ಮನೆಗಳಿಗೆ ನಿತ್ಯವೂ ಸರಬರಾಜಾಗುತ್ತಿದೆ.

ಕರ್ನಾಟಕ ವಿದ್ಯುತ್ ನಿಗಮ ನಿಯಮ ನಿಯಮಿತದ (ಕೆಪಿಸಿಎಲ್) ಕರ್ನಾಟಕ ಗ್ಯಾಸ್ ಪವರ್ ಕಾರ್ಪೊರೇಷನ್ ಲಿಮಿಟೆಡ್ (ಕೆಪಿಸಿ-ಜಿಸಿಎಲ್) ನಗರದ ಅಂಚಿನಲ್ಲಿರುವ ಬಿಡದಿಯಲ್ಲಿ ಸ್ಥಾಪಿಸಿರುವ 'ಕಸದಿಂದ ವಿದ್ಯುತ್ ಘಟಕ' ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭಿಸಿದೆ. ಬೆಂಗಳೂರಿನಲ್ಲಿ ಸಂಗ್ರಹವಾಗುವ ಒಣತ್ಯಾಜ್ಯವನ್ನು, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಈ ಘಟಕಕ್ಕೆ ಕಳುಹಿಸುತ್ತಿದೆ. ಇಲ್ಲಿ ನಿತ್ಯ ಸರಾಸರಿ 11.5 ಮೆಗಾವಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ಬಿಡದಿ ಬಳಿ ಕೆಪಿಸಿಎಲ್ ಮಾಲೀಕತ್ವದ 163 ಎಕರೆ ಜಾಗದಲ್ಲಿ 'ವಿನ್ಯಾಸ, ಹಣಕಾಸು, ನಿರ್ಮಾಣ, ಕಾರ್ಯಾಚರಣೆ, ವರ್ಗಾವಣೆ' (ಡಿಎಫ್‌ಸಿಒಆ್ಯಂಡ್‌ಟಿ) ಮಾದರಿಯಲ್ಲಿ 'ಕಸದಿಂದ ವಿದ್ಯುತ್ ಉತ್ಪಾದನೆ ಘಟಕ'ವನ್ನು ಸ್ಥಾಪಿಸಲಾಗಿದೆ. ಉದ್ದೇಶಿತ ಅವಧಿಯಲ್ಲೇ ಘಟಕ ಆರಂಭವಾಗಿದ್ದರೆ, ಈ ವೇಳೆಗೆ ಮೂರು ವರ್ಷದ ಹಿಂದೆಯೇ ವಿದ್ಯುತ್ ಉತ್ಪಾದನೆಯಾಗಬೇಕಿತ್ತು. ಆದರೆ, ಹಲವು ತೊಡಕುಗಳ ನಂತರ 2024ರ ಸೆಪ್ಟೆಂಬರ್‌ನಲ್ಲಿ ಘಟಕ ಆರಂಭವಾಗಿದ್ದು, 2025ರ ಅಕ್ಟೋಬರ್‌ನಿಂದ ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಆಗುತ್ತಿದೆ.

'ಕಸದಿಂದ ವಿದ್ಯುತ್ ಉತ್ಪಾದನೆ ಘಟಕ' ನಿರ್ಮಾಣಕ್ಕೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಹಿಂದಿನ ಬಿಬಿಎಂಪಿ) ಶೇ 50ರಷ್ಟು ವೆಚ್ಚವನ್ನು ಭರಿಸಿದೆ. ಬಿಎಸ್‌ಡಬ್ಲ್ಯುಎಂಎಲ್ ಮಂಡೂರಿನ ಭೂಭರ್ತಿ ಪ್ರದೇಶದಿಂದ ಹಳೆಯ ತ್ಯಾಜ್ಯದಿಂದ (ಲೆಗೆಸಿ ವೇಸ್ಟ್), ಒಣ ತ್ಯಾಜ್ಯವನ್ನು ಬೇರ್ಪಡಿಸಿ (ಆರ್‌ಡಿಎಫ್) ಘಟಕಕ್ಕೆ ಕಳುಹಿಸುತ್ತಿದೆ. ಈ ಕಸಕ್ಕಿಂತ ನಗರದಲ್ಲಿ ನಿತ್ಯ ಸಂಗ್ರಹವಾಗುವ ಒಣಕಸವನ್ನು ಇಲ್ಲಿಗೆ ಕಳುಹಿಸಿದರೆ, ಹೆಚ್ಚು ವಿದ್ಯುತ್ ಉತ್ಪಾದನೆ ಸಾಧ್ಯ ಎಂಬುದನ್ನು ಮನಗಂಡಿರುವ ಬಿಎಸ್‌ಡಬ್ಲ್ಯುಎಂಎಲ್, ನವೆಂಬರ್‌ನಲ್ಲಿ ಈ ಸಂಗ್ರಹ ತ್ಯಾಜ್ಯವನ್ನೇ ಹೆಚ್ಚಾಗಿ ನೇರವಾಗಿ ವಿದ್ಯುತ್ ಉತ್ಪಾದನೆ ಘಟಕಕ್ಕೆ ಕಳುಹಿಸುತ್ತಿದೆ. ಇದರಿಂದ ಭೂಭರ್ತಿ ಪ್ರದೇಶಗಳಲ್ಲಿನ ವಿಲೇವಾರಿ ಪ್ರಮಾಣ ಗಣನೀಯವಾಗಿ ಇಳಿಕೆಯಾಗಿದೆ.



ಬಿಡದಿಯಲ್ಲಿರುವ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಘಟಕ

ಸರ್ಕಾರದ ಬದ್ಧತೆಗೆ ಸಾಕ್ಷಿ: ಕೆ.ಜೆ. ಜಾರ್ಜ್



'ಪರಿಸರಸ್ನೇಹಿ ವಿದ್ಯುತ್ ಉತ್ಪಾದನೆ ವಿಚಾರದಲ್ಲಿ ಸರ್ಕಾರದ ಬದ್ಧತೆಗೆ ಬಿಡದಿಯ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನಾ ಘಟಕ ಸಾಕ್ಷಿ. ಕಸದಿಂದ ವಿದ್ಯುತ್ ಉತ್ಪಾದನೆ ಮೂಲಕ ಅದರ ವಿಲೇವಾರಿ ಸಮಸ್ಯೆಗೆ ಸ್ವಲ್ಪ ಪ್ರಮಾಣದಲ್ಲಿ ಪರಿಹಾರ ನೀಡಲಾಗುತ್ತಿದೆ. ಘಟಕದಲ್ಲಿ ಉತ್ಪಾದನೆಯಾಗುವ ಬೂದಿಯನ್ನು ರಸ್ತೆ ನಿರ್ಮಾಣಕ್ಕೆ ಬಳಸಿ ಅದಕ್ಕೂ ಪರಿಹಾರ ಒದಗಿಸಲು ಚಿಂತಿಸಲಾಗಿದೆ. ಜಿಬಿಎ ಇದಕ್ಕೆ ಎಲ್ಲಾ ರೀತಿಯ ಸಹಕಾರ ನೀಡುತ್ತಿದೆ' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು.


ಇನ್ನೂ ಮೂರು ಘಟಕ: ಕರೀಗೌಡ



'ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಇನ್ನೂ ಮೂರು ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ನಿತ್ಯ ಸುಮಾರು 2,000 ಟನ್ ಒಣತ್ಯಾಜ್ಯ ಸಂಗ್ರಹವಾಗಲಿದ್ದು, ಅದರಿಂದ ವಿದ್ಯುತ್ ಉತ್ಪಾದಿಸಬಹುದು. ಹೊಸದಾಗಿ ನಾಲ್ಕು ಭಾಗಗಳಲ್ಲಿ ಸಮಗ್ರ ತ್ಯಾಜ್ಯ ನಿರ್ವಹಣೆ ಘಟಕಗಳು ಆರಂಭವಾಗಲಿದ್ದು, ಅಲ್ಲಿ ವಿದ್ಯುತ್ ಉತ್ಪಾದನೆ ಘಟಕವೂ ಇರಲಿದೆ' ಎಂದು ಬಿಎಸ್‌ಡಬ್ಲ್ಯುಎಂಎಲ್ ಸಿಇಒ ಕರೀಗೌಡ ತಿಳಿಸಿದರು.


'ಬಿಡದಿಯಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆಗೆ ಭೂಭರ್ತಿ ಪ್ರದೇಶದ ಹೊರತಾಗಿ ನಗರದಲ್ಲಿ ಸಂಗ್ರಹವಾಗುವ ಸುಮಾರು 200 ಟನ್ ತ್ಯಾಜ್ಯವನ್ನು ನಿತ್ಯವೂ ಕಳುಹಿಸಲಾಗುತ್ತಿದೆ. ಸುಮಾರು 50 ಕಾಂಪ್ಯಾಕ್ಟರ್‌ಗಳು ಭೂಭರ್ತಿ ಪ್ರದೇಶಕ್ಕೆ ಹೋಗುವುದು ಕಡಿಮೆಯಾಗಿದೆ. ಇನ್ನೊಂದು ತಿಂಗಳಲ್ಲಿ ಪ್ರತಿ ನಿತ್ಯ 500 ಟನ್ ಕಳುಹಿಸಲಾಗುತ್ತದೆ. ನಾಗರಿಕರು, ಪೌರಕಾರ್ಮಿಕರು, ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಸಹಕಾರ ಇನ್ನೂ ಹೆಚ್ಚಾದರೆ, ಭೂಭರ್ತಿಗೆ ಹೋಗುವ ತ್ಯಾಜ್ಯವನ್ನು ಬಹುತೇಕ ಕಡಿಮೆ ಮಾಡಬಹುದು' ಎಂದರು.

ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಪ್ರಕ್ರಿಯೆ




ಘಟಕದಲ್ಲಿ ತ್ಯಾಜ್ಯ ಸುರಿಯುತ್ತಿರುವ ಕಾಂಪ್ಯಾಕ್ಟರ್


ತ್ಯಾಜ್ಯ ಸಂಗ್ರಹ ಸ್ಥಳ


ಬಾಯ್ಲರ್‌ಗೆ ಸಾಗಿಸುವ 'ಗ್ರಾಬ್ ಕ್ರೇನ್'

ಘಟಕದ ಕಾರ್ಯವಿಧಾನ

- ಕಾಂಪ್ಯಾಕ್ಟರ್‌ನಲ್ಲಿ ಬಂದ ಒಣ/ಪ್ಲಾಸ್ಟಿಕ್ ತ್ಯಾಜ್ಯವನ್ನು ತೂಕ ಮಾಡಿ, 4,200 ಟನ್ ಸಾಮರ್ಥ್ಯದ ಪಿಟ್‌ಗೆ ಸುರಿಯಲಾಗುತ್ತದೆ
- 'ಗ್ರಾಬ್ ಕ್ರೇನ್' ಮೂಲಕ ತ್ಯಾಜ್ಯವನ್ನು ಫೀಡರ್‌ಗೆ ಹಾಕಲಾಗುತ್ತದೆ
- ಬಾಯ್ಲರ್‌ನಲ್ಲಿ (ಫರ್ನೀಸ್) 1,200 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಸುಡಲಾಗುತ್ತದೆ
- ಉತ್ಪತ್ತಿಯಾಗುವ ವಿದ್ಯುತ್ ಅನ್ನು ನೆಲದಡಿ ಅಳವಡಿಸಲಾಗಿರುವ ಕೇಬಲ್ ಮೂಲಕ ಬಿಡದಿ ಗ್ರಿಡ್‌ಗೆ ಸರಬರಾಜು ಮಾಡಲಾಗುತ್ತದೆ
- ಒಟ್ಟಾರೆ ತ್ಯಾಜ್ಯದ ಪ್ರಮಾಣದಲ್ಲಿ, ಶೇ 21ರಷ್ಟು 'ಬಾಟಂ ಆ್ಯಶ್', ಶೇ 2 ರಷ್ಟು ಹಾರುಬೂದಿ ಉತ್ಪಾದನೆಯಾಗುತ್ತದೆ. ಅದನ್ನು ರಸ್ತೆ ನಿರ್ಮಾಣಕ್ಕೆ ಬಳಸಲು ಯೋಜಿಸಲಾಗಿದೆ

'ವಾಯು ಮಾಲಿನ್ಯ ಇಲ್ಲ, ಪರಿಸರಸ್ನೇಹಿ'

'ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಘಟಕದಿಂದ ಯಾವುದೇ ವಾಯುಮಾಲಿನ್ಯ ಉಂಟಾಗುವುದಿಲ್ಲ. ಈ ಘಟಕದಿಂದ ಹೊರಹೋಗುವ ಎಲ್ಲ ರೀತಿಯ ಅನಿಲಗಳ ಬಗ್ಗೆ 24 ಗಂಟೆಯೂ ನಿಗಾವಹಿಸಲಾಗುತ್ತಿದ್ದು, ಆನ್‌ಲೈನ್‌ನಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿಗೂ ದತ್ತಾಂಶ ರವಾನೆಯಾಗುತ್ತದೆ. ಯಾವುದೇ ರೀತಿಯ ವ್ಯತ್ಯಾಸವಾದರೂ ತಕ್ಷಣವೇ ಸರಿಪಡಿಸಲಾಗುತ್ತದೆ. ಪರಿಸರಸ್ನೇಹಿಯಾಗಿ ಕಸದಿಂದ ವಿದ್ಯುತ್ ಉತ್ಪಾದಿಸಲಾಗುತ್ತದೆ' ಎಂದು ಕೆಪಿಸಿಎಲ್ ಕಾರ್ಯಪಾಲಕ ಎಂಜಿನಿಯರ್ ಸತೀಶ್ ಕುಮಾರ್ ತಿಳಿಸಿದರು.

'ನಮ್ಮ ವ್ಯಾಪ್ತಿಯಲ್ಲೇ ಇರುವ ಕೆರೆಯ ಸಮೀಪದಲ್ಲಿ ಕೊಳವೆಬಾವಿಗಳನ್ನು ಕೊರೆಯಲಾಗಿದ್ದು, ಅದರಿಂದ ಅಗತ್ಯ ಪ್ರಮಾಣದ ನೀರನ್ನು ಬಳಸಲಾಗುತ್ತದೆ. ಆ ನೀರನ್ನೂ ಸಂಸ್ಕರಿಸಿ ಮತ್ತೆ ಬಳಸಾಗುತ್ತಿದೆ. ಇಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್ ಅನ್ನು ತಲಾ 5 ಯೂನಿಟ್‌ಗಳಂತೆ 25 ಸಾವಿರ ಮನೆಗಳಿಗೆ ಸರಬರಾಜು ಮಾಡಲಾಗುತ್ತಿದೆ' ಎಂದೂ ಹೇಳಿದರು.

'ಕಸದಿಂದ ವಿದ್ಯುತ್ ಉತ್ಪಾದನೆ ಘಟಕದಿಂದ ಘನತ್ಯಾಜ್ಯ ನಿರ್ವಹಣೆ ನಿಯಮಗಳನ್ನೂ ಪಾಲಿಸಿದಂತಾಗಿದೆ' ಎಂದರು.

ಅಪ್ಪನ ಮೇಲೆ ಹಲ್ಲೆ: ವ್ಯಕ್ತಿ ಕೊಂದ ಪುತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪ್ಪನ ಮೇಲೆ ಹಲ್ಲೆ ಮಾಡಿದ್ದಕ್ಕೆ ಸಿಟ್ಟಿಗೆದ್ದ ಪುತ್ರ, ವ್ಯಕ್ತಿಯೊಬ್ಬರನ್ನು ಕೊಲೆ ಮಾಡಿರುವ ಘಟನೆ ನಗರದ ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ನಾರಾಯಣಸ್ವಾಮಿ(55) ಕೊಲೆಯಾದವರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಅಜಯ್ ಎಂಬಾತನನ್ನು ಬಂಧಿಸಿದ್ದಾರೆ.

ಅಜಯ್ ತಂದೆ ಮುನಿವೆಂಕಟಪ್ಪ ಮತ್ತು ನಾರಾಯಣಸ್ವಾಮಿ ಅವರು ಮದ್ಯದ ಅಮಲಿನಲ್ಲಿ ನ.11ರಂದು ಗಲಾಟೆ ಮಾಡಿಕೊಂಡಿದ್ದರು. ತಂದೆಯ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಕೋಪಗೊಂಡಿದ್ದ ಅಜಯ್, ನಾರಾಯಣಸ್ವಾಮಿ ಅವರ ಮೇಲೆ ತೀವ್ರ ಹಲ್ಲೆ ಮಾಡಿದ್ದ. ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ನಾರಾಯಣಸ್ವಾಮಿ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಭಾನುವಾರ ಮೃತಪಟ್ಟಿದ್ದಾರೆ. ಕೊಲೆ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಅಪಾರ್ಟ್‌ಮೆಂಟ್‌ನಲ್ಲಿ ಕತ್ತು ಕೊಯ್ದು ಮಹಿಳೆ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಂಗಸಂದ್ರದ ಬಳಿಯ ಮುನಿಸುಬ್ಬಾರೆಡ್ಡಿ ಲೇಔಟ್‌ನ ಅಪಾರ್ಟ್‌ಮೆಂಟ್‌ವೊಂದರ ಫ್ಲ್ಯಾಟ್‌ನಲ್ಲಿ ನೆಲಸಿದ್ದ ಮಹಿಳೆಯನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆಮಾಡಿ ಪರಾರಿ ಆಗಿದ್ದಾರೆ.

ಮುನಿಸುಬ್ಬಾರೆಡ್ಡಿ ಲೇಔಟ್‌ನ ಮೂರನೇ ಅಡ್ಡರಸ್ತೆ ನಿವಾಸಿ ಪ್ರಮೋದಾ(37) ಕೊಲೆಯಾದ ಮಹಿಳೆ.


ಪ್ರಮೋದಾ

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಪ್ರಮೋದಾ ಅವರು ಹೊಂಗಸಂದ್ರದಲ್ಲಿರುವ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದರು.

'ಪ್ರಮೋದಾ ಹಾಗೂ ಅವರ ಸಹೋದರಿ ಶಾರದಾ ಇಬ್ಬರೂ ಸುರೇಶ್ ಎಂಬಾತನನ್ನು ಮದುವೆ ಆಗಿದ್ದರು. ಕೌಟುಂಬಿಕ ಕಾರಣಕ್ಕೆ ಪತಿ ಸುರೇಶ್ ಅವರಿಂದ ದೂರವಾಗಿದ್ದ ಪ್ರಮೋದಾ ಅವರು ಮುನಿಸುಬ್ಬಾರೆಡ್ಡಿ ಲೇಔಟ್‌ನಲ್ಲಿ ಒಬ್ಬರೇ ವಾಸವಾಗಿದ್ದರು. ಪತಿ ಸುರೇಶ್ ಮತ್ತು ಸಹೋದರಿ ಶಾರದಾ ಅವರು ಕೆ.ಆರ್.ಪುರದಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಈ ನಡುವೆ ರಮೇಶ್ ಎಂಬ ವ್ಯಕ್ತಿ ಜತೆಗೆ ಪ್ರಮೋದಾ ಅವರು ಸಲುಗೆಯಿಂದ ಓಡಾಟ ನಡೆಸುತ್ತಿದ್ದರು. ವಿವಾಹಿತರಾಗಿದ್ದ ರಮೇಶ್ ಅವರು ಆಗಾಗ್ಗೆ ಪ್ರಮೋದಾ ಅವರ ಫ್ಲ್ಯಾಟ್‌ಗೆ ಬಂದು ಹೋಗುತ್ತಿದ್ದರು. ಪ್ರಮೋದಾ ಅವರು ಶನಿವಾರ ಕೊನೆಯ ಬಾರಿಗೆ ತಮ್ಮ ಸಹೋದರಿಯರಿಗೆ ಕರೆ ಮಾಡಿ ಮಾತನಾಡಿದ್ದರು' ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

'ಶನಿವಾರ ರಾತ್ರಿ ಫ್ಲ್ಯಾಟ್‌ಗೆ ಬಂದಿದ್ದ ದುಷ್ಕರ್ಮಿಗಳು, ಚಾಕುವಿನಿಂದ ಕತ್ತು ಕೊಯ್ದು ಕೊಲೆ ಮಾಡಿ ಪರಾರಿಯಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬೊಮ್ಮನಹಳ್ಳಿ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದೆ.

ಕೊಲೆಗೆ ಸುಪಾರಿ?

'ಕೊಲೆಗೆ ಸುಪಾರಿ ನೀಡಿರುವ ಸಾಧ್ಯತೆ ಇದೆ. ಪತಿ ಸುರೇಶ್ ಅವರನ್ನೂ ವಿಚಾರಣೆ ನಡೆಸಲಾಗಿದೆ. ಪರಿಚಿತ ರಮೇಶ್ ಅವರನ್ನೂ ವಶಕ್ಕೆ ಪಡೆದು ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ. ಪರಿಚಿತ ವ್ಯಕ್ತಿಯೇ ಪ್ರಮೋದಾ ಅವರನ್ನು ಕೊಲೆ ಮಾಡಿರುವ ಶಂಕೆಯಿದೆ. ಮನೆಯಲ್ಲಿನ ವಸ್ತುಗಳು ಚೆಲ್ಲಾಪಿಲ್ಲಿ ಆಗಿವೆ. ಮನೆಯಲ್ಲಿದ್ದ ಯಾವುದೇ ಆಭರಣಗಳ ಕಳ್ಳತನ ಆಗಿಲ್ಲ. ದುಷ್ಕರ್ಮಿಗಳ ಪತ್ತೆಗೆ ನಾಲ್ಕು ವಿಶೇಷ ತಂಡ ರಚಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಎಡಿಜಿಪಿ ದಯಾನಂದ ಹೆಸರಿನಲ್ಲಿ ನಕಲಿ ಖಾತೆ ತೆರೆದು ವಂಚನೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಬಿ.ದಯಾನಂದ ಅವರ ಹೆಸರಿನಲ್ಲಿ ಫೇಸ್‌ಬುಕ್‌ನಲ್ಲಿ ನಕಲಿ ಖಾತೆ ತೆರೆದು ವಂಚನೆ ಎಸಗಲು ಮುಂದಾಗಿದ್ದು, ಸೈಬರ್ ವಂಚಕರ ವಿರುದ್ಧ ಸೈಬರ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ನಕಲಿ ಖಾತೆ ತೆರೆದು ಹಣ ಹಾಕುವಂತೆ ಒತ್ತಾಯಿಸಿದ್ದಾರೆ ಎಂಬುದು ಗೊತ್ತಾಗಿದೆ.

ದಯಾನಂದ ಅವರ ಅಧಿಕೃತ ಖಾತೆಯಲ್ಲಿರುವ ಫೋಟೊಗಳನ್ನೇ ತೆಗೆದುಕೊಂಡು ನಕಲಿ ಖಾತೆಯಲ್ಲಿ ಹಾಕಿದ್ದಾರೆ. ನಂತರ, ದಯಾನಂದ ಅವರ ಪರಿಚಯಸ್ಥರಿಗೆ 'ಫ್ರೆಂಡ್ ರಿಕ್ವೆಸ್ಟ್' ಕಳುಹಿಸಿದ್ದಾರೆ. ಬಳಿಕ, ತುರ್ತು ಹಣ ಹಾಕುವಂತೆ ಮೆಸೆಂಜರ್‌ನಲ್ಲಿ ಸಂದೇಶ ಕಳುಹಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಫೇಸ್‌ಬುಕ್‌ನಲ್ಲಿ ಈ ಹಿಂದೆಯೂ ನಕಲಿ ಖಾತೆ ತೆರೆದಿರುವ ಬಗ್ಗೆ ದಯಾನಂದ ಅವರು ಸೈಬರ್ ಪೊಲೀಸರ ಗಮನಕ್ಕೆ ತಂದಿದ್ದರು. ಅದೇ ಮಾದರಿಯಲ್ಲಿ ಮತ್ತೆ ಕೃತ್ಯ ಎಸಗಿದ್ದಾರೆ.

'ಎಡಿಜಿಪಿ ದಯಾನಂದ ಅವರ ಹೆಸರಿನಲ್ಲಿ ಸೈಬರ್ ಕಳ್ಳರು ಹಣ ಹಾಕುವಂತೆ ಸಂದೇಶ ಕಳುಹಿಸುತ್ತಿದ್ದಾರೆ. ಸಾರ್ವಜನಿಕರು ಆ ಸಂದೇಶವನ್ನು ನಂಬಿ ಹಣ ಕಳುಹಿಸಬಾರದು' ಎಂದು ಸೈಬರ್ ಪೊಲೀಸರು ಮನವಿ ಮಾಡಿದ್ದಾರೆ.



ವಾಹನ ರಿವರ್ಸ್ ತೆಗೆಯುವಾಗ ಎಚ್ಚರವಹಿಸಲು ಪೊಲೀಸರ ಮನವಿ

ಕಾರಿನ ಚಕ್ರಕ್ಕೆ ಸಿಲುಕಿ ಮಗು ಸಾವು

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಕಾರನ್ನು ಹಿಮ್ಮುಖವಾಗಿ (ರಿವರ್ಸ್) ತೆಗೆಯುವಾಗ ಚಕ್ರಕ್ಕೆ ಸಿಲುಕಿ ಒಂದೂವರೆ ವರ್ಷದ ಮಗು ಮೃತಪಟ್ಟ ಘಟನೆ ಮಾದನಾಯಕನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ತೋಟದ ಗುಡ್ಡದಹಳ್ಳಿ ಬೆನಕ ಲೇಔಟ್‌ನಲ್ಲಿ ಭಾನುವಾರ ನಡೆದಿದೆ.

ನೂತನ್ ಮೃತಪಟ್ಟ ಮಗು.

ಅಕ್ಕನ ಮನೆಗೆ ಮುನೇಶ್ ಅವರು ಬಂದಿದ್ದರು. ಜತೆಗೆ ಪುತ್ರ ನೂತನ್‌ನನ್ನು ಕಾರಿನಲ್ಲಿ ಕರೆದುಕೊಂಡು ಬಂದಿದ್ದರು. ಊಟ, ಮಾತುಕತೆ ಮುಗಿಸಿ ವಾಪಸ್ ಮನೆಗೆ ಹೋಗಲು ಕಾರನ್ನು ಹಿಂದಕ್ಕೆ ತೆಗೆಯುವ ಸಂದರ್ಭದಲ್ಲಿ ಮಗು ಚಕ್ರದಡಿ ಸಿಲುಕಿ ಮೃತಪಟ್ಟಿದೆ.

ಮನೆ ಸಮೀಪ ಆಟವಾಡುತ್ತಿದ್ದ ಮಗು ಏಕಾಏಕಿ ಕಾರಿನ ಬಳಿ ಬಂದಿದೆ. ಗಮನಕ್ಕೆ ಬಾರದೆ ವಾಹನ ಹಿಂದಕ್ಕೆ ಚಲಿಸಿದ್ದರಿಂದ ಈ ಅವಘಡ ಸಂಭವಿಸಿದೆ ಎಂದು ಪೊಲೀಸರು ಹೇಳಿದರು.

ಕಣ್ಣೆದುರಿಗೆ ಪುಟ್ಟ ಮಗು ಮೃತಪಟ್ಟ ದೃಶ್ಯ ಕಂಡು ಪೋಷಕರು ಹಾಗೂ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಮಾದನಾಯಕನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಿಂದೆಯೂ ಇದೇ ಮಾದರಿ ಘಟನೆ: ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಗೊಲ್ಲರಹಟ್ಟಿಯಲ್ಲಿ ಅ.10ರಂದು ಮನೆಯೊಂದರ ಎದುರು ನಿಲುಗಡೆ ಮಾಡಿದ್ದ ಕಾರನ್ನು ಹಿಮ್ಮುಖವಾಗಿ (ರಿವರ್ಸ್) ತೆಗೆಯುವ ಸಂದರ್ಭದಲ್ಲಿ ಕಾರು ಡಿಕ್ಕಿಯಾಗಿ 11 ತಿಂಗಳ ಮಗು ಮೃತಪಟ್ಟಿತ್ತು.

2023ರ ಡಿಸೆಂಬರ್‌ನಲ್ಲೂ ನಗರದಲ್ಲಿ ಇದೇ ರೀತಿಯ ಘಟನೆ ನಡೆದಿತ್ತು. ಕಸವನಹಳ್ಳಿಯಲ್ಲಿ ಇರುವ ಸಮೃದ್ಧಿ ಅಪಾರ್ಟ್‌ಮೆಂಟ್ ಸಮುಚ್ಚಯದ ಎದುರು ಕಾರಿನ ಚಕ್ರ ಮೈ ಮೇಲೆ ಹರಿದು ಮೂರು ವರ್ಷದ ಹೆಣ್ಣುಮಗು ಅರ್ಬಿನಾ ಮೃತಪಟ್ಟಿತ್ತು. ಬೆಳ್ಳಂದೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಮಗು ಅರ್ಬಿನಾ, ಅಪಾರ್ಟ್‌ಮೆಂಟ್ ಸಮುಚ್ಚಯದ ಪ್ರವೇಶ ದ್ವಾರದಲ್ಲಿ ಆಟವಾಡುತ್ತಾ ಕುಳಿತಿತ್ತು. ಇದೇ ಸಂದರ್ಭದಲ್ಲಿ ಆರೋಪಿ ಚಾಲಕ ಸುಮನ್, ಪಾರ್ಕಿಂಗ್‌ನಲ್ಲಿದ್ದ ಕಾರು ಚಲಾಯಿಸಿಕೊಂಡು ರಸ್ತೆಯತ್ತ ಸಾಗಿದ್ದರು. ಪ್ರವೇಶ ದ್ವಾರದಲ್ಲಿದ್ದ ಮಗುವನ್ನು ಗಮನಿಸಿರಲಿಲ್ಲ. ಮಗುವಿನ ಮೇಲೆಯೇ ಕಾರಿನ ಚಕ್ರ ಹರಿದಿತ್ತು. ಸುಮನ್ ಸಹ ಸ್ಥಳದಿಂದ ಹೊರಟು ಹೋಗಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಪರಿಶೀಲಿಸಿದಾಗ ಕಾರಿನ ಚಕ್ರ ಹರಿದು ಮಗು ಮೃತಪಟ್ಟಿದ್ದು ಗೊತ್ತಾಗಿತ್ತು.

ನಗರದಲ್ಲಿ ಇಂತಹ ಘಟನೆಗಳು ಸಾಕಷ್ಟು ನಡೆದಿದ್ದು, ವಾಹನ ಚಾಲಕರು ತಮ್ಮ ವಾಹನಗಳನ್ನು ತೆಗೆಯುವಾಗ ಹಿಂದೆ, ಮುಂದೆ ಪರಿಶೀಲಿಸಬೇಕು. ಮಕ್ಕಳಿದ್ದರೆ ಬಹಳ ಜಾಗ್ರತೆ ವಹಿಸಬೇಕೆಂದು ಪೊಲೀಸರು ಮನವಿ ಮಾಡಿದ್ದಾರೆ.

ಆರ್.ವಿ. ರಸ್ತೆ ನಿಲ್ದಾಣದಲ್ಲಿ ಘಟನೆ • 35 ನಿಮಿಷ ಮೆಟ್ರೊ ಸಂಚಾರದಲ್ಲಿ ವ್ಯತ್ಯಯ

ಮೆಟ್ರೊ ಸಂಚಾರಕ್ಕೆ ಅಡ್ಡಿ: 15 ಮಂದಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್.ವಿ. ರಸ್ತೆ ನಮ್ಮ ಮೆಟ್ರೊ ನಿಲ್ದಾಣದಲ್ಲಿ ಕೆಲವು ವ್ಯಕ್ತಿಗಳ ಗುಂಪು ಹಳದಿ ಮಾರ್ಗದ ಮೊದಲ ರೈಲು ಹೊರಡುವುದಕ್ಕೆ ಅಡ್ಡಿಪಡಿಸಿದ್ದರಿಂದ, 35 ನಿಮಿಷ ಮೆಟ್ರೊ ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು.

ಆರ್.ವಿ. ಮೆಟ್ರೊ ನಿಲ್ದಾಣದಲ್ಲಿ ಉದ್ದೇಶಪೂರ್ವಕವಾಗಿಯೇ ಗುಂಪೊಂದು ರೈಲು ಸಂಚಾರಕ್ಕೆ ಅಡ್ಡಿಪಡಿಸಿತು. ಇದರಿಂದ ಸೋಮವಾರ ಬೆಳಿಗ್ಗೆ 6ಕ್ಕೆ ಹೊರಡಬೇಕಿದ್ದ ರೈಲು 6.35ಕ್ಕೆ ಹೊರಟಿತು. ಹೀಗಾಗಿ,ಮಾರ್ಗದ ಎಲ್ಲ ರೈಲುಗಳ ಸಂಚಾರದಲ್ಲಿ ವಿಳಂಬವಾಯಿತು. ಸೇವೆಯನ್ನು ಸ್ಥಿರಗೊಳಿಸಲು ಒಂದು ರೈಲನ್ನು ಸೆಂಟ್ರಲ್ ಸಿಲ್ಕ್ ಬೋರ್ಡ್‌ನಲ್ಲಿ ಶಾರ್ಟ್-ಲೂಪ್ ಮಾಡಲಾಯಿತು. ಇಂತಹ ಕೃತ್ಯದಿಂದ ಅನೇಕ ಸಹ ಪ್ರಯಾಣಿಕರಿಗೆ ಅನನುಕೂಲ ಉಂಟು ಮಾಡಿದ್ದಷ್ಟೇ ಅಲ್ಲದೆ, ಮೆಟ್ರೊ ಸಂಚಾರದ ಸುರಕ್ಷತೆ ಮತ್ತು ದಕ್ಷತೆ ಕಾರ್ಯಾಚರಣೆಗೆ ಅಡ್ಡಿ ಉಂಟು ಮಾಡಿದ್ದರಿಂದ, ಸಜೆ, ದಂಡ ವಿಧಿಸಲು ವ್ಯಕ್ತಿಗಳ ಮೇಲೆ ಪೊಲೀಸರಿಗೆ ದೂರು ದಾಖಲಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಪ್ರಕಟಣೆ ತಿಳಿಸಿದೆ.

ಹಳದಿ ಮಾರ್ಗದಲ್ಲಿ ನ.1ರಿಂದ ಐದನೇ ರೈಲಿನ ಸಂಚಾರ ಆರಂಭವಾಗಿದ್ದು, ಬೆಳಿಗ್ಗೆ 6 ಗಂಟೆಗೆ ಸೇವೆ ಆರಂಭವಾಗುತ್ತಿದೆ. ದಟ್ಟಣೆ ಅವಧಿಯಲ್ಲಿ ರೈಲುಗಳ ಸಂಚಾರವನ್ನು 19 ನಿಮಿಷದಿಂದ 15 ನಿಮಿಷಕ್ಕೆ ಕಡಿಮೆಗೊಳಿಸಲಾಗಿದೆ. ಮುಂಬರುವ ತಿಂಗಳಿಂದ ಹೆಚ್ಚುವರಿ ರೈಲುಗಳ ಸಂಚಾರ ಕಾರ್ಯಾರಂಭ ಮಾಡಲಿದ್ದು, ಹಳದಿ ಮಾರ್ಗದ ಸೇವೆ ಇನ್ನಷ್ಟು ಉತ್ತಮವಾಗಲಿದೆ ಎಂದು ತಿಳಿಸಲಾಗಿದೆ.

15 ಮಂದಿ ವಿರುದ್ಧ ಎಫ್‌ಐಆರ್: ಹಳದಿ ಮಾರ್ಗದ ಪಥ ಬದಲಾವಣೆಗಾಗಿ ಕಾಯುತ್ತಿದ್ದ ಪ್ರಯಾಣಿಕರ ಪೈಕಿ 15 ಜನರ ಗುಂಪು ಹಳದಿ ಮಾರ್ಗದಲ್ಲಿ ಇನ್ನೂ 'ಏಕೆ ರೈಲು ಬಂದಿಲ್ಲ' ಎಂದು ಏರು ಧ್ವನಿಯಲ್ಲಿ ಕೇಳಿದ್ದಾರೆ. ಆಗ ಅಲ್ಲಿದ್ದ ಮೆಟ್ರೊ ಸಿಬ್ಬಂದಿ ಹಳದಿ ಮಾರ್ಗದಲ್ಲಿ ಮೆಟ್ರೊ ರೈಲು ಬೆಳಿಗ್ಗೆ 6ಕ್ಕೆ ಆರಂಭವಾಗಲಿದೆ ಎಂದು ತಿಳಿಸಿದರು. ಬೆಳಿಗ್ಗೆ 6ಕ್ಕೆ ನಿಲ್ದಾಣದಿಂದ ಮೆಟ್ರೊ ರೈಲು ಹೊರಡಬೇಕಿತ್ತು. ಆದರೆ, ಅಪರಿಚಿತರು ರೈಲು ಸಂಚರಿಸಲು ಬಿಡದೇ ಬಾಗಿಲಿನಲ್ಲಿ ಕಾಲು ಅಡ್ಡ ಇಟ್ಟು ಅಡಚಣೆ ಮಾಡಿದ್ದರು. 15 ಮಂದಿ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.



ಸ್ಫೋಟಿಸುವುದಾಗಿ ಬೆದರಿಕೆ

ನಗರದ ಮೆಟ್ರೊ ನಿಲ್ದಾಣವನ್ನು ಸ್ಫೋಟಿಸುವುದಾಗಿ ಬೆದರಿಕೆ ಸಂದೇಶ ಬಂದಿದ್ದು, ಈ ಸಂಬಂಧ ವಿಲ್ಸನ್‌ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬಿಎಂಆರ್‌ಸಿಎಲ್ ಸಹಾಯಕ ನಿರ್ವಾಹಕ ಎಂಜಿನಿಯರ್ ರತೀಶ್ ಅವರು ನೀಡಿದ ದೂರಿನ ಮೇರೆಗೆ ಭಾರತೀಯ ನ್ಯಾಯ ಸಂಹಿತೆ 351 (2), 351(3) ಅಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ನ.11ರಂದು ರಾತ್ರಿ 11.25ಕ್ಕೆ ಬಿಎಂಆರ್‌ಸಿಎಲ್ ಅಧಿಕೃತ ಇ -ಮೇಲ್ ವಿಳಾಸಕ್ಕೆ ಬೆದರಿಕೆ ಸಂದೇಶ ಬಂದಿತ್ತು. ರಾಜೀವ್ ಶೆಟ್ಟಿ ಹೆಸರಿನ ಇ-ಮೇಲ್ ವಿಳಾಸದಿಂದ ಸಂದೇಶ ಬಂದಿದೆ ಎಂದು ಪೊಲೀಸರು ಹೇಳಿದರು.

'ನನ್ನ ವಿಚ್ಛೇದಿತ ಪತ್ನಿಗೆ ಮೆಟ್ರೊ ಸಿಬ್ಬಂದಿ ತಮ್ಮ ಕೆಲಸ ಮುಗಿದ ಮೇಲೆ ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದಾರೆ. ಎಚ್ಚರಿಕೆಯಿಂದ ಇರಿ. ಇದು ಮುಂದುವರಿದರೆ ಯಾವುದಾದರೂ ಮೆಟ್ರೊ ನಿಲ್ದಾಣವನ್ನು ಸ್ಫೋಟಿಸುತ್ತೇನೆ' ಎಂದು ಬೆದರಿಕೆ ಹಾಕಿದ್ದಾನೆ.

ಪತಿ ಹತ್ಯೆ: ಎರಡನೇ ಪತ್ನಿ, ಸೋದರ ಮಾವನ ಬಂಧನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೇಳಿದಷ್ಟು ಹಣ ಕೊಡಲು ಒಪ್ಪದ ಪತಿಯನ್ನು ಕಟ್ಟಡದ ಮೇಲಿಂದ ತಳ್ಳಿ ಕೊಲೆ ಮಾಡಿದ್ದ ಪತ್ನಿ ಹಾಗೂ ಆಕೆಯ ಸೋದರ ಮಾವನನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಂದ್ರಹಳ್ಳಿ ಸಮೀಪದ ಮಂಜುನಾಥ ಬಡಾವಣೆಯ ವೆಂಕಟೇಶ್ ಅವರನ್ನು ಕೊಲೆ ಮಾಡಿದ ಆರೋಪದಡಿ ಅವರ ಪತ್ನಿ ಪಾರ್ವತಿ, ಆಕೆಯ ಸೋದರ ಮಾವ ರಂಗಸ್ವಾಮಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ವೆಂಕಟೇಶ್ ಅವರು ಆಟೊ ಚಾಲಕರಾಗಿ ಕೆಲಸ ಮಾಡುತ್ತಿದ್ದರು. 10 ವರ್ಷಗಳ ಹಿಂದೆ ಮೊದಲ ಪತ್ನಿಗೆ ವಿಚ್ಛೇದನ ನೀಡಿ ಪಾರ್ವತಿ ಜತೆಗೆ ಎರಡನೇ ಮದುವೆ ಆಗಿದ್ದರು.

'ಮನೆಯನ್ನು ತನ್ನ ಹೆಸರಿಗೆ ಬರೆದುಕೊಡಬೇಕು. ಅದು ಸಾಧ್ಯವಾಗದಿದ್ದರೆ ₹6 ಲಕ್ಷ ಕೊಡುವಂತೆ ಪತಿಯೊಂದಿಗೆ ಪಾರ್ವತಿ ಜಗಳ ಮಾಡಿದ್ದಳು. ಇದಕ್ಕೆ ವೆಂಕಟೇಶ್ ಒಪ್ಪಿರಲಿಲ್ಲ. ಕೊನೆಗೆ ಸಂಧಾನ ನಡೆದು ₹2.50 ಲಕ್ಷ ಕೊಡುವುದಾಗಿ ಭರವಸೆ ನೀಡಿದ್ದರು. ಕಡಿಮೆ ಹಣ ನೀಡಲು ಮುಂದಾಗಿದ್ದಕ್ಕೆ ಮತ್ತೆ ಜಗಳವಾಗಿತ್ತು. ಪತ್ನಿಯನ್ನು ವೆಂಕಟೇಶ್ ಹೊರಹಾಕಿದ್ದರು. ಇದರಿಂದ ಆಕ್ರೋಶಗೊಂಡ ಪಾರ್ವತಿ, ತನ್ನ ಸೋದರ ಮಾವನಿಗೆ ಕರೆ ಮಾಡಿ ಮನೆಯ ಬಳಿಗೆ ಕರೆಸಿಕೊಂಡಿದ್ದಳು. ಮನೆಯ ಬಾಗಿಲು ಒಡೆದು ಒಳಕ್ಕೆ ನುಗ್ಗಿದ್ದರು. ಇಬ್ಬರೂ ಸೇರಿಕೊಂಡು ವೆಂಕಟೇಶ್ ಅವರ ಮೇಲೆ ಹಲ್ಲೆ ನಡೆಸಿದ್ದರು. ನಂತರ, ಕಟ್ಟಡದ ಮೆಟ್ಟಿಲುಗಳ ಮೇಲಿಂದ ತಳ್ಳಿ ಕೊಲೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

ಕಬ್ಬನ್ ಉದ್ಯಾನಲ್ಲೂ ಪುಷ್ಪ ಪ್ರದರ್ಶನ

ತೋಟಗಾರಿಕೆ ಇಲಾಖೆಯಿಂದ ನ. 27ರಿಂದ ಡಿ. 7ರವರೆಗೆ ಆಯೋಜನೆ

• ಖಲೀಲಅಹ್ಮದ ಶೇಖ

ಮುಖ್ಯಾಂಶಗಳು

- ಶಾಸ್ತ್ರೀಯ ನೃತ್ಯ ಪ್ರದರ್ಶನ, ಸಂಗೀತ ಕಛೇರಿ ಆಯೋಜನೆ
- ಬಿಎಸ್‌ಎಫ್‌ನಿಂದ ಶಸ್ತ್ರಾಸ್ತ್ರಗಳ ಪ್ರದರ್ಶನ
- ₹38 ಲಕ್ಷ ವೆಚ್ಚದಲ್ಲಿ ಪುಷ್ಪ ಪ್ರದರ್ಶನ


ಸಾಂದರ್ಭಿಕ ಚಿತ್ರ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆಯ ಅಂಗವಾಗಿ ತೋಟಗಾರಿಕೆ ಇಲಾಖೆ ವತಿಯಿಂದ ಮೊದಲ ಬಾರಿಗೆ ಕಬ್ಬನ್ ಉದ್ಯಾನದಲ್ಲಿ ನವೆಂಬರ್ 27ರಿಂದ ಡಿಸೆಂಬರ್ 7ರವರೆಗೆ ಪುಷ್ಪ ಪ್ರದರ್ಶನ ಆಯೋಜಿಸಲು ಸಿದ್ಧತೆ ನಡೆದಿದೆ.

ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆಯು ಲಾಲ್‌ಬಾಗ್‌ನಲ್ಲಿ ಮಾತ್ರ ಫಲಪುಷ್ಪ ಪ್ರದರ್ಶನ ಆಯೋಜಿಸುತ್ತಿತ್ತು. ಕಬ್ಬನ್ ಉದ್ಯಾನದಲ್ಲಿ ರಾಜ್ಯೋತ್ಸವ, ಮಕ್ಕಳ ದಿನಾಚರಣೆ ಸಂದರ್ಭದಲ್ಲಿ ಪುಷ್ಪ ಪ್ರದರ್ಶನದ ಜೊತೆಗೆ ಕಲೆ, ಸಂಸ್ಕೃತಿಯ ಹಬ್ಬ ಹಮ್ಮಿಕೊಳ್ಳಲಾಗುತ್ತಿದೆ. ಇದಕ್ಕಾಗಿ ಈಗಾಗಲೇ ತೋಟಗಾರಿಕೆ ಇಲಾಖೆ ವಿವಿಧ ಬಗೆಯ ಆಲಂಕಾರಿಕ, ದೇಶಿ-ವಿದೇಶಿ ಹೂಗಳ ಕುಂಡಗಳನ್ನು ಸಿದ್ಧ ಮಾಡಿಕೊಳ್ಳುತ್ತಿದೆ. ಪುಷ್ಪಗಳಲ್ಲಿ ಪ್ರಾಣಿಗಳ ಕಲಾಕೃತಿಗಳನ್ನು ರಚಿಸಿ, ಮಕ್ಕಳನ್ನು ಆಕರ್ಷಿಸಲು ಯೋಜನೆ ರೂಪಿಸಲಾಗುತ್ತಿದೆ.

'20 ಸಾವಿರದಿಂದ 25 ಸಾವಿರ ಹೂ ಕುಂಡಗಳನ್ನು ಕಬ್ಬನ್ ಉದ್ಯಾನದ ಬ್ಯಾಂಡ್ ಸ್ಟ್ಯಾಂಡ್ ಹತ್ತಿರ, ಜಯಚಾಮರಾಜೇಂದ್ರ ಒಡೆಯರ್ ಪ್ರತಿಮೆ ಮುಂಭಾಗದಲ್ಲಿ ಹಾಗೂ ಬಾಲಭವನದ ಆವರಣದಲ್ಲಿ ಜೋಡಿಸಿ ಇಡಲಾಗುತ್ತದೆ. ಈ ಪುಷ್ಪ ಪ್ರದರ್ಶನ 11 ದಿನ ನಡೆಯಲಿದೆ. ಬೆಳಿಗ್ಗೆ 6 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಪ್ರದರ್ಶನ ಇರಲಿದೆ. ವಯಸ್ಕರಿಗೆ ಸುಮಾರು ₹50 ಹಾಗೂ ಮಕ್ಕಳಿಗೆ ₹10 ಪ್ರವೇಶ ಶುಲ್ಕ ನಿಗದಿಪಡಿಸುವ ಕುರಿತು ಚರ್ಚೆಗಳು ನಡೆಯುತ್ತಿವೆ' ಎಂದು ತೋಟಗಾರಿಕೆ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಪುಷ್ಪ ಪ್ರದರ್ಶನದ ಜೊತೆಗೆ ಸಾಂಸ್ಕೃತಿಕ ಕಲೆಗಳು, ಶಾಸ್ತ್ರೀಯ ನೃತ್ಯ ಪ್ರದರ್ಶನ, ಶಾಸ್ತ್ರೀಯ ಸಂಗೀತ ಕಛೇರಿಗಳು, ಜಾನಪದ ಹಾಡು, ನೃತ್ಯ, ಡೊಳ್ಳು ಕುಣಿತ ಸೇರಿದಂತೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಒಟ್ಟು 100ಕ್ಕೂ ಹೆಚ್ಚು ಮಳಿಗೆಗಳು ಇರಲಿವೆ. ಇದರಲ್ಲಿ ಆಹಾರ ಮಳಿಗೆಗಳನ್ನು ತೆರೆಯಲು ಅವಕಾಶ ನೀಡಲಾಗುತ್ತದೆ. ಉದ್ಯಾನಕ್ಕೆ ಯಾವುದೇ ರೀತಿಯ ತೊಂದರೆ ಆಗದಂತೆ ಈ ಪ್ರದರ್ಶನ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತದೆ' ಎಂದು ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕಿ (ಕಬ್ಬನ್ ಉದ್ಯಾನ) ಜಿ. ಕುಸುಮಾ 'ಪ್ರಜಾವಾಣಿ'ಗೆ ತಿಳಿಸಿದರು.

'ಉದ್ಯಾನದ ಎರಡು- ಮೂರು ಭಾಗಗಳಲ್ಲಿ ಹೂವಿನ ಕುಂಡಗಳ ಪ್ರದರ್ಶನ ನಡೆಯಲಿದೆ. ಇಂಡೊ-ಅಮೆರಿಕನ್ ಹೈಬ್ರಿಡ್ ಕಂಪನಿ, ತಿರುಮಲ ನರ್ಸರಿಯವರು ಆಕರ್ಷಕ ಹೂವಿನ ಕುಂಡುಗಳನ್ನು ಜೋಡಿಸಲಿದ್ದಾರೆ. ಕರ್ನಾಟಕ ಶಿಲ್ಪಾ ಕಲಾ ಅಕಾಡೆಮಿಯಿಂದ ವಾಸ್ತುಶಿಲ್ಪ, ಕಲ್ಲಿನ ಮೂರ್ತಿಗಳು, ಬಿಎಸ್‌ಎಫ್ ಸಿಬ್ಬಂದಿ ಶಸ್ತ್ರಾಸ್ತ್ರಗಳ ಪ್ರದರ್ಶನವನ್ನೂ ನೀಡಲಿದ್ದಾರೆ' ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ ತಿಳಿಸಿದರು.

'ಕಬ್ಬನ್ ಉದ್ಯಾನಕ್ಕೆ ಮೆಟ್ರೊ ಸಂಪರ್ಕ ಇದ್ದು, ಪ್ರದರ್ಶನ ವೀಕ್ಷಣೆಗೆ ಹೆಚ್ಚು ಮಂದಿ ಬರುವ ಭರವಸೆ ಇದೆ. ಹೋದ ವರ್ಷ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಪುಷ್ಪ ಪ್ರದರ್ಶನ ಆಯೋಜಿಸಲಾಗಿತ್ತು.

'ಒಂದು ವಾರದಲ್ಲಿ ರೂಪುರೇಷ ಅಂತಿಮ'


ಆರ್. ಗಿರೀಶ್

'ಕಬ್ಬನ್ ಉದ್ಯಾನದಲ್ಲಿ ಆಯೋಜಿಸುತ್ತಿರುವ ಪುಷ್ಪ ಪ್ರದರ್ಶನದಲ್ಲಿ ಚಿಣ್ಣರನ್ನು ಆಕರ್ಷಿಸುವ ಹೂವಿನ ಕಲಾಕೃತಿಗಳ ಮಾದರಿಗಳನ್ನು ರಚಿಸಲಾಗುತ್ತದೆ. ವಾರಾಂತ್ಯದಲ್ಲಿ ಉದ್ಯಾನದ ಬ್ಯಾಂಡ್ ಸ್ಟ್ಯಾಂಡ್‌ನಲ್ಲಿ ನೃತ್ಯ ಪ್ರದರ್ಶನ, ಸಂಗೀತ ಕಛೇರಿಗಳನ್ನು ನಡೆಸಲಾಗುತ್ತಿದೆ. ಈ ಪುಷ್ಪ ಪ್ರದರ್ಶನದ ರೂಪುರೇಷಗಳನ್ನು ಮುಂದಿನ ವಾರದಲ್ಲಿ ಅಂತಿಮಗೊಳಿಸಲಾಗುತ್ತದೆ' ಎಂದು ತೋಟಗಾರಿಕೆ ಇಲಾಖೆಯ ನಿರ್ದೇಶಕ ಆರ್. ಗಿರೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಈ ಬಾರಿ ತೋಟಗಾರಿಕೆ ಇಲಾಖೆಯಿಂದ ಅಂದಾಜು ₹38 ಲಕ್ಷ ವೆಚ್ಚದಲ್ಲಿ ಪುಷ್ಪ ಪ್ರದರ್ಶನ ಆಯೋಜಿಸಲಾಗುತ್ತದೆ' ಎಂದು ವಿವರಿಸಿದರು.

ತುಮಕೂರುವರೆಗೆ ಮೆಟ್ರೊ ವಿಸ್ತರಣೆ; 27 ನಿಲ್ದಾಣ ನಿರ್ಮಾಣ

ಡಿಪಿಆರ್ ತಯಾರಿಸಲು ಟೆಂಡರ್

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ನಮ್ಮ ಮೆಟ್ರೊ' ಅನ್ನು ತುಮಕೂರುವರೆಗೆ ವಿಸ್ತರಿಸುವ ಸಂಬಂಧ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಟೆಂಡರ್ ಪ್ರಕ್ರಿಯೆ ಆರಂಭವಾಗಿದೆ.

ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಷನ್ ಲಿಮಿಟೆಡ್ (ಬಿಎಂಆರ್‌ಸಿಎಲ್) ಮಾದಾವರದಿಂದ ತುಮಕೂರುವರೆಗೆ 59.6 ಕಿ.ಮೀ. ಉದ್ದದ ಮೆಟ್ರೊ ಮಾರ್ಗ ಕಲ್ಪಿಸುವ ಸಂಬಂಧ ಪ್ರಕ್ರಿಯೆಗಳನ್ನು ಆರಂಭಿಸಿದೆ. ಇದರ ಮೊದಲ ಭಾಗವಾಗಿ ಡಿಪಿಆರ್ ಪ್ರಕ್ರಿಯೆ ಆರಂಭಿಸಿದೆ.

ಈ ಯೋಜನೆಯನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ಕೈಗೊಳ್ಳಲು ಚಿಂತನೆ ನಡೆದಿದೆ.

ಬಿಎಂಆರ್‌ಸಿಎಲ್ ಪ್ರಕಾರ, ಈ ಮಾರ್ಗದ ಅಂದಾಜು ಯೋಜನಾ ವೆಚ್ಚ ₹20,896 ಕೋಟಿ ಆಗಲಿದ್ದು, ಈ ಮಾರ್ಗದಲ್ಲಿ 27 ನಿಲ್ದಾಣಗಳು ಇರಲಿವೆ. ಮಾದಾವರ– ನೆಲಮಂಗಲ ಮಾರ್ಗದಲ್ಲಿ 1 ರಿಂದ 2 ಕಿ.ಮೀ.ಗೆ ಒಂದರಂತೆ ಹಾಗೂ ನೆಲಮಂಗಲದಿಂದ ತುಮಕೂರುವರೆಗೆ 4 ರಿಂದ 5 ಕಿ.ಮೀ. ವ್ಯಾಪ್ತಿಯಲ್ಲಿ ಒಂದೊಂದು ನಿಲ್ದಾಣ ಇರುವ ಸಾಧ್ಯತೆ ಇದೆ.

ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶದ ಸಂಪರ್ಕ ಜಾಲ ಬಲಗೊಳಿಸುವ ಯೋಜನೆಯಾಗಿ ತುಮಕೂರು ಕಾರಿಡಾರ್ ಅನ್ನು ನಮ್ಮ ಮೆಟ್ರೊ 4ನೇ ಹಂತದ ಅಡಿ ರೂಪಿಸಲಾಗುತ್ತಿದೆ. 210.9 ಕಿ.ಮೀ. ವಿಸ್ತರಣೆ ವ್ಯಾಪ್ತಿಯ ಮೂರು ಹೊಸ ಮಾರ್ಗಗಳಲ್ಲಿ ಇದೂ ಒಂದಾಗಿದೆ.

ಈ ಮಾರ್ಗದಲ್ಲಿ ಹಾದುಹೋಗುವ ಬಸ್ ಟರ್ಮಿನಲ್, ರೈಲ್ವೆ ನಿಲ್ದಾಣಗಳ ಸಂಪರ್ಕ ಜಾಲ, ಹೊಸದಾಗಿ ರೂಪಿಸಬೇಕಾದ ಮಾರ್ಗಗಳ ಕುರಿತು ಡಿಪಿಆರ್‌ನಲ್ಲಿ ಉಲ್ಲೇಖಿಸಬೇಕಾಗುತ್ತದೆ.

'ಮಾದಾವರದಿಂದ ತುಮಕೂರುವರೆಗೆ ಮಾರ್ಗ ಹೇಗಿರಬೇಕು ಎನ್ನುವ ಅಂಶವೂ ಪ್ರಮುಖವಾಗಲಿದೆ. ಮಾರ್ಗ ಹಾದು ಹೋಗುವ ಭಾಗದಲ್ಲಿ ಭೂಪ್ರದೇಶದ ಪರಿಸ್ಥಿತಿ ನೋಡಿಕೊಂಡು ಸುರಂಗ ಮಾರ್ಗ, ಎತ್ತರಿಸಿದ ಮಾರ್ಗದಲ್ಲಿ ಸಂಚರಿಸಬೇಕಾದ ರೂಪು ರೇಷೆಗಳನ್ನು ಸಿದ್ಧಪಡಿಸಬೇಕಾಗುತ್ತದೆ' ಎಂದು ಅಧಿಕಾರಿಯೊಬ್ಬರು ವಿವರಿಸಿದರು.

ಬಿಡ್ ಹೇಗಿರಲಿದೆ?

'ಡಿಪಿಆರ್ ಪ್ರಸ್ತಾವನೆಯ ಮನವಿ ಸಲ್ಲಿಸಲು (ಆರ್‌ಎಫ್‌ಪಿ) ಐದು ದಿನಗಳ ಸಮಯವನ್ನು ಬಿಡ್ದಾರರಿಗೆ ಬಿಎಂಆರ್‌ಸಿಎಲ್ ನೀಡಿದೆ. ಬಿಡ್‌ಗಳನ್ನು ನ.21ರಂದು ತೆರೆಯಲು ನಿಗಮ ಯೋಜಿಸುತ್ತಿದೆ. ಇದಾದ ಬಳಿಕ ಬಿಡ್ದಾರರೊಂದಿಗೆ ಒಪ್ಪಿಗೆ ಪತ್ರ ಸ್ವೀಕರಿಸಿದ 5 ತಿಂಗಳಲ್ಲಿ ಡಿಪಿಆರ್ ತಯಾರಿಸುವ ಸಮಯ ಇರಲಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ಕ ಪಡೆ: ರಕ್ಷಣಾ ಆಯೋಗ ಸ್ವಾಗತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಕಷ್ಟದಲ್ಲಿರುವ ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗಾಗಿ ಸಕಾಲದಲ್ಲಿ ರಕ್ಷಣೆ ನೀಡುವ ಉದ್ದೇಶದಿಂದ ರಾಜ್ಯದಾದ್ಯಂತ 'ಅಕ್ಕ ಪಡೆ' ಆರಂಭಿಸುತ್ತಿರುವುದನ್ನು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಕೋಸಂಬೆ ಸ್ವಾಗತಿಸಿದ್ದಾರೆ.

ಎರಡು ವರ್ಷಗಳ ಹಿಂದೆ ಪೊಲೀಸ್ ಇಲಾಖೆ ವತಿಯಿಂದ ಅಕ್ಕ ಪಡೆ ಯೋಜನೆಗೆ ಚಾಲನೆಗೊಳಿಸಿ ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಿರುವುದು ಸಂತೋಷದ ವಿಚಾರವಾಗಿದೆ. ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಹಿತದೃಷ್ಟಿಯಿಂದ ಇದೊಂದು ಪರಿಣಾಮಕಾರಿ ಮತ್ತು ಮಹತ್ತರ ಬದಲಾವಣೆಯ ಯೋಜನೆಯಾಗಲಿದೆ ಎಂದು ಅವರು ಹೇಳಿದ್ದಾರೆ.

ಸಮಗ್ರ ನಗರಾಭಿವೃದ್ಧಿಗೆ ಮೆಲ್ಬರ್ನ್ ಆಸಕ್ತಿ

ಪ್ರಜಾವಾಣಿ ವಾರ್ತೆ


ನಿಕೊಲಸ್ ರೀಸ್ ಹಾಗೂ ರೋಶೇನಾ ಕ್ಯಾಂಪ್‌ಬೆಲ್ ಅವರನ್ನು ಮಹೇಶ್ವರ್ ರಾವ್, ತುಷಾರ್ ಗಿರಿನಾಥ್, ರಾಜೇಂದ್ರ ಚೋಳನ್ ಅವರು ಗೌರವಿಸಿದರು

ಬೆಂಗಳೂರು: ಮೆಲ್ಬರ್ನ್ ಮತ್ತು ಬೆಂಗಳೂರು ನಗರಗಳ ನಡುವಿನ ನವೀನ, ಸ್ಥಿರತೆ ಮತ್ತು ಸಮಗ್ರ ನಗರಾಭಿವೃದ್ಧಿಯನ್ನು ಉತ್ತೇಜಿಸಲು ಉಭಯ ನಗರಗಳು ಆಸಕ್ತಿ ವ್ಯಕ್ತಪಡಿಸಿವೆ.

ಆಸ್ಟ್ರೇಲಿಯಾದ ಮೆಲ್ಬರ್ನ್‌ನ ಲಾರ್ಡ್ ಮೇಯರ್ ನಿಕೊಲಸ್ ರೀಸ್ ಮತ್ತು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು 'ಉದ್ದೇಶ ಪತ್ರ'ಗಳನ್ನು ವಿನಿಯಮ ಮಾಡಿಕೊಂಡರು.

'ಸಿಸ್ಟರ್ ಸಿಟಿ'ಗಳ ನಡುವಿನ ಪರಸ್ಪರ ಸಹಕಾರವನ್ನು ಗಟ್ಟಿಗೊಳಿಸುವ ಉದ್ದೇಶದಿಂದ, ಎರಡೂ ನಗರಗಳು, ನಗರ ನವೀನತೆ –ಸ್ಮಾರ್ಟ್ ಸಿಟಿ, ತಂತ್ರಜ್ಞಾನ–ನಾವೀನ್ಯ ಪರಿಸರ ವ್ಯವಸ್ಥೆ, ಸುಸ್ಥಿರತೆ– ಹವಾಮಾನ ಸ್ಥಿತಿಸ್ಥಾಪಕ, ಶಿಕ್ಷಣ–ಜ್ಞಾನ ವಿನಿಮಯ, ಸಾಂಸ್ಕೃತಿಕ–ಕ್ರೀಡಾ ವಿನಿಮಯ ಸಾಧಿಸಲಾಗುತ್ತದೆ.

ತುಷಾರ್ ಗಿರಿನಾಥ್ ಮಾತನಾಡಿ, 'ಮೆಲ್ಬರ್ನ್ ಹಾಗೂ ಬೆಂಗಳೂರು ನಡುವಿನ ವ್ಯವಸ್ಥಿತ ಮಾಹಿತಿ ವಿನಿಮಯ ಮತ್ತು ಅನುಭವ ಹಂಚಿಕೆಯಿಂದ ಎರಡೂ ನಗರಗಳ ಅಭಿವೃದ್ಧಿಗೆ ದಾರಿಯಾಗಲಿದೆ' ಎಂದು ತಿಳಿಸಿದರು.

'ನಗರಗಳ ನಡುವಿನ ಈ ಉದ್ದೇಶ ಘೋಷಣೆ, ಪರಸ್ಪರ ಕಲಿಕೆ ಮತ್ತು ಸಹಕಾರಕ್ಕೆ ಬಲ ತುಂಬುತ್ತದೆ. ಇದರಿಂದ ನಗರಾಭಿವೃದ್ಧಿ ಕಾರ್ಯಗಳಿಗೆ ಅನುಕೂಲವಾಗಲಿದೆ' ಎಂದು ಮಹೇಶ್ವರ್ ಹೇಳಿದರು.

ನಿಕೊಲಸ್ ರೀಸ್ ಮಾತನಾಡಿ, 'ಸಹಕಾರ ಮತ್ತು ಪರಿಣಿತಿಯ ಹಂಚಿಕೆ ಮೂಲಕ, ಎರಡೂ ನಗರಗಳ ಹೊಸತನ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವ ಎಐ ಆಧಾರಿತ ನಗರ ಪರಿಹಾರಗಳನ್ನು ರೂಪಿಸಲು ನಾವು ಎದುರು ನೋಡುತ್ತಿದ್ದೇವೆ' ಎಂದು ಅಭಿಪ್ರಾಯಪಟ್ಟರು.

ಜಿಬಿಎ ಹಾಗೂ ನಗರ ಪಾಲಿಕೆಗಳ ಕಾರ್ಯವೈಖರಿ, ಬೆಂಗಳೂರು ನಗರದಲ್ಲಿ ನಡೆಯುತ್ತಿರುವ ಮತ್ತು ಮುಂದಿನ ಅಭಿವೃದ್ಧಿ ಯೋಜನೆಗಳ ಕುರಿತು ಪ್ರಾತ್ಯಕ್ಷಿಕೆ ಪ್ರಸ್ತುತಪಡಿಸಲಾಯಿತು.

ಮೆಲ್ಬರ್ನ್‌ನ ಉಪ ಲಾರ್ಡ್ ಮೇಯರ್ ರೋಶೇನಾ ಕ್ಯಾಂಪ್‌ಬೆಲ್, ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್, ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಉಪಸ್ಥಿತರಿದ್ದರು.

'ಸತ್ಯ ಅರ್ಥ ಮಾಡಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಧ್ಯಮ ಮತ್ತು ರಾಜಕಾರಣ ಎಂಬ ಎರಡು ಕಣ್ಣುಗಳು ಸತ್ಯವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ವಿಫಲವಾದರೆ ಸಮಾಜ ಕತ್ತಲೆಗೆ ಜಾರುತ್ತದೆ. ಇವುಗಳು ಜೊತೆಯಾಗಿ ಇದ್ದರೆ ಸಮಾಜದಲ್ಲಿ ಶಾಂತಿ ಇರುತ್ತದೆ. ಆಗ ಮಾತ್ರ ಶುದ್ಧ ಭಾರತ ನಿರ್ಮಾಣ ಮಾಡಬಹುದು ಎಂದು ವಿಧಾನಸಭೆ ಅಧ್ಯಕ್ಷ ಯು.ಟಿ.ಖಾದರ್ ಅಭಿಪ್ರಾಯಪಟ್ಟರು.

ಕರ್ನಾಟಕ ಮಾಧ್ಯಮ ಅಕಾಡೆಮಿಯು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಪ್ರೆಸ್ ಕ್ಲಬ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಾಜಕಾರಣ ಮತ್ತು ಮಾಧ್ಯಮ ಸಮಾನವಾಗಿ, ಸಾಮರಸ್ಯದಿಂದ ಕೆಲಸ ಮಾಡಿದರೆ ಉತ್ತಮ ಸಮಾಜ ನಿರ್ಮಾಣ ಮಾಡಬಹುದು. ಒಂದು ಕಣ್ಣು ಸಮಾಜದ ಸಮಸ್ಯೆಗಳನ್ನು ತಿಳಿಸುತ್ತದೆ. ಆಗ ಇನ್ನೊಂದು ಕಣ್ಣು ಅದಕ್ಕೆ ಪರಿಹಾರ ಒದಗಿಸುತ್ತದೆ. ಸಮಾಜದಲ್ಲಿ ಏಕತೆ ಮತ್ತು ಸಾಮರಸ್ಯ ಕಾಪಾಡಲು ಹಿಂದೆಯೂ ಮಾಧ್ಯಮಗಳು ಕೊಡುಗೆ ನೀಡಿದ್ದವು. ಈಗಲೂ ಕೊಡುಗೆ ನೀಡುತ್ತಿವೆ ಎಂದರು.

ಜವಾಬ್ದಾರಿಯುತ ಆಡಳಿತವನ್ನು ಸರ್ಕಾರ ನೀಡಲು ಮಾಧ್ಯಮ ಬೇಕು. ಸಮಾಜಕ್ಕೆ ಕಂಟಕ ಎದುರಾದಾಗ ಮಾಧ್ಯಮಗಳು ನೆರವಿಗೆ ಬರಬೇಕು. ಜನರಿಗೆ ವಿಶ್ವಾಸ ಬರುವ ರೀತಿ ಮಾಧ್ಯಮಗಳು ಕೆಲಸ ಮಾಡಬೇಕು. ಸ್ವಸ್ಥ ಸಮಾಜ ನಿರ್ಮಿಸಲು ಮುಂದಾಗಬೇಕು ಎಂದು ಕರೆ ನೀಡಿದರು.

ಸಂಸದೀಯ ವ್ಯವಸ್ಥೆಯ ಬಗ್ಗೆ ತಿಳಿಸುವ ಉದ್ದೇಶದಿಂದ ಒಂದು ವರ್ಷದ ಕೋರ್ಸ್ ಅನ್ನು ಪ್ರಾರಂಭಿಸುವ ಕುರಿತು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು. ಪತ್ರಕರ್ತ, ವೈದ್ಯ, ವಕೀಲ, ಎಂಜಿನಿಯರ್ ಹಾಗೂ ಇತರೆ ವೃತ್ತಿಗಳಿಗೆ ಕೋರ್ಸ್‌ಗಳಿವೆ. ಜನಪ್ರತಿನಿಧಿಯಾಗುವವರಿಗೆ ಯಾವುದೇ ಶಾಲೆ, ಕಾಲೇಜು ಇಲ್ಲ. ಹಾಗಾಗಿ ವರ್ಷದ ಕೋರ್ಸ್ ಪ್ರಾರಂಭಿಸುವ ಉದ್ದೇಶ ಇದೆ. ಅಲ್ಲದೇ ರಾಜ್ಯದ ಪತ್ರಿಕೋದ್ಯಮ ಹಾಗೂ ಕಾನೂನು ವಿದ್ಯಾರ್ಥಿಗಳಿಗೆ ಸದನಗಳ ಕಲಾಪಗಳನ್ನು ಆಲಿಸಲು ಅವಕಾಶ ನೀಡಲಾಗುವುದು ಎಂದರು.

ಎನ್‌ಡಿಟಿವಿ ನಿವೃತ್ತ ಸಂಪಾದಕಿ ನೂಪುರ್ ಬಸು ಮಾತನಾಡಿ, 'ತಪ್ಪು ಮಾಹಿತಿಗಳು ಮಾಧ್ಯಮಗಳ ಹೆಸರನ್ನು ಕೆಡಿಸುತ್ತಿವೆ. ಧ್ವನಿ ಇಲ್ಲದವರಿಗೆ ಮಾಧ್ಯಮಗಳು ಧ್ವನಿಯಾಗಬೇಕು. ಮಾಧ್ಯಮಗಳಿಗೆ ಇಂದು ವಿಶ್ವಾಸಾರ್ಹತೆಯೇ ದೊಡ್ಡ ಸವಾಲಾಗಿದೆ. ಪತ್ರಕರ್ತರ ವಿರುದ್ಧ ಹಿಂಸಾಚಾರ, ದಾಳಿಗಳು, ದೂರುಗಳು, ಎಫ್‌ಐಆರ್ ಸಹ ಹೆಚ್ಚಿದೆ' ಎಂದು ಆತಂಕ ವ್ಯಕ್ತಪಡಿಸಿದರು.

ಶಾಸಕ ರಿಜ್ವಾನ್ ಅರ್ಷದ್ ಅವರು ಮಾತನಾಡಿ, 'ಆರೋಗ್ಯವಂತ ಪ್ರಜಾಪ್ರಭುತ್ವಕ್ಕೆ ಸ್ವತಂತ್ರ ಮಾಧ್ಯಮ ಬೇಕು. ಮಾಧ್ಯಮಗಳಿಗೆ ಸ್ವಾತಂತ್ರ್ಯ ಇಲ್ಲದಿದ್ದರೆ ಆರೋಗ್ಯವಾಗಿರುವುದಿಲ್ಲ. ಭಾರತೀಯ ಮಾಧ್ಯಮಗಳನ್ನು ಕಾರ್ಪೊರೇಟ್ ಜಗತ್ತು ಆಳುತ್ತಿದೆ. ಸರ್ಕಾರವನ್ನು ಪ್ರಶ್ನೆ ಮಾಡದಿದ್ದರೆ ಪ್ರಯೋಜನವಿಲ್ಲ. ಸಂಪಾದಕರು ಹಾಗೂ ಮಾಲೀಕರಿಗೆ ಜವಾಬ್ದಾರಿ ಇದೆ. ಈ ನಿಟ್ಟಿನಲ್ಲಿ ಮಾಧ್ಯಮಗಳು ಕೆಲಸ ಮಾಡಲಿ' ಎಂದರು.

ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷೆ ಆಯೇಷಾ ಖಾನಂ ಮಾತನಾಡಿ, 'ಇಂದು ಸುದ್ದಿಗಳ ಪ್ರವಾಹವೇ ಇದೆ. ಈ ಪ್ರವಾಹದಲ್ಲಿ ವಿಶ್ವಾಸಾರ್ಹ ಸುದ್ದಿ ಯಾವುದು ಎಂಬುದೇ ಗೊಂದಲ. ಮಾಧ್ಯಮಗಳಿಗೆ ವಿಶ್ವಾಸಾರ್ಹತೆಯೇ ಮುಖ್ಯವಾಗಬೇಕು' ಎಂದರು.

ಹಿರಿಯ ಪತ್ರಕರ್ತೆ ಆರ್. ಪೂರ್ಣಿಮಾ ಮಾತನಾಡಿ, 'ಸುಳ್ಳುಸುದ್ದಿಗೆ ಇಂದು ತಂತ್ರಜ್ಞಾನದ ಬೆಂಬಲ ಸಹ ಇದೆ. ಸತ್ಯ ಯಾವುದು ಎಂಬುದು ತಿಳಿಯಲಾಗದಷ್ಟು ಸುಳ್ಳು ವ್ಯಾಪಕವಾಗಿದೆ. ಯುವ ಪತ್ರಕರ್ತರು ಸುಳ್ಳು ಸುದ್ದಿಗಳ ಬಗ್ಗೆ ಎಚ್ಚರವಹಿಸಬೇಕು' ಎಂದು ಸಲಹೆ ನೀಡಿದರು.

ಸಮಾರಂಭದಲ್ಲಿ ಪ್ರೆಸ್ ಕ್ಲಬ್ ಅಧ್ಯಕ್ಷ ಶ್ರೀಧರ್, ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಅಕಾಡೆಮಿ ಕಾರ್ಯದರ್ಶಿ ಸಹನಾ ಎಂ. ಹಾಜರಿದ್ದರು.

ಮಹಿಳೆಯರಿಗೆ ವಾಹನ ತರಬೇತಿ

ನೆಲಮಂಗಲ: 'ಬಡ ಹಾಗೂ ಮಧ್ಯಮ ವರ್ಗದ ಮಹಿಳೆಯರನ್ನು ಸ್ವಾವಲಂಬಿಗಳಾಗಿಸಲು ಉಚಿತ ದ್ವಿಚಕ್ರ, ಕಾರು ಚಾಲನಾ ತರಬೇತಿಯನ್ನು ಹಿತಚಿಂತನ ಟ್ರಸ್ಟ್ ಪ್ರಾರಂಭಿಸಿದೆ' ಎಂದು ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ವಿ.ರಾಮಸ್ವಾಮಿ ತಿಳಿಸಿದರು.

ತಾಲ್ಲೂಕಿನ ಬೊಮ್ಮಶೆಟ್ಟಿಹಳ್ಳಿಯಲ್ಲಿ ಟ್ರಸ್ಟ್ ಮಹಿಳೆಯರಿಗೆ ಪ್ರಾರಂಭಿಸಿರುವ ಉಚಿತ ದ್ವಿಚಕ್ರ ಮತ್ತು ಕಾರು ಚಾಲನಾ ತರಬೇತಿಗೆ ಚಾಲನೆ ನೀಡಿ ಮಾತನಾಡಿದ ಅವರು, 'ಶಾಲೆಯ ಆವರಣದಲ್ಲಿ ವಾಹನ ತರಬೇತಿ ಕಚೇರಿ ತೆರೆದಿದ್ದು, ಮಹಿಳೆಯರು ನೋಂದಾಯಿಸಿಕೊಂಡು ಇದರ ಪ್ರಯೋಜನ ಪಡೆಯಬಹುದು' ಎಂದರು.

ಟ್ರಸ್ಟ್ ಅಧ್ಯಕ್ಷೆ ಪುಟ್ಟಮ್ಮ ಮಾತನಾಡಿ, 'ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದು, ಉಚಿತ ವಾಹನ ಚಾಲನಾ ತರಬೇತಿ ಪಡೆದು ಚಾಲಕ ವೃತ್ತಿಯಲ್ಲಿ ತೊಡಗಿಸಿಕೊಳ್ಳಲು ಸಹಕಾರಿಯಾಗಿದೆ. ಗೃಹಿಣಿಯರಿಗೆ ಮಕ್ಕಳನ್ನು ಶಾಲೆಗೆ ಬಿಡಲು ಹಾಗೂ ಇತರೆ ಕೆಲಸಗಳಿಗೆ ಬೇರೆಯವರ ಅವಲಂಬನೆಯನ್ನು ತಪ್ಪಿಸಲಿದೆ' ಎಂದರು. ಟ್ರಸ್ಟಿ ನರಸಿಂಹಮೂರ್ತಿ ಟ್ರಸ್ಟ್ ವತಿಯಿಂದ ವೃದ್ಧರಿಗೆ ಉಚಿತ ಕನ್ನಡಕ ವಿತರಿಸಲಾಯಿತು.


ಉಚಿತ ವಾಹನ ಚಾಲನಾ ತರಬೇತಿಗೆ ನೋಂದಾಯಿಸಿಕೊಂಡಿರುವ ಮಹಿಳೆಯರೊಂದಿಗೆ ಹಿತಚಿಂತನ ಚಾರಿಟಬಲ್ ಟ್ರಸ್ಟ್ ವ್ಯವಸ್ಥಾಪಕ ಟ್ರಸ್ಟಿ ವಿ.ರಾಮಸ್ವಾಮಿ ಹಾಜರಿದ್ದರು

ಲಕ್ಷ ದೀಪೋತ್ಸವ


ಕಾರ್ತಿಕ ಸೋಮವಾರದ ಅಂಗವಾಗಿ ಬಳೇಪೇಟೆಯ ಕಾಶಿ ವಿಶ್ವನಾಥ ಸ್ವಾಮಿ ದೇವಸ್ಥಾನದಲ್ಲಿ ಲಕ್ಷ ದೀಪೋತ್ಸವ ಕಾರ್ಯಕ್ರಮದಲ್ಲಿ ಮಹಿಳೆಯರು ದೀಪಗಳನ್ನು ಬೆಳಗಿದರು ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್


ಸಂಪಂಗಿರಾಮ ಕಲ್ಯಾಣಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸ್ಥಳೀಯ ನಿವಾಸಿಗಳು ದೀಪಗಳನ್ನು ಬೆಳಗಿದರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಮೇಕ್ರಿ ವೃತ್ತ: ಕೈ, ಕಾಲು ಕಟ್ಟಿ ಹಾಕಿ ವ್ಯಕ್ತಿ ಪೊಲೀಸರ ವಶಕ್ಕೆ

ಕಾರಿನ ಮೇಲೇರಿ ವ್ಯಕ್ತಿಯ ರಂಪಾಟ

ಪ್ರಜಾವಾಣಿ ವಾರ್ತೆ



ಕಾರಿನ ಮೇಲೇರಿ ರಂಪಾಟ ನಡೆಸಿದ ವ್ಯಕ್ತಿ

ಬೆಂಗಳೂರು: ನಗರದ ಮೇಕ್ರಿ ವೃತ್ತದ ಬಳಿ ನಡುರಸ್ತೆಯಲ್ಲಿ ಸೋಮವಾರ ಮಧ್ಯಾಹ್ನ ಕಾರಿನ ಮೇಲೇರಿ ವ್ಯಕ್ತಿಯೊಬ್ಬರು ರಂಪಾಟ ನಡೆಸಿದ್ದರು.

ಸೂಪರ್ ಮಾರ್ಕೆಟ್‌ನಲ್ಲಿ ವ್ಯವಸ್ಥಾಪಕರಾಗಿದ್ದ ಸಂತೋಷ್ ಅವರು ರಂಪಾಟ ನಡೆಸಿದ್ದರಿಂದ ಮೇಕ್ರಿ ವೃತ್ತದ ಸುತ್ತಮುತ್ತ ಸಂಚಾರ ದಟ್ಟಣೆ ಉಂಟಾಗಿತ್ತು. ಸಾರ್ವಜನಿಕರು ಹಾಗೂ ಪೊಲೀಸರು ಹರಸಾಹಸಪಟ್ಟು ಕಾರಿನಿಂದ ಕೆಳಗಿಳಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಿಕೊಟ್ಟರು.

ಸಂತೋಷ್ ಅವರು ಮೈಸೂರಿನಿಂದ ಬೆಂಗಳೂರು ವಿಮಾನ ನಿಲ್ದಾಣಕ್ಕೆ ತೆರಳಲು ಬಾಡಿಗೆ ಕಾರು ಮಾಡಿಕೊಂಡು ಬಂದಿದ್ದರು. ಮೇಕ್ರಿ ವೃತ್ತದ ಬಳಿ ಕ್ಯಾಬ್ ಚಾಲಕನೊಂದಿಗೆ ಜಗಳ ಮಾಡಿಕೊಂಡಿದ್ದರು. ನಂತರ, ಸಂಚಾರ ದಟ್ಟಣೆ ಮಧ್ಯೆ ಏಕಾಏಕಿ ಕಾರಿನಿಂದ ಇಳಿದಿದ್ದ ಅವರು, ಕಾರಿನ ಮೇಲೆ ಹತ್ತಿ ರಂಪಾಟ ಶುರುಮಾಡಿದ್ದರು. ಜೋರಾಗಿ ಕೂಗಿದ್ದರು. ಸಂತೋಷ್ ಅವರನ್ನು ಸಮಾಧಾನ ಪಡಿಸಲು ಯತ್ನಿಸಿದರು. ಆಗ ಸಂತೋಷ್ ಅವರು ಪೊಲೀಸರ ಮೇಲೆ ಹಲ್ಲೆ ನಡೆಸಿದ್ದಾರೆ. ಪರಿಸ್ಥಿತಿ ಕೈಮೀರುತ್ತಿದ್ದಂತೆಯೇ ಪೊಲೀಸರು, ಸಂತೋಷ್ ಅವರ ಕೈ ಕಾಲು ಕಟ್ಟಿ ಮಲಗಿಸಿ, ಅವರನ್ನು ಕಾರಿನಿಂದ ಕೆಳಗೆ ಇಳಿಸಿದ್ದಾರೆ. ಆಗ ಸಾರ್ವಜನಿಕರೂ ವ್ಯಕ್ತಿಯ ಮೇಲೆ ಹಲ್ಲೆ ನಡೆಸಲು ಮುಂದಾಗಿದ್ದರು. ಬಳಿಕ ರಂಪಾಟ ನಡೆಸಿದ ವ್ಯಕ್ತಿಯನ್ನು ವಶಕ್ಕೆ ಪಡೆದುಕೊಂಡು ಕರೆದೊಯ್ದರು.

'ಸಂತೋಷ್ ಸೂಪರ್ ಮಾರ್ಕೆಟ್‌ನಲ್ಲಿ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು. ಆರು ಕೆಲಸ ಕಳೆದುಕೊಂಡು ಮಾನಸಿಕವಾಗಿ ನೊಂದಿದ್ದರು. ದಾಂಪತ್ಯ ಜೀವನದಲ್ಲೂ ಸಮಸ್ಯೆ ಉಂಟಾಗಿತ್ತು. ಇದೇ ಕಾರಣಕ್ಕೆ ರಸ್ತೆಯಲ್ಲಿ ರಂಪಾಟ ನಡೆಸಿರುವ ಸಾಧ್ಯತೆಯಿದೆ' ಎಂದು ಹೇಳಲಾಗಿದೆ.



ಚಳಿಗಾಳಿಗೆ ಮೈಯೊಡ್ಡದಿರಿ!

• ಡಾ. ಸತ್ಯನಾರಾಯಣ ಭಟ್ ಪಿ.

ನವರಾತ್ರಿಯಲ್ಲಿ ಆರಂಭಗೊಂಡ ಶರದೃತು ಇದೀಗ ಅಮಾವಾಸ್ಯೆಗೆ ಕೊನೆಯಾಗುತ್ತದೆ; ಚಳಿಯ ದಿನಗಳ ಹೇಮಂತ ಋತು ಆರಂಭವಾಗುತ್ತದೆ. ಇನ್ನೆರಡು ತಿಂಗಳು ಚಳಿಗಾಲದ ಕುಳಿರ್ಗಾಳಿಗೆ ಮೈ ಚರ್ಮ ಹೊಂದಿಕೊಳ್ಳುವ ಕಠಿಣ ಸವಾಲು. ಬೀಸುಗಾಳಿ ಕೂಡ ಥಂಡಿ. ಹಾಗಾಗಿ ಉಸಿರಾಟದ ತೊಂದರೆ ಏರುಮುಖ. ಶ್ವಾಸಕೋಶಗಳಲ್ಲಿ ಲೋಳ್ಪದರದ ಉರಿಯೂತದ ದೆಸೆಯಿಂದ ಎಳೆಗೂಸುಗಳಿಗೆ ಘುರಘುರ ಸದ್ದಿನ ತೊಡಕು. ಇಲ್ಲಿದೆ ಈ ಸಮಸ್ಯೆಗಳಿಗೆ ಆಯುರ್ವೇದ ಸಂಹಿತೆಗಳ ಅನುಭವದ ಉಪಚಾರಗಳು:

- ಮೀಯುವ ಹಬ್ಬದ ದೀವಳಿಗೆಯಿಂದ ಆರಂಭವಾಗುವ ಸುದೀರ್ಘ ಕತ್ತಲೆಯ ದಿನಗಳ ಅವಧಿ ಈಗಂತೂ ಹೆಚ್ಚುತ್ತಲೇ ಇದೆ. ಬೇಗ ಉಂಡು ಮಲಗುವ ಅಭ್ಯಾಸವಿದ್ದರಂತೂ ಬೆಳಗಾಗುತ್ತಲೇ ಅತೀವ ಹಸಿವೆ ಕಾಣಿಸಿಕೊಳ್ಳುತ್ತದೆ. ಆದ್ದರಿಂದ ನಾವು 'ಗುರು', ಎಂದರೆ ನಿಧಾನವಾಗಿ ಪಚನವಾಗುವ ಆಹಾರವನ್ನು ತಿನ್ನುವುದು ಉತ್ತಮ. ಬೀಸುಗಾಳಿಗೆ ಕಿಚ್ಚು ಹೆಚ್ಚುವಂತೆ ಜಠರಾಗ್ನಿಯೂ ಹೆಚ್ಚುವುದು ಸಹಜ. ಸುಡಲು ಇಂಧನ ಇಲ್ಲವಾದರೆ ಧಾತುಗಳು ಕೂಡ ಪಚನವಾಗುವುದು ಎಂಬ ಎಚ್ಚರಿಕೆಯ ಮಾತು ವಾಗ್ಭಟರದು. ದಕ್ಷಿಣಾಯನ ಋತುಗಳಿಗೆ ಅನ್ವಯವಾಗುವಂತೆ 'ಗುರುಆಹಾರ', ಎಂದರೆ ನಿಧಾನವಾಗಿ ಅರಗುವಂತಹ ಆಹಾರ ಸೇವಿಸುವುದು ಸೂಕ್ತ. ಕಡುಬು, ಕಜ್ಜಾಯಗಳು, ಗೋಧಿಯ ಅಡುಗೆಗಳಿಗೆ ಪ್ರಾಶಸ್ತ್ಯ.

> ಚಳಿಗಾಲ ಆರಂಭವಾಗಿದ್ದು, ದೇಹವನ್ನು ಬೆಚ್ಚಗಿಡಲು ಅಗತ್ಯವಿರುವ ಪೋಷಕಾಂಶಗಳನ್ನು ಸೇವಿಸುವುದು ಒಳಿತು

- ಭೂಮಿಯು ತಂಪಾಗುವುದು. 'ಸೋಮ'. ಎಂದರೆ ಚಂದ್ರನ ಶಕ್ತಿ ಈ ಋತುವಿನಲ್ಲಿ ಪ್ರಬಲ. ಮಕರ ಸಂಕ್ರಮಣ ಪರ್ಯಂತ ಸೋಮಶಕ್ತಿಯ ದೆಸೆಯಿಂದ ದೇಹದ ಬಲ ಹೆಚ್ಚು. ಹಾಗೆಂದು ಬೀಸುವ ಕುಳಿರ್ಗಾಳಿಗೆ ಎದುರು ನಡಿಗೆಗೆ ಆಯುರ್ವೇದ ಮನ್ನಣೆ ಕೊಡದು. ಬೆಚ್ಚನೆ ಬಟ್ಟೆ ಧರಿಸಿ, ನಿಧಾನದ ನಡಿಗೆ ಮಾಡುವುದು ಉತ್ತಮ.
- ಚರ್ಮದ ಬಿರುಸಿನ ಮತ್ತು ಬಿರುಕಿನ ಸಮಸ್ಯೆ ಈ ದಿನಗಳಲ್ಲಿ ಹೆಚ್ಚು. ಹಾಗಾಗಿ ದೀವಳಿಗೆಗೆ ಶುರುಮಾಡುವ ನೆತ್ತಿ, ಮೈ, ಕೈ, ಕಾಲುಗಳ ಅಭ್ಯಂಜನದಿಂದ ಚರ್ಮದ ಕಾಂತಿ ಮತ್ತು ಆರೋಗ್ಯ ಕಾಪಾಡಲು ಶಕ್ಯ. ಬೆವರದ ಚರ್ಮ ರಂಧ್ರಗಳಿಗೆ ಹದ ಬಿಸಿ ತೈಲ ಮಾಲೀಶು ಒಳಿತು. ಅನಂತರ ಹದ ಬಿಸಿ ಸ್ನಾನದಿಂದ ಆರೋಗ್ಯ ವೃದ್ಧಿ.
- ಸಿಹಿ ಮತ್ತು ಹುಳಿರಸದ ಹೇರಳ ಬಳಕೆಯಿಂದ ಹಸಿವಿನ ತೀವ್ರತೆ ಇಳಿಕೆ. ನಿಂಬೆಪಾನಕ, ಮಾದಳ ಹುಳಿರಸದ ಪಾನಕ, ಮುರುಗಲ (ಕೋಕಂ), ವಾಟೆಹುಳಿಯ ಸಾರು, ಷರಬತ್ತು ಕಾಲಕಾಲಕ್ಕೆ ಸೇವಿಸಲಾದೀತು. (ಹುಣಿಸೆಯ ಬದಲಿಗೆ ಟೊಮೆಟೊ ಬಳಸದಿರಿ. ಅದರಲ್ಲಿರುವ ಅತಿ ಯೂರಿಕ್ ಅಮ್ಲವು ಮೂತ್ರಕೋಶದ ಕಲ್ಲು, ಕೀಲುಗಂಟಿನ ಸಮಸ್ಯೆಗೆ ಹೆದ್ದಾರಿ.)
- ಹೇಗಿದ್ದರೂ ಹೊಸ ಧಾನ್ಯಗಳು ಕಟಾವಣೆಯಾಗಿರುವ ಸುಗ್ಗಿಕಾಲ. ಹಾಗಾಗಿ ಅವುಗಳನ್ನು ಬಳಸಲು ಹೇಮಂತ ಋತುವಿನ ಚಳಿದಿನಗಳು ಸೂಕ್ತ. ಹೊಸ ಎಳ್ಳಿನ ಎಣ್ಣೆಯಿಂದ ಮಾಲೀಷು ಉತ್ತಮ.
- ಉದ್ದು ಮತ್ತು ಕಬ್ಬಿನ ಹಾಲಿನ ಭಕ್ಷ್ಯಗಳು ಚಳಿಯ ದಿನಗಳಿಗೆ ಹಿತವಾದವು; ಹೆಚ್ಚು ಕ್ಯಾಲೊರಿಯನ್ನೂ ಒದಗಿಸುತ್ತವೆ.
- ಸಂಜೆಯ ವೇಳೆಯಾಗಲಿ, ಮುಂಜಾನೆಯಾಗಲಿ. ಸ್ನಾನ, ಕೈಕಾಲು ಮುಖ ಉಳಿದ ಪ್ರಕ್ಷಾಳನ ಕೆಲಸಗಳಿಗೂ ಹದ ಬಿಸಿನೀರನ್ನು ಬಳಸುವುದು ಉತ್ತಮ. ಅತಿ ಬಿಸಿ ಬಳಸಿದರೆ ಚರ್ಮದ ಬಿರುಸುತನ ಹೆಚ್ಚಾಗುತ್ತದೆ.
- ವಿರಾಮ ಕಾಲವಿರಲಿ, ಕೆಲಸದ ಪಾಳಿಯಿರಲಿ. ಧರಿಸುವ ಬಟ್ಟೆ ಚರ್ಮದ ಬಿಸಿತನ ಕಾಪಾಡುವ ಅಗತ್ಯವಿದೆ. ನಿರಂತರ ಎ.ಸಿ. ಬಳಕೆಯಿಂದ ಚರ್ಮಾರೋಗ್ಯಕ್ಕೆ ಹಾನಿ ಖಂಡಿತ.
- ಪ್ರಖರ ಸೂರ್ಯರಶ್ಮಿಯಿಂದ ದೇಹವನ್ನು ಕಾಪಾಡಿಕೊಳ್ಳಿರಿ. ಸಂಜೆಯ ಬಿಸಿಲಿಗೆ ಮೈ ಒಡ್ಡಿರಿ.
- ಮಲಗುವ ಕೋಣೆಯ ಶಾಖ ಕಾಪಾಡಲು ಧೂಪನ ವಿಧಾನ ಉತ್ತಮ. ಅಗ್ಗಿಷ್ಟಿಕೆ, ಎಂದರೆ ಕೆಂಡದ ಕುಂಡದಲ್ಲಿ ಗಂಧ, ಚಂದನ, ರಾಳದ ಪುಡಿ ಉದುರಿಸಿ ಕೋಣೆ ಬೆಚ್ಚನೆ ಇರಿಸುವ ವಿಧಾನ ಒಳಿತು.
- ಎಳೆಯ ಮಕ್ಕಳ ಘುರಘುರ ಸಪ್ಪಳ ಸಹಿತ ಕೆಮ್ಮನ್ನು ಪರಿಹರಿಸಲು ಈ ಉಪಾಯ ಪ್ರಯತ್ನಿಸಿರಿ. ಸೌಟಿನಲ್ಲಿ ಎಳ್ಳೆಣ್ಣೆ ಮತ್ತು ತುಪ್ಪ ಬೆರಸಿ ಬಿಸಿ ಮಾಡಿರಿ. ನೆತ್ತಿ ಮೇಲೆ ಹದ ಬಿಸಿ ಹಚ್ಚಿರಿ. ಕೂಡಲೇ ಮೀಯಿಸಿರಿ. ಬೆಚ್ಚನೆ ಬಟ್ಟೆ ಹಾಕಿ ಮಗುವಿಗೆ ಚೆನ್ನಾಗಿ ಹೊದ್ದು ಮಲಗಿಸಿರಿ. ಮೂಗುಕಟ್ಟುವ ತೊಂದರೆ ಪರಿಹಾರವಾಗುತ್ತದೆ.
- ನಡುರಾತ್ರಿಯ ವೇಳೆ ಯಾರಿಗಾದರೂ ಉಸಿರಾಟದ ತೊಂದರೆ ಕಂಡರೆ ಬಿಸಿಮಾಡಿದ ಎಳ್ಳೆಣ್ಣೆ ಮತ್ತು ಉಪ್ಪಿನ ಮಾಲೀಶನ್ನು ಎದೆ, ಬೆನ್ನಿನ ಭಾಗಕ್ಕೆ ಮಾಡುವುದು ಉತ್ತಮ. ಅನಂತರ ಬಿಸಿನೀರಿನ ಶಾಖದಿಂದ ತುಸು ನಿರಾಳ. ❖



ತಲೆಸುತ್ತು ಲಕ್ಷಣ ಒಂದು ಕಾರಣ ಹಲವು!

ತಲೆಸುತ್ತು ಕಂಡುಬಂದಾಗ ಮನೆಮದ್ದು ಮಾಡುವುದಕ್ಕಿಂತಲೂ ಅದರ ಹಿಂದಿರುವ ಸೂಕ್ತ ಕಾರಣವನ್ನು ತಿಳಿದುಕೊಂಡು, ಚಿಕಿತ್ಸೆ ಪಡೆಯುವುದು ಉತ್ತಮ

• ಡಾ. ವಿನಯ ಶ್ರೀನಿವಾಸ್

ದೂರದ ಊರಿನಲ್ಲಿದ್ದ ಚಿಕ್ಕಮ್ಮನ ಮಗಳು ಕರೆ ಮಾಡಿ, 'ಅಕ್ಕ ನೀವು ಕಳೆದ ಸಲ ನನಗೆ ತಲೆಸುತ್ತು ಬಂದಾಗ ಉಪ್ಪುಸಕ್ಕರೆ ಹಾಕಿ ಶರಬತ್ತು ಮಾಡಿ ಕುಡಿ, ಸ್ವಲ್ಪ ಉಪ್ಪಿನಕಾಯಿಯನ್ನು ಚಪ್ಪರಿಸು, ನೀರನ್ನು ಹೆಚ್ಚಾಗಿ ಕುಡಿ, ಸರಿ ಹೋಗಬಹುದು ಎಂದಿದ್ದೀರಿ. ಹಾಗೆ ಮಾಡಿ ಸ್ವಲ್ಪ ಹೊತ್ತಿನ ಬಳಿಕ ತಲೆಸುತ್ತು ಕಡಿಮೆಯಾಗಿ ಸಹಜ ಸ್ಥಿತಿಗೆ ಬಂದಿದ್ದೆ. ಈಗ ಮನೆಯವರು ಬೆಳಿಗ್ಗೆಯಿಂದ ತಲೆ ಸುತ್ತುತ್ತಿದೆ ಎಂದಾಗ ನೀವು ನನಗೆ ಅಂದು ಹೇಳಿದ್ದನ್ನೇ ಪುನರಾವರ್ತಿಸಿದ್ದೆ. ಆದರೆ ಅವರಿಗೆ ತಲೆಸುತ್ತು ಕಡಿಮೆಯಾಗ್ತಿಲ್ಲ. ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕೇ?' ಎಂದು ಕೇಳಿದ್ದಳು. ನಾನು 'ತಲೆಸುತ್ತು ಬರುವುದಕ್ಕೆ ಕಾರಣಗಳು ಹಲವು. ನಿರ್ಲಕ್ಷಿಸದೆ ಒಮ್ಮೆ ಹತ್ತಿರದ ವೈದ್ಯರ ಬಳಿ ಕರೆದುಕೊಂಡು ಹೋಗು, ಪರೀಕ್ಷಿಸಿ ಸಲಹೆಯನ್ನು ಕೊಡುತ್ತಾರೆ' ಎಂದಿದ್ದೆ.

ಹೌದು, ತಲೆಸುತ್ತುವಿಕೆ, ಲಕ್ಷಣ ಒಂದೇ ಆದರೂ ಕಾರಣಗಳು ಹಲವು.

- ಊಟ ಅಥವಾ ಉಪಾಹಾರ ಸೇವಿಸುವ ಸಮಯ ಮೀರುತ್ತಿದ್ದಂತೆ ಎಷ್ಟೋ ಜನರಿಗೆ ತಲೆಸುತ್ತು ಬಂದಂತಾಗುವುದು ಸಹಜ. ಶರೀರದಲ್ಲಿ ರಕ್ತದ ಶರ್ಕರ ಪಿಷ್ಟಾಂಶ ಕಡಿಮೆಯಾದಾಗ ಮಿದುಳಿನ ಜೀವಕೋಶಗಳಿಗೆ ಸಮರ್ಪಕ ಶಕ್ತಿ ದೊರೆಯದೆ ವ್ಯಕ್ತಿಯು ತಲೆಸುತ್ತುವಿಕೆಯಿಂದ ಬಳಲುವುದು ಸರ್ವೇ ಸಾಮಾನ್ಯ. ಅದರಲ್ಲಿಯೂ ಮಧುಮೇಹಿಗಳು ರಕ್ತದ ಶರ್ಕರ ಪಿಷ್ಟಾಂಶವನ್ನು ನಿಯಂತ್ರಿಸಲು ಮಾತ್ರೆ ಅಥವಾ ಇನ್ಸುಲಿನ್ ಬಳಸುವುದರಿಂದ ಸಾಮಾನ್ಯರಿಗಿಂತಲೂ ಬಹುಬೇಗನೆ ಶರೀರದಲ್ಲಿ ಆ ಅಂಶ ಕಡಿಮೆಯಾಗಿ ವ್ಯಕ್ತಿಗೆ ತಲೆಸುತ್ತುವಿಕೆ ಜೊತೆಗೆ ಕಣ್ಣು ಕತ್ತಲೆ ಬಂದಂತೆಯೂ ಆಗಬಹುದು. ಕೂಡಲೇ ಅವರಿಗೆ ಚಾಕಲೇಟ್ ಅನ್ನು ಚಪ್ಪರಿಸಲು ತಿಳಿಸಬೇಕು ಅಥವಾ ಸ್ವಲ್ಪವೇ ಸಕ್ಕರೆ ಬೆರೆಸಿದ ನೀರನ್ನು ಕೊಟ್ಟು ನಂತರ ಆಹಾರಸೇವನೆಯನ್ನು ಮಾಡಲು ಸೂಚಿಸಬೇಕು.
- ಶಾಲಾ ವಿದ್ಯಾರ್ಥಿಗಳಲ್ಲಿ ದೀರ್ಘ ಸಮಯದವರೆಗೆ ದೈಹಿಕ ಶಿಕ್ಷಣ ಅಥವಾ ಪ್ರಾರ್ಥನೆಗಾಗಿ ಒಂದೇ ಭಂಗಿಯಲ್ಲಿ ನಿಂತಾಗ ತಲೆಸುತ್ತು ಬರುವುದಿದೆ. ಮಿದುಳಿಗೆ ರಕ್ತಪರಿಚಲನೆಯ ಕೊರತೆ ಉಂಟಾಗುವುದು ಇದಕ್ಕೆ ಕಾರಣ. ಸಾಮಾನ್ಯವಾಗಿ ಆ ಲಕ್ಷಣ ಕಂಡು ಬಂದ ಕೂಡಲೇ ಅವರನ್ನು ಸಮತಟ್ಟಾದ ನೆಲದ ಮೇಲೆ ಅಥವಾ ಬೆಂಚಿನ ಮೇಲೆ ಮಲಗಿಸಿ ಎರಡು ಕಾಲುಗಳನ್ನು ಸ್ವಲ್ಪ ಎತ್ತರಕ್ಕೆ ಎತ್ತುವುದರಿಂದ ಮಿದುಳಿಗೆ ರಕ್ತ ಪರಿಚಲನೆ ಸುಧಾರಿಸಿ ತಲೆಸುತ್ತುವಿಕೆ ಕಡಿಮೆಯಾಗಬಹುದು.
- ರಕ್ತದೊತ್ತಡ ಸಾಮಾನ್ಯ ಮಟ್ಟಕ್ಕಿಂತ ಕಡಿಮೆಯಾದಾಗಲೂ ಅಥವಾ ಹೆಚ್ಚಾದಾಗಲೂ ತಲೆಸುತ್ತು ಕಾಣಿಸಿಕೊಳ್ಳಬಹುದು. ರಕ್ತದೊತ್ತಡವನ್ನು ಅಳೆದು ನೋಡದೆಯೆ ಅಥವಾ ರೋಗಿಯ ಪೂರ್ವಾಪರ ಮತ್ತು ಇತರ ಲಕ್ಷಣಗಳನ್ನು ತಿಳಿಯದಿದ್ದರೆ ಇದನ್ನು ಊಹಿಸುವುದು ಸ್ವಲ್ಪ ಕಷ್ಟ. ಹಲವರಲ್ಲಿ ಪದೇ ಪದೇ ರಕ್ತದೊತ್ತಡ ಕಡಿಮೆಯಾಗುವ ಸಮಸ್ಯೆಯನ್ನು ನೋಡುತ್ತೇವೆ. ಇದಕ್ಕೆ ಕೆಲವೊಮ್ಮೆ ನಿಖರವಾದ ಕಾರಣ ತಿಳಿಯದೆ ಹೋಗಬಹುದು. ಅಂತಹವರು ಹೆಚ್ಚು ನೀರು, ಉಪ್ಪಿನಾಂಶವಿರುವ ಬಿಸ್ಕೆಟ್ಟುಗಳು, ಉಪ್ಪಿನಕಾಯಿ, ಉಪ್ಪು-ಸಕ್ಕರೆ ಹಾಕಿದ ಶರಬತ್ತುಗಳನ್ನು ಸೇವಿಸುವುದರಿಂದ ತಲೆಸುತ್ತಿನ ಲಕ್ಷಣಗಳು ನಿಯಂತ್ರಣಕ್ಕೆ ಬರಬಹುದು.
- ರಕ್ತದೊತ್ತಡ ಹೆಚ್ಚಾದಾಗ ಕಾಣಿಸಿಕೊಳ್ಳುವ ತಲೆಸುತ್ತುವಿಕೆಗೆ ವೈದ್ಯರ ತಪಾಸಣೆ, ಸಲಹೆ ಮತ್ತು ಚಿಕಿತ್ಸೆ ಅತ್ಯಗತ್ಯ. ಅಧಿಕ ರಕ್ತದೊತ್ತಡದಿಂದ ಬಳಲುವ ವ್ಯಕ್ತಿ ಅದಕ್ಕಾಗಿ ತೆಗೆದುಕೊಳ್ಳುವ ಮಾತ್ರೆಯನ್ನು ತಪ್ಪಿಸಿದಾಗಲೂ ಈ ರೀತಿಯ ತಲೆ ಸುತ್ತು ಕಾಣಿಸಿಕೊಳ್ಳಬಹುದು. ಸಮಯಕ್ಕೆ ಸರಿಯಾಗಿ ಬಿ.ಪಿ. ಮಾತ್ರೆಗಳನ್ನು ಸೇವಿಸುವುದು ಬಹಳ ಮುಖ್ಯ.
- ವ್ಯಕ್ತಿ ನಿರ್ಜಲೀಕರಣ ಸಮಸ್ಯೆಯಿಂದ ಬಳಲುವಾಗಲೂ ತಲೆ ಸುತ್ತು ಕಾಣಿಸಿಕೊಳ್ಳುವುದಿದೆ. ಬಿಸಿಲಿನಲ್ಲಿ ನೀರು ಅಥವಾ ದ್ರವಾಂಶವನ್ನು ಸಾಕಷ್ಟು ಸೇವಿಸದೆಯೇ ಹೆಚ್ಚು ಸಮಯ ಅಡ್ಡಾಡಿದಾಗ ತಲೆ ಸುತ್ತು ಬಂದು ವ್ಯಕ್ತಿ ನಿತ್ರಾಣಗೊಳ್ಳಬಹುದು. ಕೂಡಲೇ ನೀರು, ಶರಬತ್ತು ಹಾಗೂ ಎಳನೀರಿನ ಸೇವನೆ ಸಮಸ್ಯೆಯನ್ನು ನಿಯಂತ್ರಿಸುತ್ತದೆ.
- ಶರೀರದ ಸಮತೋಲನವನ್ನು ಕಾಪಾಡುವ ಅಂಗಾಂಶಗಳಲ್ಲಿ ಒಳಕಿವಿಯ ಪಾತ್ರ ಮಹತ್ವದ್ದು. ಒಳಕಿವಿಯಲ್ಲಿರುವ ಅಂಗಾಂಶಗಳಲ್ಲಿ ಉರಿಯೂತ ಅಥವಾ ಮತ್ತಿತರ ದೋಷಗಳು ಕಂಡು ಬಂದಾಗಲೂ ವ್ಯಕ್ತಿ ತಲೆಸುತ್ತುವಿಕೆಯಿಂದ ಬಳಲುತ್ತಾನೆ. ಜೊತೆಯಲ್ಲಿ ವಾಂತಿ, ವಾಕರಿಕೆ, ನಡೆಯುವಾಗ ಸಮತೋಲನ ತಪ್ಪಿದಂತೆಯೂ ಆಗಬಹುದು. ತಲೆಯನ್ನು ಆಚೀಚೆ ಚಲಿಸಿದಾಗ ಸಮಸ್ಯೆ ತೀವ್ರವಾಗುವುದು ಕೂಡ ಇಲ್ಲಿ ಸಾಮಾನ್ಯ. ಇಂತಹ ಲಕ್ಷಣಗಳು ಕಂಡು ಬಂದಾಗ ಕಿವಿ ಮೂಗು ಗಂಟಲು ತಜ್ಞರ ಬಳಿ ಸಲಹೆ ಮತ್ತು ಚಿಕಿತ್ಸೆ ಅತ್ಯಗತ್ಯ. ತಜ್ಞರು ಮಾಡುವ ಕೆಲವು ಸರಳ ತಂತ್ರಗಳಿಂದ ಸಮಸ್ಯೆ ಶಾಶ್ವತವಾಗಿ ನಿಯಂತ್ರಣಕ್ಕೆ ಬರಬಹುದು.
- ಮಿದುಳಿನ ಒಂದು ಭಾಗವಾದ ಕಿರು ಮಿದುಳು ಕೂಡ ಶರೀರದ ಸಮತೋಲನವನ್ನು ಕಾಪಾಡುವಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಆ ಭಾಗದಲ್ಲಿ ಉರಿಯೂತ, ಗಡ್ಡೆ ಅಥವಾ ರಕ್ತಪರಿಚಲನೆಯಲ್ಲಿ ವ್ಯತ್ಯಯವಾದಾಗಲೂ ಈ ಸಮಸ್ಯೆ ಕಾಣಿಸಬಹುದು. ಒಮ್ಮೊಮ್ಮೆ ಇದು ಪಾರ್ಶ್ವವಾಯುವಿನ ಲಕ್ಷಣವೂ ಇರಬಹುದು. ಇಂತಹ ಸಂದರ್ಭದಲ್ಲಿ ನರರೋಗ ತಜ್ಞರನ್ನು ಭೇಟಿ ಮಾಡಿ ತಪಾಸಣೆಗೆ ಒಳಗಾಗಬೇಕು. ಹೆಚ್ಚಿನ ಸಂದರ್ಭಗಳಲ್ಲಿ ಸಮಸ್ಯೆಗೆ ನಿಖರವಾಧ ಕಾರಣವನ್ನು ತಿಳಿಯಲು ಸಿ.ಟಿ. ಸ್ಕ್ಯಾನ್ ಮತ್ತು ಎಂ. ಆರ್. ಐ. ಸ್ಕ್ಯಾನ್ ಪರೀಕ್ಷೆಗಳು ಅಗತ್ಯವೆನಿಸುತ್ತವೆ. ಸರಿಯಾದ ಕಾರಣವನ್ನು ತಿಳಿದ ನಂತರವೇ ತಜ್ಞರು ಚಿಕಿತ್ಸೆಗೆ ಮುಂದಾಗುತ್ತಾರೆ.
- ರಕ್ತ ಹೀನತೆ, ಮೈಗ್ರೇನ್‌ನಿಂದ ಬಳಲುವವರಲ್ಲಿ ಸಹ ತಲೆಸುತ್ತುವಿಕೆ ಕಾಣಿಸಿಕೊಳ್ಳುತ್ತದೆ. ಮೂಲ ಕಾರಣದ ಚಿಕಿತ್ಸೆ ಸಮಸ್ಯೆಯನ್ನು ಸರಿಪಡಿಸುತ್ತದೆ.
- ಕೆಲವು ಔಷಧಗಳ ಅಡ್ಡಪರಿಣಾಮವೂ ಇರಬಹುದು. ನೀವು ಹೊಸದಾಗಿ ತೆಗೆದುಕೊಳ್ಳಲು ಆರಂಭಿಸಿದ ಮಾತ್ರೆ, ಔಷಧಗಳ ಬಗ್ಗೆಯೂ ನಿಗಾ ಇರಲಿ.
- ಹಿಂದಿನ ರಾತ್ರಿ ಸರಿಯಾದ ನಿದ್ರೆಯಿಲ್ಲದಿದ್ದಾಗಲೂ ವ್ಯಕ್ತಿ ತಲೆಸುತ್ತುವಿಕೆ ಎಂದು ದೂರಬಹುದು.
- ಹೃದಯಾಘಾತವಾಗುವಾಗ ಎದೆನೋವು, ಎದೆಯಲ್ಲಿ ಒತ್ತಿದಂತಹ ಅನುಭವದ ಜೊತೆಯಲ್ಲಿ ತಲೆಸುತ್ತಿದಂತೆಯೂ ಆಗಬಹುದು. ಕೂಡಲೇ ಹತ್ತಿರದ ಸುಸಜ್ಜಿತ ಆಸ್ಪತ್ರೆಗೆ ವ್ಯಕ್ತಿಯನ್ನು ಕರೆದೊಯ್ಯಬೇಕು.

ತಲೆಸುತ್ತುವಿಕೆ ಜೊತೆಯಲ್ಲಿ ಕಾಣಿಸಿಕೊಳ್ಳುವ ಇತರ ಲಕ್ಷಣಗಳನ್ನೂ ಮತ್ತು ಪೂರ್ವಾಪರವನ್ನೂ ವೈದ್ಯರ ಬಳಿ ತಿಳಿಸುವುದು ಬಹಳ ಮುಖ್ಯ. ಇದು ಸಮಸ್ಯೆಯ ಮೂಲಕಾರಣವನ್ನು ತಿಳಿದು ಚಿಕಿತ್ಸೆಯನ್ನು ಸೂಚಿಸಲು ನೆರವಾಗುತ್ತದೆ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಎಸ್ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ–5 ಸಮಾಂತರ ಶ್ರೇಢಿ

ಅಭ್ಯಾಸ 5.1

3) ಇವುಗಳಲ್ಲಿ ಯಾವುವು ಸಮಾಂತರ ಶ್ರೇಢಿಗಳಾಗಿವೆ? ಸಮಾಂತರ ಶ್ರೇಢಿಗಳಾಗಿದ್ದಲ್ಲಿ ಸಾಮಾನ್ಯ ವ್ಯತ್ಯಾಸ ಕಂಡುಹಿಡಿದು ಅದರ ಮುಂದಿನ ಮೂರು ಪದಗಳನ್ನು ಬರೆಯಿರಿ

(xiv) $1^2, 3^2, 5^2, 7^2$ ....

ಪರಿಹಾರ: $a_2 - a_1 = 3^2 - 1^2 = 9-1 = 8$

$a_3 - a_2 = 3^2 - 5^2 = 9-25 = 16$

ಇಲ್ಲಿ $a_2 - a_1 \neq a_3 - a_2$

ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

(xv) $1^2, 5^2, 7^2, 7^3, \ldots$

ಪರಿಹಾರ: $a_2 - a_1 = 5^2 - 1^2 = 25 - 1 = 24$

$a_3 - a_2 = 7^2 - 5^2 = 49 - 25 = 24$

$a_4 - a_3 = 7^3 - 7^2 = 73 - 49 = 24$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 24$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

ಮುಂದಿನ ಮೂರು ಪದಗಳು

$73 + 24 = 97$

$97 + 24 = 121$

$121 + 24 = 145$

ಅಭ್ಯಾಸ 5.2

1. ಕೆಳಗಿನ ಕೋಷ್ಟಕದಲ್ಲಿ ಬಿಟ್ಟಿರುವ ಜಾಗವನ್ನು ತುಂಬಿ. ಸಮಾಂತರ ಶ್ರೇಢಿಯ ಮೊದಲ ಪದ a, ಸಾಮಾನ್ಯ ವ್ಯತ್ಯಾಸ d ಮತ್ತು nನೇ ಪದ a_n ಆಗಿದೆ

	a	d	n	a_n
(i)	7	3	8	......
(ii)	– 18	......	10	0
(iii)	....	– 3	18	– 5
(iv)	– 18.9	2.5	......	3.6
(v)	3.5	0	105	......

ಪರಿಹಾರ:–

(i) $a_n = a + (n-1)d$

$= 7 + (8-1)3$

$= 7 + (7)3$

$= 7 + 21$

$a_n = 28$

(ii) $a_n = a + (n-1)d$

$0 = -18 + (10-1)d$

$18 = 9d$

$d = \frac{18}{9} = 2$

(iii) $a_n = a + (n-1)d$

$-5 = a + (18-1)(-3)$

$-5 = a - 51$

$a = 51 - 5$

$a = 46$

(iv) $a_n = a + (n-1)d$

$3.6 = -18.9 = (n-1)25$

$3.6 + 18.9 = (n-1)(2.5)$

$22.5 = (n-1)(2.5)$

$n - 1 = \frac{22.5}{2.5}$

$= n - 1 = 9$

$n - 1 = 9 + 1$

$n = 10$

(v) $a_n = a + (n-1)d$

$= 3.5 + (105-1)0$

$a_n = 3.5$

	a	d	n	a_n
(i)	7	3	8	28
(ii)	– 18	2	10	0
(iii)	46	– 3	18	– 5
(iv)	– 18.9	2.5	10	3.6
(v)	3.5	0	105	3.5

2. ಕೆಳಗಿನವುಗಳಿಗೆ ಸರಿಯಾದ ಆಯ್ಕೆಯನ್ನು ಆರಿಸಿ ಸಮರ್ಥಿಸಿ

(i) 10, 7, 4 ..... ಈ ಸಮಾಂತರ ಶ್ರೇಢಿಯ 30ನೇ ಪದ

(A) 97 (B) 77
(C) -77 (D) -87

(ii) $-3, -\frac{1}{2}, 2$............ ಈ ಸಮಾಂತರ ಶ್ರೇಢಿಯ 11 ನೇ ಪದ

(A) 28 (B) 22
(C) -38 (D) $-48\frac{1}{2}$

ಪರಿಹಾರ: (i)

$a = 10$ $d = 7 - 10 = -3$ $n = 30$

$a_n = a + (n-1)d$

$a_{30} = 10 + (30-1)(-3)$

$= 10 - 87$

$a_{30} = -77$

ಸರಿಯಾದ ಉತ್ತರ:– (C) -77

ಪರಿಹಾರ: (ii) $a = -3$ $n = 11$

$d = -\frac{1}{2} - (-3) = -\frac{1}{2} + 3 = \frac{5}{2}$

$a_n = a + (n-1)d$

$a_{11} = -3 + (11-1)\left(\frac{5}{2}\right)$

$= -2 + 25 = 22$

ಸರಿಯಾದ ಉತ್ತರ:– (B) 22

3. ಕೆಳಗಿನ ಸಮಾಂತರ ಶ್ರೇಢಿಯ ಬಾಕ್ಸ್‌ಗಳಲ್ಲಿ ಖಾಲಿ ಬಿಟ್ಟಿರುವ ಪದಗಳನ್ನು ತುಂಬಿಸಿ.

(i) 2, ☐ , 26
(ii) ☐, 13, ☐ 3
(iii) 5, ☐ ☐ 91/2
(iv) – 4, ☐ ☐ ☐ ☐
(v) ☐, 38, ☐ ☐ ☐ 22

ಪರಿಹಾರ: (1) ನೀಡಿರುವ ಸಮಾಂತರ ಶ್ರೇಢಿಯ ಸಾಮಾನ್ಯ ವ್ಯತ್ಯಾಸ d ಆಗಿರಲಿ (ಮುಂದಿನ ಸಂಚಿಕೆಯಿಂದ)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATHS

Inverse trigonometric functions

34. Evaluate $\cos\left[\sin^{-1}\frac{1}{4} + \sec^{-1}\frac{4}{3}\right]$

Soln :– $\cos\left[\sin^{-1}\frac{1}{4} + \sec^{-1}\frac{4}{3}\right]$

$\Rightarrow \cos\left[\sin^{-1}\frac{1}{4} + \sec^{-1}\frac{3}{4}\right]$


$\Rightarrow \frac{3}{4}\sqrt{1-\left(\frac{1}{4}\right)^2} - \frac{1}{4}\sqrt{1-\left(\frac{3}{4}\right)^2}$

$\Rightarrow \frac{3}{4}\frac{\sqrt{15}}{4} - \frac{1}{4}\frac{\sqrt{7}}{4}$

$\Rightarrow \frac{3\sqrt{15} - \sqrt{7}}{16}$

35. $\tan^{-1}\left(\frac{1}{4}\right) + \tan^{-1}\frac{2}{9} = \frac{1}{2}\cos^{-1}\left(\frac{3}{5}\right) = \sin^{-1}\left(\frac{1}{\sqrt{5}}\right)$

Soln :– Consider, L.H.S. $= \tan^{-1}\frac{\frac{1}{4}+\frac{2}{9}}{1-\frac{1}{4}.\frac{2}{9}}$



$= \tan^{-1}\frac{\frac{9+8}{36}}{\frac{36-2}{36}}$

$= \tan^{-1}\frac{17}{34} = \tan^{-1}\frac{1}{2}$

Again putting $\frac{1}{2}\cos^{-1}\frac{3}{5} = \theta$

$\Rightarrow \cos 2\theta = \frac{3}{5}$

35. $\tan^{-1}\left(\frac{1}{4}\right) + \tan^{-1}\frac{2}{9} = \frac{1}{2}\cos^{-1}\left(\frac{3}{5}\right) = \sin^{-1}\left(\frac{1}{\sqrt{5}}\right)$

$\Rightarrow \frac{1-\tan^2\theta}{1+\tan^2\theta} = \frac{3}{5} = 5 - 5\tan^2\theta$

$\Rightarrow 3 + 3\tan^2\theta \Rightarrow 8\tan^2\theta = 5 - 3 = 2$

$\Rightarrow \tan^2\theta = \frac{1}{4} \Rightarrow \tan\theta = \frac{1}{2} \Rightarrow \theta = \tan^{-1}\frac{1}{2}$

$\Rightarrow \frac{1}{2}\cos^{-1}\left(\frac{3}{5}\right) = \tan^{-1}\frac{1}{2}$

Again putting $\sin^{-1}\left(\frac{1}{\sqrt{5}}\right) = \theta$

$\Rightarrow \sin\theta = \frac{1}{\sqrt{5}} \Rightarrow \tan\theta = \frac{1}{2} \Rightarrow a = \tan^{-1}\frac{1}{2}$

$\Rightarrow \sin^{-1}\frac{1}{\sqrt{5}} = \tan^{-1}\frac{1}{2}$

Thus $\tan^{-1}\left(\frac{1}{4}\right) + \tan^{-1}\frac{2}{9} = \frac{1}{2}\cos^{-1}\frac{3}{5} = \sin^{-1}\frac{1}{\sqrt{5}}$

36. Solve for x:

$\cos^{-1}\left(\frac{x^2-1}{x^2+1}\right) + \tan^{-1}\left(\frac{2x}{x^2-1}\right) = \frac{2\pi}{3}$

Soln :– Consider, L.H.S.

$\cos^{-1}\left(\frac{1-\frac{1}{x^2}}{1+\frac{1}{x^2}}\right) + \tan^{-1}\left(\frac{\frac{2}{x}}{1-\frac{1}{x^2}}\right)$

Putting $\frac{1}{x} = \tan\theta$

$\therefore$ L.H.S $= \cos^{-1}\left(\frac{1-\tan^2\theta}{1+\tan^2\theta}\right) + \tan^{-1}\left(\frac{2\tan\theta}{1-\tan^2\theta}\right)$

$= \cos^{-1}(\cos 2\theta) + \tan^{-1}(\tan 2\theta)$

$= 2\theta + 2\theta = 4\theta$

$= 4\tan^{-1}\frac{1}{x} = \frac{2\pi}{3}$ (given)

$\Rightarrow \tan^{-1}\frac{1}{x} = \frac{2\pi}{12} = \frac{\pi}{6} \Rightarrow \frac{1}{x}$

$\Rightarrow \tan\frac{\pi}{6} = \frac{1}{\sqrt{3}} \Rightarrow x = \sqrt{3}$

37. Solve for x:

$2\tan^{-1}(\sin x) = \tan^{-1}(2\sec x), x \neq \frac{\pi}{2}$

Soln :– Consider, L.H.S. $= 2\tan^{-1}(\sin x)$

$= \tan^{-1}(\sin x) + \tan^{-1}(\sin x)$

$= \tan^{-1}\left(\frac{2\sin x}{1-\sin^2 x}\right) = \tan^{-1}\left(\frac{2\sin x}{\cos^2 x}\right)$

$= \tan^{-1}(2\tan x \sec x)$

R.H.S $= \tan^{-1}(2\sec x)$

$\therefore 2\tan x \sec x = 2\sec x$

$\Rightarrow \frac{\tan x}{\cos x} = \frac{1}{\cos x} \Rightarrow \tan x = 1$

$\therefore x = \frac{\pi}{4}$

INTEGRALS

Integration is the opposite of Differentiation. It is the process of finding an indefinite integral of a given function f. Integrating f (x) means finding F (x) such that

$\frac{d}{dx}[F(x)] = f(x)$

Basics

1. What is $\int x^n dx$ equal to?

Ans:- $\int x^n dx = \frac{x^{n+1}}{n+1} + c \ (n \neq 1)$

2. What is $\int \frac{1}{x} dx$ equal to?

Ans:- $\int \frac{1}{x} dx = \log x + c$

3. What is $\int \frac{1}{x^n} dx$ equal to?

(Contd...)

ಅತ್ಯಾಚಾರ ಆರೋಪ: ಐವರ ಸೆರೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕುಷ್ಟಗಿ–ಯಲಬುರ್ಗಾ ರಸ್ತೆಯ ಮದ್ದೂರ ಸಮೀಪದಲ್ಲಿ ಘಟನೆ
- ಕೊಡಬೇಕಿದ್ದ ಬಾಕಿ ಹಣ ಪಡೆದುಕೊಳ್ಳಲು ಬಂದಿದ್ದ ಮಹಿಳೆ

ಕೊಪ್ಪಳ: ಕೊಡಬೇಕಿದ್ದ ಬಾಕಿ ಹಣ ಪಡೆದುಕೊಳ್ಳಲು ಹೊಸಪೇಟೆಯಿಂದ ಬಂದಿದ್ದ ಮಹಿಳೆ ಮೇಲೆ ಭಾನುವಾರ ರಾತ್ರಿ ನಾಲ್ವರು ಸಾಮೂಹಿಕ ಅತ್ಯಾಚಾರ ಎಸಗಿದ ಆರೋಪ ಕೇಳಿಬಂದಿದ್ದು, ಜಿಲ್ಲೆಯ ಯಲಬುರ್ಗಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮಹಿಳೆಗೆ ಆರು ತಿಂಗಳ ಹಿಂದೆ ಪರಿಚಿತನಾಗಿದ್ದ ಗದಗ ಜಿಲ್ಲೆಯ ಲಕ್ಷ್ಮಣ ಕಂಚಪ್ಪ ಕರಗುಳಿ ಎಂಬಾತ ₹5,000 ಸಾಲ ಹಿಂತಿರುಗಿಸಬೇಕಿತ್ತು. ಈ ಹಣ ಪಡೆಯಲು ಮಹಿಳೆ ಕರೆ ಮಾಡಿದಾಗ ಲಕ್ಷ್ಮಣ ಕುಷ್ಟಗಿಗೆ ಬರುವಂತೆ ಹೇಳಿದ್ದು, ಅಲ್ಲಿಗೆ ಬಂದ ಮಹಿಳೆಯನ್ನು ಬೈಕ್ ಮೇಲೆ ಕುಷ್ಟಗಿ–ಯಲಬುರ್ಗಾ ರಸ್ತೆಯ ಮದ್ದೂರ ಸಮೀಪದಲ್ಲಿರುವ ಹೊಲದ ಪಾಳು ಬಿದ್ದ ಮನೆಗೆ ಕರೆದುಕೊಂಡು ಹೋಗಿದ್ದಾನೆ.

ಆಗ ಆತನ ಮೂವರು ಸ್ನೇಹಿತರು ಜೊತೆಯಲ್ಲಿ ಬಂದಿದ್ದು, ನಾಲ್ವರು ಅತ್ಯಾಚಾರ ಮಾಡಿದ್ದಾರೆ ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ. ಬಳಿಕ ಮಹಿಳೆಯೇ ಸಹಾಯವಾಣಿ 112ಗೆ ಕರೆ ಮಾಡಿದಾಗ ಪೊಲೀಸರು ನೆರವಿಗೆ ಬಂದಿದ್ದು ತಡರಾತ್ರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ಹೋಂಗಾರ್ಡ್ ಆಯ್ಕೆಗೆ ಮಹಿಳೆ ತಯಾರಿ ನಡೆಸುತ್ತಿದ್ದರು. ಕೃತ್ಯ ಎಸಗುವ ಮೊದಲು ನಾಲ್ವರು ಜನ ಜ್ಯೂಸ್ ಎಂದು ನಂಬಿಸಿ ತನಗೆ ಮದ್ಯ ಕುಡಿಸಿದ್ದಾರೆ ಎಂದು ಮಹಿಳೆ ಹೇಳಿಕೆ ನೀಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

> ಮಹಿಳೆ ಹೋಂ ಗಾರ್ಡ್ ಆಗಿಲ್ಲ. ಅದಕ್ಕೆ ಆಯ್ಕೆಯಾಗಲು ತಯಾರಿ ನಡೆಸುತ್ತಿದ್ದರು. ವೈದ್ಯಕೀಯ ಪರೀಕ್ಷೆ ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಎಲ್ಲ ಆರೋಪಿಗಳನ್ನು ಬಂಧಿಸಲಾಗಿದೆ
> **ಡಾ. ರಾಮ್ ಎಲ್. ಅರಸಿದ್ಧಿ,** ಎಸ್‌ಪಿ

'ಅಪಘಾತವಾಗಿದೆ ಎಂದು ಪತ್ನಿ ಹೇಳಿದ್ದರಿಂದ ಬಂದಿದ್ದೇನೆ. ಪೊಲೀಸ್ ವಿಚಾರಣೆಯಿಂದ ಬಾಕಿ ವಿಷಯ ಗೊತ್ತಾಗಬೇಕಿದೆ' ಎಂದು ಆಕೆಯ ಪತಿ ಮಾಧ್ಯಮಗಳಿಗೆ ತಿಳಿಸಿದರು.

ಐವರ ಬಂಧನ: ಭಾನುವಾರ ಮಧ್ಯರಾತ್ರಿಯೇ ಮೂರು ಪೊಲೀಸ್ ತಂಡಗಳನ್ನು ರಚಿಸಿ ಗದಗ ಜಿಲ್ಲೆಯ ಲಕ್ಷ್ಮಣ ಕಂಚಪ್ಪ ಕರಗುಳಿ, ಜಗಳೂರಿನ ಬಸವರಾಜ ಸಕ್ರಪ್ಪ ಸಿದ್ದಿ, ಯಲಬುರ್ಗಾ ತಾಲ್ಲೂಕಿನ ಹನಮಾಪುರ ಗ್ರಾಮದ ಶಶಿಕುಮಾರ ಮಹಾದೇವಪ್ಪ ಮಸ್ಕಿ ಹಾಗೂ ಅದೇ ಗ್ರಾಮದ ಭೀಮಪ್ಪ ಮಹಾದೇವಪ್ಪ ಮಸ್ಕಿ, ಅತ್ಯಾಚಾರಕ್ಕೆ ಸಹಕರಿಸಿದ ಆರೋಪದ ಮೇರೆಗೆ ಯಲಬುರ್ಗಾ ತಾಲ್ಲೂಕಿನ ಯಮನೂರು ಎಂಬ ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಹಿಳೆಯ ಆರೋಗ್ಯ ಸ್ಥಿತಿಯ ಮೇಲೆ ನಿಗಾ ವಹಿಸಲಾಗಿದ್ದು ತಜ್ಞ ವೈದ್ಯರಿಂದ ನಿರಂತರವಾಗಿ ಮಾಹಿತಿ ಪಡೆದುಕೊಳ್ಳಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಗಳನ್ನು ಕುಷ್ಟಗಿಗೆ ಕರೆದುಕೊಂಡು ಬಂದು ಪಂಚನಾಮೆ ಮಾಡಲಾಯಿತು.

ಬಿಹಾರ ಚುನಾವಣೆ: ಇವಿಎಂ ಅಕ್ರಮ ಕೋರ್ಟ್‌ನಲ್ಲಿ ಪ್ರಶ್ನೆ

ಪಟ್ನಾ (ಬಿಹಾರ): 'ಬಿಹಾರ ವಿಧಾನಸಭಾ ಫಲಿತಾಂಶವು ಜನರ ಆದೇಶವನ್ನು ಪ್ರತಿಬಿಂಬಿಸಿಲ್ಲ, ಎಲೆಕ್ಟ್ರಾನಿಕ್ ಮತಯಂತ್ರಗಳಲ್ಲಿ (ಇವಿಎಂ) ಅಕ್ರಮ ನಡೆದಿದ್ದು, ಪಕ್ಷವು ನ್ಯಾಯಾಲಯದಲ್ಲಿ ಪ್ರಶ್ನಿಸಲಿದೆ' ಎಂದು ಆರ್‌ಜೆಡಿ ತಿಳಿಸಿದೆ.

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ 243 ವಿಧಾನಸಭಾ ಕ್ಷೇತ್ರಗಳ ಪೈಕಿ 202 ಕ್ಷೇತ್ರಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಗೆದ್ದಿತ್ತು. ಆರ್‌ಜೆಡಿ ಅಭ್ಯರ್ಥಿಗಳು ಸ್ಪರ್ಧಿಸಿದ 143 ಕ್ಷೇತ್ರಗಳ ಪೈಕಿ 25 ಕ್ಷೇತ್ರಗಳಲ್ಲಿ ಗೆದ್ದಿದ್ದರು.

'ಬಿಹಾರ ಫಲಿತಾಂಶವು ಅಚ್ಚರಿದಾಯಕ. ಜನರ ಮನಸ್ಥಿತಿಯನ್ನು ಪ್ರತಿಬಿಂಬಿಸುತ್ತಿಲ್ಲ. ಸರ್ಕಾರದ ವಿರುದ್ಧ ತೀವ್ರ ಜನಾಕ್ರೋಶದ ಹೊರತಾಗಿಯೂ, ಆಡಳಿತ ಪಕ್ಷಕ್ಕೆ ಇಂತಹ ಫಲಿತಾಂಶ ದೊರೆತಿದೆ. ಜನರು ಹಾಗೂ ರಾಜಕಾರಣಿಗಳು ಇದನ್ನು ಜೀರ್ಣಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ' ಎಂದು ಆರ್‌ಜೆಡಿ ವಕ್ತಾರ ಶಕ್ತಿಸಿಂಗ್ ತಿಳಿಸಿದ್ದಾರೆ.

'ನೀರೂ ಹರಿಸಿ, ಗೇಟನ್ನೂ ಅಳವಡಿಸಿ'

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಜಲಾಶಯದಿಂದ ಮಾರ್ಚ್‌ವರೆಗೆ ಎರಡನೇ ಬೆಳೆಗೆ ನೀರು ಹರಿಸಬೇಕು, ಜಲಾಶಯಕ್ಕೆ ಎಲ್ಲಾ ಕ್ರಸ್ಟ್‌ಗೇಟ್‌ಗಳನ್ನು ಅಳವಡಿಸಬೇಕು ಎಂಬುದು ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರೈತರು ಕೈಗೊಂಡಿದ್ದ ಆರು ದಿನಗಳ ಪಾದಯಾತ್ರೆ ಸೋಮವಾರ ಇಲ್ಲಿನ ತುಂಗಭದ್ರಾ ಮಂಡಳಿ ಕಚೇರಿ ಎದುರು ಪ್ರತಿಭಟನೆಯೊಂದಿಗೆ ಕೊನೆಗೊಂಡಿತು.

ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆ ಸಂಘಟನೆ ನೇತೃತ್ವದಲ್ಲಿ ಬಳ್ಳಾರಿ ಜಿಲ್ಲೆ ಸಿರುಗುಪ್ಪದ ಕರೂರಿನಿಂದ ನವೆಂಬರ್ 12ರಂದು ಪಾದಯಾತ್ರೆ ಆರಂಭಗೊಂಡಿತ್ತು. ರೈತರು ಪ್ರತಿ ದಿನ 20 ಕಿ.ಮೀ. ಕ್ರಮಿಸಿದರು. 'ನಮ್ಮ ಬೇಡಿಕೆಗೆ ಸ್ಪಂದಿಸದಿದ್ದರೆ, ಮಂಡಳಿ ಕಚೇರಿ ಎದುರು ಅಹೋರಾತ್ರಿ ಧರಣಿ ನಡೆಸುತ್ತೇವೆ' ಎಂಬ ಎಚ್ಚರಿಕೆ ನೀಡಿದರು.



ಹೊಸಪೇಟೆಯಲ್ಲಿ ಸೋಮವಾರ ರೈತ ಮುಖಂಡ ಕರೂರು ಮಾಧವ ರೆಡ್ಡಿ ಅವರು ತುಂಗಭದ್ರಾ ಮಂಡಳಿಯ ಕಾರ್ಯದರ್ಶಿ ಓ.ಆರ್.ಕೆ.ರೆಡ್ಡಿ ಅವರಿಗೆ ಮನವಿ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ರೈತರ ಮನವಿ ಸ್ವೀಕರಿಸಿದ ಮಂಡಳಿಯ ಕಾರ್ಯದರ್ಶಿ ಒ.ಆರ್. ಕೆ.ರೆಡ್ಡಿ, 'ಸರ್ಕಾರದ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

ರೈತ ಮುಖಂಡರಾದ ಕರೂರು ಆರ್.ಮಾಧವ ರೆಡ್ಡಿ, ಜಾಗನೂರು ಮಲ್ಲಿಕಾರ್ಜುನ ರೆಡ್ಡಿ, ಜೆ.ಎನ್. ಕಾಳಿದಾಸ, ಬಸವರಾಜಸ್ವಾಮಿ, ಲೇಪಾಕ್ಷಿ, ಪಂಪನಗೌಡ, ಕರ್ನಾಟಕ ಜನಶಕ್ತಿ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕರಿಯಪ್ಪ ಗುಡಿಮನಿ, ಜನ ಸಂಗ್ರಾಮ ಪರಿಷತ್‌ನ ಶ್ರೀಶೈಲ ಆಲ್ದಳ್ಳಿ ಇದ್ದರು.

ಕಬ್ಬು: ರೈತರ ಧರಣಿ ಐದನೇ ದಿನಕ್ಕೆ

ಬೀದರ್: ಪ್ರತಿ ಟನ್ ಕಬ್ಬಿಗೆ ₹3,200 ದರ ನಿಗದಿಪಡಿಸಬೇಕೆಂದು ಒತ್ತಾಯಿಸಿ ಬೀದರ್ ಜಿಲ್ಲಾ ಸಂಯುಕ್ತ ಕಿಸಾನ್ ಮೋರ್ಚಾದಿಂದ (ರೈತ ಸಂಘಗಳ ಒಕ್ಕೂಟ) ನಗರದ ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿ ಎದುರು ನಡೆಸುತ್ತಿರುವ ಅಹೋರಾತ್ರಿ ಧರಣಿ ಸೋಮವಾರ ಐದನೇ ದಿನಕ್ಕೆ ಕಾಲಿರಿಸಿತು.

ಸಚಿವ ಈಶ್ವರ ಬಿ. ಖಂಡ್ರೆ ಅವರು ಸೋಮವಾರ ಧರಣಿ ಸ್ಥಳಕ್ಕೆ ಭೇಟಿ ನೀಡಿ, ರೈತರ ಮನವೊಲಿಸಲು ಯತ್ನಿಸಿದರು. ಅದು ಫಲಿಸಲಿಲ್ಲ. ಬೇಡಿಕೆ ಈಡೇರುವವರೆಗೆ ಧರಣಿ ಕೈಬಿಡು ವುದಿಲ್ಲ ಎಂದು ರೈತರು ಹೇಳಿದರು. ಸಚಿವರು ನಿರ್ಗಮಿಸಿದರು. ಧರಣಿ ಮುಂದುವರೆಸಿದರು.

ಕಲಬುರಗಿ ವರದಿ: ಕಬ್ಬು ದರ ನಿಗದಿ ವಿಷಯ ಕಗ್ಗಂಟಾಗಿಯೇ ಮುಂದುವರಿದಿದೆ. 'ಬೆಳಗಾವಿ ಹಾಗೂ ಬಾಗಲಕೋಟೆ ಜಿಲ್ಲೆಗಳ ಮಾದರಿಯಲ್ಲಿ ಇಳುವರಿ ಆಧರಿಸದೇ ಪ್ರತಿ ಟನ್‌ಗೆ ಕಬ್ಬಿಗೆ ₹ 3,300 ದರ ನೀಡಬೇಕು' ಎಂದು ಆಗ್ರಹಿಸಿ ಕಬ್ಬು ಬೆಳೆಗಾರರ ರೈತ ಸಂಘಟನೆಗಳ ಒಕ್ಕೂಟದಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಸಚಿವ ಆಕಾಂಕ್ಷಿಗಳಿಂದ ಸಿ.ಎಂ.ಗೆ ಅಹವಾಲು

ಸಂಪುಟದಲ್ಲಿ ಮತ್ತೊಮ್ಮೆ ಅವಕಾಶ ನೀಡುವಂತೆ ಬೇಡಿಕೆ ಇಟ್ಟ ಕೆ.ಎನ್.ರಾಜಣ್ಣ; ಸಿದ್ದರಾಮಯ್ಯ ಜತೆ ಒಂದೂವರೆ ಗಂಟೆ ಮಾತುಕತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಬೆಳಿಗ್ಗೆ ತಮ್ಮ ನಿವಾಸದಿಂದ ದೆಹಲಿಗೆ ಹೊರಡಲು ಮುಂದಾಗುತ್ತಿದ್ದಂತೆ, ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿರುವ ಮಾಜಿ ಸಚಿವ ಕೆ.ಎನ್. ರಾಜಣ್ಣ, ಶಾಸಕರಾದ ಎ.ಎಸ್. ಪೊನ್ನಣ್ಣ, ಬಿ.ಆರ್. ಪಾಟೀಲ, ಅಶೋಕ ಪಟ್ಟಣ, ವಿಜಯಾನಂದ ಕಾಶಪ್ಪನವರ್ ಸೇರಿದಂತೆ ಕೆಲವು ಸಚಿವರು, ಶಾಸಕರು ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ಮುಖ್ಯಮಂತ್ರಿ ಜೊತೆ ಚರ್ಚೆ ನಡೆಸಿದ ಶಾಸಕರು, ಸಂಪುಟ ಸೇರುವ ತಮ್ಮ ಬಯಕೆ ವ್ಯಕ್ತಪಡಿಸಿದ್ದಾರೆ. ಸುಮಾರು ಒಂದೂವರೆ ಗಂಟೆ ಮುಖ್ಯಮಂತ್ರಿ ಜೊತೆ ಮಾತುಕತೆ ನಡೆಸಿದ ಕೆ.ಎನ್. ರಾಜಣ್ಣ ಕೂಡಾ ಮತ್ತೊಮ್ಮೆ ಸಂಪುಟದಲ್ಲಿ ಅವಕಾಶ ನೀಡುವಂತೆ ಬೇಡಿಕೆ ಇಟ್ಟಿದ್ದಾರೆಂದು ಗೊತ್ತಾಗಿದೆ.

ಮುಖ್ಯಮಂತ್ರಿ ಜೊತೆ ದೆಹಲಿಗೆ ತೆರಳಲು ಸಚಿವರಾದ ಎಚ್.ಸಿ. ಮಹದೇವಪ್ಪ ಮತ್ತು ಕೃಷ್ಣ ಬೈರೇಗೌಡ ಅವರೂ ಅದೇ ವೇಳೆ ಅಲ್ಲಿಗೆ ಬಂದಿದ್ದರು.

ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಎಚ್.ಸಿ. ಮಹದೇವಪ್ಪ, 'ಸಚಿವ ಸಂಪುಟ ಪುನರ್‌ರಚನೆ ವಿಚಾರ ಮುಖ್ಯಮಂತ್ರಿ ಮತ್ತು ಹೈಕಮಾಂಡ್‌ಗೆ ಬಿಟ್ಟಿದ್ದು' ಎಂದೂ ಹೇಳಿದರು.

ನಾಯಕತ್ವಕ್ಕೆ ಡಿ.ಕೆ. ಶಿವಕುಮಾರ್ ಪಟ್ಟು ಹಿಡಿದಿರುವ ಬಗ್ಗೆ ಕೇಳಿದಾಗ, 'ಅವರು ನಮ್ಮ ಪಕ್ಷದ ಅಧ್ಯಕ್ಷರು. ರಾಜ್ಯ ರಾಜಕೀಯದಲ್ಲಿನ ಆಗುಹೋಗುಗಳ ಬಗ್ಗೆ ವರಿಷ್ಠರ ಜೊತೆ ಅವರು ಚರ್ಚಿಸಿರಬಹುದು' ಎಂದರು.

ವಿಜಯಾನಂದ ಕಾಶಪ್ಪನವರ್ ಮಾತನಾಡಿ, 'ನಾನು ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿ. ಹೀಗಾಗಿ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದ್ದೇನೆ. ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವುದಿಲ್ಲ. ನಮ್ಮ ಪಾಲಿಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹೈಕಮಾಂಡ್' ಎಂದರು.

'ಸಚಿವ ಸ್ಥಾನ ನೀಡುವಂತೆ ಮಲ್ಲಿಕಾರ್ಜುನ ಖರ್ಗೆ, ಕೆ.ಸಿ. ವೇಣುಗೋಪಾಲ್, ಸುರ್ಜೇವಾಲಾ ಅವರಿಗೂ ಮನವಿ ಮಾಡಿದ್ದೇನೆ' ಎಂದರು.

'ನಾಯಕತ್ವ ಬದಲಾವಣೆ: ಹೈಕಮಾಂಡ್ ನಿರ್ಧಾರ'

'ನಾಯಕತ್ವ ಬದಲಾವಣೆ ವಿಷಯವೇ ಅಪ್ರಸ್ತುತ. ಎಲ್ಲವೂ ಹೈಕಮಾಂಡ್ ನಿರ್ಧಾರ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸದ್ಯಕ್ಕೆ ಮುಖ್ಯಮಂತ್ರಿ ಬದಲಾವಣೆಯ ಚರ್ಚೆಯೇ ಇಲ್ಲ. ಒಂದು ವೇಳೆ ಸಂಪುಟ ಪುನರ್‌ರಚನೆ ಅಥವಾ ಯಾವುದೇ ಪ್ರಮುಖ ರಾಜಕೀಯ ನಿರ್ಧಾರ ಕೈಗೊಳ್ಳುವುದಿದ್ದರೆ, ಮುಖ್ಯಮಂತ್ರಿ ಮತ್ತು ವರಿಷ್ಠರು ಸೇರಿ ತೀರ್ಮಾನಿಸುತ್ತಾರೆ' ಎಂದರು.

ಪಕ್ಷದಲ್ಲಿ ಸಮುದಾಯವಾರು ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಸುವ ಬೇಡಿಕೆ ಬಗ್ಗೆ ಕೇಳಿದ ಪ್ರಶ್ನೆಗೆ, 'ಆ ವಿಷಯದ ಬಗ್ಗೆಯೂ ನನಗೆ ಮಾಹಿತಿ ಇಲ್ಲ. ಅದೆಲ್ಲವೂ ಹೈಕಮಾಂಡ್ ಮಟ್ಟದಲ್ಲಿ ತೀರ್ಮಾನವಾಗುವ ವಿಚಾರ' ಎಂದರು.

'ಸಂಪುಟ ಪುನರ್ ರಚನೆ ಚರ್ಚೆ ಆಗಿಲ್ಲ'

ತುಮಕೂರು: ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಚರ್ಚೆ ನಡೆದಿಲ್ಲ. ಪುನರ್ ರಚನೆಯಾದರೆ ಖಾತೆ ಬದಲಾವಣೆಯ ಸಂದರ್ಭ ಎದುರಾಗಬಹುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರು ಕೇಳಿದ 'ನಿಮ್ಮ ಖಾತೆ ಬದಲಾವಣೆಯ ಸಾಧ್ಯತೆ ಇದೆಯಾ' ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ನನಗೆ ಪೊಲೀಸ್ ಇಲಾಖೆ ಮೇಲೆ ಕೋಪ ಇದ್ದರೆ, ಇಲಾಖೆ ಇಷ್ಟ ಇಲ್ಲದಿದ್ದರೆ ಖಾತೆ ಬದಲಾವಣೆಗೆ ಕೇಳಬೇಕು. ಅದು ಯಾವುದೂ ನಡೆದಿಲ್ಲ' ಎಂದರು. ಸಂಪುಟ ಪುನರ್ ರಚನೆಯ ಕುರಿತು ಯಾವುದೇ ಬೆಳವಣಿಗೆ ನಡೆದಿಲ್ಲ ಎಂದು ಸ್ಪಷ್ಟಪಡಿಸಿದರು.

ಪೊಲೀಸರು ರಾಷ್ಟ್ರೀಯ, ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪದಕ ಪಡೆದರೆ, ಬಡ್ತಿ ಸಮಯದಲ್ಲಿ ಅದನ್ನು ಪರಿಗಣಿಸುತ್ತೇವೆ ಎಂದು ಹೇಳಿದರು.



ಬೆಂಗಳೂರಿನ ಮಾದಾವರದಿಂದ ತುಮಕೂರಿಗೆ ಮೆಟ್ರೊ ವಿಸ್ತರಣೆ ಸಂಬಂಧ ಡಿಪಿಆರ್ ತಯಾರಿಸಲು ಟೆಂಡರ್ ಕರೆಯಲಾಗಿದೆ. 5 ತಿಂಗಳಲ್ಲಿ ವರದಿ ಸಲ್ಲಿಕೆಗೆ ಸೂಚಿಸಲಾಗಿದೆ.
ಜಿ.ಪರಮೇಶ್ವರ, ಗೃಹ ಸಚಿವ


ಸುದ್ದಿ 2 ನಿಮಿಷ

ಖರ್ಗೆ ಜೊತೆ ರಾಜಕೀಯ ಮಾತನಾಡಿಲ್ಲ: ಶಿವಕುಮಾರ್

ಬೆಂಗಳೂರು: 'ಮಲ್ಲಿಕಾರ್ಜುನ ಖರ್ಗೆಯವರ ಜೊತೆ ನಾನು ರಾಜಕೀಯ ಮಾತನಾಡಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ದೇವನಹಳ್ಳಿ ವಿಮಾನ ನಿಲ್ದಾಣದಲ್ಲಿ ಸೋಮವಾರ ಸಂಜೆ ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, 'ಶಾಸಕರು, ಪರಿಷತ್ ಸದಸ್ಯರಾಗಿರುವವರು ಸಚಿವ ಸ್ಥಾನಕ್ಕೆ ಆಸೆಪಡುವುದರಲ್ಲಿ ತಪ್ಪೇನಿದೆ? ಎಲ್ಲರಿಗೂ ಆ ಹಕ್ಕು ಇದೆ' ಎಂದರು.

'ಎಷ್ಟೋ ಜನ, ಏನೂ ಆಗದವರನ್ನು ದಿನ ಬೆಳಗಾಗುವುದರೊಳಗೆ ಹಿಂದೆ ಸಚಿವರಾಗಿ ಮಾಡಿರಲಿಲ್ಲವೇ. ನೆಲೆ ಇಲ್ಲದವರನ್ನು, ಪರಿಷತ್ ಸದಸ್ಯರಾಗಿರುವವರನ್ನು ಸಚಿವರಾಗಿ ಮಾಡುವ ಅವಕಾಶ ಮುಖ್ಯಮಂತ್ರಿಗಿದೆ' ಎಂದರು.



'ಯಾರೆಲ್ಲ ಪಕ್ಷಕ್ಕಾಗಿ ದುಡಿದಿದ್ದಾರೆ, ತ್ಯಾಗ ಮಾಡಿರುತ್ತಾರೆ ಅವರೆಲ್ಲ ಅಧಿಕಾರಕ್ಕಾಗಿ ಆಸೆಪಡುತ್ತಾರೆ. ಅದರಲ್ಲಿ ತಪ್ಪೇನೂ ಇಲ್ಲ' ಎಂದು ಹೇಳಿದರು.

ಶಹಾಪುರ: ಹತ್ತಿ ಮಿಲ್‌ಗೆ ಬೆಂಕಿ ಅಂದಾಜು ₹15 ಕೋಟಿ ನಷ್ಟ

ಶಹಾಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಹುಲಕಲ್ ಗ್ರಾಮ ಸಮೀಪದ ಮಣಿಕಂಠ ಕಾಟನ್ ಜಿನ್ನಿಂಗ್ ಇಂಡಸ್ಟ್ರೀಸ್ ಮಿಲ್‌ನಲ್ಲಿ ಸೋಮವಾರ ಶಾರ್ಟ್ ಸರ್ಕಿಟ್‌ನಿಂದ ಅಗ್ನಿ ಅವಘಡ ಸಂಭವಿಸಿದ್ದು, ಭಾರಿ ಪ್ರಮಾಣದ ಹತ್ತಿ ದಾಸ್ತಾನು ಸುಟ್ಟುಹೋಗಿದೆ.

'ಮಿಲ್‌ನಲ್ಲಿ ಸಂಜೆ 5.30 ರ ಸುಮಾರಿಗೆ ಬೆಂಕಿ ತಗುಲಿ ದಟ್ಟ ಹೊಗೆ ಆವರಿಸಿಕೊಂಡಿತು. ಬೆಂಕಿಯ ಕೆನ್ನಾಲಿಗೆಗೆ ಮಿಲ್‌ನ ಯಂತ್ರೋಪಕರಣಗಳು ಸೇರಿ ಸಾವಿರಾರು ಕ್ವಿಂಟಲ್ ಹತ್ತಿ ದಾಸ್ತಾನು ಸುಟ್ಟುಹೋಗಿದೆ. ಅಂದಾಜು ₹ 15 ಕೋಟಿ ನಷ್ಟ ಆಗಿರಬಹುದು' ಎಂದು ಅಗ್ನಿಶಾಮಕ ಅಧಿಕಾರಿಯೊಬ್ಬರು ತಿಳಿಸಿದರು.

'ಮಿಲ್‌ನಲ್ಲಿ ದಟ್ಟ ಹೊಗೆ ಹಾಗೂ ಬೆಂಕಿಯ ಕೆನ್ನಾಲಿಗೆ ಎತ್ತರದಲ್ಲಿ ಕಾಣಿಸಿಕೊಂಡಿದ್ದರಿಂದ ತಡರಾತ್ರಿವರೆಗೆ ಕಾರ್ಯಾಚರಣೆ ನಡೆದಿದೆ. ಶಹಾಪುರ, ಯಾದಗಿರಿ ಹಾಗೂ ಜೇವರ್ಗಿ ಠಾಣೆಗಳಿಂದ ಅಗ್ನಿಶಾಮಕ ವಾಹನಗಳನ್ನು ತರಿಸಲಾಗಿತ್ತು' ಎಂದರು.

ಬೆಂಕಿ ನಂದಿಸಲು ಅಗ್ನಿಶಾಮಕ ದಳ, ಪೊಲೀಸ್ ಸಿಬ್ಬಂದಿ ಹರಸಾಹಸಪಟ್ಟರು. ಮಿಲ್‌ನ ಸಿಬ್ಬಂದಿ, ಸಾರ್ವಜನಿಕರು ಬೆಂಕಿ ನಂದಿಸುವ ಕಾರ್ಯದಲ್ಲಿ ನೆರವಾದರು. ಜಿಲ್ಲಾ ಅಗ್ನಿಶಾಮಕ ಠಾಣಾಧಿಕಾರಿ ಮನೋಜ ರಾಠೋಡ್, ಮಚ್ಚೇಂದ್ರನಾಥ ನೇತೃತ್ವದ ತಂಡ ಬೆಂಕಿ ನಂದಿಸುವ ಕಾರ್ಯದಲ್ಲಿ ನಿರತವಾಗಿದೆ.

ಸಂಪುಟ ಪುನರ್ ರಚನೆ ಸಂಚಲನ

'ಹೈಕಮಾಂಡ್ ಸೂಚಿಸಿದರೆ ಮುಂದಡಿ'

ಒಂದನೇ ಪುಟದಿಂದ...

'ಸಚಿವ ಸಂಪುಟ ಪುನರ್ ರಚನೆ ಮಾಡುವಂತೆ ನಾಲ್ಕೈದು ತಿಂಗಳ ಹಿಂದೆಯೇ ಹೈಕಮಾಂಡ್ ನಾಯಕರು ಸೂಚಿಸಿದ್ದರು. ಸರ್ಕಾರಕ್ಕೆ ಎರಡೂವರೆ ವರ್ಷ ಪೂರ್ಣಗೊಂಡ ಬಳಿಕ ಪ್ರಕ್ರಿಯೆ ನಡೆಸುತ್ತೇನೆ ಎಂಬುದಾಗಿ ತಿಳಿಸಿದ್ದೆ. ನವೆಂಬರ್ 20ಕ್ಕೆ ಸರ್ಕಾರಕ್ಕೆ ಎರಡೂವರೆ ವರ್ಷ ತುಂಬಲಿದೆ. ಸಚಿವ ಸಂಪುಟಕ್ಕೆ ಸೇರಲು 140 ಶಾಸಕರೂ ಆಕಾಂಕ್ಷಿಗಳು. ಎಲ್ಲರೂ ಸಮರ್ಥರೇ ಇದ್ದಾರೆ' ಎಂದರು.

'ಖರ್ಗೆ ಅವರನ್ನು ಡಿ.ಕೆ. ಶಿವಕುಮಾರ್ ಭೇಟಿ ಮಾಡಿರುವುದು ನನಗೆ ಗೊತ್ತು. ಆದರೆ, ಏನು ಮಾತನಾಡಿದ್ದಾರೆ ಎಂಬ ಬಗ್ಗೆ ಮಾಹಿತಿ ಇಲ್ಲ' ಎಂದು ಅವರು ತಿಳಿಸಿದರು.

ಗುಡುಗಿದ ಡಿ.ಕೆ. ಸಹೋದರರು

ಒಂದನೇ ಪುಟದಿಂದ...

'ಎರಡೂವರೆ ವರ್ಷಗಳ ಹಿಂದೆ ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕು. ಅಧಿಕಾರ ಹಸ್ತಾಂತರದ ಬಗ್ಗೆ ಸ್ಪಷ್ಟ ತೀರ್ಮಾನ ತೆಗೆದುಕೊಳ್ಳಬೇಕು. ಅದಕ್ಕೂ ಮುನ್ನ ಪುನರ್ ರಚನೆಗೆ ಅವಕಾಶ ನೀಡಬಾರದು' ಎಂದು ಒತ್ತಾಯಿಸಿದರು ಎಂದು ಮೂಲಗಳು ಖಚಿತಪಡಿಸಿವೆ.

ಸೋಮವಾರ ಮಧ್ಯಾಹ್ನದವರೆಗೆ ಕರ್ನಾಟಕ ಭವನದಲ್ಲಿ ಇದ್ದ ಅವರು ಮುಖ್ಯಮಂತ್ರಿ ಅವರೊಂದಿಗೆ ಊಟದ ಶಾಸ್ತ್ರ ಮುಗಿಸಿ ಬೆಂಗಳೂರಿಗೆ ನಿರ್ಗಮಿಸಿದರು. ಮಂಗಳವಾರ ರಾತ್ರಿ ಪುನಃ ದೆಹಲಿಗೆ ಬರಲಿದ್ದಾರೆ. ಈ ನಡುವೆ, ಮಾಜಿ ಸಂಸದ ಡಿ.ಕೆ. ಸುರೇಶ್ ಅವರು ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದರು.

ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಲು ಶಿವಕುಮಾರ್ ಕಾಲಾವಕಾಶ ಕೇಳಿದ್ದರು. ಆದರೆ, ಮಧ್ಯಾಹ್ನದವರೆಗೆ ಕಾದರೂ ರಾಹುಲ್ ಕಡೆಯಿಂದ ಪ್ರತಿಕ್ರಿಯೆ ಬರಲಿಲ್ಲ. 'ರಾಹುಲ್ ಅವರು ವಿವಿಧ ಸಭೆಗಳಲ್ಲಿ ಭಾಗಿಯಾಗಿರುವುದರಿಂದ ಭೇಟಿ ಮಾಡಲು ಸಾಧ್ಯವಾಗಲಿಲ್ಲ' ಎಂದು ಶಿವಕುಮಾರ್ ಆಪ್ತರು ತಿಳಿಸಿದರು.

'ಸಚಿವ ಸಂಪುಟ ವಿಸ್ತರಣೆಯಾದರೆ ಡಿ.ಕೆ.ಶಿವಕುಮಾರ್‌ಗೆ ಸಿಗುವುದು ಪಂಗನಾಮ'

'ಸಿ.ಎಂ ವಿಚಾರ: ದೆಹಲಿ ಯಾತ್ರೆ ಏಕೆ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಬದಲಾವಣೆ ಇಲ್ಲ ಎಂದ ಮೇಲೆ ಎಲ್ಲರೂ ದೆಹಲಿಗೆ ತೆರಳಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಏಕೆ ಭೇಟಿಯಾಗುತ್ತಿದ್ದಾರೆ' ಎಂದು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಇದೇ ನವೆಂಬರ್‌ನಲ್ಲಿ ಮುಖ್ಯಮಂತ್ರಿ ಬದಲಾಗಲಿದ್ದಾರೆ ಎಂದು ನಾನು ಹೇಳಿದ್ದೆ. ಆ ರೀತಿ ಇಲ್ಲ ಎಂದು ಕಾಂಗ್ರೆಸ್ ನಾಯಕರು ಹೇಳುತ್ತಲೇ ಇದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತವರ ಸಹೋದರ ದೆಹಲಿಯಲ್ಲೇ ಬೀಡುಬಿಟ್ಟಿದ್ದಾರೆ. ಮುಖ್ಯಮಂತ್ರಿ ಕುರ್ಚಿಗಾಗಿ ಕಾಂಗ್ರೆಸ್‌ನಲ್ಲಿ 'ಮ್ಯೂಸಿಕಲ್ ಚೇರ್' ಸ್ಪರ್ಧೆ ನಡೆಯುತ್ತಿದೆ. ಸಚಿವ ಸಂಪುಟ ವಿಸ್ತರಣೆಯಾದರೆ ಶಿವಕುಮಾರ್‌ಗೆ ಸಿಗುವುದು ಪಂಗನಾಮವಷ್ಟೆ. ದೇವಸ್ಥಾನಗಳಿಗೆ ಹೋಗಿ ಪೂಜೆ ಮಾಡಿಸಿದ್ದೂ ವ್ಯರ್ಥವಾಗಲಿದೆ' ಎಂದು ಟೀಕಿಸಿದರು.

'ಕಬ್ಬು ಬೆಳೆಗಾರರ ಸಮಸ್ಯೆ, ಅತಿವೃಷ್ಟಿ ಸಂತ್ರಸ್ತರಿಗೆ ಪರಿಹಾರ ವಿತರಣೆ ವಿಳಂಬ, ವನ್ಯಜೀವಿ-ಮಾನವ ಸಂಘರ್ಷದಂತಹ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿಲ್ಲ. ಕಾನೂನು ಸುವ್ಯವಸ್ಥೆ ಕುಸಿದಿದೆ. ಜನರ ಕಷ್ಟಕ್ಕೆ ಸ್ಪಂದಿಸಬೇಕಾದ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವರು, ಕಾಂಗ್ರೆಸ್ ಶಾಸಕರಿಗೆ ಕುರ್ಚಿ ಕಿತ್ತಾಟವೇ ಪ್ರಧಾನವಾಗಿದೆ' ಎಂದರು.

'ಪುಟಗಟ್ಟಲೆ ಭಾಷಣ ಮಾಡುವ ಸಿದ್ದರಾಮಯ್ಯ ಜಿಎಸ್‌ಟಿ ಸಮಿತಿಯ ಸಭೆಗೂ ಹೋಗದೆ, ಸಲಹೆ ನೀಡದೆ ಬರೀ ಆರೋಪ ಮಾಡುತ್ತಾರೆ. ಇರುವ ಅವಕಾಶಗಳನ್ನು ಬಳಸಿಕೊಳ್ಳದೆ ಸುಮ್ಮನೆ ಮಾತಾಡುತ್ತಾರೆ. ಕೇಂದ್ರಕ್ಕೆ ಮನವಿ ಮಾಡಿ ಬಂದ ತಕ್ಷಣವೇ ನಾಟಕವಾಡುತ್ತಿದ್ದಾರೆ. ವಂಚನೆಯಾಗಿದೆ ಎಂದು ಆರೋಪ ಹೊರೆಸುತ್ತಾರೆ' ಎಂದು ಆರೋಪಿಸಿದರು.

'ರಾಜ್ಯ ಸರ್ಕಾರಕ್ಕೆ ತಲೆಬುಡ ಇಲ್ಲ'

'ರಾಜ್ಯದಲ್ಲಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರಕ್ಕೆ ತಲೆಯೂ ಇಲ್ಲ, ಬುಡವೂ ಇಲ್ಲ' ಎಂದು ಕೇಂದ್ರ ಸಚಿವ ವಿ. ಸೋಮಣ್ಣ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಸರ್ಕಾರಕ್ಕೆ ಇಚ್ಛಾಶಕ್ತಿಯ ಕೊರತೆ ಇದೆ. ಗಾಂಭೀರ್ಯ ಎನ್ನುವುದು ಮೊದಲೇ ಗೊತ್ತಿಲ್ಲ. ರಾಜ್ಯದ, ದೇಶದ ಸಮಸ್ಯೆಗಳ ಬಗ್ಗೆ ಅರಿವೇ ಇಲ್ಲದಿರುವಂತಹ ಮೊಂಡುತನದ ವ್ಯವಸ್ಥೆಯಲ್ಲಿ ಸಿದ್ದರಾಮಯ್ಯ ಸರ್ಕಾರವಿದೆ' ಎಂದು ಟೀಕಿಸಿದರು.

'ನನ್ನ 50 ವರ್ಷದ ರಾಜಕೀಯ ಜೀವನದಲ್ಲಿ, ಸಿದ್ದರಾಮಯ್ಯ ಅವರ ಕಾಲದಲ್ಲಿ ಇಂತಹ ಕೆಟ್ಟ ವ್ಯವಸ್ಥೆ ಬರುತ್ತದೆ ಎಂದು ನಿರೀಕ್ಷೆ ಮಾಡಿರಲಿಲ್ಲ. ಖಜಾನೆ ಖಾಲಿಯಾಗಿದ್ದು, ಸಿದ್ದರಾಮಯ್ಯ ಬಳಿ ಏನೂ ಇಲ್ಲ' ಎಂದರು.

'ನಮ್ಮ ಸರ್ಕಾರ ಇದ್ದಾಗ ಶೇ 40ರಷ್ಟು ಭ್ರಷ್ಟಾಚಾರದ ಆರೋಪ ಮಾಡಿದ್ದರು. ಈಗ ಶೇ 100ಕ್ಕೂ ಹೆಚ್ಚು ಭ್ರಷ್ಟಾಚಾರ ನಡೆಯುತ್ತಿದೆ' ಎಂದು ದೂರಿದರು.



ಪತ್ತನಂತಿಟ್ಟದಲ್ಲಿ ಅಯ್ಯಪ್ಪನ ದರ್ಶನಕ್ಕೆ ಕಾದು ನಿಂತಿದ್ದ ಭಕ್ತರು —ಪಿಟಿಐ ಚಿತ್ರ

ಅಯ್ಯಪ್ಪನ ದರ್ಶನಕ್ಕೆ ಭಕ್ತರ ದಂಡು

ಶಬರಿಮಲೆ(ಕೇರಳ) (ಪಿಟಿಐ): ಮಲಯಾಳ ವೃಶ್ಚಿಕ ಮಾಸದ ಮೊದಲ ದಿನವಾದ ಸೋಮವಾರ ವಾರ್ಷಿಕ ಮಂಡಲಂ– ಮಕರವಿಳಕ್ಕು ತೀರ್ಥಯಾತ್ರೆ ಆರಂಭವಾಗಿದ್ದು, ನೂರಾರು ಮಂದಿ ಯಾತ್ರಾರ್ಥಿಗಳು ಶಬರಿಮಲೆಯ ಅಯ್ಯಪ್ಪನ ದೇಗುಲಕ್ಕೆ ಭೇಟಿ ನೀಡಿದ್ದಾರೆ.

ಸಾಂಪ್ರದಾಯಿಕವಾದ ಕಪ್ಪು ದಿರಿಸಿನಲ್ಲಿ ಇರುಮುಡಿಯನ್ನು ಹೊತ್ತ ಭಕ್ತರು ಗಂಟೆಗಳ ಕಾಲ ಸಾಲಿನಲ್ಲಿ ನಿಂತು ಅಯ್ಯಪ್ಪನ ದರ್ಶನಕ್ಕೆ ಕಾದಿದ್ದರು. ಹೊಸದಾಗಿ ನೇಮಕಗೊಂಡಿರುವ ಪ್ರಧಾನ ಅರ್ಚಕ ಇ.ಡಿ.ಪ್ರಸಾದ್ ನಂಬೂದಿರಿ ಅವರು ತಂತ್ರಿಗಳ ಉಪಸ್ಥಿತಿಯಲ್ಲಿ ದೇಗುಲದ ಬಾಗಿಲುಗಳನ್ನು ತೆರೆಯುತ್ತಿದ್ದಂತೆಯೇ ಅಯ್ಯಪ್ಪನ ನಾಮ ಸ್ಮರಣೆ ಮುಗಿಲುಮುಟ್ಟಿದೆ ಎಂದು ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ತಿಳಿಸಿದೆ.

ಬೆಳಗ್ಗಿನ ಜಾವ 3 ಗಂಟೆಗೆ ದೇಗುಲದ ಬಾಗಿಲುಗಳನ್ನು ತೆರೆಯಲಾಗಿದ್ದು, ಆಗಿನಿಂದಲೂ ಭಕ್ತರು ಭಾರಿ ಸಂಖ್ಯೆಯಲ್ಲಿ ಸಾಲುಗಳಲ್ಲಿ ನಿಂತಿದ್ದರು. ಮುಂದಿನ ಎರಡು ತಿಂಗಳು ಈ ತೀರ್ಥಯಾತ್ರೆ ನಡೆಯಲಿದ್ದು ಭಕ್ತರು ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಆಗಮಿಸುವ ನಿರೀಕ್ಷೆ ಇದೆ ಎಂದೂ ಮಂಡಳಿ ತಿಳಿಸಿದೆ.

ಹಸೀನಾಗೆ ಮರಣ ದಂಡನೆ

ಒಂದನೇ ಪುಟದಿಂದ...

ಮೂರು ಪ್ರಕರಣಗಳಲ್ಲಿ ಶಿಕ್ಷೆ: ಹಸೀನಾ ಅವರ ವಿರುದ್ಧ ಒಟ್ಟು ಐದು ಪ್ರಕರಣಗಳಿವೆ. ಈ ಪೈಕಿ ಮೂರು ಪ್ರಕರಣಗಳ ಸಂಬಂಧ ಸೋಮವಾರ ಶಿಕ್ಷೆ ಪ್ರಕಟವಾಗಿದೆ.

ಆಗಸ್ಟ್ 5ರಂದು ಅಸೂಲಿಯಾ ಎಂಬಲ್ಲಿ ಆರು ವಿದ್ಯಾರ್ಥಿಗಳ ಹತ್ಯೆಗೆ ಆದೇಶ ನೀಡಿದ್ದ ಪ್ರಕರಣಕ್ಕೆ ಸಂಬಂಧಿಸಿಯೂ ಮರಣ ದಂಡನೆ ವಿಧಿಸಲಾಗಿದೆ. ಆರು ವಿದ್ಯಾರ್ಥಿಗಳ ಮೃತದೇಹಗಳನ್ನು ಪೊಲೀಸರೇ ಸುಟ್ಟಿದ್ದರು. ಈ ವೇಳೆ ಒಬ್ಬ ವಿದ್ಯಾರ್ಥಿಯು ಪೊಲೀಸರ ಗುಂಡಿಗೆ ಬಲಿಯಾಗಿರಲಿಲ್ಲ. ಆತ ಸಜೀವ ದಹನವಾಗಿದ್ದ.

ಶಸ್ತ್ರಾಸ್ತ್ರ, ಹೆಲಿಕಾಪ್ಟರ್ ಮತ್ತು ಡ್ರೋನ್‌ಗಳ ಬಳಕೆ ಮಾಡಿಕೊಂಡು, ವಿದ್ಯಾರ್ಥಿಗಳ ಹತ್ಯೆ ಮಾಡಿರುವ ಆರೋಪದಡಿ ದಾಖಲಾಗಿದ್ದ ಪ್ರಕರಣದಲ್ಲಿ ಹಸೀನಾ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ.

ಹಸೀನಾ ಮತ್ತು ಕಮಾಲ್ ಅವರನ್ನು ತಕ್ಷಣವೇ ಬಾಂಗ್ಲಾದೇಶಕ್ಕೆ ಹಸ್ತಾಂತರಿಸಿ. ಅಪರಾಧಿಗಳಿಗೆ ಆಶ್ರಯ ನೀಡುವುದು ಎರಡೂ ದೇಶಗಳ ಸ್ನೇಹಕ್ಕೆ ಮತ್ತು ನ್ಯಾಯದಾನಕ್ಕೆ ಮಾಡುವ ಅಪಚಾರ ಎಂದೇ ಭಾವಿಸಬೇಕಾಗುತ್ತದೆ. ಜೊತೆಗೆ, ನಮ್ಮ ನಡುವಿನ ಹಸ್ತಾಂತರ ಒಪ್ಪಂದದ ಅನ್ವಯವೂ ಈ ಇಬ್ಬರನ್ನೂ ನಮಗೆ ಹಸ್ತಾಂತರಿಸಲೇಬೇಕು
ಬಾಂಗ್ಲಾದೇಶದ ವಿದೇಶಾಂಗ ಸಚಿವಾಲಯ

ನ್ಯಾಯಮಂಡಳಿಯ ತೀರ್ಪನ್ನು ಭಾರತವು ಗಮನಿಸಿದೆ. ಬಾಂಗ್ಲಾದೇಶವು ನೆರೆಯ ದೇಶವಾಗಿದ್ದು, ಭಾರತವು ಎರಡೂ ದೇಶಗಳ ಜನರ ಹಿತಾಸಕ್ತಿಗೆ ಬದ್ಧವಾಗಿದೆ. ಶಾಂತಿ, ಪ್ರಜಾಪ್ರಭುತ್ವ ಮತ್ತು ಸ್ಥಿರತೆ ವಿಚಾರದಲ್ಲಿಯೂ ನಮಗೆ ಬದ್ಧತೆ ಇದೆ. ನಾವು ಎಲ್ಲರೊಂದಿಗೂ ಸಕಾರಾತ್ಮಕವಾಗಿ ಇರಲಿದ್ದೇವೆ
ಭಾರತದ ವಿದೇಶಾಂಗ ಸಚಿವಾಲಯ

ಪ್ರಕರಣದ ಹಾದಿ

- 2024ರ ಜುಲೈ–ಆಗಸ್ಟ್‌ನಲ್ಲಿ ಪ್ರತಿಭಟನೆ ನಡೆದಿದ್ದು, ಇದೇ ವೇಳೆ ಹಿಂಸಾಚಾರವೂ ನಡೆದಿತ್ತು. ಈ ಬಗ್ಗೆ ದೂರು ದಾಖಲಾಗಿತ್ತು. ಈ ದೂರಿನ ಅನ್ವಯ ಪೊಲೀಸರು ತನಿಖೆ ಆರಂಭಿಸಿದ್ದರು
- 2025ರ ಮೇ ತಿಂಗಳಲ್ಲಿ 135 ಪುಟಗಳ ಆರೋಪಪಟ್ಟಿ ಸಲ್ಲಿಕೆ. ಇದಕ್ಕೆ ಪೂರಕವಾಗಿ 8,747 ಪುಟಗಳ ದಾಖಲೆ ಹಾಗೂ ಸಾಕ್ಷ್ಯಗಳ ಸಲ್ಲಿಕೆ
- ಜುಲೈ 10ಕ್ಕೆ ಆರೋಪಿಗಳ ವಿರುದ್ಧ ದೋಷಾರೋಪ ನಿಗದಿ
- ಆಗಸ್ಟ್ 4ರಿಂದ ವಿಚಾರಣೆ ಆರಂಭ
- ಅಕ್ಟೋಬರ್ 23ಕ್ಕೆ ವಿಚಾರಣೆ ಅಂತ್ಯ
- 453 ಪುಟಗಳ ತೀರ್ಪು ಬರೆದ ನ್ಯಾಯಮಂಡಳಿ

ಎಷ್ಟೇ ಪ್ರಭಾವಶಾಲಿಯಾಗಿರಲಿ, ಅಧಿಕಾರಸ್ಥರೇ ಆಗಿರಲಿ, ಕಾನೂನಿಗಿಂತ ಯಾರೂ ಮೇಲಿಲ್ಲ. ಈ ಮೂಲಭೂತ ತತ್ವವನ್ನು ಇಂದಿನ ತೀರ್ಪು ನಿರೂಪಿಸಿದೆ
ಮೊಹಮ್ಮದ್ ಯೂನುಸ್, ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥ

ರೆಹಮಾನ್ ಮನೆ ಧ್ವಂಸಕ್ಕೆ ಯತ್ನ

ಹಸೀನಾ ಅವರ ತಂದೆ ಬಂಗಬಂಧು ಶೇಖ್ ಮುಜಿಬುರ್ ರೆಹಮಾನ್ ಅವರ ಮನೆಯನ್ನು ಧ್ವಂಸ ಮಾಡಲು ಪ್ರತಿಭಟನಕಾರರು ಸೋಮವಾರ ಮುಂದಾದರು. ಇವರನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್ ಸಿಡಿಸಿ, ಲಾಠಿ ಬೀಸಿದರು. ರೆಹಮಾನ್ ಅವರನ್ನು ಬಾಂಗ್ಲಾದ 'ರಾಷ್ಟ್ರಪಿತ' ಎನ್ನಲಾಗುತ್ತಿತ್ತು. ಆದರೆ, ಈ ಗೌರವವನ್ನು ಮಧ್ಯಂತರ ಸರ್ಕಾರ ಈ ಹಿಂದೆ ವಾಪಸು ಪಡೆದಿದೆ. ಇವರ ಮನೆಯನ್ನು ಸ್ಮಾರಕವನ್ನಾಗಿ ಮಾಡಲಾಗಿತ್ತು.

ರೆಹಮಾನ್ ಅವರ ಮನೆಯನ್ನು ಕೆಡವಲು ಬೆಳಿಗ್ಗೆ 11.30ರ ಸುಮಾರಿಗೆ ಪ್ರತಿಭಟನಕಾರರು ಜೆಸಿಬಿಗಳೊಂದಿಗೆ ಬಂದಿದ್ದರು. ಇದೇ ವೇಳೆ 'ಪಾತಕಿ ಹಸೀನಾ ನಿನಗೆ ಗಲ್ಲಾಗಲಿ' ಎಂದು ಘೋಷಣೆಗಳನ್ನು ಕೂಗಿದರು. ಈ ಮನೆಯ ಸುತ್ತಮುತ್ತಲಿನ ರಸ್ತೆಗಳಲ್ಲಿ ವಾಹನ ಸಂಚಾರವನ್ನು ನಿಷೇಧಿಸಲಾಗಿತ್ತು. ಕಳೆದ ವರ್ಷ ನಡೆದಿದ್ದ ಪ್ರತಿಭಟನೆಯ ವೇಳೆ ಈ ಮನೆಯನ್ನು ಭಾಗಶಃ ನಾಶ ಮಾಡಲಾಗಿದೆ.

ತೆಲಂಗಾಣದ 45 ಮಂದಿ ಸಾವು

ಒಂದನೇ ಪುಟದಿಂದ...

'ನಮ್ಮ ಕುಟುಂಬದ ಆರು ಮಂದಿ ಬಸ್‌ನಲ್ಲಿದ್ದರು. ಕೊನೆಯದಾಗಿ ಅವರ ಜತೆ ಸಂಪರ್ಕ ಸಾಧಿಸಿದಾಗ ಮದೀನಾ ತಲುಪಲು ಎರಡು ಗಂಟೆ ಪ್ರಯಾಣಿಸಬೇಕಿದೆ ಎಂಬ ಮಾಹಿತಿ ನೀಡಿದ್ದರು' ಎಂದು ಹೈದರಾಬಾದ್‌ನ ನಿವಾಸಿ ಮೊಹಮ್ಮದ್ ಸಲ್ಮಾನ್ ತಿಳಿಸಿದರು.

'ದುರಂತದಲ್ಲಿ ಬದುಕುಳಿದ ಏಕೈಕ ವ್ಯಕ್ತಿ ಶೋಯಬ್ ಆಗಿದ್ದು, ಬಸ್‌ನ ಕಿಟಕಿಯ ಗಾಜು ಒಡೆದು ಹೊರ ಬಂದಿದ್ದಾರೆ. ಅವರ ಕೈಗಳಿಗೆ ಸುಟ್ಟ ಗಾಯಗಳಾಗಿವೆ' ಎಂದು ಇನ್ನೊಬ್ಬ ನಿವಾಸಿ ಮೊಹಮ್ಮದ್ ಬುರ್ಹಾನ್ ಹೇಳಿದರು.

ಮೃತರ ನಿಖರ ಸಂಖ್ಯೆ ಬಗ್ಗೆ ಸೌದಿ ಅರೇಬಿಯಾದ ಅಧಿಕಾರಿಗಳು ಅಥವಾ ಕೇಂದ್ರ ಸರ್ಕಾರ ಇದುವರೆಗೆ ಯಾವುದೇ ಅಧಿಕೃತ ಮಾಹಿತಿ ನೀಡಿಲ್ಲ.

ಸೌದಿಗೆ ಪ್ರಯಾಣಿಸಲಿರುವ ಅಜರ್ ನೇತೃತ್ವದ ತಂಡ: ಮೃತರ ಕುಟುಂಬದ ಸದಸ್ಯರು, ಸಂಬಂಧಿಕರಿಗೆ ನೆರವಾಗಲು ಹಾಗೂ ಪರಿಹಾರ ಕಾರ್ಯದಲ್ಲಿ ಸಮನ್ವಯ ಸಾಧಿಸಲು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಮೊಹಮ್ಮದ್ ಅಜರುದ್ದೀನ್ ನೇತೃತ್ವದ ತಂಡವನ್ನು ಸೌದಿ ಅರೇಬಿಯಾಕ್ಕೆ ಕಳುಹಿಸಲು ತೆಲಂಗಾಣ ಸರ್ಕಾರ ನಿರ್ಧರಿಸಿದೆ.

ಮೃತರ ಅಂತ್ಯಕ್ರಿಯೆಯನ್ನು ಸೌದಿ ಅರೇಬಿಯಾದಲ್ಲೇ ನಡೆಸಲು ತೀರ್ಮಾನಿಸಲಾಗಿದೆ. ಪ್ರತಿ ಸಂತ್ರಸ್ತ ಕುಟುಂಬದ ಇಬ್ಬರು ಸದಸ್ಯರನ್ನು ಸೌದಿ ಅರೇಬಿಯಾಕ್ಕೆ ಕರೆದೊಯ್ಯಲಾಗುವುದು ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ.

ಎಐಎಂಐಎಂ ಪಕ್ಷದ ಒಬ್ಬ ಶಾಸಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಯೊಬ್ಬರು ಅಜರುದ್ದೀನ್ ನೇತೃತ್ವದ ತಂಡದಲ್ಲಿ ಇರುವರು ಎಂದು ಹೇಳಿದೆ.



ಸೌದಿ ಅರೇಬಿಯಾಕ್ಕೆ ತೆರಳುವ ವೇಳೆ ಸಲಾವುದ್ದೀನ್ ಶೇಖ್ ಮತ್ತು ಅವರ ಕುಟುಂಬಸ್ಥರು ತೆಗೆಸಿಕೊಂಡಿದ್ದ ಫೋಟೊ —ಪಿಟಿಐ ಚಿತ್ರ

ಹುಬ್ಬಳ್ಳಿ ವ್ಯಕ್ತಿ ಮೃತ

ಒಂದನೇ ಪುಟದಿಂದ...

'ಅಬ್ದುಲ್ ಅವರು ಭಾನುವಾರ ತಡರಾತ್ರಿ 3 ಗಂಟೆಗೆ ವಿಡಿಯೊ ಕಾಲ್ ಮಾಡಿ, ಪತ್ನಿ ಮತ್ತು ಮಕ್ಕಳ ಜೊತೆ ಮಾತನಾಡಿದ್ದರು. ಉಮ್ರಾ ಯಾತ್ರೆಯ ವಿಡಿಯೊ ಕೂಡ ಕಳುಹಿಸಿದ್ದರು. ಪ್ರವಾಸ ಮುಗಿಸಿ ಹುಬ್ಬಳ್ಳಿಗೆ ಬರುವುದಾಗಿ ತಿಳಿಸಿದ್ದರು' ಎಂದು ಸಹೋದರ ರುಕ್ ಶಿರಹಟ್ಟಿ ಹೇಳಿದರು.

ಶಾಸಕ ಪ್ರಸಾದ ಅಬ್ಬಯ್ಯ, ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಮತ್ತು ಇತರರು ಅಬ್ದುಲ್ ಅವರ ನಿವಾಸಕ್ಕೆ ತೆರಳಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

'ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿರುವೆ. ಮೃತರ ಶವ ಗುರುತಿಸುವ ಕಾರ್ಯ ನಡೆಯಲಿದೆ. ಕಾನೂನು ಸಮಸ್ಯೆಗಳು ಎದುರಾದರೆ, ಸರ್ಕಾರದ ಮಟ್ಟದಲ್ಲಿ ಪರಿಹರಿಸಲು ಯತ್ನಿಸಲಾಗುತ್ತದೆ' ಎಂದು ಶಾಸಕ ಪ್ರಸಾದ ಅಬ್ಬಯ್ಯ ಹೇಳಿದರು.

ಕುಟುಂಬದ ಮೂವರು ಸದಸ್ಯರಿಗೆ ಮೃತರ ಅಂತಿಮ ದರ್ಶನಕ್ಕೆ ತೆರಳಲು ಹುಬ್ಬಳ್ಳಿಯಿಂದ ಬೆಂಗಳೂರಿಗೆ ವಾಹನ ವ್ಯವಸ್ಥೆ ಮಾಡಲಾಗಿದೆ. ಅಲ್ಲಿಂದ ಸಚಿವ ಜಮೀರ್ ಅಹಮದ್ ಅವರು ವ್ಯವಸ್ಥೆ ಮಾಡುವ ಭರವಸೆ ನೀಡಿದ್ದಾರೆ
ಪ್ರಸಾದ ಅಬ್ಬಯ್ಯ, ಶಾಸಕ

'ಅಬ್ದುಲ್ ಗನಿ ಅವರ ಕುರಿತು ಜಿಲ್ಲಾಡಳಿತಕ್ಕೆ ಈವರೆಗೆ ಅಧಿಕೃತ ಮಾಹಿತಿ ಬಂದಿಲ್ಲ. ಕುಟುಂಬ ಮತ್ತು ರಾಯಭಾರಿ ಕಚೇರಿ ಅಧಿಕಾರಿಗಳ ಜೊತೆ ಸಂಪರ್ಕದಲ್ಲಿದ್ದೇವೆ
ದಿವ್ಯಪ್ರಭು, ಜಿಲ್ಲಾಧಿಕಾರಿ

ಜನರ ನಿರ್ಲಿಪ್ತತೆಯ ಫಲ 'ಎಸ್‌ಐಆರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನರ ನಿರ್ಲಿಪ್ತತೆಯನ್ನೇ ಬಂಡವಾಳ ಮಾಡಿಕೊಂಡು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಂತಹ (ಎಸ್‌ಐಆರ್) ಕಾರ್ಯಗಳನ್ನು ಕೇಂದ್ರ ಸರ್ಕಾರ ನಿರ್ಭೀತಿಯಿಂದ ಮಾಡಿಸುತ್ತಿದೆ ಎಂದು ಆರ್ಥಿಕ ತಜ್ಞ ಪರಕಾಲ ಪ್ರಭಾಕರ್ ಆರೋಪಿಸಿದರು.



ಪರಕಾಲ ಪ್ರಭಾಕರ್

'ಕರ್ನಾಟಕ ಜನಶಕ್ತಿ' ಸಂಘಟನೆ ಸೋಮವಾರ ಹಮ್ಮಿಕೊಂಡಿದ್ದ ಎಸ್‌ಐಆರ್ ವಿರೋಧಿ ಮಂಥನಾ ಸಮಾವೇಶದಲ್ಲಿ ಅವರು ಮಾತನಾಡಿದರು.

'ಜನರ ಉದಾಸೀನತೆ ಆಳುವವರಿಗೆ ಏನು ಸಂದೇಶ ನೀಡುತ್ತದೆ? ಏನು ಬೇಕಾದರೂ ಮಾಡಬಹುದು, ಈ ಜನರು ಸುಮ್ಮನಿರುತ್ತಾರೆ, ಪ್ರಶ್ನಿಸುವುದಿಲ್ಲ ಎನ್ನುವುದು ಕೇಂದ್ರ ಸರ್ಕಾರದ ಪ್ರಮುಖರಿಗೆ ಮನವರಿಕೆಯಾಗಿದೆ. ಒಂದು ನಾಗರಿಕ ಸಮಾಜದ ಒಳಗಿನಿಂದಲೇ ನಾವು ಎದುರಿಸುತ್ತಿರುವ ಅಪಾಯವನ್ನೂ ಪೂರ್ತಿಯಾಗಿ ಜನರು ಗ್ರಹಿಸಿದಂತೆ ಕಾಣುತ್ತಿಲ್ಲ. ತೆರೆದ ಕೋರ್ಟ್‌ನಲ್ಲಿ ಮುಖ್ಯ ನ್ಯಾಯಮೂರ್ತಿಗಳ ಮೇಲೆ ಚಪ್ಪಲಿ ಎಸೆದಾಗ ಎಷ್ಟು ಜನರು ಬೀದಿಗೆ ಇಳಿದರು? ಮುಖ್ಯ ನ್ಯಾಯಮೂರ್ತಿಗಳಿಗೆ ಅನ್ಯಾಯ ವಾದರೂ ನಾವು ಬ್ಯುಸಿಯಾಗಿದ್ದೇವೆ. 2 ವರ್ಷಗಳಿಂದ ಮಣಿಪುರ ಹೊತ್ತಿ ಉರಿಯುತ್ತಿದ್ದರೂ ಸುಮ್ಮನೆ ನೋಡುತ್ತಿದ್ದೇವೆ. ಇದೆಲ್ಲವನ್ನೂ ಗಮನಿಸಿಯೇ ಅವರು ಎಸ್‌ಐಆರ್‌ನಂತಹ ಕೆಲಸ ಮಾಡಿಸುತ್ತಿದ್ದಾರೆ' ಎಂದರು.

'ನಿರುದ್ಯೋಗ ಸಮಸ್ಯೆಯೇ ಅಲ್ಲ ಎನ್ನುವಂತೆ ಇದ್ದೇವೆ. ಮನೆಯ ಉಳಿತಾಯ ಕರಗಿ ಸಾಲ ಬೆಟ್ಟದಷ್ಟು ಏರುತ್ತಿದ್ದರೂ ತಲೆಕೆಡಿಸಿಕೊಂಡಿಲ್ಲ. ಉದ್ಯೋಗ ಖಾತ್ರಿಗೆ ನೀಡಿದ ಹಣ 6 ತಿಂಗಳಿಗೆ ಖರ್ಚಾಗುತ್ತಿದೆ. ಗ್ರಾಮೀಣ ಸಮಸ್ಯೆ ಎಷ್ಟಿದೆ ಎನ್ನುವುದಕ್ಕೆ ಇದು ಉದಾಹರಣೆ. ಇಂತಹ ನೂರಾರು ಸಮಸ್ಯೆಗಳಿದ್ದರೂ ಜನರ ಆಲೋಚನೆಯ ದಿಕ್ಕು ಬೇರೆ ಕಡೆ ತಿರುಗಿದೆ' ಎಂದು ಹೇಳಿದರು.

ಲೇಖಕ ಶಿವಸುಂದರ್ ಮಾತನಾಡಿ, 'ದೇಶದಲ್ಲಿ ರಾಜಕೀಯ ಬಹುಮತಕ್ಕೆ ಬದಲಾಗಿ ಧಾರ್ಮಿಕ, ಮತಾಧಾರಿತ ಬಹುಮತವನ್ನು ಸೃಷ್ಟಿಸಲಾಗುತ್ತಿದೆ. ಹಿಂದೂ, ಮುಸ್ಲಿಂ, ಸಿಖ್, ಬ್ರಾಹ್ಮಣ, ಕ್ಷತ್ರಿಯ ಶೂದ್ರ ಅಸ್ಮಿತೆಗಳೂ ರಾಜಕೀಯಗೊಂಡಿವೆ. ಜಾತಿ-ಧರ್ಮದ ಅಸ್ಮಿತೆಯ ಕಾರಣಕ್ಕೆ ಒಂದು ನಿಲುವನ್ನು ಬೆಂಬಲಿಸಬೇಕು ಎಂಬ ಒತ್ತಡ ಹಾಕಲಾಗುತ್ತಿದೆ' ಎಂದು ದೂರಿದರು.

ಎದ್ದೇಳು ಕರ್ನಾಟಕದ ಮುಖ್ಯಸ್ಥೆ ತಾರಾರಾವ್, ಮುಖಂಡ ನೂರ್ ಶ್ರೀಧರ್, ಸಂಖ್ಯಾತಜ್ಞ ಮಾಧವ ದೇಶಪಾಂಡೆ, ವಕೀಲರಾದ ಮಾನವಿ, ಎಲೆಕ್ಷನ್ ವಾಚ್ ಮತ್ತು ದಕ್ಷ್ ಸಂಸ್ಥೆಯ ಹರೀಶ್ ನರಸಪ್ಪ, ಜಮಾತೆ ಇಸ್ಲಾಮಿ ಹಿಂದ್‌ನ ಮಹಮ್ಮದ್ ಕುಂಞ ಇದ್ದರು.

ಮುಖ್ಯಾಂಶಗಳು

- 'ಕರ್ನಾಟಕ ಜನಶಕ್ತಿ' ಸಂಘಟನೆಯಿಂದ ಸಮಾವೇಶ
- ಸಿಜೆಐಗೆ ಅನ್ಯಾಯ ಆದರೂ ಬೀದಿಗೆ ಇಳಿಯದ ಜನ: ಬೇಸರ
- ಮನೆಯ ಉಳಿತಾಯ ಕರಗಿ ಸಾಲ ಏರಿಕೆ

ಅಗ್ಗದ 'ಕಿಯೋ' ಕಂಪ್ಯೂಟರ್

ಒಂದನೇ ಪುಟದಿಂದ...

ಕೈಗೆಟುಕುವ ದರದಲ್ಲಿ ಎ.ಐ ಕಂಪ್ಯೂಟರ್ ಅಭಿವೃದ್ಧಿ ಪಡಿಸಲಾಗಿದೆ. ಇದಕ್ಕಾಗಿ ಒಂದು ವರ್ಷ ಶ್ರಮ ಹಾಕಲಾಗಿದೆ. ಎಐ ಚಿಪ್, ಸಾಧನ ಮತ್ತು ಉಪಕರಣ ಗಳನ್ನು ರಾಜ್ಯದಲ್ಲಿಯೇ ಅಭಿವೃದ್ಧಿ ಪಡಿಸಲಾಗಿದೆ. ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ, ಸಣ್ಣ ಉದ್ಯಮಿಗಳಿಗೆ ಹಾಗೂ ಜನಸಾಮಾನ್ಯರಿಗೆ ಡಿಜಿಟಲ್ ಆರ್ಥಿಕತೆಯಲ್ಲಿ ಪಾಲ್ಗೊಳ್ಳಲು ನೆರವಾಗಲಿದೆ. ಶೃಂಗಸಭೆಯ ಕಿಯೋನಿಕ್ಸ್ ಮಳಿಗೆಯಲ್ಲಿ ಸಾರ್ವಜನಿಕರಿಗೆ 'ಕಿಯೋ' ಪ್ರದರ್ಶಿಸಲಾಗುತ್ತದೆ ಎಂದು ವಿವರಿಸಿದರು.

ಕಿಯೋದ ವಿಶೇಷಗಳೇನು?: 4ಜಿ, ವೈ-ಫೈ, ಯುಎಸ್‌ಬಿ- ಎ ಮತ್ತು ಯುಎಸ್‌ಬಿ - ಸಿ ಪೋರ್ಟ್‌ಗಳು, ಎಚ್‌ಡಿಎಂಐ ಮತ್ತು ಆಡಿಯೊ ಜ್ಯಾಕ್ ಸೌಲಭ್ಯ ಹೊಂದಿದೆ. ಕಲಿಕೆ, ಪ್ರೋಗ್ರಾಮಿಂಗ್ ಮತ್ತು ಉತ್ಪಾದಕತೆ ಪರಿಕರಗಳೊಂದಿಗೆ ಸಂಪೂರ್ಣ ಸಜ್ಜಾಗಿದೆ. ಇಂಟರ್‌ನೆಟ್ ಲಭ್ಯ ಇರದಿದ್ದ ಕಡೆಗಳಲ್ಲೂ ಕಾರ್ಯನಿರ್ವಹಿಸಲು ಎ.ಐ ಅನುವು ಮಾಡಿಕೊಡುತ್ತದೆ.

ಕಡಿಮೆ ಸಂಪರ್ಕ ಹೊಂದಿರುವ ಪ್ರದೇಶಗಳಲ್ಲಿಯೂ ವಿದ್ಯಾರ್ಥಿಗಳಿಗೆ ಸಹಾಯವಾಗಲು ಡಿಎಸ್‌ಇಆರ್‌ಟಿಯ 8, 9, 10ನೇ ತರಗತಿ ಪಠ್ಯಕ್ರಮ ಅಳವಡಿಸಲಾಗಿದೆ. ಎಐ ಚಾಟ್‌ಬಾಟ್ ಇದ್ದು, ವಿದ್ಯಾರ್ಥಿಗಳು ತಮಗೆ ಬೇಕಾದ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದುಕೊಳ್ಳಬಹುದು ಎಂದರು.

'ಕಿಯೋ ಕಂಪ್ಯೂಟರ್ ಚಿಪ್ ಸ್ಟಾರ್ಟ್ ಅಪ್ ಕಂಪನಿಯದ್ದಾಗಿದ್ದು, ಉಳಿದ ತಂತ್ರಜ್ಞಾನ, ಹಾರ್ಡ್‌ವೇರ್‌ಗಳನ್ನು ಕಿಯೋನಿಕ್ಸ್ ಅಭಿವೃದ್ಧಿಪಡಿಸಿದೆ. ಧಾರವಾಡದ ಐಐಐಟಿ, ಬೆಂಗಳೂರಿನ ಐಐಎಸ್‌ಸಿಯಲ್ಲಿ ಈ ಕಿಯೋ ಕಂಪ್ಯೂಟರ್ ಅನ್ನು ಪರೀಕ್ಷೆಗೊಳಪಡಿಸ ಲಾಗಿದೆ. ಒಂದು ವರ್ಷದಿಂದ ಕಿಯೋ ಕಂಪ್ಯೂಟರ್ ಅನ್ನು ಅಭಿವೃದ್ಧಿ ಪಡಿಸಲಾಗುತ್ತಿದ್ದು, ಅಪ್‌ಡೇಟ್ ಮಾಡಲಾಗಿದೆ. ಈಗಾಗಲೇ ವಿವಿಧ ಕಂಪನಿಗಳಿಂದ ಸುಮಾರು 500 ಕಿಯೋ ಕಂಪ್ಯೂಟರ್‌ಗಳಿಗೆ ಬೇಡಿಕೆ ಬಂದಿದ್ದು, ಮುಂದಿನ ದಿನಗಳಲ್ಲಿ ಬೇಡಿಕೆಗೆ ಅನುಗುಣವಾಗಿ ಕಿಯೋವನ್ನು ತಯಾರಿಸುವ ಬಗ್ಗೆ ಚಿಂತನೆ ಇದೆ' ಎಂದು ತಿಳಿಸಿದರು.

'ಬಿಡುಗಡೆ ಬಳಿಕ Keonext.in ವೆಬ್‌ಸೈಟ್‌ನಲ್ಲಿ ಮುಂಗಡವಾಗಿ ಕಾಯ್ದಿರಿಸಲು ಅವಕಾಶ ಇರಲಿದೆ. ಕಾಯ್ದಿರಿಸಿದ ಎರಡು ತಿಂಗಳಲ್ಲಿ ವಿತರಣೆ ಮಾಡಲಾಗು ವುದು. ಕಿಯೋನಿಕ್ಸ್ ಮೂಲಕ ಎಲೆಕ್ಟ್ರಾನಿಕ್ ಕ್ರಾಂತಿ ಮಾಡುವ ಗುರಿ ಹೊಂದಿದ್ದು, ಸೆಮಿಕಂಡಕ್ಟರ್ ಕಂಪನಿ, ಸೆಮಿಕಂಡಕ್ಟರ್ ಚಿಪ್ ವಿನ್ಯಾಸ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಕಂಪನಿಯ ಹೆಸರನ್ನು ಸದ್ಯದಲ್ಲೇ ಬಹಿರಂಗಪಡಿಸಲಾಗುವುದು' ಎಂದು ಹೇಳಿದರು.

ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಮಾತನಾಡಿ, 'ಶಾಲೆಗಳು, ವಿಶ್ವವಿದ್ಯಾಲಯಗಳು, ಸಣ್ಣ ಉದ್ದಿಮೆಗಳು, ಸರ್ಕಾರಿ ಕಚೇರಿಗಳು ಮತ್ತು ಮನೆಗಳಲ್ಲಿ ಕಿಯೋ ಬಳಕೆಯಾಗಲಿದೆ. ಡಿಜಿಟಲ್ ಕಲಿಕೆ, ಕೌಶಲ ಮತ್ತು ಉದ್ಯಮಶೀಲತೆಗೆ ಇದು ಹೊಸ ಮಾರ್ಗಗಳನ್ನು ಸೃಷ್ಟಿಸಲಿದೆ. ಎಲ್ಲಾ ಜಿಲ್ಲೆಗಳಲ್ಲಿ ವಿಕೇಂದ್ರೀಕೃತ ತಂತ್ರಜ್ಞಾನದ ಬೆಳವಣಿಗೆ ಸಾಧಿಸುವ ಮತ್ತು ಪ್ರತಿಯೊಬ್ಬ ನಾಗರಿಕರಿಗೂ ಸಮಾನ ಡಿಜಿಟಲ್ ಅವಕಾಶವನ್ನು ಖಚಿತಪಡಿಸಿಕೊಳ್ಳುವ ಸರ್ಕಾರದ ಧ್ಯೇಯವನ್ನು ಸಾಕಾರಗೊಳಿಸಲು ನೆರವಾಗಲಿದೆ' ಎಂದು ತಿಳಿಸಿದರು.

ಚಿಂತನ-ಮಂಥನದ ವಿಶಿಷ್ಟ ವೇದಿಕೆ

ಐ.ಟಿ ಮತ್ತು ಬಿ.ಟಿ ಇಲಾಖೆ ಹಾಗೂ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ (ಎಸ್‌ಟಿಪಿಐ) ಜಂಟಿಯಾಗಿ ತುಮಕೂರು ರಸ್ತೆಯಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಆಯೋಜಿಸಿರುವ 28ನೇ ಆವೃತ್ತಿಯ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಉದ್ಘಾಟಿಸುವರು.

ಬೃಹತ್ ಹಾಗೂ ಮಧ್ಯಮ ಕೈಗಾರಿಕೆಗಳು ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ, ಜರ್ಮನಿಯ ಬವೇರಿಯನ್ ರಾಜ್ಯ ಸಂಸತ್ತಿನ ಅಧ್ಯಕ್ಷೆ ಐಲ್ ಏಗ್ನರ್, ನಾರ್ವೆಯ ಆರೋಗ್ಯ ಸಚಿವ ಜಾನ್ ಕ್ರಿಶ್ಚಿಯನ್ ವೆಸ್ಟ್ರೆ, ಆಸ್ಟ್ರೇಲಿಯಾದ ಮೆಲ್ಬರ್ನ್ ಮೇಯರ್ ನಿಕೋಲಸ್ ರೀಸ್ ಮತ್ತು ಎಸ್‌ಟಿಪಿಐ ಮಹಾನಿರ್ದೇಶಕ ಅರವಿಂದ್ ಕುಮಾರ್ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಇನ್ಫೋಸಿಸ್ ಸಹ ಸಂಸ್ಥಾಪಕ ಕ್ರಿಸ್ ಗೋಪಾಲಕೃಷ್ಣನ್, ಬಯೋಕಾನ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ಅಧ್ಯಕ್ಷೆ ಕಿರಣ್ ಮಜುಂದಾರ್ ಷಾ, ಸ್ಟಾರ್ಟ್‌ಅಪ್ ವಿಷನ್ ಗ್ರೂಪ್ ಅಧ್ಯಕ್ಷ ಪ್ರಶಾಂತ್ ಪ್ರಕಾಶ್ ಮಾತನಾಡುವರು.

ಮಾಹಿತಿ ತಂತ್ರಜ್ಞಾನ ಮತ್ತು ಡೀಪ್ ಟೆಕ್, ನವೋದ್ಯಮ, ರಕ್ಷಣೆ ಮತ್ತು ಬಾಹ್ಯಾಕಾಶ ಎಂಬ ಪರಿಕಲ್ಪನೆ ಅಡಿ ಪ್ರದರ್ಶನ ಮತ್ತು ಗೋಷ್ಠಿ ಆಯೋಜಿಸಲಾಗಿದೆ. ಹತ್ತು ಪ್ರಮುಖ ಸಮ್ಮೇಳನಗಳು ನಡೆಯಲಿವೆ. ಇದರಲ್ಲಿ ಐಟಿ ಮತ್ತು ಡೀಪ್‌ಟೆಕ್, ಡಿಜಿ ಹೆಲ್ತ್ ಮತ್ತು ಬಯೋಟೆಕ್, ಭಾರತ–ಅಮೆರಿಕ ತಂತ್ರಜ್ಞಾನ ಸಮ್ಮೇಳನ, ಗ್ಲೋಬಲ್ ಸಹಯೋಗ ಮತ್ತು ನವೋದ್ಯಮ ಬೆಳವಣಿಗೆ ಉತ್ತೇಜಿಸುವ ವೃತಿಪರರ ಭೇಟಿ ಮತ್ತು ಬಾಂಧವ್ಯ ವೃದ್ಧಿ ಸೇರಿವೆ.

ಶೃಂಗಸಭೆಯು ನವೋದ್ಯಮಗಳ ಸ್ಥಾಪಕರು, ಹೂಡಿಕೆದಾರರು ಮತ್ತು ನಾವೀನ್ಯಕಾರರನ್ನು ಒಳಗೊಂಡ ಅಂದಾಜು 10 ಸಾವಿರ ಪ್ರತಿಭಾನ್ವಿತರ ಚಿಂತನ - ಮಂಥನದ ವಿಶಿಷ್ಟ ವೇದಿಕೆ ಆಗಿರಲಿದೆ. ನವೋದ್ಯಮ, ಪ್ರವರ್ಧಮಾನಕ್ಕೆ ಬರುತ್ತಿರುವ ಉದ್ಯಮಿಗಳು, ಉದ್ದಿಮೆಗಳ ಆರಂಭಿಕ ಹಂತದ ಸಂಸ್ಥಾಪಕರು, ಅನುಭವಿ ಉದ್ಯಮಿಗಳು ಸೇರಿದಂತೆ ಉದ್ಯಮವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಲು ಬಯಸುವ ಎಲ್ಲರಿಗೂ ನೆರವಾಗುವ ಗುರಿ ಹೊಂದಿದೆ.

ಪ್ರಮುಖ ತಂತ್ರಜ್ಞಾನ ರಾಷ್ಟ್ರಗಳಾದ ಅಮೆರಿಕ, ಉರುಗ್ವೆ, ರಷ್ಯಾ, ಇಂಗ್ಲೆಂಡ್, ಇಸ್ರೇಲ್, ಬೆಲ್ಜಿಯಂ, ಫಿನ್‌ಲ್ಯಾಂಡ್, ಫ್ರಾನ್ಸ್, ದುಬೈ, ದಕ್ಷಿಣ ಕೊರಿಯಾ, ಜಪಾನ್, ಸಿಂಗಪುರ- ಸಮ್ಮೇಳನ ಮತ್ತು ಪ್ರದರ್ಶನದಲ್ಲಿ ಭಾಗವಹಿಸುತ್ತಿರುವುದು ಶೃಂಗಸಭೆಯ ಜಾಗತಿಕ ಮಹತ್ವವನ್ನು ಮತ್ತಷ್ಟು ಬಲಪಡಿಸಲಿದೆ ಎಂದು ಪ್ರಿಯಾಂಕ್ ವಿವರಿಸಿದರು.

ಐಟಿ ಬಿಟಿ ಇಲಾಖೆ ಕಾರ್ಯದರ್ಶಿ ಡಾ.ಮಂಜುಳಾ, ನಿರ್ದೇಶಕ ರಾಹುಲ್ ಶರಣಪ್ಪ ಸಂಕನೂರ ಹಾಜರಿದ್ದರು.



ಪ್ರಿಯಾಂಕಾ, ಮಹೇಶ್ ಬಾಬು



'ವಾರಾಣಸಿ'ಯಲ್ಲಿ 'ರುದ್ರ'ನಾದ ಮಹೇಶ್ ಬಾಬು

'ಆರ್‌ಆರ್‌ಆರ್' ಬಳಿಕ ನಿರ್ದೇಶಕ ಎಸ್.ಎಸ್. ರಾಜಮೌಳಿ ನಟ ಮಹೇಶ್ ಬಾಬು ಅವರಿಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ ಎನ್ನುವ ಸುದ್ದಿ ಹಲವು ತಿಂಗಳುಗಳ ಮೊದಲೇ ಹೊರಬಿದ್ದಿತ್ತು. ಇತ್ತೀಚೆಗೆ ಚಿತ್ರದ ಶೀರ್ಷಿಕೆ ಅನಾವರಣ ಕಾರ್ಯಕ್ರಮ ಹೈದರಾಬಾದ್‌ನ ರಾಮೋಜಿ ಫಿಲಂ ಸಿಟಿಯಲ್ಲಿ ಅದ್ದೂರಿಯಾಗಿ ನಡೆಯಿತು.

ಚಿತ್ರಕ್ಕೆ 'ವಾರಾಣಸಿ' ಎಂಬ ಶೀರ್ಷಿಕೆ ಇಡಲಾಗಿದ್ದು, ಪ್ರಿಯಾಂಕಾ ಚೋಪ್ರಾ ಹಾಗೂ ಪೃಥ್ವಿರಾಜ್ ಸುಕುಮಾರನ್ ತಾರಾಬಳಗದಲ್ಲಿದ್ದಾರೆ. ಬೃಹತ್ ಎಲ್‌ಇಡಿ ಪರದೆಯ ಮೇಲೆ ಚಿತ್ರದ ಟೈಟಲ್ ಟೀಸರ್ ಪ್ರದರ್ಶನಗೊಂಡಾಗ ರಾಜಮೌಳಿಯವರ ಹೊಸ ಕನಸಿನ ಲೋಕದ ಅನಾವರಣವಾಯಿತು. ಕೃತಕ ಗೂಳಿಯ ಮೇಲೆ ಕುಳಿತು, ಮಹೇಶ್ ಬಾಬು ತ್ರಿಶೂಲ ಹಿಡಿದು ಬಂದಾಗ ಸಾವಿರಾರು ಅಭಿಮಾನಿಗಳು ಜೈಕಾರ ಕೂಗಿದರು.

ಇದೊಂದು ಪೌರಾಣಿಕ ಹಿನ್ನೆಲೆಯ ಫ್ಯಾಂಟಸಿ ಚಿತ್ರವಾಗಿದ್ದು, ಶ್ರೀ ದುರ್ಗಾ ಆರ್ಟ್ಸ್ ಮತ್ತು ಶೋಯಿಂಗ್ ಬಿಝಿನೆಸ್ ಸಂಸ್ಥೆಗಳಡಿ ಕೆ.ಎಲ್. ನಾರಾಯಣ ಮತ್ತು ಎಸ್.ಎಸ್. ಕಾರ್ತಿಕೇಯ ಈ ಸಿನಿಮಾವನ್ನು ನಿರ್ಮಿಸುತ್ತಿದ್ದಾರೆ. ಚಿತ್ರಕ್ಕೆ ರಾಜಮೌಳಿ ತಂದೆ ವಿಜಯೇಂದ್ರಪ್ರಸಾದ್ ಕಥೆ-ಚಿತ್ರ-ಕಥೆ ಬರೆದಿದ್ದು, ಎಂ.ಎಂ. ಕೀರವಾಣಿ ಸಂಗೀತ ಸಂಯೋಜಿಸಲಿದ್ದಾರೆ. ಮಹೇಶ್ ಬಾಬು 'ರುದ್ರ' ಎಂಬ ಪಾತ್ರದಲ್ಲಿ ಅಭಿನಯಿಸಿದರೆ, ಪ್ರಿಯಾಂಕಾ ಚೋಪ್ರಾ ಮತ್ತು ಪೃಥ್ವಿರಾಜ್ ಸುಕುಮಾರನ್ ಕ್ರಮವಾಗಿ 'ಮೋಹಿನಿ' ಮತ್ತು 'ಕುಂಭ' ಎಂಬ ಪಾತ್ರಗಳನ್ನು ನಿರ್ವಹಿಸಲಿದ್ದಾರೆ. ಚಿತ್ರವು 2027ರಲ್ಲಿ ಬಿಡುಗಡೆಯಾಗಲಿದೆ. ಈ ಚಿತ್ರವು ಪ್ರೀಮಿಯಂ ಫುಲ್ ಸ್ಕ್ರೀಮ್ ಐಮ್ಯಾಕ್ಸ್ ಫಾರ್ಮ್ಯಾಟ್‌ನಲ್ಲಿ ಇರಲಿದೆ.

'ನನಗೆ ಬಾಲ್ಯದಿಂದಲೂ ರಾಮಾಯಣ ಮತ್ತು ಮಹಾಭಾರತವೆಂದರೆ ಇಷ್ಟ. ಇದು ನನ್ನ ಕನಸಿನ ಪ್ರಾಜೆಕ್ಟ್. ರಾಮಾಯಣದ ಒಂದು ಪ್ರಮುಖ ಪ್ರಸಂಗವನ್ನು ಆಧರಿಸಿ ಈ ಚಿತ್ರ ಮಾಡುತ್ತೇನೆ ಎಂದು ನಾನು ಅಂದುಕೊಂಡಿರಲಿಲ್ಲ. ರಾಮನಂತಹ ಪ್ರಶಾಂತವಾದ ಪಾತ್ರಕ್ಕೆ ಮಹೇಶ್ ಹಿಡಿಸುತ್ತಾರೆಯೇ ಎಂಬ ಪ್ರಶ್ನೆ ಇತ್ತು. ಮೊದಲ ದಿನ ಮಹೇಶ್ ಬಾಬು ಅವರನ್ನು ರಾಮನ ವೇಷದಲ್ಲಿ ನೋಡಿ ರೋಮಾಂಚನವಾಯಿತು. ಇದುವರೆಗೂ ಸುಮಾರು 60 ದಿನಗಳ ಕಾಲ ಚಿತ್ರೀಕರಣ ಮಾಡಿದ್ದೇವೆ' ಎಂದರು ರಾಜಮೌಳಿ.



ಬೃಂದಾ ಆಚಾರ್ಯ, ದೀಕ್ಷಿತ್ ಶೆಟ್ಟಿ

'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ'ಗೆ ಜೊತೆಯಾದ ಶ್ರೀಮುರಳಿ

ಅಭಿಷೇಕ್ ಎಂ. ನಿರ್ದೇಶನದ ಚೊಚ್ಚಲ ಸಿನಿಮಾ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ' ನ.21ರಂದು ತೆರೆಕಾಣುತ್ತಿದ್ದು, ಇತ್ತೀಚೆಗೆ ನಟ ಶ್ರೀಮುರಳಿ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿದರು.

ಬ್ಯಾಂಕ್ ದರೋಡೆಯ ಕಥೆಯಿರುವ ಈ ಸಿನಿಮಾದಲ್ಲಿ ದೀಕ್ಷಿತ್ ಶೆಟ್ಟಿ ಹಾಗೂ ಬೃಂದಾ ಆಚಾರ್ಯ ಮುಖ್ಯಭೂಮಿಕೆಯಲ್ಲಿದ್ದಾರೆ.

'ಸ್ನೇಹಿತರ ಜೊತೆಗೂಡಿ 'ಪಿನಾಕ' ಎಂಬ ವಿ.ಎಫ್.ಎಕ್ಸ್ ಸ್ಟುಡಿಯೊ ನಡೆಸುತ್ತಿದ್ದೇನೆ. ನಿರ್ದೇಶಕನಾಗಿ ಇದು ಮೊದಲ ಚಿತ್ರ' ಎಂದು ಮಾತು ಆರಂಭಿಸಿದ ಅಭಿಷೇಕ್, 'ಕೋವಿಡ್ ಸಂದರ್ಭದಲ್ಲಿ ಕಿರುಚಿತ್ರ ಮಾಡಲೆಂದು ಬರೆದ ಕಥೆ ಇದಾಗಿತ್ತು. ನಂತರದಲ್ಲಿ ಇದನ್ನು ಸಿನಿಮಾ ಮಾಡಿದರೆ ಚೆನ್ನಾಗಿರುತ್ತದೆ ಎನಿಸಿತು. ನಿರ್ಮಾಪಕ ಎಚ್.ಕೆ.ಪ್ರಕಾಶ್ ಅವರು ಕಥೆ ಮೆಚ್ಚಿಕೊಂಡ ನಂತರ ಸಿನಿಮಾ ರೂಪ ಪಡೆದಿದೆ' ಎಂದರು.

'ನನ್ನ 'ದಿಯಾ' ಹಾಗೂ 'ಬ್ಲಿಂಕ್' ಸಿನಿಮಾಗಳಿಗೆ ಸಿಕ್ಕ ಪ್ರೋತ್ಸಾಹ ಅಪಾರ. ಭಿನ್ನವಾದ ಜಾನರ್‌ಗಳ ಸಿನಿಮಾಗಳಲ್ಲಿ ನಟಿಸಬೇಕೆಂಬುದು ನನ್ನ ಆಸೆ. ಹಿಂದಿನ ಚಿತ್ರಗಳಿಗಿಂತ ಆಕರ್ಷಕ ಕಥೆಯನ್ನು ಹೊಂದಿರುವ ಸಿನಿಮಾ ಇದಾಗಿದೆ. ಚಿತ್ರ ಗೆಲ್ಲುವ ಭರವಸೆ ಇದೆ' ಎಂದರು ದೀಕ್ಷಿತ್ ಶೆಟ್ಟಿ.

'ನಿಮಗೆ ಯಾರು ಪೈಪೋಟಿ ಎಂದು ಎಲ್ಲರೂ ಕೇಳುತ್ತಿದ್ದರು. ನನಗೆ ನಾನೇ ಪೈಪೋಟಿ ಎಂದು ಹೇಳುವ ಸಮಯ ಬಂದಿದೆ. ಏಕೆಂದರೆ ನ.21ರಂದು ನಾನು ನಾಯಕಿಯಾಗಿ ನಟಿಸಿರುವ ಎರಡು ಸಿನಿಮಾಗಳು ತೆರೆಕಾಣುತ್ತಿವೆ. ಎರಡರಲ್ಲೂ ಭಿನ್ನವಾದ ಪಾತ್ರಗಳು' ಎನ್ನುತ್ತಾರೆ ಬೃಂದಾ ಆಚಾರ್ಯ.

'ರಂಗಿತರಂಗ' ಸಿನಿಮಾ ನಿರ್ಮಾಣ ಮಾಡಿದ್ದ ಎಚ್.ಕೆ.ಪ್ರಕಾಶ್ ನಿರ್ಮಾಣ ಮಾಡಿರುವ ಆರನೇ ಸಿನಿಮಾ ಇದಾಗಿದೆ. ಸಿನಿಮಾದಲ್ಲಿ ಸಾಧು ಕೋಕಿಲ, ಗೋಪಾಲಕೃಷ್ಣ ದೇಶಪಾಂಡೆ, ಶ್ರೀವತ್ಸ, ಉಷಾ ಭಂಡಾರಿ, ಭರತ್, ವಿಶ್ವನಾಥ್, ಹರೀಶ್ ಸಮಷ್ಟಿ ಮುಂತಾದವರು ನಟಿಸಿದ್ದಾರೆ. 'ಟೈಗರ್' ಎನ್ನುವ ಪಾತ್ರದಲ್ಲಿ ದೀಕ್ಷಿತ್ ನಟಿಸಿದ್ದಾರೆ.



ಸಂಚಿತ್

ಜ.15ಕ್ಕೆ 'ಮ್ಯಾಂಗೋ ಪಚ್ಚ' ರಿಲೀಸ್

ಸಂಕ್ರಾಂತಿಗೆ ಕನ್ನಡದ ಸಿನಿಮಾಗಳು ತೆರೆಕಾಣುವುದು ಅಪರೂಪ. ಪರಭಾಷಾ ಸಿನಿಮಾಗಳೇ ಈ ದಿನಗಳಲ್ಲಿ ತೆರೆ ತುಂಬಿಕೊಳ್ಳುತ್ತಿದ್ದವು. ಆದರೆ ಈ ಬಾರಿ ನಟ ಸುದೀಪ್ ಅಕ್ಕನ ಮಗ ಸಂಚಿತ್ ನಟನೆಯ ಸಿನಿಮಾ 'ಮ್ಯಾಂಗೋ ಪಚ್ಚ' ಸಂಕ್ರಾಂತಿ ಸಂದರ್ಭದಲ್ಲೇ ರಿಲೀಸ್ ಆಗಲಿದೆ.

ಜ.15ಕ್ಕೆ ಈ ಸಿನಿಮಾ ತೆರೆಕಾಣಲಿದ್ದು, ಸಂಚಿತ್ ಚಂದನವನದಲ್ಲಿ ನಾಯಕನಾಗಿ ಮೊದಲ ಹೆಜ್ಜೆ ಇಡಲಿದ್ದಾರೆ. 'ಮ್ಯಾಂಗೋ ಪಚ್ಚ' ಮೈಸೂರು ಭಾಗದ ಕಥೆಯಾಗಿದ್ದು, ಸಂಚಿತ್ ರೆಟ್ರೋ ಲುಕ್‌ನಲ್ಲಿ ಕಾಣಿಸಿ-ಕೊಂಡಿದ್ದಾರೆ. ಕ್ರೈಂ ಥ್ರಿಲ್ಲರ್ ಜಾನರ್‌ನಲ್ಲಿ ಸಿನಿಮಾವಿದ್ದು, ವಿವೇಕ್ ಆ್ಯಕ್ಷನ್ ಕಟ್ ಹೇಳಿದ್ದಾರೆ. 2001ರಿಂದ 2011ರ ಅವಧಿಯಲ್ಲಿ ನಡೆದ ಪ್ರಮುಖ ಘಟನೆಗಳು ಈ ಸಿನಿಮಾದಲ್ಲಿದ್ದು, ಚಿತ್ರವನ್ನು ಕೆಆರ್‌ಜಿ ಮತ್ತು ಸುದೀಪ್ ಅವರ ಸುಪ್ರಿಯಾನ್ವಿ ಪ್ರೊಡಕ್ಷನ್ಸ್ ಜಂಟಿಯಾಗಿ ನಿರ್ಮಾಣ ಮಾಡಿದೆ. ಈಗಾಗಲೇ ಚಿತ್ರೀಕರಣ ಪೂರ್ಣಗೊಳಿಸಿರುವ ಈ ಸಿನಿಮಾದಲ್ಲಿ ನಾಯಕಿಯಾಗಿ ಕಾಜಲ್ ಕುಂದರ್ ಬಣ್ಣಹಚ್ಚಿದ್ದಾರೆ.

ಫುಲ್ ಮೀಲ್ಸ್ ಬಡಿಸ್ತಾರೆ ಲಿಖಿತ್

'ಫುಲ್ ಮೀಲ್ಸ್' ಸವಿಯಲು ಇನ್ನೇನು ಕೆಲವೇ ದಿನಗಳು ಬಾಕಿ ಇವೆ. ನ.21ರಂದು ಈ ಸಿನಿಮಾ ತೆರೆಕಾಣುತ್ತಿದ್ದು, ಒಂದು ತ್ರಿಕೋನ ಪ್ರೇಮಕಥೆಯೊಂದಿಗೆ ಬರುತ್ತಿದ್ದಾರೆ ನಟ ಲಿಖಿತ್ ಶೆಟ್ಟಿ.

'ಫ್ಯಾಮಿಲಿ ಪ್ಯಾಕ್', 'ಸಂಕಷ್ಟಕರ ಗಣಪತಿ' ಸಿನಿಮಾ ಮೂಲಕ ಗುರುತಿಸಿಕೊಂಡಿರುವ ಲಿಖಿತ್ ಶೆಟ್ಟಿಗೆ ಈ ಬಾರಿ ಎನ್.ವಿನಾಯಕ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಚಿತ್ರದ ಬಿಡುಗಡೆ ಪೂರ್ವ ಸುದ್ದಿ-ಗೋಷ್ಠಿಯಲ್ಲಿ ಮಾತನಾಡಿದ ಲಿಖಿತ್, 'ವಿನಾಯಕ್ ಅವರು ಕಥೆ ಹೇಳಿದಾಗ ನಾನು ಮೊದಲು ಸಂಗೀತ ನಿರ್ದೇಶಕ ಗುರುಕಿರಣ್ ಅವರಿಗೆ ಕಥೆ ಹೇಳಿ, ಅವರು ಒಪ್ಪಿಕೊಂಡರೆ ನನಗೆ ಒಪ್ಪಿಗೆಯಾದ ಹಾಗೆ ಎಂದಿದ್ದೆ. ಗುರುಕಿರಣ್ ಅವರು ಕಥೆ ಮೆಚ್ಚಿಕೊಂಡರು. ಅವರೇ ಸಂಗೀತವನ್ನು ನೀಡಲು ಒಪ್ಪಿಕೊಂಡರು. ನಾನೇ ಈ ಚಿತ್ರ ನಿರ್ಮಾಣಕ್ಕೆ ಮುಂದಾದೆ. ಚಿತ್ರದಲ್ಲಿ ವೆಡ್ಡಿಂಗ್ ಫೋಟೋಗ್ರಾಫರ್ ಆಗಿ ಕಾಣಿಸಿಕೊಂಡಿದ್ದೇನೆ. ಫೋಟೋಗ್ರಾಫರ್ಸ್ ಮತ್ತು ಮೇಕಪ್ ಆರ್ಟಿಸ್ಟ್‌ಗಳಿಗಾಗಿ ವಿಶೇಷ ಪ್ರದರ್ಶನ ಆಯೋಜಿಸುತ್ತಿದ್ದೇವೆ' ಎಂದರು.

'ಇದೊಂದು ರೊಮ್ಯಾಂಟಿಕ್ ಕಾಮಿಡಿ ಜಾನರ್‌ನ ಚಿತ್ರ. ಲಿಖಿತ್ ಶೆಟ್ಟಿ ಪಾತ್ರದ ಸುತ್ತವೇ ಸುತ್ತುವ ಕಥಾ ಹಂದರ ಚಿತ್ರದಲ್ಲಿದ್ದು, ಅನೇಕ ಕಿರುಚಿತ್ರಗಳನ್ನು ನಿರ್ದೇಶಿಸಿರುವ ನನಗೆ ಹಿರಿತೆರೆಯಲ್ಲಿ ಇದು ಮೊದಲ ಚಿತ್ರ. ಕಥೆ, ಚಿತ್ರಕಥೆ ನಾನೇ ಬರೆದಿದ್ದೇನೆ' ಎಂದರು ವಿನಾಯಕ್.

ಚಿತ್ರದಲ್ಲಿ ತೇಜಸ್ವಿನಿ ಶರ್ಮಾ ಹಾಗೂ ಖುಷಿ ರವಿ ನಾಯಕಿಯರಾಗಿ ಅಭಿನಯಿಸಿದ್ದಾರೆ. ವಿಜಯ್ ಚಂಡೂರ್, ಸೂರಜ್ ಲೋಕ್ರೆ, ರಾಜೇಶ್ ನಟರಂಗ, ಸುಜಯ್ ಶಾಸ್ತ್ರಿ, ರವಿಶಂಕರ್ ಗೌಡ, ಕೋಟೆ ಪ್ರಭಾಕರ್ ಹೀಗೆ ಅನೇಕ ಕಲಾವಿದರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ಮನೋಹರ್ ಜೋಶಿ ಛಾಯಾಚಿತ್ರಗ್ರಹಣ ಹಾಗೂ ದೀಪು ಎಸ್. ಕುಮಾರ್ ಸಂಕಲನ ಚಿತ್ರಕ್ಕಿದೆ.



ಖುಷಿ ರವಿ, ಲಿಖಿತ್ ಶೆಟ್ಟಿ, ತೇಜಸ್ವಿನಿ ಶರ್ಮಾ

ಬಾಂಬರ್‌ಗೆ ಆಶ್ರಯ ಒದಗಿಸಿದ್ದ ಅಮೀರ್

ದೆಹಲಿ ನ್ಯಾಯಾಲಯಕ್ಕೆ ಎನ್‌ಐಎ ಮಾಹಿತಿ

● ಆರೋಪಿ 10 ದಿನ ತನಿಖಾ ತಂಡದ ವಶಕ್ಕೆ

ನವದೆಹಲಿ (ಪಿಟಿಐ): ದೆಹಲಿಯ ಕೆಂಪುಕೋಟೆ ಬಳಿ ನಡೆದ ಕಾರು ಬಾಂಬ್ ಸ್ಫೋಟಕ್ಕೆ ಸಂಬಂಧಿಸಿ ಅಮೀರ್ ರಷೀದ್ ಅಲಿ ಪ್ರಮುಖ ಆರೋಪಿ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಸೋಮವಾರ ದೆಹಲಿ ನ್ಯಾಯಾಲಯಕ್ಕೆ ತಿಳಿಸಿದೆ.

ಈತನೇ ಆತ್ಮಹತ್ಯಾ ಬಾಂಬರ್‌ಗಳಿಗೆ ಸುರಕ್ಷಿತವಾದ ಮನೆ ಒದಗಿಸಿದ್ದ. ಅಲ್ಲದೇ, ಕಾರಿನಲ್ಲಿ ಬಾಂಬ್ ಸ್ಫೋಟಿಸಿದ್ದ ಡಾ. ಉಮರ್ ನಬಿಗೆ ಬೇಕಾದ ಸಾಮಗ್ರಿಗಳನ್ನು ಸಾಗಿಸಲು ವ್ಯವಸ್ಥೆ ಮಾಡಿದ್ದ ಎಂದು ತಿಳಿಸಿದೆ.

ದಕ್ಷಿಣ ಕಾಶ್ಮೀರದ ಪಾಂಪೋರ್ ನಿವಾಸಿಯಾದ ಅಮೀರ್ ರಷೀದ್ ಅಲಿಯನ್ನು ಪಟಿಯಾಲ ಹೌಸ್ ನ್ಯಾಯಾಲಯಗಳ ಸಂಕೀರ್ಣದಲ್ಲಿರುವ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶೆ ಅಂಜು ಬಜಾಜ್ ಚಂದನಾ ಮುಂದೆ ಹಾಜರಪಡಿಸಲಾಯಿತು. ನ್ಯಾಯಾಲಯದ ಆವರಣದ ಒಳಗೆ ಪ್ರವೇಶಿಸದಂತೆ ಮಾಧ್ಯಮದ ಪ್ರತಿನಿಧಿಗಳಿಗೆ ನಿರ್ಬಂಧ ವಿಧಿಸಲಾಯಿತು. ನ್ಯಾಯಾಲಯದ ಹೊರಭಾಗದಲ್ಲಿ ದೆಹಲಿ ಪೊಲೀಸರು ಹಾಗೂ ಕ್ಷಿಪ್ರಕಾರ್ಯಪಡೆಯವರು ಗರಿಷ್ಠ ಭದ್ರತೆ ಒದಗಿಸಿದ್ದರು. ಇಡೀ ಸಂಚಿನ ಮಾಹಿತಿಯನ್ನು ಆರೋಪಿಯಿಂದ ಕಲೆಹಾಕಲು ವಶಕ್ಕೆ ನೀಡಬೇಕು ಎಂದು ಎನ್‌ಐಎ ಅಧಿಕಾರಿಗಳು ನ್ಯಾಯಾಲಯಕ್ಕೆ ಮನವಿ ಮಾಡಿದರು.

'ಸ್ಫೋಟಕ್ಕೆ ಬಳಸಿದ ಕಾರು ಅಲಿ ಹೆಸರಿನಲ್ಲಿ ನೋಂದಣಿಯಾಗಿದೆ. ಈತನೇ ಸ್ಫೋಟ ನಡೆಸಿದ ಡಾ.ಉಮರ್ ನಬಿಗೆ ಎಲ್ಲ ರೀತಿಯ ಸಾಗಣೆಯ ನೆರವು ನೀಡಿದ್ದ, ಸ್ಫೋಟಕ್ಕೂ ಮುನ್ನ ಉಮರ್‌ಗೆ ಸುರಕ್ಷಿತ ಮನೆಯನ್ನು ವ್ಯವಸ್ಥೆ ಮಾಡಿಕೊಟ್ಟಿದ್ದ ಎಂದು ನ್ಯಾಯಾಲಯದ ಗಮನಸೆಳೆದರು. ಹೆಚ್ಚಿನ ವಿಚಾರಣೆಗೆ ಆರೋಪಿಯನ್ನು ಕಾಶ್ಮೀರಕ್ಕೆ ಕರೆದೊಯ್ಯಬೇಕಿದೆ' ಎಂದು ಕೋರ್ಟ್‌ಗೆ ಮನವರಿಕೆ ಮಾಡಿಕೊಟ್ಟರು.

ಅಧಿಕಾರಿಗಳ ಮನವಿ ಪುರಸ್ಕರಿಸಿದ ನ್ಯಾಯಾಧೀಶರು ಆರೋಪಿಯನ್ನು 10 ದಿನಗಳ ಕಾಲ ಎನ್‌ಐಎ ವಶಕ್ಕೆ ಒಪ್ಪಿಸಿದರು.

ದೆಹಲಿ ಸ್ಫೋಟ: ಮೃತರ ಸಂಖ್ಯೆ 15ಕ್ಕೆ ಏರಿಕೆ

ನವದೆಹಲಿ (ಪಿಟಿಐ): ಕೆಂಪುಕೋಟೆ ಬಳಿ ನಡೆದ ಸ್ಫೋಟದಲ್ಲಿ ಗಾಯಗೊಂಡಿದ್ದ ಇಬ್ಬರು ವ್ಯಕ್ತಿಗಳು ಎಲ್‌ಎನ್‌ಜೆಪಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಈ ಮೂಲಕ ಸಾವಿನ ಸಂಖ್ಯೆ 15ಕ್ಕೆ ಏರಿಕೆಯಾಗಿದೆ.

ಲುಕ್ಮಾನ್ (50) ಹಾಗೂ ವಿನಯ್ ಪಾಠಕ್ (50) ಮೃತರು. ಇನ್ನೂ ಅನೇಕರು ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.



ದೆಹಲಿಯ ಕೆಂಪುಕೋಟೆಯ ಸಮೀಪ ನಡೆದ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ನವದೆಹಲಿಯ ಪಟಿಯಾಲ ಹೌಸ್ ನ್ಯಾಯಾಲಯದ ಮುಂದೆ ಪ್ರಮುಖ ಆರೋಪಿ ಅಮೀರ್ ರಷೀದ್ ಅಲಿಯನ್ನು ತನಿಖಾಧಿಕಾರಿಗಳು ಸೋಮವಾರ ಹಾಜರುಪಡಿಸಿದರು —ಪಿಟಿಐ ಚಿತ್ರ

ಸಹ ಸಂಚುಕೋರನ ಬಂಧನ

ದೆಹಲಿಯ ಕೆಂಪುಕೋಟೆ ಸಮೀಪ ಸಂಭವಿಸಿದ ಕಾರು ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಸಹ ಸಂಚುಕೋರ ಜೈಸಿರ್ ಬಿಲಾಲ್ ವಾನಿ ಎಂಬಾತನನ್ನು ಎನ್‌ಐಎ ಶ್ರೀನಗರದಲ್ಲಿ ಬಂಧಿಸಿದೆ.

ಜೈಸಿರ್ ಜಮ್ಮು ಮತ್ತು ಕಾಶ್ಮೀರದ ಅನಂತನಾಗ್‌ನ ಕಾಜಿಗುಂಡ ನಿವಾಸಿಯಾಗಿದ್ದು, ಭಯೋತ್ಪಾದಕ ದಾಳಿ ನಡೆಸಲು ತಾಂತ್ರಿಕ ನೆರವು ನೀಡಿದ ಆರೋಪ ಈತನ ಮೇಲಿದೆ ಎಂದು ಎನ್‌ಐಎ ತಿಳಿಸಿದೆ.

ಜೈಸಿರ್, 'ಆತ್ಮಾಹುತಿ ಬಾಂಬ್ ದಾಳಿಕೋರ' ಉಮರ್ ನಬಿಯೊಂದಿಗೆ ಸೇರಿ ಉಗ್ರ ದಾಳಿಗೆ ಸಂಚು ರೂಪಿಸುತ್ತಿದ್ದ ಎಂದು ತಿಳಿಸಿದೆ.

'ರಾಜಕೀಯ ವಿಜ್ಞಾನದಲ್ಲಿ ಪದವಿ ಪಡೆದಿದ್ದ ಜೈಸಿರ್‌ನನ್ನು 'ಆತ್ಮಾಹುತಿ ಬಾಂಬರ್' ಆಗುವಂತೆ ಉಮರ್ ಹಲವು ತಿಂಗಳುಗಳಿಂದ ಮನವೊಲಿಸಲು ಯತ್ನಿಸಿದ್ದ. ಆದರೆ ಜೈಸಿರ್ ಆತ್ಮಾಹುತಿ ಬಾಂಬರ್ ಆಗಲು ನಿರಾಕರಿಸಿದ್ದ.

ಕಳೆದ ವರ್ಷ ಅಕ್ಟೋಬರ್‌ನಲ್ಲಿ ಕುಲ್ಗಾಮ್‌ನ ಮಸೀದಿಯೊಂದರಲ್ಲಿ 'ವೈದ್ಯರನ್ನು ಒಳಗೊಂಡ ಭಯೋತ್ಪಾದನೆ ಮಾದರಿ'ಯ ಸದಸ್ಯರನ್ನು ಭೇಟಿಯಾಗಿದ್ದ. ಅಲ್ ಫಲಾಹ್ ವಿಶ್ವವಿದ್ಯಾಲಯ ಸಮೀಪದ ಬಾಡಿಗೆ ಮನೆಗೂ ಜೈಸಿರ್‌ನನ್ನು ಕರೆದುಕೊಂಡು ಹೋಗಲಾಗಿತ್ತು' ಎಂದು ತಿಳಿಸಿದೆ.

ಪಾಕ್, ಬಾಂಗ್ಲಾದಲ್ಲಿ ಶಿಕ್ಷಣ ಪಡೆದವರ ಮೇಲೆ ನಿಗಾ

ಶ್ರೀನಗರ: ವೈದ್ಯಕೀಯ ಪದವೀಧರರು ಸೇರಿದಂತೆ ವಿದ್ಯಾವಂತರೇ 'ವೈಟ್ ಕಾಲರ್' ಭಯೋತ್ಪಾದನೆಯಲ್ಲಿ ತೊಡಗಿರುವುದು ಖಚಿತವಾಗುತ್ತಿದ್ದಂತೆಯೇ, ಕಳೆದೆರಡು ದಶಕಗಳಲ್ಲಿ ಪಾಕಿಸ್ತಾನ, ಬಾಂಗ್ಲಾದೇಶಗಳಲ್ಲಿ ಎಂಬಿಬಿಎಸ್ ವೈದ್ಯಕೀಯ ಪದವಿ ಪಡೆದವರ ಪರಿಶೀಲನೆಯನ್ನು ಭದ್ರತಾ ಪಡೆಗಳು ತೀವ್ರಗೊಳಿಸಿವೆ.

'2000ನೇ ಇಸವಿಯ ಆರಂಭದಿಂದಲೂ ನೂರಾರು ಕಾಶ್ಮೀರಿ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣಕ್ಕಾಗಿ ಪಾಕಿಸ್ತಾನಕ್ಕೆ ತೆರಳಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಇನ್ನೂ ಅನೇಕರು ಬಾಂಗ್ಲಾದೇಶಕ್ಕೆ ತೆರಳಿ ಶಿಕ್ಷಣ ಪಡೆದಿದ್ದಾರೆ. ಹೀಗಾಗಿ, ಸಂಭಾವ್ಯ ಆರ್ಥಿಕ ವಹಿವಾಟು ಮತ್ತು ಗಡಿಯಾಚೆಗಿನ ಸಂಪರ್ಕ ಹೊಂದಿರುವವರ ಬಗ್ಗೆ ಈಗ ಮರುಪರಿಶೀಲನೆ ನಡೆಸಲಾಗುತ್ತಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

2001 ಮತ್ತು 2010ರ ನಡುವೆ ಮೊದಲ ಹಂತದಲ್ಲಿ ಕಾಶ್ಮೀರಿ ವಿದ್ಯಾರ್ಥಿಗಳು, ವೈದ್ಯಕೀಯ ವಿದ್ಯಾಭ್ಯಾಸಕ್ಕಾಗಿ ಪಾಕಿಸ್ತಾನದ ರಾವಲ್ಪಿಂಡಿ, ಅಬೋಟಾಬಾದ್, ಬಹಾವಲ್ಪುರ್, ಫೈಸಲಾಬಾದ್ ಮತ್ತು ಪೆಶಾವರದ ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ಪಡೆದಿದ್ದಾರೆ.

ಅಸ್ಸಾಂ: ಮತದಾರರ ಪಟ್ಟಿ 'ವಿಶೇಷ' ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂದಿನ ವರ್ಷ ಚುನಾವಣೆ ನಡೆಯಲಿರುವ ಅಸ್ಸಾಂನಲ್ಲಿ ಮತದಾರರ ಪಟ್ಟಿಯ 'ವಿಶೇಷ ಪರಿಷ್ಕರಣೆ' ನಡೆಸಲು ಚುನಾವಣಾ ಆಯೋಗ ಮುಂದಾಗಿದೆ. 'ಅನುಮಾನಾಸ್ಪದ ಮತದಾರ'ರನ್ನು ಮತದಾರರ ಪಟ್ಟಿಯಿಂದ ತೆಗೆಯುವುದೇ ಈ ಪರಿಷ್ಕರಣೆ ಉದ್ದೇಶ ಎಂದು ಆಯೋಗ ಹೇಳಿದೆ. ಈ ಪ್ರಕ್ರಿಯೆಯು ಇದೇ ಶನಿವಾರದಿಂದ ಆರಂಭವಾಗಲಿದ್ದು, 2026ರ ಫೆಬ್ರುವರಿ 10ಕ್ಕೆ ಅಂತಿಮ ಮತದಾರರ ಪಟ್ಟಿಯನ್ನು ಆಯೋಗ ಬಿಡುಗಡೆ ಮಾಡಲಿದೆ.

ಪ್ರಕ್ರಿಯೆ ಹೇಗಿರಲಿದೆ?

- ಬೂತ್ ಮಟ್ಟದ ಅಧಿಕಾರಿಗಳು ಮತದಾರರಿಗೆ ತಮ್ಮ ಮಾಹಿತಿಗಳನ್ನು ನಮೂದು ಮಾಡಲು ಮತದಾರರ ಚೀಟಿ ನೀಡುವುದಿಲ್ಲ. ಮತದಾರರ ಚೀಟಿಯನ್ನು ಮೊದಲೇ ಭರ್ತಿ ಮಾಡಲಾಗಿರುತ್ತದೆ. ಇದರಲ್ಲಿ ಬದಲಾವಣೆಗಳಿದ್ದರೆ ಮಾಡಲಾಗುತ್ತದೆ
- ಮತದಾರರ ಪಟ್ಟಿಯಲ್ಲಿ ಕಳಪೆ ಗುಣಮಟ್ಟದ ಚಿತ್ರಗಳನ್ನು, ಮನುಷ್ಯನ ಚಿತ್ರದ ಬದಲಿಗೆ ಇರುವ ಇತರೆ ಚಿತ್ರಗಳನ್ನು ಬದಲಿಸುವುದು
- ಮನೆ ಸಂಖ್ಯೆ '0' ಎಂದು ಇರುವ ಮನೆಗಳಿಗೆ 'ಎನ್‌1', 'ಎನ್‌2' ಎಂದು ನೀಡಲಾಗುವುದು
- ಕಳೆದ ಬಾರಿ ನಡೆಸಲಾದ ಪರಿಷ್ಕರಣೆಯಿಂದ ಸಿದ್ಧವಾದ ಮತದಾರರ ಪಟ್ಟಿಯನ್ನು ಈ ಬಾರಿ ತುಲನೆ ಮಾಡುವುದಿಲ್ಲ
- ಎರಡು ಅಥವಾ ಮೂರು ಬಾರಿ ಮತದಾರರ ಪಟ್ಟಿಯಲ್ಲಿ ಹೆಸರು ಇರುವವರನ್ನು, ಮೃತರಾದವರನ್ನು ಮತ್ತು ಬೇರೆ ಪ್ರದೇಶಕ್ಕೆ ಸ್ಥಳಾಂತರಗೊಂಡವರನ್ನು ಪಟ್ಟಿಯಿಂದ ತೆಗೆದುಹಾಕಲಾಗುವುದು.

ಅಧಿಕಾರಿಯೊಬ್ಬರ ಆತ್ಮಹತ್ಯೆ ಬಳಿಕ ಬೂತ್ ಮಟ್ಟದ ಅಧಿಕಾರಿಗಳ ಪ್ರತಿಭಟನೆ

ಕೇರಳ: ಎಸ್‌ಐಆರ್ ಕಾರ್ಯಕ್ಕೆ ಬಹಿಷ್ಕಾರ

ತಿರುವನಂತಪುರ (ಪಿಟಿಐ): ಕೆಲಸದ ಒತ್ತಡದಿಂದಾಗಿ ಅಧಿಕಾರಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡ ಕಾರಣ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಬಹಿಷ್ಕಾರ ಹಾಕಿದ್ದರಿಂದ ಕೇರಳದಲ್ಲಿ ಸೋಮವಾರ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯದ ಮೇಲೆ ಪರಿಣಾಮ ಬೀರಿತು.

ಕಣ್ಣೂರು ಜಿಲ್ಲೆಯ ಪಯ್ಯನ್ನೂರಿನಲ್ಲಿ ಬಿಎಲ್‌ಒ ಆಗಿದ್ದ ಅನೀಶ್ ಜಾರ್ಜ್ (41) ಅವರ ಮೃತದೇಹವು ಮನೆಯಲ್ಲಿ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಜಾರ್ಜ್ ಎಸ್‌ಐಆರ್ ಸಮೀಕ್ಷೆ ಕಾರ್ಯಕ್ಕೆ ಸಂಬಂಧಿಸಿದಂತೆ ಭಾರಿ ಒತ್ತಡಕ್ಕೆ ಸಿಲುಕಿದ್ದರು ಎಂದು ಸಂಬಂಧಿಕರು ದೂರಿದ್ದರು.

ರಾಜ್ಯ ಸರ್ಕಾರಿ ನೌಕರರು ಮತ್ತು ಶಿಕ್ಷಕರ ಕ್ರಿಯಾ ಮಂಡಳಿ ಮತ್ತು ಶಿಕ್ಷಕರ ಸೇವಾ ಸಂಸ್ಥೆಗಳ ಜಂಟಿ ಸಮಿತಿ ಸೇರಿದಂತೆ ರಾಜ್ಯ ಸರ್ಕಾರಿ ನೌಕರರ ವಿವಿಧ ಕಾರ್ಮಿಕ ಸಂಘಗಳ ಸದಸ್ಯರು ತಿರುವನಂತಪುರದ ಮುಖ್ಯ ಚುನಾವಣಾ ಅಧಿಕಾರಿ ಕಚೇರಿ ಮತ್ತು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

'ಅಧಿಕಾರಿಗಳು ಬಿಎಲ್‌ಒಗಳ ಮೇಲೆ ಅತಿಯಾದ ಒತ್ತಡ ಹೇರುವುದನ್ನು ನಿಲ್ಲಿಸಬೇಕು. ಎಸ್‌ಐಆರ್ ಪ್ರಕ್ರಿಯೆಯನ್ನು ಮುಂದೂಡಬೇಕು' ಎಂದು ಒತ್ತಾಯಿಸಿದರು. ಸೋಮವಾರ ಮರಣೋತ್ತರ ಪರೀಕ್ಷೆಯ ನಂತರ ಜಾರ್ಜ್ ಅವರ ಶವವನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಯಿತು.

'ಜಾರ್ಜ್‌ಗೆ ಸರಿಯಾಗಿ ಊಟ ಮತ್ತು ನಿದ್ದೆ ಮಾಡಲು ಸಮಯ ಸಿಗಲಿಲ್ಲ. ಎಸ್‌ಐಆರ್ ಭಾಗವಾಗಿ ವಹಿಸಿದ್ದ ಕೆಲಸವನ್ನು ಪೂರ್ಣಗೊಳಿಸಲು ಆತ ತೀವ್ರ ಒತ್ತಡದಲ್ಲಿದ್ದ' ಎಂದು ಅವರ ಸೋದರ ಮಾವ ಸೈಜು ಸುದ್ದಿಗಾರರಿಗೆ ತಿಳಿಸಿದ್ದಾರೆ.

'ಪರಿಷ್ಕರಣೆ ವಿಷಯವಾಗಿ ಜಾರ್ಜ್ ಅವರನ್ನು ಹಿರಿಯ ಅಧಿಕಾರಿಗಳು ಆಗಾಗ್ಗೆ ಸಂಪರ್ಕಿಸುತ್ತಿದ್ದರು. ಅಧಿಕ ಕೆಲಸದ ಹೊರೆಯನ್ನು ನೋಡಿದ ಜಾರ್ಜ್ ತಂದೆ, ಕೆಲಸ ಕಳೆದುಕೊಂಡರೂ ಚಿಂತಿಸಬೇಡ ಎಂದು ಮಗನಿಗೆ ಹೇಳಿದ್ದರು' ಎಂದು ಸೈಜು ಹೇಳಿದ್ದಾರೆ.

ಸಿಪಿಎಂ ವಿರುದ್ಧ ತನಿಖೆಗೆ ಆಗ್ರಹ: 'ಜಾರ್ಜ್ ಅವರ ಆತ್ಮಹತ್ಯೆ ಪ್ರಕರಣದಲ್ಲಿ ಸಿಪಿಎಂ ಕಾರ್ಯಕರ್ತರ ಪಾತ್ರದ ಕುರಿತು ತನಿಖೆ ನಡೆಸಬೇಕು' ಎಂದು ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್ ಆಗ್ರಹಿಸಿದ್ದಾರೆ.



ತಿರುವನಂತಪುರದಲ್ಲಿರುವ ಚುನಾವಣಾ ಆಯೋಗದ ಕಚೇರಿ ಮುಂದೆ ಕೇರಳದ ಸರ್ಕಾರಿ ನೌಕರರು ಸೋಮವಾರ ಪ್ರತಿಭಟಿಸಿದರು —ಪಿಟಿಐ ಚಿತ್ರ

ತಮಿಳುನಾಡು ಕಂದಾಯ ನೌಕರರ ಸಂಘ ಬಹಿಷ್ಕಾರ ಇಂದಿನಿಂದ


ಚೆನ್ನೈ (ಪಿಟಿಐ): ತಮಿಳುನಾಡಿನಾದ್ಯಂತ ನ.18ರಿಂದ ನಡೆಯಲಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯವನ್ನು ಬಹಿಷ್ಕರಿಸುವುದಾಗಿ ಎಂದು ಕಂದಾಯ ನೌಕರರ ಸಂಘಗಳ ಒಕ್ಕೂಟ ಸೋಮವಾರ ತಿಳಿಸಿದೆ.

'ಅಧಿಕ ಕೆಲಸದ ಹೊರೆ, ಕಡಿಮೆ ಮಾನವ ಸಂಪನ್ಮೂಲ, ಗಡುವಿನ ಒತ್ತಡ, ಅಸಮರ್ಪಕ ತರಬೇತಿ ಹಾಗೂ ಕಡಿಮೆ ಗೌರವ ಧನ ವಿರೋಧಿಸಿ ರಾಜ್ಯದಾದ್ಯಂತ ಪ್ರತಿಭಟನೆ ನಡೆಯಲಿದೆ. ಕಂದಾಯ ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತೆಯರು, ಮಧ್ಯಾಹ್ನದ ಬಿಸಿಯೂಟ ನೌಕರರು, ಪುರಸಭೆ ಮತ್ತು ನಿಗಮದ ಸಿಬ್ಬಂದಿ, ಶಿಕ್ಷಕರು ಮತ್ತು ಬಿಎಲ್‌ಒಗಳು, ತಹಶೀಲ್ದಾರರು, ಗ್ರಾಮ ಆಡಳಿತಾಧಿಕಾರಿಗಳು, ಗ್ರಾಮ ಸಹಾಯಕರು, ಸರ್ವೆಯರ್‌ಗಳು, ನಿರೀಕ್ಷಕರು ಮತ್ತು ಕಚೇರಿ ಸಹಾಯಕರು ಪ್ರತಿಭಟನೆಯಲ್ಲಿ ಭಾಗವಹಿಸಲಿ ದ್ದಾರೆ' ಎಂದು ಸಂಘವು ಪ್ರಕಟಣೆಯಲ್ಲಿ ತಿಳಿಸಿದೆ.

'ಎಲ್ಲ ಅಧಿಕಾರಿಗಳಿಗೆ ಸೂಕ್ತ ತರಬೇತಿ ನೀಡಬೇಕು. ಬೂತ್ ಮಟ್ಟದ ಕಚೇರಿಗಳಿಗೆ ಹೆಚ್ಚುವರಿ ಅಧಿಕಾರಿಗಳನ್ನು ನೇಮಿಸಬೇಕು. ಬಿಎಲ್‌ಒ ಮಟ್ಟದಲ್ಲಿ ಸಾಕಷ್ಟು ಸಿಬ್ಬಂದಿ ನಿಯೋಜಿಸಬೇಕು. ಜಿಲ್ಲಾಧಿಕಾರಿಗಳು ಮಧ್ಯರಾತ್ರಿಯವರೆಗೆ ಪರಿಶೀಲನಾ ಸಭೆ ನಡೆಸುವುದನ್ನು ಮತ್ತು ಪರಿಶೀಲನೆ ಹೆಸರಿನಲ್ಲಿ ಪ್ರತಿದಿನ ಮೂರು ವಿಡಿಯೊ ಕಾನ್ಫರೆನ್ಸ್ ನಡೆಸುವುದು ನಿಲ್ಲಿಸಬೇಕು' ಎಂದು ಆಗ್ರಹಿಸಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಉತ್ತಮ ವ್ಯಕ್ತಿ ಮಾತಿನಿಂದ ಬಳಲುತ್ತಾನೆ. ಶುದ್ಧ ಚಾರಿತ್ರ್ಯದಿಂದ ಕಂಗೊಳಿಸುತ್ತಾನೆ.

–ಕನ್‌ಫ್ಯೂಷಿಯಸ್

ಸಂಪಾದಕೀಯ

ಕೃಷ್ಣಮೃಗಗಳ ದಾರುಣ ಅಂತ್ಯ ಮೃಗಾಲಯಗಳ ಸುಧಾರಣೆ ಅಗತ್ಯ

ಬೆಳಗಾವಿ ಜಿಲ್ಲೆಯ ಭೂತರಾಮನ ಹಟ್ಟಿಯಲ್ಲಿರುವ ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿನ 31 ಕೃಷ್ಣಮೃಗಗಳು ಇದ್ದಕ್ಕಿದ್ದಂತೆ ಸಾವಿಗೀಡಾಗಿವೆ. ಈ ಘಟನೆ ಮೃಗಾಲಯದಲ್ಲಿನ ನಿರ್ವಹಣೆಯ ಗುಣಮಟ್ಟದ ಬಗ್ಗೆ ಅನುಮಾನ ಉಂಟುಮಾಡುವಂತಿದೆ. ಕೃಷ್ಣಮೃಗಗಳ ಸಾವಿನ ಕಾರಣ ಅಧಿಕೃತವಾಗಿ ಸ್ಪಷ್ಟಗೊಂಡಿಲ್ಲವಾದರೂ, ಅಲ್ಲಿನ ನಿರ್ವಹಣೆಯ ಬಗ್ಗೆ ಪ್ರಶ್ನೆಗಳು ಇದ್ದೇ ಇವೆ. ಮೃಗಾಲಯದ ಆರೋಗ್ಯ ಸಲಹಾ ಸಮಿತಿ ಸಕ್ರಿಯವಾಗಿಲ್ಲ ಎಂದು ಪರಿಸರವಾದಿಗಳು ದೂರಿದ್ದಾರೆ. ಕೇಂದ್ರ ಮೃಗಾಲಯ ಪ್ರಾಧಿಕಾರದ ಮಾರ್ಗಸೂಚಿಗಳ ಪ್ರಕಾರ ಮೃಗಾಲಯಗಳಲ್ಲಿ ಆರೋಗ್ಯ ಸಲಹಾ ಸಮಿತಿ ಇರುವುದು ಕಡ್ಡಾಯ. ಮೃಗಾಲಯದ ಸ್ಥಿತಿಗತಿ, ಪ್ರಾಣಿಗಳ ಆರೋಗ್ಯ, ಹವಾಮಾನ ವೈಪರೀತ್ಯ, ಆಹಾರ ಹಾಗೂ ಚುಚ್ಚುಮದ್ದು ಸೇರಿದಂತೆ ವನ್ಯಮೃಗಗಳ ಕಾಳಜಿಗೆ ಅಗತ್ಯವಾದ ಎಲ್ಲ ವಿಷಯಗಳ ಬಗ್ಗೆ ಸಮಿತಿ ಮಾರ್ಗದರ್ಶನ ಮಾಡುತ್ತದೆ. ತುರ್ತು ಸಂದರ್ಭಗಳಲ್ಲಿ ಸಮಿತಿಯ ಹೊಣೆಗಾರಿಕೆ ಮತ್ತಷ್ಟು ಹೆಚ್ಚು. ಪ್ರಸ್ತುತ, ಕೃಷ್ಣಮೃಗಗಳ ಸಾವಿಗೆ ಸಂಬಂಧಿಸಿದಂತೆ ಆರೋಗ್ಯ ಸಮಿತಿಯ ಹೊಣೆಗಾರಿಕೆ ಏನು ಎನ್ನುವುದು ಸ್ಪಷ್ಟವಾಗಬೇಕಾಗಿದೆ. ಸಾವಿಗೀಡಾದ ಪ್ರಾಣಿಗಳ ಒಳ ಅಂಗಾಂಗ ಮಾದರಿಗಳನ್ನು ಬೆಂಗಳೂರಿನ ಪಶು ವೈದ್ಯಕೀಯ ಜೈವಿಕ ಸಂಶೋಧನಾ ಸಂಸ್ಥೆಗೆ ಕಳುಹಿಸಲಾಗಿದ್ದು, ಅಲ್ಲಿಂದ ವರದಿ ಬಂದ ನಂತರವಷ್ಟೇ ದುರಂತದ ಕಾರಣ ಸ್ಪಷ್ಟಗೊಳ್ಳಲಿದೆ.



ಕೃಷ್ಣಮೃಗಗಳ ಸಾವು ಮೃಗಾಲಯಗಳಲ್ಲಿನ ನಿರ್ವಹಣೆಯ ವೈಫಲ್ಯವನ್ನು ಸೂಚಿಸುವಂತಿದೆ. ಈ ದುರ್ಘಟನೆ ಮಾನವೀಯತೆಯ ಅಣಕದಂತಿದೆ.

ಮೃಗಾಲಯದಲ್ಲಿ ಒಟ್ಟು 38 ಕೃಷ್ಣಮೃಗಗಳಿದ್ದು, ಅವುಗಳ ಪೈಕಿ 31 ಸಾವಿಗೀಡಾಗಿವೆ. ಮಾರಣಾಂತಿಕ ಬ್ಯಾಕ್ಟೀರಿಯಾ ಸೋಂಕು ಈ ದುರಂತಕ್ಕೆ ಕಾರಣವಾಗಿರಬಹುದು ಎಂದು ಹೇಳಲಾಗುತ್ತಿದೆ. ಸೆಪ್ಟೆಸೀಮಿಯಾ ಹೆಮರೇಜ್ ಹೆಸರಿನ ಈ ಸೋಂಕು ಪ್ರಾಣಿಗಳಲ್ಲಿ ಆಂತರಿಕ ರಕ್ತಸ್ರಾವಕ್ಕೆ ಕಾರಣವಾಗುವುದರ ಜೊತೆಗೆ ಅಂಗಾಂಗಗಳನ್ನು ತೀವ್ರವಾಗಿ ಗಾಸಿಗೊಳಿಸುತ್ತದೆ. ಸೋಂಕು ಉಂಟಾದ 24 ಗಂಟೆಗಳಲ್ಲೇ ಪ್ರಾಣಿಗಳು ಜೀವ ಕಳೆದುಕೊಳ್ಳುವ ಸಾಧ್ಯತೆಯಿದೆ. ಮೃಗಾಲಯದಲ್ಲಿ ಉಳಿದಿರುವ ಏಳು ಕೃಷ್ಣಮೃಗಗಳಿಗೂ ಸೋಂಕು ತಗುಲಿದೆ ಎನ್ನಲಾಗಿದ್ದು, ಅವುಗಳ ಶುಶ್ರೂಷೆ ನಡೆದಿದೆ. ಕೃಷ್ಣಮೃಗಗಳ ವಾಸಸ್ಥಳಕ್ಕೆ ಹೊಂದಿಕೊಂಡಂತೆಯೇ ‘ಜಿಂಕೆ ವನ’ ಮತ್ತು ‘ಕಡವೆ ವನ’ ಇವೆ. ಇಡೀ ಮೃಗಾಲಯದಲ್ಲಿ ಒಟ್ಟು 208 ಪ್ರಾಣಿಗಳಿವೆ. ಅವುಗಳನ್ನು ಕೂಡ ಸೋಂಕು ಬಾಧಿಸಿದಲ್ಲಿ ಅಪಾಯ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದ್ದೇ ಇದೆ. ರಾಜ್ಯದ ಯಾವುದೇ ಮೃಗಾಲಯದಲ್ಲಿ ಕಾಣಿಸಿಕೊಳ್ಳದ ಮಾರಣಾಂತಿಕ ಸೋಂಕು ಭೂತರಾಮನ ಹಟ್ಟಿಯಲ್ಲಿ ಮಾತ್ರ ಕಾಣಿಸಿಕೊಂಡಿದ್ದು ಹೇಗೆ ಎನ್ನುವ ಪ್ರಶ್ನೆಗೂ ಉತ್ತರ ದೊರೆಯಬೇಕಾಗಿದೆ.

ಮನುಷ್ಯ ಹಾಗೂ ವನ್ಯಜೀವಿ ಸಂಘರ್ಷದ ತೀವ್ರತೆಯಲ್ಲಿ, ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ವನ್ಯಮೃಗಗಳು ಕೊನೆಯುಸಿರು ಎಳೆಯುತ್ತಿವೆ. ಕನಕಪುರ ತಾಲ್ಲೂಕಿನ ಸಾತನೂರು ಅರಣ್ಯ ವಲಯದ ಹಾರೋಬೆಲೆ ಜಲಾಶಯದ ಹಿನ್ನೀರಿನಲ್ಲಿ ಮುಳುಗಿ ಎರಡು ಕಾಡಾನೆಗಳು ಇತ್ತೀಚೆಗೆ ಮೃತಪಟ್ಟಿದ್ದರೆ, ಮಲೆ ಮಹದೇಶ್ವರ ವನ್ಯಜೀವಿಧಾಮದಲ್ಲಿ ಐದು ಹುಲಿಗಳು ವಿಷಪ್ರಾಶನದಿಂದ ಸಾವಿಗೀಡಾದ ಘಟನೆ ದೇಶದ ಗಮನಸೆಳೆದಿತ್ತು. ಪ್ರಸ್ತುತ, ಕೃಷ್ಣಮೃಗಗಳ ಸಾವಿನ ಮೂಲಕ ಮೃಗಾಲಯಗಳು ಕೂಡ ವನ್ಯಮೃಗಗಳಿಗೆ ಸುರಕ್ಷಿತವಲ್ಲ ಎನ್ನುವಂತಾಗಿದೆ. ಪ್ರಾಣಿಗಳ ಸುರಕ್ಷತೆ, ಪೋಷಣೆ ಹಾಗೂ ವೈದ್ಯಕೀಯ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಭಾರತದಲ್ಲಿನ ಮೃಗಾಲಯಗಳಲ್ಲಿ ಇರುವ ಕುಂದುಕೊರತೆಗಳು ಆಗಾಗ ಬೆಳಕಿಗೆ ಬರುತ್ತಲೇ ಇರುತ್ತವೆ. ಪ್ರಾಣಿಗಳ ಸರಣಿ ಸಾವುಗಳ ಹಿನ್ನೆಲೆಯಲ್ಲಿ ದೆಹಲಿಯ ಮೃಗಾಲಯದ ಮಾನ್ಯತೆಯನ್ನು ‘ವಿಶ್ವ ಮೃಗಾಲಯ ಒಕ್ಕೂಟ’ ಕಳೆದ ವರ್ಷ ರದ್ದುಗೊಳಿಸಿತ್ತು. ದೇಶದ ಉಳಿದ ಭಾಗಗಳಲ್ಲಿನ ಮೃಗಾಲಯಗಳ ಸ್ಥಿತಿಗತಿ ಕೂಡ ಉತ್ತಮವಾಗಿಯೇನೂ ಇಲ್ಲ. ಪ್ರಸ್ತುತ, ಭೂತರಾಮನ ಹಟ್ಟಿಯಲ್ಲಿ ನಡೆದಿರುವ ದುರಂತ ಮೃಗಾಲಯಗಳ ಸ್ಥಿತಿಗತಿಯ ಪರಾಮರ್ಶೆಗೆ ಒತ್ತಾಯಿಸುವಂತಿದೆ. ಕೃಷ್ಣಮೃಗಗಳ ಸಾವಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಅರಣ್ಯ ಸಚಿವ ಈಶ್ವರ ಖಂಡ್ರೆ ಆದೇಶಿಸಿದ್ದಾರೆ. ಈ ತನಿಖೆ ಆದಷ್ಟು ಬೇಗ ಮುಗಿದು, ನತದೃಷ್ಟ ಮೃಗಗಳ ಸಾವಿನ ನಿಖರ ಕಾರಣ ಬಹಿರಂಗ ಆಗಬೇಕಾಗಿದೆ. ಪ್ರಸಕ್ತ ಘಟನೆ, ರಾಜ್ಯದಲ್ಲಿನ ಮೃಗಾಲಯಗಳ ಸುಧಾರಣೆಗೂ ಕಾರಣ ಆಗಬೇಕಾಗಿದೆ. ಮೃಗಾಲಯಗಳ ಹೆಸರಿನಲ್ಲಿ ವನ್ಯಮೃಗಗಳ ಸ್ವಾತಂತ್ರ್ಯಹರಣ ಮಾಡುವುದು ಎಷ್ಟು ಸರಿ ಎನ್ನುವ ಚರ್ಚೆ ಹಳೆಯದು. ಪ್ರಾಣಿಗಳ ಸ್ವಾತಂತ್ರ್ಯಹರಣದ ಜೊತೆಗೆ ಪ್ರಾಣಹರಣವೂ ನಡೆಯುತ್ತಿರುವುದು ಮಾನವೀಯತೆ ಹಾಗೂ ನಾಗರಿಕತೆಯ ಅಣಕದಂತೆ ಕಾಣಿಸುತ್ತಿದೆ.

ಚುನಾವಣೆ: ಇದು ಮಹಿಳಾಪರ್ವ!



ವಿಶ್ಲೇಷಣೆ

ಜ್ಯೋತಿ

> ಬಿಹಾರ ಚುನಾವಣಾ ಫಲಿತಾಂಶದ ನಂತರ ಮಹಿಳೆಯರು ಭಾರತದ ಚುನಾವಣಾ ರಾಜಕಾರಣದ ನಿರ್ಣಾಯಕ ಶಕ್ತಿಯಾಗಿ ರೂಪುಗೊಂಡಿರುವುದು ಸ್ಪಷ್ಟವಾಗಿದೆ. ಈ ಶಕ್ತಿ ಆಮಿಷಗಳ ಮೂಲಕ ರೂಪುಗೊಂಡಿದ್ದಲ್ಲ, ಆತ್ಮವಿಶ್ವಾಸ ಮತ್ತು ವಿವೇಕದಿಂದ ವ್ಯಕ್ತಗೊಂಡಿದೆ.

ಭಾರತದ ಮಹಿಳೆಯರು ದೇಶದ ‘ಚುನಾವಣಾ ನಕ್ಷೆ’ಯನ್ನು ಸದ್ದಿಲ್ಲದೆ ಪುನರ್ ರಚಿಸುತ್ತಿರುವುದನ್ನು ಬಿಹಾರದ ವಿಧಾನಸಭಾ ಚುನಾವಣೆ ಫಲಿತಾಂಶ ಸೂಚಿಸುತ್ತಿದೆ. ಚುನಾವಣಾ ಆಯೋಗದ ವಿವಾದಾಸ್ಪದ ನಿಲುವುಗಳು, ಜಾತಿ ಸಮೀಕರಣ, ಮೈತ್ರಿಗಳ ಬಲಾಬಲ, ಹಣದ ಪ್ರಭಾವ, ಇತ್ಯಾದಿ ಅಂಶಗಳ ಕುರಿತಾದ ಚರ್ಚೆಗಳ ನಡುವೆ, ಈ ಚುನಾವಣಾ ಫಲಿತಾಂಶದಲ್ಲಿ ಬಿಹಾರದ ಮಹಿಳೆಯರ ಪಾತ್ರವನ್ನು ಕಡೆಗಣಿಸುವಂತಿಲ್ಲ.

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಚುನಾವಣೆ ನಡೆದ ಕರ್ನಾಟಕ, ಬಿಹಾರ, ಮಧ್ಯಪ್ರದೇಶ ಮತ್ತು ಒಡಿಶಾ ರಾಜ್ಯಗಳಲ್ಲಿನ ಫಲಿತಾಂಶಗಳು, ದೇಶದ ಮಹಿಳೆಯರು ರಾಜಕೀಯದಲ್ಲಿ ನಿರ್ಣಾಯಕ ಶಕ್ತಿಯಾಗಿ ಹೊರಹೊಮ್ಮುತ್ತಿದ್ದಾರೆ ಎನ್ನುವುದನ್ನು ನಿರೂಪಿಸಿವೆ. ಜಾತಿ ಲೆಕ್ಕಾಚಾರ, ಪ್ರಾದೇಶಿಕ ಅಸ್ಮಿತೆ, ರೈತರ ಸಮಸ್ಯೆ, ಗಡಿ ರಾಜಕೀಯ ಇತ್ಯಾದಿ ಅಂಶಗಳ ಮೇಲಷ್ಟೇ ಗಮನಹರಿಸುತ್ತಿದ್ದ ರಾಜಕೀಯ ಪಕ್ಷಗಳು ಈಗ ‘ಮಹಿಳಾ ಮತ ಬ್ಯಾಂಕ್’ ಓಲೈಸಲು ತಂತ್ರಗಳನ್ನು ರೂಪಿಸುತ್ತಿವೆ. ಆರ್ಥಿಕ ಬೆಂಬಲ, ಶಿಕ್ಷಣಕ್ಕೆ ಪ್ರೋತ್ಸಾಹ, ಉಚಿತ ಬಸ್ ಪ್ರಯಾಣ, ಸುರಕ್ಷತಾ ಕಾರ್ಯಕ್ರಮಗಳಂತಹ ಕಲ್ಯಾಣ ಯೋಜನೆಗಳ ಯಶಸ್ಸು, ಮಹಿಳೆಯರು ತಮ್ಮ ದೈನಂದಿನ ಜೀವನವನ್ನು ಸುಗಮಗೊಳಿಸುವ ರಾಜಕೀಯ ಭರವಸೆಗಳಿಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸುತ್ತಿದ್ದಾರೆ ಎನ್ನುವುದನ್ನು ಪುಷ್ಟೀಕರಿಸುತ್ತದೆ.

ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠವು, ‘ಮಹಿಳೆಯರಿಗೆ ಬರೀ ಮೀಸಲಾತಿ ಮಾತ್ರವಲ್ಲ, ಅವರು ಸಮಾನ ಸ್ಥಾನಮಾನ ಮತ್ತು ಸಮಾನ ಅವಕಾಶಕ್ಕೆ ಅರ್ಹರು. ಅವರ ಹೆಚ್ಚಿನ ಭಾಗವಹಿಸುವಿಕೆಯು ಪ್ರಜಾಪ್ರಭುತ್ವದಲ್ಲಿ ಭರವಸೆಯನ್ನು ಬಲಪಡಿಸುತ್ತದೆ’ ಎಂದು ಇತ್ತೀಚೆಗಷ್ಟೇ ಅಭಿಪ್ರಾಯಪಟ್ಟಿದೆ. ಈ ಹೇಳಿಕೆಗೆ ಪೂರಕವೆಂಬಂತೆ, ಪುರುಷಕೇಂದ್ರಿತ ಚುನಾವಣಾ ರಾಜಕೀಯದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಪ್ರಸ್ತುತ, ಭಾರತದ ಮಹಿಳೆಯರು ತಮ್ಮ ರಾಜಕೀಯ ಅವಕಾಶಕ್ಕಾಗಿ ಕಾಯುತ್ತಿಲ್ಲ; ಬದಲಾಗಿ, ವಿವೇಕದಿಂದ ಮತದಾನ ಮಾಡುವ ಮೂಲಕ ದೇಶದ ರಾಜಕೀಯ ಚಿತ್ರಣವನ್ನು ಸದ್ದಿಲ್ಲದೇ ಬದಲಾಯಿಸುತ್ತಿದ್ದಾರೆ.

ಚುನಾವಣಾ ವಿಶ್ಲೇಷಕರು ವಿವರಿಸುವಂತೆ, ಬಿಹಾರದ ಮಹಿಳೆಯರು ಸಾಂಪ್ರದಾಯಿಕ ರಾಜಕೀಯ ನಿರೀಕ್ಷೆಗಳನ್ನು ಹುಸಿಯಾಗಿಸಿದ ‘ಮೌನ ಕ್ರಾಂತಿಕಾರಿಗಳು’. 2005ರಲ್ಲಿ ನಿತೀಶ್ ಕುಮಾರ್ ಅವರ ಅಧಿಕಾರಾವಧಿಯಿಂದ ಪ್ರಾರಂಭಗೊಂಡ– ವಿದ್ಯಾರ್ಥಿನಿಯರಿಗೆ ಸೈಕಲ್, ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ, ಉಚಿತ ಸಮವಸ್ತ್ರ, ಮುಂತಾದ ಕಲ್ಯಾಣ ಕಾರ್ಯಕ್ರಮಗಳು ಮಹಿಳಾ ಮತದಾರರಲ್ಲಿ ಆಳವಾದ ಸ್ವಾಭಿಮಾನ ಮತ್ತು ಸಬಲೀಕರಣದ ಪ್ರಜ್ಞೆಯನ್ನು ಬೆಳೆಸಿವೆ. ಇದಕ್ಕೆ ಪೂರಕವೆಂಬಂತೆ, 2020ರ ಬಿಹಾರ ವಿಧಾನಸಭಾ ಚುನಾವಣೆಯಲ್ಲಿಯೂ, ಮಹಿಳೆಯರ ಮತದಾನ ಪ್ರಮಾಣವು ಪುರುಷರಿಗಿಂತ ಹೆಚ್ಚಾಗಿತ್ತು.

ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯು ಸಿದ್ಧಾಂತಕ್ಕಿಂತ ಹೆಚ್ಚಾಗಿ ಅವರ ದೈನಂದಿನ ಜೀವನದ ಅನುಭವದ ಮೇಲೆ ಸಾಮಾನ್ಯವಾಗಿ ನಿರ್ಧಾರಗೊಳ್ಳುತ್ತದೆ. ಹೆಣ್ಣುಮಕ್ಕಳಿಗೆ ಮನೆಯ ಗಡಿಯನ್ನು ದಾಟಿ ಶಾಲೆಗೆ ಹೋಗಲು ಪ್ರೋತ್ಸಾಹಿಸಿದಾಗ ಅಥವಾ ಗ್ರಾಮೀಣ ಮಹಿಳೆಯರಿಗೆ ನೇರ ನಗದು ವರ್ಗಾವಣೆಯ ಮೂಲಕ ತಮ್ಮ ಮನೆಯಲ್ಲಿ ಘನತೆಯನ್ನು ಪಡೆಯಲು ಸಹಾಯ ಮಾಡಿದಾಗ, ರಾಜಕೀಯ ಲೆಕ್ಕಾಚಾರಗಳು ಜಾತಿ ಮತ್ತು ಧರ್ಮದ ಸೀಮಿತ ಚೌಕಟ್ಟನ್ನು ಮೀರಿ ಸಮಾಜದ ಪರಿಕಲ್ಪನೆಯು ವಿಸ್ತಾರವಾಗಿ ಸಶಕ್ತಗೊಳ್ಳುತ್ತದೆ.

ಕರ್ನಾಟಕದ 2023ರ ವಿಧಾನಸಭಾ ಚುನಾವಣೆಯಲ್ಲಿಯೂ ಕಾಂಗ್ರೆಸ್ ಪಕ್ಷದ ಗೆಲುವಿನಲ್ಲಿ ಮಹಿಳಾ ಮತದಾರರ ಪಾತ್ರ ಮಹತ್ವದ್ದಾಗಿತ್ತು. ಪಕ್ಷದ ಗ್ಯಾರಂಟಿ ಯೋಜನೆಗಳ ಭರವಸೆಗೆ ಮಹಿಳೆಯರು ಪೂರಕವಾಗಿ ಸ್ಪಂದಿಸಿದರು. ‘ಗೃಹಲಕ್ಷ್ಮಿ’, ‘ಶಕ್ತಿ’ಗಳಂತಹ ಸ್ತ್ರೀಪರ ಯೋಜನೆಗಳು ಭಾವನಾತ್ಮಕ ಮತ್ತು ಆರ್ಥಿಕ ಪರಿಣಾಮವನ್ನು ಉಂಟು ಮಾಡಿವೆ. ಇತ್ತೀಚೆಗೆ ಅನುಷ್ಠಾನಗೊಂಡ ತಿಂಗಳಿಗೊಂದು ವೇತನಸಹಿತ ಮುಟ್ಟಿನ ರಜೆ ನೀತಿ ಕೂಡ ಮಹಿಳೆಯರ ಮೆಚ್ಚುಗೆ ಗಳಿಸಿದೆ. ಕರ್ನಾಟಕ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳು ಮಹಿಳೆಯರಿಗೆ ಕೊಟ್ಟಂತಹ ಬಿಟ್ಟಿ ಭಾಗ್ಯಗಳಲ್ಲ. ಅವು ಮಹಿಳೆಯರ ಘನತೆಯನ್ನು ಹೆಚ್ಚಿಸಿವೆ, ಅಸಮಾನತೆಯನ್ನು ಕಡಿಮೆ ಮಾಡುವ ಕ್ರಮಗಳಾಗಿವೆ ಮತ್ತು ಮಹಿಳೆಯರ ಆತ್ಮವಿಶ್ವಾಸವನ್ನು ಪುನರ್ ಸ್ಥಾಪಿಸುವ ದಿಟ್ಟಹೆಜ್ಜೆಗಳಾಗಿವೆ. ಸಮೀಕ್ಷೆಗಳು ಹೇಳುವಂತೆ– ಸುಮಾರು ಶೇ 70ರಷ್ಟು ಮಹಿಳಾ ಫಲಾನುಭವಿಗಳು, ಗ್ಯಾರಂಟಿ ಯೋಜನೆಗಳು ತಮ್ಮ ಜೀವನವನ್ನು ಸಕಾರಾತ್ಮಕವಾಗಿ ಬದಲಾಯಿಸಿವೆ ಮತ್ತು ತಾವೀಗ ರಾಜಕೀಯ ವ್ಯವಸ್ಥೆಯಲ್ಲಿ ಪ್ರಬಲ ಶಕ್ತಿಯಾಗಿ ಅಂಗೀಕರಿಸಲ್ಪಟ್ಟದ್ದೇವೆ ಎಂದು ಹೇಳಿಕೊಂಡಿದ್ದಾರೆ.

ಮಹಿಳೆಯರ ಸುರಕ್ಷತೆ, ಆರ್ಥಿಕ ಸ್ವಾತಂತ್ರ್ಯ ಮತ್ತು ಚಲನಶೀಲತೆಯನ್ನು ಗುರಿಯಾಗಿಸಿಕೊಂಡ ಕಲ್ಯಾಣ ಯೋಜನೆಗಳು ಚುನಾವಣಾ ದಿಕ್ಕನ್ನೇ ಬದಲಾಯಿಸುವ ಅಂಶಗಳಾಗಿ ಬದಲಾಗುತ್ತಿವೆ. ನೇರವಾಗಿ ಮಹಿಳೆಯರ ಖಾತೆಗೆ ಹಣ ವರ್ಗಾವಣೆ: ಮಧ್ಯವರ್ತಿ ಇಲ್ಲದ ಈ ಆರ್ಥಿಕ ಬೆಂಬಲವು ಮಹಿಳೆಯರನ್ನು ಸಶಕ್ತಗೊಳಿಸುತ್ತಿದೆ. ಉಚಿತ ಪ್ರಯಾಣ ಮತ್ತು ಅದಕ್ಕೆ ಸಂಬಂಧಿಸಿದ ಚಲನಶೀಲತೆಯಿಂದಾಗಿ, ಹೆಚ್ಚಿನ ಸಂಖ್ಯೆಯ ಮಹಿಳೆಯರು ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಬೆಂಬಲ. ಹೆಣ್ಣುಮಕ್ಕಳಿಗೆ ನೀಡುವ ಉಚಿತ ಶಿಕ್ಷಣ, ವಿದ್ಯಾರ್ಥಿವೇತನ ಮತ್ತು ಹಾಸ್ಟೆಲ್ ಸೌಲಭ್ಯಗಳ ಯೋಜನೆಗಳಿಂದಾಗಿ ಬಡ ಗ್ರಾಮೀಣ ಕುಟುಂಬಗಳ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿದೆ.

ಬಿಹಾರ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಂತಹ ರಾಜ್ಯಗಳಲ್ಲಿ ಅಳವಡಿಸಲಾಗಿರುವ ಮದ್ಯಪಾನ ನಿಯಂತ್ರಣದಂತಹ ನೀತಿ ಮತ್ತು ಸುರಕ್ಷತಾ ಕ್ರಮದ ಬೇಡಿಕೆಗಳು, ನೇರವಾಗಿ ಮಹಿಳಾ ಚಳವಳಿಗಳಿಂದ ಹೊರಹೊಮ್ಮಿದ ರಾಜಕೀಯ ನಿರ್ಧಾರಗಳಾಗಿವೆ. ಇಂತಹ ಕಠಿಣ ಸುರಕ್ಷತಾ ಕಾನೂನುಗಳು ಅಥವಾ ನಿಷೇಧದ ಭರವಸೆ ನೀಡಿದ ಪಕ್ಷಗಳು ಗಣನೀಯವಾಗಿ ಮಹಿಳೆಯರ ಬೆಂಬಲವನ್ನು ಗಳಿಸಿವೆ.

ಮಹಿಳೆಯರು ಮಹಿಳಾಪರ ಸೌಲಭ್ಯಗಳಿಗಾಗಿ ಮತ ಚಲಾಯಿಸುತ್ತಾರೆ ಎಂದು ಭಾವಿಸಿದರೆ ಅದು ತಪ್ಪಾಗುತ್ತದೆ. ಅವರ ನಿರ್ಧಾರಗಳು ಬಹಳ ಸೂಕ್ಷ್ಮವಾಗಿರುತ್ತವೆ ಮತ್ತು ಪ್ರಾಯೋಗಿಕವಾಗಿರುತ್ತವೆ. ಅವರು ಸಾರ್ವಜನಿಕ ಸ್ಥಳಗಳಲ್ಲಿ ಮಹಿಳಾ ಸುರಕ್ಷತೆ, ಕೌಟುಂಬಿಕ ಹಿಂಸಾಚಾರದ ನಿಯಂತ್ರಣ, ಆರ್ಥಿಕ ಸ್ವಾವಲಂಬನೆ, ಹೆಣ್ಣುಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಕೌಟುಂಬಿಕ ಜವಾಬ್ದಾರಿಗಳಲ್ಲಿ ಲಿಂಗ ಸಮಾನತೆ ಇತ್ಯಾದಿ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನ್ಯಾಯಯುತವಾಗಿ ಮತ ಚಲಾಯಿಸುತ್ತಾರೆ. ಮಹಿಳೆಯರ ರಾಜಕೀಯ ಪ್ರಜ್ಞೆಯು, ತಮ್ಮ ದೈನಂದಿನ ಜೀವನದ ಸಮಸ್ಯೆಗಳಿಗೆ ಸ್ಪಂದಿಸುವ ಮತ್ತು ಅವುಗಳನ್ನು ಸುಧಾರಿಸುವ ಪ್ರಾಯೋಗಿಕ, ಸ್ಪಷ್ಟ, ಸರಳ ಅಂಶಗಳನ್ನು ಒಳಗೊಂಡಿದೆ ಎನ್ನಬಹುದು. ಅವರಿಗೆ ನಮ್ಮ ಜನನಾಯಕರು ಮಾಡುವ ಸುದೀರ್ಘವಾದ ವರ್ಣರಂಜಿತವಾದ ಮೋಡಿಯ ಮಾತುಗಳ ಬದಲಾಗಿ, ಅವರ ದೈನಂದಿನ ಬದುಕನ್ನು ಸುಗಮ ಮತ್ತು ಸುರಕ್ಷಿತಗೊಳಿಸುವ ಪ್ರಾಯೋಗಿಕ ಕಾರ್ಯಯೋಜನೆಗಳು ಬೇಕಾಗಿವೆ.

2019ರಿಂದ ಚುನಾವಣಾ ಆಯೋಗದ ಅಂಕಿ ಅಂಶಗಳು ಹೇಳುವಂತೆ, ಪುರುಷರಿಗೆ ಹೋಲಿಸಿದರೆ ಮಹಿಳೆಯರ ಮತದಾನದಲ್ಲಿ ಸ್ಥಿರವಾದ ಏರಿಕೆ ಇದೆ. ಬಿಹಾರ, ಪಶ್ಚಿಮ ಬಂಗಾಳ, ಒಡಿಶಾ ಮತ್ತು ಮಧ್ಯಪ್ರದೇಶದಂತಹ ರಾಜ್ಯಗಳ ಸಾಕಷ್ಟು ಕ್ಷೇತ್ರಗಳಲ್ಲಿ ಮಹಿಳೆಯರ ಮತದಾನದ ಪ್ರಮಾಣವು ಗಣನೀಯ ಪ್ರಮಾಣದಲ್ಲಿ ಹೆಚ್ಚಳ ಕಂಡಿದೆ. ಈ ಅಂಶವು, ಮಹಿಳೆಯರ ಧ್ವನಿಯನ್ನು ಮತ್ತು ಅವರ ಆಶೋತ್ತರವನ್ನು ನಿರ್ಲಕ್ಷಿಸುವ ಪಕ್ಷಗಳಿಗೆ ಎಚ್ಚರಿಕೆಯ ಕರೆಗಂಟೆಯಾಗಿದೆ ಎನ್ನಬಹುದು.

ದೇಶದಲ್ಲಿ ಮಹಿಳಾ ಮತದಾರರು ಚುನಾವಣಾ ರಾಜಕೀಯದ ಅಂಚಿನಿಂದ ಕೇಂದ್ರ ಸ್ಥಾನಕ್ಕೆ ಬಂದಿರುವುದಂತೂ ಸ್ಪಷ್ಟ. ಪುರುಷರಂತೆ ಹೆಚ್ಚಿನ ಸಂಖ್ಯೆಯಲ್ಲಿ ಟೆಲಿವಿಷನ್ ಚರ್ಚೆಗಳಲ್ಲಿ ಅಥವಾ ಸಾಮಾಜಿಕ ಮಾಧ್ಯಮ ನಿರೂಪಣೆಗಳಲ್ಲಿ ಮಹಿಳೆಯರು ಪ್ರಾಬಲ್ಯ ಸಾಧಿಸದಿರಬಹುದು. ಆದರೆ, ಅವರ ಪ್ರಭಾವ ಸದ್ದಿಲ್ಲದೆ ಚುನಾವಣಾ ಫಲಿತಾಂಶಗಳನ್ನು ಮರುರೂಪಿಸುತ್ತಿದೆ. ಈ ಬದಲಾವಣೆಯು ರಚನಾತ್ಮಕವಾಗಿದೆ, ದೀರ್ಘಕಾಲಿಕವಾಗಿದೆ ಮತ್ತು ಪ್ರಜಾಪ್ರಭುತ್ವವನ್ನು ಬಲಪಡಿಸುವಂತಹದ್ದಾಗಿದೆ. ಲಿಂಗ ಸಮಾನತೆಯು ಮಹಿಳೆಯರಿಗೆ ನೀಡುವ ಒಂದು ರಿಯಾಯಿತಿಯಲ್ಲ; ಬದಲಾಗಿ, ಅದು ಅವರ ಹಕ್ಕು ಎಂಬ ಸುಪ್ರೀಂ ಕೋರ್ಟ್‌ನ ಅಭಿಪ್ರಾಯವು ಈ ರೂಪಾಂತರದ ಚೈತನ್ಯವನ್ನು ಸೆರೆಹಿಡಿಯುತ್ತದೆ.

ವರ್ತಮಾನದ ಭಾರತದಲ್ಲಿ ರಾಜಕೀಯ ಅಧಿಕಾರದ ಹಾದಿಯು ಮಹಿಳೆಯರ ಆಶೋತ್ತರಗಳ ಮೂಲಕ ಹಾದುಹೋಗುತ್ತಿದೆ. ರಾಜಕೀಯ ಪಕ್ಷಗಳು ದೇಶದ ಅರ್ಧದಷ್ಟು ಜನಸಂಖ್ಯೆ ಹೊಂದಿರುವ ಮಹಿಳೆಯರನ್ನು ಕಡೆಗಣಿಸುವಂತಿಲ್ಲ. ಅವರನ್ನು ಸ್ವಾಭಿಮಾನದ, ಸಮಾನರಾದ, ಪ್ರಜ್ಞಾಪೂರ್ವಕ ನಾಗರಿಕರು ಮತ್ತು ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವವರು ಎಂದು ಗುರುತಿಸುವುದನ್ನು ಮುಂದುವರಿಸುವವರೆಗೆ, ಭಾರತದ ಪ್ರಜಾಪ್ರಭುತ್ವವು ಸದೃಢವಾಗಿರುತ್ತದೆ.

ನಮ್ಮ ಚುನಾವಣೆಗಳಲ್ಲಿ ಬಹುಚರ್ಚಿತವಾಗುವ ಜಾತಿ ಮತ್ತು ಧರ್ಮ, ಮಹಿಳೆಯರ ಲೋಕದಲ್ಲಿ ಪ್ರಮುಖ ಅಂಶಗಳಲ್ಲ. ಇವೆಲ್ಲಾ ಪುರುಷಲೋಕದ ಪ್ರತಿಷ್ಠೆಯ ಅನಗತ್ಯ ಸೃಷ್ಟಿಗಳು. ಮಹಿಳೆಯರು ಇದನ್ನು ಯಾವತ್ತೋ ಮೀರಿದ್ದಾರೆ. ಈ ಸೂಕ್ಷ್ಮ ಅಂಶವನ್ನು ಅಂಬೇಡ್ಕರ್ ಮನಗಂಡಿದ್ದರಿಂದ, ಅವರು ಮಹಿಳಾ ಸಬಲೀಕರಣಕ್ಕೆ ಮಹತ್ವ ನೀಡಿದ್ದರು.

(ಲೇಖಕಿ ತುಮಕೂರು ವಿ.ವಿ.ಯಲ್ಲಿ ಸಹ ಪ್ರಾಧ್ಯಾಪಕಿ)



ವಾಚಕರ ವಾಣಿ

ಮೀಸಲಾತಿ: ಕೆನೆಪದರ ನೀತಿ ಅಗತ್ಯ

‘ಪರಿಶಿಷ್ಟ ಜಾತಿಯವರಿಗೆ ಮೀಸಲಾತಿ ನೀಡುವ ವೇಳೆ ಕೆನೆಪದರ ನೀತಿ ಅನ್ವಯಿಸಬೇಕು’ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಹೇಳಿರುವ ಮಾತು ಸಂದರ್ಭೋಚಿತವಾಗಿದೆ. ಮೀಸಲಾತಿ ಸೌಲಭ್ಯ ಪಡೆದ ಕುಟುಂಬವೇ ಪುನಃ ಸೌಲಭ್ಯ ಪಡೆಯುವುದು ಎಷ್ಟು ಸರಿ? ಇದರಿಂದ ಅದೇ ಸಮುದಾಯದ ತಳಮಟ್ಟದಲ್ಲಿ ಇರುವವರಿಗೆ ಮೀಸಲಾತಿಯು ಗಗನಕುಸುಮವಾಗಲಿದೆ. ಗೆಜೆಟೆಡ್ ಅಧಿಕಾರಿ, ರಾಜಕೀಯದಲ್ಲಿ ಮಂತ್ರಿಯಾದ ಅಥವಾ ಅದಕ್ಕೆ ತತ್ಸಮನಾದ ಹುದ್ದೆ ಅಲಂಕರಿಸಿದ ಕುಟುಂಬದ ಮುಂದಿನ ಪೀಳಿಗೆಯ ಮಕ್ಕಳನ್ನು ಮೀಸಲಾತಿಯಿಂದ ಹೊರಗಿಡಬೇಕಿದೆ. ಅದೇ ವರ್ಗದ ಇತರರಿಗೆ ಅವಕಾಶ ಮಾಡಿಕೊಡಬೇಕಿದೆ. ಆಗಷ್ಟೆ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಮೀಸಲಾತಿಯ ಋಣ ಸಂದಾಯವಾಗಲಿದೆ. ಪರಿಶಿಷ್ಟ ಜಾತಿಗಷ್ಟೇ ಕೆನೆಪದರ ನೀತಿ ಅನ್ವಯಿಸಬಾರದು. ಮೀಸಲಾತಿ ಪಡೆಯುವ ಎಲ್ಲಾ ಸಮುದಾಯಗಳಿಗೂ ಅನ್ವಯವಾಗಬೇಕು.

ಕೆ.ಎಂ. ನಾಗರಾಜು, ಮೈಸೂರು

ಕೃಷ್ಣಮೃಗಗಳ ಸಾವು: ಯಾರು ಹೊಣೆ?

ಬೆಳಗಾವಿ ಜಿಲ್ಲೆಯ ಭೂತರಾಮನ ಹಟ್ಟಿಯ ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ ಕೃಷ್ಣಮೃಗಗಳು ಬ್ಯಾಕ್ಟೀರಿಯಾ ಸೋಂಕಿನಿಂದಾಗಿ ಮೃತಪಟ್ಟಿರುವ ಸುದ್ದಿ ಓದಿ ದಿಗ್ಭ್ರಮೆಯಾಯಿತು. ಈ ಪ್ರಕರಣವು ಮೃಗಾಲಯ ಸಿಬ್ಬಂದಿಯ ನಿರ್ಲಕ್ಷ್ಯದತ್ತ ಬೆಟ್ಟು ಮಾಡುತ್ತದೆ. ಬೇಸಿಗೆ ಸಮೀಪಿಸುತ್ತಿದೆ. ಪ್ರಾಣಿ– ಪಕ್ಷಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಕಾಳ್ಗಿಚ್ಚು ಹರಡದಂತೆ ಅರಣ್ಯ ಇಲಾಖೆಯು ಈಗಿನಿಂದಲೇ ಸಿದ್ಧತೆ ಆರಂಭಿಸಬೇಕಿದೆ.

ಪ್ರೊ. ಟಿ. ನಾರಾಯಣಪ್ಪ, ಬೆಂಗಳೂರು

ಪ್ರೀತಿ ವೈಫಲ್ಯಕ್ಕೆ ಆತ್ಮಹತ್ಯೆ ಪರಿಹಾರವಲ್ಲ

ಇತ್ತೀಚಿನ ದಿನಗಳಲ್ಲಿ ಪ್ರೇಮ ವೈಫಲ್ಯದಿಂದಾಗಿ ಯುವಜನರು ಆತ್ಮಹತ್ಯೆಯ ಹಾದಿ ತುಳಿಯುತ್ತಿರುವುದು ಹೆಚ್ಚುತ್ತಿದೆ. ಅಮೂಲ್ಯವಾದ ಪ್ರಾಣ ಕಳೆದುಕೊಳ್ಳುವುದು ಸರಿಯಲ್ಲ. ಇದು ದೇಶಕ್ಕೂ ನಷ್ಟ. ಪ್ರೀತಿ ನಿರಾಕರಣೆಯ ಹೊರತಾಗಿಯೂ ಉಜ್ವಲ ಭವಿಷ್ಯವಿದೆ. ಯುವಜನ ಈ ಸತ್ಯ ಅರಿಯಬೇಕಿದೆ. ನೊಂದವರಿಗೆ ಹೊಸ ಬದುಕು ಕಟ್ಟಿಕೊಳ್ಳಲು ಆತ್ಮಸ್ಥೈರ್ಯ ತುಂಬುವ ಅಗತ್ಯವೂ ಇದೆ. ಆತ್ಮಹತ್ಯೆ ಮಾಡಿಕೊಂಡರೆ ತಂದೆ– ತಾಯಿಗೆ ಮಕ್ಕಳು ಸಿಗುವುದಿಲ್ಲ. ಯುವಜನರು ಆತ್ಮಾವಲೋಕನ ಮಾಡಿಕೊಳ್ಳಬೇಕು.

ವಿಶಾಲ ರವಿ ಬಡಿಗೇರ, ಬಾಗಲಕೋಟೆ

ಉದಾತ್ತ ಧ್ಯೇಯ: ಫಲಿತಾಂಶ ಶೂನ್ಯ

ಪ್ರಶಾಂತ ಕಿಶೋರ್ ನೇತೃತ್ವದ ‘ಜನ ಸುರಾಜ್ ಪಕ್ಷ’ವು ಬಿಹಾರದ ವಿಧಾನಸಭೆ ಚುನಾವಣೆಯಲ್ಲಿ ನೆಲಕಚ್ಚಿದೆ. 1977ರಲ್ಲಿ ಕೆಂಗಲ್ ಹನುಮಂತಯ್ಯನವರು ‘ಸುರಾಜ್ಯ ಪಕ್ಷ’ ಸ್ಥಾಪಿಸಿದ್ದರು. ಆದರೆ, ಕರ್ನಾಟಕದ ರಾಜಕಾರಣದಲ್ಲಿ ಯಾವುದೇ ಪರಿಣಾಮ ಬೀರಲಿಲ್ಲ. ಹಾಗೆಯೇ, ಯೋಗೇಂದ್ರ ಯಾದವ್ ಮತ್ತಿತರರು 2016ರಲ್ಲಿ ಸ್ಥಾಪಿಸಿದ ‘ಸ್ವರಾಜ್ ಇಂಡಿಯಾ’ ಪಕ್ಷ ಇದುವರೆಗೆ ಯಾವುದೇ ಯಶಸ್ಸುಗಳಿಸಿಲ್ಲ. ಎಷ್ಟೇ ಉದಾತ್ತ ಹೆಸರನ್ನು ಇಟ್ಟುಕೊಂಡರೂ, ದೀರ್ಘಾವಧಿಯ ಅಭಿಯಾನ ನಡೆಸಿದರೂ ಜನ ನಂಬಿ ಮತ ನೀಡುವ ಸಾಧ್ಯತೆ ತೀರಾ ಕಡಿಮೆ.

ಎಚ್.ಎಸ್. ಮಂಜುನಾಥ, ಗೌರಿಬಿದನೂರು

ಪುಸ್ತಕ ಸಂತೆಯು ‘ಅಕ್ಷರ ಸಂತೆ’ಯಾಗಲಿ

ಬೆಂಗಳೂರಿನಲ್ಲಿ ವೀರಲೋಕ ಪ್ರಕಾಶನದಿಂದ ಹಮ್ಮಿಕೊಂಡಿದ್ದ ‘ಪುಸ್ತಕ ಸಂತೆ’ಯು ಓದುವ ಸಂಸ್ಕೃತಿಯನ್ನು ಮತ್ತೆ ಉತ್ತೇಜಿಸುವ ಅಗತ್ಯವನ್ನು ನೆನಪಿಸಿದೆ. ಆದರೆ, ಇಂದಿನ ವಿದ್ಯಾರ್ಥಿಗಳಲ್ಲಿ ಪುಸ್ತಕ ಓದುವ ಆಸಕ್ತಿ ಕಡಿಮೆಯಾಗಿದೆ. ಮೊಬೈಲ್ ಫೋನ್‌ಗಳು, ಸಾಮಾಜಿಕ ಜಾಲತಾಣಗಳು ಮತ್ತು ವಿವಿಧ ಡಿಜಿಟಲ್ ಮನರಂಜನಾ ವೇದಿಕೆಗಳು ಅವರ ಸಮಯ ಮತ್ತು ಗಮನವನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡಿರುವುದೇ ಇದಕ್ಕೆ ಕಾರಣ. ಪುಸ್ತಕ ಸಂತೆಯನ್ನು ಕೇವಲ ಪುಸ್ತಕ ಖರೀದಿ, ಮಾರಾಟ ಮೇಳದ ದೃಷ್ಟಿಯಲ್ಲಿ ನೋಡಬಾರದು. ಅದನ್ನು ಜ್ಞಾನ ಹಂಚಿಕೆ, ಓದಿಗೆ ಪ್ರೇರಣೆ ಮತ್ತು ಸೃಜನಶೀಲ ಅಭಿವ್ಯಕ್ತಿಗಳ ವೇದಿಕೆಯಾಗಿ ರೂಪಿಸಬೇಕಿದೆ. ಜೊತೆಗೆ, ‘ಅಕ್ಷರ ಸಂತೆ’ಯಾಗಿಸುವ ಪ್ರಯತ್ನ ಮಾಡಬೇಕಿದೆ. ಇಂದಿನ ಡಿಜಿಟಲ್ ಯುಗದಲ್ಲಿ ಓದುವಿಕೆಯ ಮರುಜಾಗೃತಿಗೆ ಇದು ಅನಿವಾರ್ಯವೂ ಹೌದು.

ಮಂಜುನಾಥ ಜಿ. ಪಾಲವ್ವನಹಳ್ಳಿ, ಚಿತ್ರದುರ್ಗ

ಮಾಯಾನಗರಿ, ಆಗದಿರಲಿ ದುಬಾರಿ!

ಉತ್ತರ ಕರ್ನಾಟಕದಿಂದ ಉದ್ಯೋಗ ಅರಸಿಕೊಂಡು ಬರುವ ಸಾವಿರಾರು ಯುವಕ, ಯುವತಿಯರಿಗೆ ಬೆಂಗಳೂರು ಅನ್ನ ನೀಡುವ ಭಾಗ್ಯನಗರಿ. ಆದರೆ, ಆ ಸಂತೋಷ ಸಂಬಳ ಪಡೆದ ಕೆಲವು ದಿನಗಳಿಗಷ್ಟೇ ಸೀಮಿತ. ಬೆಂಗಳೂರಿನಲ್ಲಿ ಜೀವನ ವೆಚ್ಚ ದುಬಾರಿಯಾಗಿದೆ. ಉದ್ಯೋಗ, ಶಿಕ್ಷಣ ಅರಸಿ ಬರುವವರಿಗೆ ಅನುಕೂಲವಾಗುವಂತೆ ಸರ್ಕಾರ ಹೊಸ ನೀತಿ ರೂಪಿಸಬೇಕಿದೆ.

ನಾಗಾರ್ಜುನ ಹೊಸಮನಿ, ಕಲಬುರಗಿ

ರೈತರ ಸಂಕಷ್ಟಗಳಿಗೆ ಪರಿಹಾರ ಸಿಗಲಿ

ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ಸಾವಿರಾರು ರೈತರು ಈ ವರ್ಷ ನೀರಿನ ಬಿಕ್ಕಟ್ಟಿನಿಂದಾಗಿ ಎರಡನೇ ಬೆಳೆ ಬೆಳೆಯುವ ಸಾಧ್ಯತೆಯನ್ನು ಕಳೆದುಕೊಂಡಿದ್ದಾರೆ. ಜಲಾಶಯದ ಗೇಟ್‌ಗಳ ದುರಸ್ತಿ ವಿಳಂಬ, ನೀರಾವರಿ ನಿರ್ವಹಣೆಯ ಅಸಮರ್ಪಕತೆ ಮತ್ತು ಯೋಜನಾ ಕೊರತೆಯೇ ಇಂದಿನ ಸ್ಥಿತಿಗೆ ಮುಖ್ಯ ಕಾರಣ. ಬೆಳೆನಾಶವಾಗಿರುವ ಹಿನ್ನೆಲೆಯಲ್ಲಿ ರೈತರು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಾಗಾಗಿ, ಸರ್ಕಾರವು ಎಕರೆಗೆ ಕನಿಷ್ಠ ₹25 ಸಾವಿರ ಪರಿಹಾರ ನೀಡಬೇಕು.

ವಿಜಯಕುಮಾರ್ ಎಚ್.ಕೆ., ರಾಯಚೂರು

ಕನ್ನಡಕ್ಕೆ ಅಪಾಯಕಾರಿ ಯಾರು?



ಕನ್ನಡ, ಕರ್ನಾಟಕ ಹಾಗೂ ಕನ್ನಡಿಗರಿಗೆ ಎಲ್ಲಿಂದಲೋ ಬಂದು ದುರಹಂಕಾರ ತೋರಿಸುವ ಹೊರಗಿನವರಿಗಿಂತ ಇಲ್ಲೇ ಹುಟ್ಟಿ ಬೆಳೆದು, ಕನ್ನಡಕ್ಕೆ ಕರ್ನಾಟಕಕ್ಕೆ ಅವಮಾನ ಮಾಡಿದಾಗ ಅದನ್ನು ನೋಡಿ ಕಣ್ಮುಚ್ಚಿ ಕುಳಿತುಕೊಳ್ಳುವ ಹಾಗೂ ‘ಇದು ತಪ್ಪು, ಸರಿಪಡಿಸಿಕೊಳ್ಳಿ’ ಎಂದು ಹೇಳಲಾರದಷ್ಟು ಕೀಳರಿಮೆ ಉಳ್ಳ ‘ವಿಶಾಲ ಹೃದಯದ ಕನ್ನಡಿಗರು’ ಹೆಚ್ಚು ಅಪಾಯಕಾರಿ ಹಾಗೂ ವಿಷಕಾರಿ.

ಪ್ರತಾಪ್ ಕಣಗಾಲ್, ‘ಎಕ್ಸ್’ನಿಂದ

ಕಿಡಿನುಡಿ



ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೊದಲ ದಿನದಿಂದಲೂ ಅಲುಗಾಡುತ್ತಲೇ ಇದೆ. ಸರ್ಕಾರ ಆರ್ಥಿಕವಾಗಿಯೂ ಸದೃಢವಾಗಿಲ್ಲ; ಆಡಳಿತದಲ್ಲೂ ರಾಜಕೀಯವಾಗಿಯೂ ದೃಢವಾಗಿಲ್ಲ.

ಡಾ. ಕೆ. ಸುಧಾಕರ್, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಶನಿವಾರ, 18-11-2000

• ಸೊಳ್ಳೆ ಕಡಿತ, ಕಪ್ಪಾದ ಬಣ್ಣ, ಸ್ವಲ್ಪ ಆಯಾಸ

ಬೆಂಗಳೂರು, ನ. 17– ‘ಡಾ. ರಾಜ್ ಕುಮಾರ್ ಅವರ ಮೈಮೇಲೆ ಸೊಳ್ಳೆ ಮತ್ತಿತರ ಕೀಟಗಳು ಕಚ್ಚಿರುವುದು ಬಿಟ್ಟರೆ ಉಳಿದಂತೆ ಅವರು ಪೂರ್ಣ ಆರೋಗ್ಯದಿಂದಿದ್ದಾರೆ’ ಎಂದು ರಾಜ್ ಕುಟುಂಬದ ವೈದ್ಯ ಡಾ. ರಮಣರಾವ್ ಇಂದು ಇಲ್ಲಿ ಹೇಳಿದರು.

ರಾಜ್ ಅವರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಯಿತು. ಅವರಿಗೆ ಸ್ವಲ್ಪ ಪ್ರಮಾಣದ ಆಯಾಸವಾಗಿದೆಯಷ್ಟೆ. ಅವರು ಮಾನಸಿಕ ಸ್ಥೈರ್ಯ ಕಳೆದುಕೊಂಡಿಲ್ಲ. ರಕ್ತದ ಒತ್ತಡ ಮಾಮೂಲಿನಂತಿದೆ. ಈಗ ಮಂಡಿನೋವಿನ ಬಾಧೆಯೂ ಇಲ್ಲ. ಪ್ರತಿದಿನ ಯೋಗಾಭ್ಯಾಸ ಮಾಡುತ್ತಿರುವುದರಿಂದ ಮಂಡಿನೋವು ನಿವಾರಣೆಯಾಗಿದೆ’ ಎಂದರು.

• ಡಿಸಿಗೆ ವಾಗ್ದಂಡನೆ ನಿರ್ಧಾರ

ಬೆಂಗಳೂರು, ನ. 17– ಜಿಲ್ಲಾ ಪ್ರಕೃತಿ ವಿಕೋಪ ಪರಿಹಾರ ಸಮಿತಿಯ ಸಭೆಗೆ ವಿಧಾನ ಪರಿಷತ್ತಿನ ಸದಸ್ಯರನ್ನು ಆಹ್ವಾನಿಸದಿದ್ದಕ್ಕಾಗಿ ಚಿಕ್ಕಮಗಳೂರು ಜಿಲ್ಲಾಧಿಕಾರಿ ಕೆ.ಎಚ್. ಗೋಪಾಲಕೃಷ್ಣಗೌಡ ಅವರಿಗೆ ವಾಗ್ದಂಡನೆ ವಿಧಿಸಲು ನಿರ್ಧರಿಸಿದ ಪರಿಷತ್ತು, ನವೆಂಬರ್ 21ರಂದು ಸಭೆಗೆ ಹಾಜರಾಗಬೇಕೆಂದು ಅವರಿಗೆ ಆದೇಶಿಸಿತು.

ವಿಧಾನ ಪರಿಷತ್ತಿನ ಸದಸ್ಯರನ್ನು ಎರಡನೇ ದರ್ಜೆ ಸದಸ್ಯರಂತೆ ಕಾಣುವ ಅಧಿಕಾರಿಗಳ ಪ್ರವೃತ್ತಿಗೆ ತಡೆ ಹಾಕಲು, ಅವರಿಗೆ ವಾಗ್ದಂಡನೆ ವಿಧಿಸಲು ನಿರ್ಣಯಿಸಿತು.

75 ವರ್ಷಗಳ ಹಿಂದೆ

ಶನಿವಾರ, 18-11-1950

• ಎಂ. ಶಾಮಣ್ಣನವರ ಮನೆಯಲ್ಲಿ ಕಳ್ಳತನ

ಬೆಂಗಳೂರು, ನ. 17– ಬಸವನ ಗುಡಿಯಲ್ಲಿರುವ ಸರ್ಕಾರದ ಹಣಕಾಸಿನ ಕಾರ್ಯದರ್ಶಿಗಳಾದ ಎಂ. ಶಾಮಣ್ಣನವರ ಮನೆಯಲ್ಲಿ ನಿನ್ನೆ ರಾತ್ರಿ ಯಾರೋ ಮನೆಗೆ ನುಗ್ಗಿ ದೇವರ ಮನೆಯಲ್ಲಿದ್ದ ಸುಮಾರು 400 ರೂ. ಬೆಲೆಬಾಳುವ ದೇವರ ಸಾಮಾನುಗಳನ್ನು ಕಳವು ಮಾಡಿಕೊಂಡು ಹೋಗಿದ್ದಾರೆಂದು ವರದಿಯಾಗಿದೆ.

ಇಂದು ಸಂಜೆ ಹೊತ್ತಿಗೆ ಪೊಲೀಸರು ಕಳವು ಮಾಲನ್ನು ಪತ್ತೆ ಮಾಡಿದರೆಂದು ತಿಳಿದುಬಂದಿದೆ. ಕಳವು ವರದಿಯಾದ ಕೂಡಲೇ ಡಿಎಸ್‌ಪಿ ನರಸಿಂಹಯ್ಯ ಹಾಗೂ ಎಎಸ್‌ಪಿ ಜನಾಬ್ ಜಹಿರುದ್ದೀನ್ ಅವರು, ಶಾಮಣ್ಣನವರ ಮನೆಗೆ ಭೇಟಿ ಕೊಟ್ಟು ಪರಿಶೀಲಿಸಿದರು.

ಚುರುಮುರಿ



ವೈಟ್‌ಕಾಲರ್ ಕಿತಾಪತಿ

• ಲಿಂಗರಾಜು ಡಿ.ಎಸ್.

ವತ್ತಾರೆ ಪಾರ್ಕಲ್ಲಿ ವಾಕಿಂಗ್ ಮಾಡ್ತಿದ್ದೆ. ಯಾರೋ ಹಿಂದ್ಲಿಂದ ಕರೆದಂಗಾತು, ‘ಹಲೋ, ರೀ ಸ್ವಾಮಿ. ನಿಮ್ಮನ್ನೇ ಕನ್ರೀ ಕರೀತಿರದು’ ಅಂದ್ರು. ತಿರುಗಿ ನೋಡಿದರೆ, ಯಾರೋ ಸಿಲ್ಕ್ ಪಂಚೆ ಉಟ್ಟುಕಂದು, ಕತ್ತಿಗೆ ಗಮಗುಡೋ ಹೂವಿನ ಹಾರ, ತಂಬೂರಿ ಅಡ್ಡಡ್ಡ ನ್ಯಾತಾಕ್ಯಂದಿದ್ರು.

‘ಯಾರು ಸ್ವಾಮಿ ತಾವು? ಹಗಲುವೇಷದೋರೆ?’ ಅಂತಂದೆ.

‘ನಾರಾಯಣ, ನಾರಾಯಣ. ಲೇ ಬೊಡ್ಡಿಹೈದ್ನೆ, ನಾನು ನಾರದ ಕಲಾ. ನಿಮಗೆ ಟೆರರಿಷ್ಟುಗಳು ಗೊತ್ತಾತರೆ, ನಾರದ ಕಾಣಕ್ಕಿಲ್ಲವಾ?’ ಅಂತ ಬೇಸರದಿಂದ ಬೋದ್ರು.

‘ತೆಪ್ಪಾತು ಕನ ನಾರದಣ್ಣ. ತಾವು ಇತ್ತಗೆ ಬಂದ ಕಾರಣವೇನು?’ ನಾಟಕದ ಶೈಲಿಯಲ್ಲಿ ಕೇಳಿದೆ.

‘ಭಾರತದಾಗೆ ಪರಿಸ್ಥಿತಿ ಹ್ಯಂಗದೆ ನೋಡಿಕ್ಯಂದು ಬರೋಗು ಅಂತ ಎಲ್ಲಾ ಧರ್ಮದ ದೇವರುಗಳೂ ನನ್ನ ಕಳಿಸ್ಯವ್ರೆ’ ನಾರದರು ಉತ್ತರಿಸಿದರು.

‘ಏನಣ್ಣೆ ನೋಡದು. ಬುದುವಂತ್ರು, ವೈದ್ಯರೇ ಬದುಕಿಸದು ಬುಟ್ಟು, ಜಾತಿ–ಧರ್ಮ ಅಂತ ಗೆರೆ ಕೊರಕಂದು ಬಾಂಬು ಸಿಡಿಸ್ತಾವರೆ. ಹರಳೆಣ್ಣೆ ಬೀಜದ ಇಕ್‌ಮದ್ದಾಕಿ ನಮ್ಮುನ್ನೆಲ್ಲಾ ಮ್ಯಾಕೆ ಕಳುಗಿಸೋ ಪ್ಲಾನ್ ಮಾಡ್ತಾವ್ರೆ’ ಅಂದೆ.

‘ಅಲ್ಲ ಕನ್ರಯ್ಯಾ, ಓದಿದ್ದು ನಿಮ್ಮ ಸ್ಕೂಲೇಲಿ, ತಿಂದುದ್ದು ನಿಮ್ಮ ಅನ್ನ, ಕುಡಿದಿದ್ದು ನಿಮ್ಮ ನೀರು, ಉಸಿರಾಡಿದ್ದು ನಿಮ್ಮ ಗಾಳಿ. ವಿದ್ಯಾವಂತರು ಅಂದಾರೇನ್ಲಾ ಇವರ್ನಾ? ಈಗ ವೈಟ್ ಕಾಲರ್ ಭಯೋತ್ಪಾದನೆ ಕಲಿತುಗಂದು ಸೀದಾ ಸ್ವರ್ಗಕ್ಕೆ ಸೇರಿಕ್ಯಬೈದು ಅಂತ ತಿಳಕಂದವ್ರೆ’ ನಾರದರು ನೊಂದ್ಕಂದರು.

‘ನಾರದಣ್ಣೆ ಅದಕ್ಕೇನು ಕಾರಣ ಅಂತ ನೀವೇ ಹೇಳಬಕು’ ಅಂತಂದೆ.

‘ಹೇಳದೇನ್ಲಾ ಬೊಡ್ಡಿಹೈದ್ನೇ, ಇದಕ್ಕೆಲ್ಲಾ ಅವಕಾಶವಾದಿ ರಾಜಕಾರಣವೇ ಕಾರಣ. ನಿಮ್ಮ ನಡಂತರಕ್ಕೆ ಕಿತಾಪತಿ ತಂದು ಮಡಗ್ಯವುರೆ. ಅನುಭೋಗಿಸಿ. ನಾನು ಈಗ ಹೋಗಿ ಎಲ್ಲಾ ದೇವರುಗಳಿಗೂ ಟೆರರಿಸ್ಟುಗಳನ್ನ ಸ್ವರ್ಗಕ್ಕೆ ಬುಟ್ಕಬ್ಯಾಡಿ ಅಂತ ರಿಪೋರ್ಟು ಕೊಡ್ತೀನಿ. ನಾರಾಯಣ, ನಾರಾಯಣ’ ಅಂತ ಹೊಂಟೋದರು.

ನಾನು ತೆಪರನಂತೆ ತಪ್ಪು ಯಾರದ್ದು ಅಂತ ಯೋಚ್ನೆ ಮಾಡ್ತಾ ಕುತುಗಂದೆ.

ಸಂಗತ

ಎನ್. ನರಸಿಂಹಯ್ಯ ನೆನಪಿಗೆ ಏನೂ ಬೇಡವೆ?

ಹಲವು ತಲೆಮಾರುಗಳಿಗೆ ಓದಿನ ಅಭಿರುಚಿ ಹತ್ತಿಸಿದ ಎನ್. ನರಸಿಂಹಯ್ಯ ಅವರ ನೆನಪನ್ನು ಕನ್ನಡಿಗರು ಜನ್ಮಶತಾಬ್ದಿ ಸಂದರ್ಭದಲ್ಲಾದರೂ ಮಾಡಿಕೊಳ್ಳಬೇಕು.

• ಎನ್.ಎಸ್. ಶಂಕರ್

‘ಭಯಂಕರ ಭೈರಾಗಿ’, ‘ಜಾದೂಗಾರ ಜಗದೀಶ’... ಆ ಕಾದಂಬರಿ ಹೆಸರುಗಳೇ ಎಷ್ಟು ರೋಮಾಂಚಕ! ಇನ್ನು ನಮ್ಮದೇ ಶೆರ್ಲಾಕ್ ಹೋಮ್ಸ್, ವಾಟ್ಸನ್‌ಗಳಾದ ಪತ್ತೇದಾರಿ ಪುರುಷೋತ್ತಮ, ಮಧುಸೂದನ, ಅರಿಂಜಯ, ಪ್ರತಾಪ– ಇಂಥ ನಿಗೂಢ ವರ್ಚಸ್ಸಿನ ಪತ್ತೇದಾರರು!

ಆಗ ತಾನೇ ಓದು ಕಲಿತು ಪಠ್ಯಪುಸ್ತಕಗಳ ಆಚೆಗೆ ಕೈ ಚಾಚಿದ ಎಳೆಯಲೋಕವನ್ನು ಆವರಿಸಿಕೊಂಡು ನಮಗೆ ಅಪಾರ ಸಂತೋಷ ನೀಡಿದ್ದು, ಆ ಪತ್ತೇದಾರಿ ಪ್ರಪಂಚ. ಓದಿನ ಸುಖವನ್ನು ನಮಗೆ ಪರಿಚಯಿಸಿದ್ದೇ ಪತ್ತೇದಾರಿ ಪಿತಾಮಹ ಎನ್. ನರಸಿಂಹಯ್ಯ (ಸೆ. 18, 1925 – ನ. 25, 2011). ಸಹಜವಾಗಿಯೇ ಆಗಿನ ಸರ್ಕ್ಯುಲೇಟಿಂಗ್ ಲೈಬ್ರರಿಗಳಲ್ಲಿ ನರಸಿಂಹಯ್ಯನವರ ಕಾದಂಬರಿಗಳಿಗೆ ಬೇಡಿಕೆ. ಸರಳ ಭಾಷೆ, ಸರಳ ಕಥಾಹಂದರಗಳ ಮೂಲಕ ಅವರು ಸೃಷ್ಟಿಸುತ್ತಿದ್ದ ಕೌತುಕಮಯ ಪತ್ತೇದಾರಿ ಜಗತ್ತು, ಓದು ಬಲ್ಲ ಎಲ್ಲರನ್ನೂ ತಣಿಸುತ್ತಿತ್ತು. ಇನ್ನಷ್ಟು ಮತ್ತಷ್ಟು ಓದಲು ಪ್ರೇರೇಪಿಸುತ್ತಿತ್ತು. ಒಂದು ಪುಸ್ತಕವನ್ನು ಓದಿ ಮುಗಿಸುತ್ತಿದ್ದಂತೆಯೇ ಇನ್ನೊಂದು ಪುಸ್ತಕ ನಮಗಾಗಿ ಕಾದಿರುತ್ತಿತ್ತು.

ಆಗ ನಾವು ಪ್ರೈಮರಿ ಶಾಲೆ ಮುಗಿಸಿ ಅದೇ ತಾನೇ ಮಾಧ್ಯಮಿಕ ಹಂತಕ್ಕೆ ಕಾಲಿಟ್ಟಿದ್ದೆವು. ನಮ್ಮಂಥ ಎಳೆ ಮನಸ್ಸುಗಳನ್ನು ಪುಸ್ತಕಲೋಕಕ್ಕೆ ಕರೆದೊಯ್ದು ಮನದಣಿಸಿ, ಅಭಿರುಚಿ ಎಂಬ ಶಬ್ದವೇ ತಿಳಿದಿರದಿದ್ದ ವಯಸ್ಸಿನಲ್ಲಿ ಯಾವುದೋ ನಿರಾಕಾರ ಅಭಿರುಚಿಯ ಜಲ ಉಕ್ಕಿಸುತ್ತಿದ್ದವರು ನರಸಿಂಹಯ್ಯ. ಅವರ ಕೃತಿಗಳನ್ನು ಹುಡುಹುಡುಕಿ ತಂದು ಓದುತ್ತಿದ್ದಾಗ, ಅವರ ಅಥವಾ ಆ ಕೃತಿಗಳ ಮಹತ್ವ ತಿಳಿದಿರಲಿಲ್ಲ. ಆ ಕೃತಿಗಳ ಲೇಖಕ ಎನ್. ನರಸಿಂಹಯ್ಯ– ನಾನೊಬ್ಬನಲ್ಲ, ನನ್ನ ತಲೆಮಾರು ಸೇರಿದಂತೆ ಸುಮಾರು ನಾಲ್ಕು ಪೀಳಿಗೆಯ ಕನ್ನಡಿಗರಿಗೆ ಓದಿನ ರುಚಿ ಹತ್ತಿಸಿದ ಮಹಾಪುರುಷ!

ನರಸಿಂಹಯ್ಯನವರಿಂದ ಆರಂಭವಾದ ಓದು ಕ್ರಮೇಣ ಪ್ರೌಢ ಅಭಿರುಚಿಯತ್ತ ನಮ್ಮನ್ನು ಎಳೆದೊಯ್ದಿತು. ಅನಕೃ, ತರಾಸು, ತ್ರಿವೇಣಿ, ಮತ್ತೂ ಮುಂದಕ್ಕೆ ಭೈರಪ್ಪ, ಲಂಕೇಶ್, ತೇಜಸ್ವಿ, ದೇವನೂರು, ಕುವೆಂಪು, ಕಾರಂತ– ಇವರೆಲ್ಲ ನಮ್ಮ ಓದಿನ ವಲಯಕ್ಕೆ ಒಬ್ಬೊಬ್ಬರಾಗಿ ಹೆಜ್ಜೆಯಿಟ್ಟರು. ಇನ್ನೂ ಮುಂದಕ್ಕೆ ಟಾಲ್‌ಸ್ಟಾಯ್, ದಾಸ್ತೊವ್‌ಸ್ಕಿ, ಷೇಕ್ಸ್‌ಪಿಯರ್ ಮುಂತಾಗಿ ಜಗತ್ತಿನ ಸರ್ವಶ್ರೇಷ್ಠ ಲೇಖಕರೂ ನಮ್ಮವರೇ ಆಗತೊಡಗಿದರು. ಅವರೆಲ್ಲರಿಗೆ ಪ್ರವೇಶ ಸಿಕ್ಕಿದ್ದು ನರಸಿಂಹಯ್ಯ ಎಂಬ ಈ ನಮ್ರ ಲೇಖಕ ತೆರೆದಿಟ್ಟ ಬಾಗಿಲು, ಕಿಟಕಿಗಳ ಮೂಲಕವೇ.



ನರಸಿಂಹಯ್ಯನವರನ್ನು ಈ ಘಟ್ಟದಲ್ಲಿ ನಿಂತು ಮತ್ತೆ ಓದಿದರೆ ನಮಗೆ ಹಳೆಯ ಎಳೆಯ ಮುಗ್ಧ ಸಂತೃಪ್ತಿ ದೊರೆಯದಿರಬಹುದು. ಆದರೆ, ಅವರೊಬ್ಬರು ಸಿಕ್ಕದಿದ್ದರೆ ನನ್ನಂಥ ಸಹಸ್ರಾರು ಓದುಗರಿಗೆ ಓದಿನ ರುಚಿಯೇ ಹತ್ತುತ್ತಿರಲಿಲ್ಲ ಎಂಬುದನ್ನು ಅಲ್ಲಗಳೆಯಲು ಸಾಧ್ಯವೇ? ಇಂದು ನಾವು ಎಂ.ಎ, ಪಿಎಚ್.ಡಿ.ಗಳ ಮಟ್ಟ ಮುಟ್ಟಬೇಕಾದರೆ ಅದು ಒಂದನೇ ಎರಡನೇ ತರಗತಿಗಳ ಹಂತದ ಮೂಲಕವೇ ಆರಂಭವಾಗಬೇಕಲ್ಲವೇ? ಹಾಗೆ ನಮ್ಮ ಪಾಲಿಗೆ ಎನ್. ನರಸಿಂಹಯ್ಯನವರಿಲ್ಲದೆ ನಮ್ಮ ಪಯಣ ಷೇಕ್ಸ್‌ಪಿಯರ್‌ವರೆಗೆ ಸಾಗುವುದು ಸಾಧ್ಯವಿತ್ತೇ?

ಬರೀ ನಾಲ್ಕನೇ ತರಗತಿ ಓದಿ, ಜೀವನ ನಿರ್ವಹಣೆಗೆ ಯಾವ್ಯಾವುದೋ ಉದ್ಯೋಗಗಳನ್ನು ಮಾಡಿ, ಕಡೆಗೆ ಅಚಾನಕ್ಕಾಗಿ ಬರವಣಿಗೆಯ ದಾರಿ ಹುಡುಕಿಕೊಂಡ ನರಸಿಂಹಯ್ಯನವರ ಬದುಕೇ ಒಂದು ರೋಮಾಂಚಕ ಕಥಾನಕ. ಮೊದಮೊದಲು, ನಾನೂ ಬರೆಯಬಲ್ಲೆ ಎಂಬ ಆತ್ಮವಿಶ್ವಾಸ ಅದು ಹೇಗೆ ಕುದುರಿಸಿಕೊಂಡರೋ ತಿಳಿಯದು. ಒಮ್ಮೆ ಆರಂಭಿಸಿದ ಮೇಲೆ ಅವರನ್ನು ತಡೆಯುವವರೇ ಇರಲಿಲ್ಲ. ಬರೆದರು, ಬರೆದೇ ಬರೆದರು. ಕೆಲವೊಮ್ಮೆ ದುಡ್ಡು ಪಡೆದು ಒಂದೇ ರಾತ್ರಿಯಲ್ಲಿ ಒಂದು ಕಾದಂಬರಿ ಪೂರ್ಣಗೊಳಿಸಿ ಕೊಟ್ಟಿದ್ದೂ ಇದೆ! ಆರಂಭದಲ್ಲಿ ಪ್ರಕಾಶಕರು ಇವರನ್ನು ಮೋಸ ಮಾಡಿದ ಪ್ರಸಂಗಗಳಿಗೇನೂ ಕೊರತೆಯಿಲ್ಲ. ಒಮ್ಮೆ ಜನಪ್ರಿಯತೆಯ ಅಂದಾಜು ಸಿಕ್ಕ ಮೇಲೆ ಅವರು ಪತ್ತೇದಾರಿ ಸಾಮ್ರಾಟರೇ ಆಗಿಹೋದರು.

ಅವರು ದುಡ್ಡು ಮಾಡಿದರೇ? ಮಾಡಿದರು. ಆಗಿನ ಲೆಕ್ಕದಲ್ಲಿ ಎಷ್ಟು ಸಿಗಬಹುದಿತ್ತೋ ಅಷ್ಟು ಅವರಿಗೆ ಸಿಕ್ಕಿತು. ಸಿಕ್ಕಿದಷ್ಟನ್ನೂ ಜೋಪಾನ ಮಾಡಿದರು. ನಶ್ಯ ಸೇವನೆ ಬಿಟ್ಟು ಬೇರೆ ಯಾವ ಚಟವನ್ನೂ ಅಂಟಿಸಿಕೊಳ್ಳದ ನರಸಿಂಹಯ್ಯ ಸ್ವಂತ ದುಡಿಮೆಯಿಂದಲೇ ಚಿಕ್ಕದೊಂದು ಮನೆ ಕಟ್ಟಿಕೊಂಡರು. ಮಕ್ಕಳಿಗೆ ವಿದ್ಯೆ ಕೊಟ್ಟರು, ಮದುವೆ ಮಾಡಿದರು. ಜತನವಾಗಿ ಬದುಕು ಕಟ್ಟಿಕೊಂಡು ತಮ್ಮ ಪಾಡಿಗೆ ತಾವು ಬದುಕಿದರು. ಕನ್ನಡ ಸಾರಸ್ವತ ಲೋಕಕ್ಕೆ ತಮ್ಮ ನಿಜ ಕೊಡುಗೆ ಏನೆಂಬುದರ ಆಳಅಗಲವನ್ನೂ ಅರಿಯದೆ ವಿನಯದಿಂದ ಬರೆದು ಬದುಕಿ, ಓದುಗರೆದೆಯಲ್ಲಿ ಉಳಿದುಹೋದರು.

ಇದು ಅವರ ಜನ್ಮಶತಮಾನೋತ್ಸವ ವರ್ಷ.

ಕನ್ನಡಲೋಕ ನರಸಿಂಹಯ್ಯನವರನ್ನು ಹಾಗೂ ಬೆಲೆ ಕಟ್ಟಲಾಗದ ಅವರ ಮಹತ್ತರ ಕೊಡುಗೆಯನ್ನು ಸಂಪೂರ್ಣ ಕಡೆಗಣಿಸಿದೆ. ಐನೂರಕ್ಕೂ ಹೆಚ್ಚು ಕಾದಂಬರಿ ಬರೆದ ಅವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಇಂದಿಗೂ ಉದ್ಯಾನವಿಲ್ಲ, ವೃತ್ತವಿಲ್ಲ, ಒಂದು ರಸ್ತೆಯೂ ಇಲ್ಲ. ಅವರನ್ನು ನೆನಪಿಸುವ ಯಾವ ಸ್ಮಾರಕವೂ ಇಲ್ಲಿಲ್ಲ. ನನ್ನಂಥ ಸಹಸ್ರಾರು ಮಂದಿಯನ್ನು ಓದಿನ ಪ್ರಪಂಚಕ್ಕೆ ಕರೆ ತಂದ ಆ ಮಹಾನುಭಾವರನ್ನು ಸ್ಮರಿಸಲು ನಾವು ಕನ್ನಡಿಗರು ಏನು ಮಾಡಿದ್ದೇವೆ?

ಈಗಲಾದರೂ ಅವರ ನೆನಪನ್ನು ಉಳಿಸಲು ಈ ಸಮಾಜ, ಸರ್ಕಾರ, ಮಹಾನಗರ ಪಾಲಿಕೆ ಏನೂ ಮಾಡುವುದು ಬೇಡವೆ?


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಇಂದು ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ದಿನ

ಆಧುನಿಕ ವೈದ್ಯಕೀಯ ಔಷಧಿಗಳನ್ನು ಬಳಸಿಕೊಳ್ಳದೆ ನೈಸರ್ಗಿಕವಾಗಿಯೇ ತಮ್ಮ ದೇಹ ಚೈತನ್ಯವನ್ನು ಮರಳಿ ಪಡೆಯುವ ಉದ್ದೇಶದಿಂದ ಇಂದು ವಿಶ್ವದಾದ್ಯಂತ ಲಕ್ಷಾಂತರ ಮಂದಿ ಪ್ರಕೃತಿ ಚಿಕಿತ್ಸೆಗೆ ಮರಳುತ್ತಿದ್ದಾರೆ. ಹೀಗಾಗಿಯೆ ದೇಶದೆಲ್ಲೆಡೆ ಪ್ರಕೃತಿ ಚಿಕಿತ್ಸಾ ಶಿಕ್ಷಣ ಸಂಸ್ಥೆಗಳು ತಲೆ ಎತ್ತುತ್ತಿವೆ. ಪಾರಂಪರಿಕ ಪದ್ಧತಿಯನ್ನು ಶಾಸ್ತ್ರೀಯವಾಗಿ ಕಲಿತು ಪ್ರಚುರಪಡಿಸುವ ಕಾರ್ಯ ಸ್ವಾಗತಾರ್ಹ. ಈ ನೆಲೆಗಟ್ಟಿನಲ್ಲಿ ಪ್ರತಿ ವರ್ಷ ನವೆಂಬರ್ 18ರಂದು 'ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ದಿನ'ವನ್ನು ಆಚರಿಸಲಾಗುತ್ತದೆ. ಈ ದಿನ ಬರಿಯ ಆಚರಣೆಯಾಗದೆ, ಪ್ರಕೃತಿ ಚಿಕಿತ್ಸೆಯು ಉಳ್ಳವರ ಆಯ್ಕೆಯಾಗದೆ ಜನಸಾಮಾನ್ಯರ ದೈನಂದಿನ ಜೀವನಕ್ರಮವಾಗಬೇಕು

ಪ್ರಕೃತಿ ಚಿಕಿತ್ಸೆಯೆಂಬ ದೇಹಚೈತನ್ಯ ಸಿದ್ಧಾಂತ





• ಡಿ.ವೀರೇಂದ್ರ ಹೆಗ್ಗಡೆ

ಒಂದು ಜೀವಕ್ಕೆ ಭೂಮಿಯ ಮೇಲೆ ಹುಟ್ಟಿನಿಂದ ಸಾವಿನ ತನಕ ಇರುವ ಶರೀರವೇ ಆಧಾರ. ಧರ್ಮ, ಅರ್ಥ, ಕಾಮ, ಮೋಕ್ಷ ಜೀವನದಲ್ಲಿ ಸಮಪ್ರಾಪ್ತಿಯಾಗಲು ಶರೀರ ಅಗತ್ಯ. ಆಧ್ಯಾತ್ಮಿಕ ಸಾಧನೆಯಲ್ಲಿ ಎತ್ತರಕ್ಕೆ ಏರಲು ಸ್ವಸ್ಥ-ದೃಢ ಶರೀರ ಅತ್ಯಗತ್ಯ. ಹಾಗಾದರೆ ಅಂತಹ ಶರೀರ ಪಡೆಯುವುದು ಹೇಗೆ? ಭೌತಿಕ ಶರೀರ ಪಂಚಭೂತಾತ್ಮಕವಾದ ಕಾರಣ ಎಲ್ಲಾ ತತ್ವಗಳಲ್ಲಿ ಸಮತೋಲನ ಕಂಡುಕೊಳ್ಳಬೇಕು. ಇದಕ್ಕೆ ಶರೀರದ ಅಂತರ್ಜಾಲವನ್ನು ತಿಳಿಯಬೇಕು. ಶರೀರದ ಮಾತನ್ನು ಕೇಳುವುದನ್ನು ಮನುಷ್ಯ ಕಲಿತೇ ಇಲ್ಲ. ಮಕ್ಕಳು ಬಾಹ್ಯ ಶಿಕ್ಷಣದಲ್ಲೇ ಬಾಲ್ಯವನ್ನು ಕಳೆಯುತ್ತಿದ್ದಾರೆ. ಅಭ್ಯಾಸಗಳನ್ನು ಬದಲಾಯಿಸಬಹುದೇ ಹೊರತು ಬಾಲ್ಯದಲ್ಲಿ ದೊರೆತಿರುವ ಸಂಸ್ಕಾರಗಳನ್ನಲ್ಲ. ಹಾಗಾದರೆ, ಪ್ರಕೃತಿಯೊಡನೆ ಒಂದಾಗಿ ಸಿಗುವ ಆರೋಗ್ಯ ಒಂದು ಕನಸೇ? ಅದಕ್ಕೂ ಪರಿಹಾರವಿದೆ. ಈ ಪರಿಹಾರವನ್ನು ಮನುಷ್ಯನ ಜನ್ಮಜಾತ ಕೊಡುಗೆ ಎಂದೇ ಕರೆಯಬಹುದು. ಅದಾಗಿಯೇ ಪ್ರಕೃತಿಗೆ ಮರಳುವುದು.

ಹಿಂದೆ ಮಾನವನ ಬದುಕು ಪ್ರಕೃತಿಯೊಂದಿಗೆ ಅಂತರ್ಗತವಾಗಿತ್ತು. ತನ್ನೆಲ್ಲ ಪ್ರಶ್ನೆಗಳಿಗೆ, ಸಮಸ್ಯೆಗಳಿಗೆ ಮಾನವ ಪ್ರಕೃತಿಯಲ್ಲಿಯೇ ಉತ್ತರ ಹುಡುಕುತ್ತಿದ್ದ. ಸಮಾಜ ಆಧುನಿಕತೆಗೆ ತೆರೆದುಕೊಂಡಂತೆ ಜೀವನಶೈಲಿ ನಿಸರ್ಗದ ಸಹಜತೆಯಿಂದ ವಿಮುಖವಾಗತೊಡಗಿತು. ಅದರ ಪರಿಣಾಮ ನಮ್ಮ ಆರೋಗ್ಯದ ಮೇಲಾಗುತ್ತಿದೆ. ಈ ಬದಲಾವಣೆಗಳನ್ನು ಮನಗಂಡು ಪ್ರಕೃತಿಯೊಂದಿಗಿನ ಅನುಸಂಧಾನವನ್ನು ಪುನಶ್ಚೇತನಗೊಳ್ಳಲು ಬಯಸುವವರಿಗೆ ಸಹಾಯವಾಗುವುದು ಪರಂಪರೆಯಿಂದ ಬೆಳೆದು ಬಂದಿರುವ ಪ್ರಕೃತಿ ಚಿಕಿತ್ಸಾ ಪದ್ಧತಿಗಳು.

ಪ್ರಕೃತಿ ಚಿಕಿತ್ಸೆಯು ದೇಹದ ಸ್ವಯಂ ಗುಣಪಡಿಸುವ ಸಾಮರ್ಥ್ಯಗಳಿಗೆ ಒತ್ತು ನೀಡುವ ಒಂದು ವಿಶಿಷ್ಟ, ಪ್ರಾಥಮಿಕ ಆರೋಗ್ಯ ರಕ್ಷಣಾ ವ್ಯವಸ್ಥೆ. ಇದು ಕೇವಲ ರೋಗಲಕ್ಷಣಗಳಿಗೆ ಚಿಕಿತ್ಸೆ ನೀಡುವ ಬದಲು ವ್ಯಕ್ತಿಯ ಒಟ್ಟಾರೆ ಯೋಗಕ್ಷೇಮದ ಮೇಲೆ ಕೇಂದ್ರೀಕರಿಸುವ ಸಮಗ್ರ ವಿಧಾನ. ಪ್ರಕೃತಿ ಚಿಕಿತ್ಸೆಯ ಮೂಲತತ್ವಶಾಸ್ತ್ರವು ನೈಸರ್ಗಿಕವಾಗಿಯೇ ಇರುವ ಚಿಕಿತ್ಸೆಗಳನ್ನು ಬಳಸಿಕೊಂಡು ದೇಹವು ತನ್ನನ್ನು ತಾನೇ ಗುಣಪಡಿಸಿಕೊಳ್ಳುತ್ತದೆ ಎಂಬುದರ ಮೇಲೆ ನಿಂತಿದೆ. ಹಾಗೆಯೇ ಪ್ರಕೃತಿ ಚಿಕಿತ್ಸಾ ವಿಧಾನವೂ ಕೆಲವು ಮೂಲತತ್ವಗಳನ್ನು ಅನುಸರಿಸುತ್ತದೆ. ಮೊದಲನೆಯದಾಗಿ, ಪ್ರಕೃತಿ ಮತ್ತು ಮಾನವನ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುವಂತೆ ನೋಡಿಕೊಳ್ಳುವುದು. ಏಕೆಂದರೆ, ಪ್ರಕೃತಿಯ ಪಂಚಭೂತಗಳಾದ ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶವನ್ನು ಆಧರಿಸಿ ಮಾನವನ ದೇಹದ ಸೃಷ್ಟಿಯಾಗಿದೆ.

ನೈಸರ್ಗಿಕ ತತ್ವ ಆಧಾರಿತ ಪದ್ಧತಿ

ಪ್ರಕೃತಿ ಚಿಕಿತ್ಸೆಯ ಸಿದ್ಧಾಂತಗಳ ಪ್ರಕಾರ, ಕಾಯಿಲೆಗಳನ್ನು ಗುಣಮಾಡಿಕೊಳ್ಳುವ ಅದ್ಭುತವಾದ ಶಕ್ತಿ ದೇಹದಲ್ಲಿ ಅಡಗಿದೆ. ದೇಹಕ್ಕೆ ತನ್ನನ್ನು ತಾನು ಗುಣಮುಖವಾಗಿಸುವ ಚೈತನ್ಯವಿದೆ. ಪ್ರಕೃತಿಯ ಸಿದ್ಧಾಂತಗಳಿಗೆ ವಿರುದ್ಧವಾದ ಜೀವನಶೈಲಿಯನ್ನು ನಡೆಸುವುದು ಎಲ್ಲಾ ಆರೋಗ್ಯ ಅಸಮತೋಲನಗಳಿಗೆ ಕಾರಣ. ಮಾನವನಿಗೆ ಬರುವ ಕಾಯಿಲೆಗಳಿಗೆ, ದೇಹದಲ್ಲಿ ಕಲ್ಮಶಗಳು ಶೇಖರಣೆಗೊಳ್ಳುವುದೇ ಮುಖ್ಯ ಕಾರಣವಾಗಿದ್ದು, ಇದರಿಂದ ದೇಹದಲ್ಲಿ ಕಾಯಿಲೆಗಳ ಸಮೂಹ ಉದ್ಭವವಾಗುತ್ತದೆ. ಪ್ರಕೃತಿ ಚಿಕಿತ್ಸೆಯ ಮೂಲಕ ಕಾಯಿಲೆಗಳಿಗೆ ಪ್ರಮುಖ ಕಾರಣವಾದ ಕಲ್ಮಶಗಳ ವಿಸರ್ಜನೆ ಸಾಧ್ಯವಾದಾಗ ಈ ಎಲ್ಲಾ ಕಾಯಿಲೆಗಳಿಗೂ ಸಂಪೂರ್ಣ ಪರಿಹಾರ ಸಾಧ್ಯವಾಗುತ್ತದೆ. ಪ್ರಕೃತಿ ಚಿಕಿತ್ಸೆಯಲ್ಲಿ ನಾವು ಸೇವಿಸುವ ಆಹಾರವನ್ನೇ ಔಷಧಿಯೆಂದು ಪರಿಗಣಿಸಲಾಗುತ್ತದೆ. ಅಲ್ಲದೆ ಪ್ರಕೃತಿ ಚಿಕಿತ್ಸಾ ಪದ್ಧತಿಯಲ್ಲಿ ಸಾಧಕರ ಪಾತ್ರ ಬಹು ಮುಖ್ಯವಾದದ್ದಾಗಿದ್ದು, ಚಿಕಿತ್ಸಾ ಪದ್ಧತಿಯಿಂದ ಭರವಸೆ ಮೂಡಿಸಿಕೊಂಡು ತನ್ನನ್ನು ತಾನು ಅಳವಡಿಸಿಕೊಂಡಾಗ ಪ್ರಕೃತಿ ಚಿಕಿತ್ಸೆಯು ಹೆಚ್ಚು ಪರಿಣಾಮಕಾರಿಯಾಗುತ್ತದೆ. ದೇಹ ಮತ್ತು ಮನಸ್ಸಿನ ಪ್ರಫುಲ್ಲತೆಗೆ ಕಾರಣೀಭೂತವಾದ ಯೋಗ ಮತ್ತು ಧ್ಯಾನ ಭಾರತದಲ್ಲಿ ಮಹತ್ತರ ಸ್ಥಾನವನ್ನು ಹೊಂದಿದೆ. ಹಿಂದೂ ತಾತ್ವಿಕ ಚಿಂತನೆ ಹಾಗೂ ಸಂಪ್ರದಾಯಗಳನ್ನು ಒಳಗೊಂಡ ಯೋಗವು ಮಾನಸಿಕ ದೈಹಿಕ ಮತ್ತು ಆಧ್ಯಾತ್ಮಿಕ ಕ್ಷೇಮದ ವಿಚಾರದಲ್ಲಿ ತನ್ನ ನಿಲುವನ್ನು ಕೇಂದ್ರೀಕರಿಸುತ್ತದೆ. ಹೀಗೆ ಪ್ರಕೃತಿ ಚಿಕಿತ್ಸೆಯು ನೈಸರ್ಗಿಕ ತತ್ವಗಳನ್ನು ಆಧರಿಸಿದ ಪದ್ಧತಿ.

ಪ್ರಕೃತಿಗೆ ಮರಳುವ ಈ ದಿಸೆಯಲ್ಲಿ ಆರೋಗ್ಯ ಸಮಸ್ಯೆಗಳಿಗೆ ಅನುಗುಣವಾದ ಪ್ರಕೃತಿ ಚಿಕಿತ್ಸೆಯನ್ನು ಹಲವು ವಿಧಾನಗಳಲ್ಲಿ ನೀಡಲಾಗುತ್ತದೆ. ಮಣ್ಣಿನ ಚಿಕಿತ್ಸೆ, ಜಲ ಚಿಕಿತ್ಸೆ, ವಾಯು ಚಿಕಿತ್ಸೆ, ವರ್ಣ ಚಿಕಿತ್ಸೆ, ಮ್ಯಾಗ್ನೆಟ್ (ಅಯಸ್ಕಾಂತ) ಥೆರಪಿ, ಆಕ್ಯುಪಂಕ್ಚರ್, ಆಕ್ಯುಪ್ರೆಶರ್, ಫಿಸಿಯೋಥೆರಪಿ, ಎಲೆಕ್ಟ್ರೋ ಥೆರಪಿ ಸೇರಿ ಹಲವು ಚಿಕಿತ್ಸೆಗಳನ್ನು ಇದು ಒಳಗೊಂಡಿದೆ. ಇದು ರಕ್ತಪರಿಚಲನೆಯನ್ನು ಉತ್ತೇಜಿಸಲು, ರೋಗನಿರೋಧಕ ಶಕ್ತಿಯನ್ನು ಬಲಪಡಿಸಲು, ಜೀರ್ಣಕ್ರಿಯೆ ಸುಧಾರಿಸಲು, ಸ್ನಾಯುಗಳನ್ನು ಸಡಿಲಗೊಳಿಸಲು ಮತ್ತು ಚೈತನ್ಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.




ಪ್ರಕೃತಿಯ ಪಂಚಭೂತಗಳಲ್ಲಿ ಬದಲಾವಣೆಯಾದಾಗ, ಮಾನವನ ದೇಹದ ಕ್ರಿಯೆಗಳ ಮೇಲೂ ಪ್ರಭಾವ ಬೀರುತ್ತದೆ. ಎರಡನೆಯದಾಗಿ, ಅನಾರೋಗ್ಯದ ಕಾರಣ ಗುರುತಿಸಿ ನಂತರ ಚಿಕಿತ್ಸೆಯನ್ನು ನೀಡುವುದು. ಮೂರನೆಯದಾಗಿ, ಅನಾರೋಗ್ಯಕ್ಕೆ ಒಳಪಟ್ಟವರಿಗೆ ಯಾವುದೇ ಹಾನಿಯಾಗದಂತೆ ನೋಡಿಕೊಳ್ಳುವುದು. ನಾಲ್ಕನೆಯದಾಗಿ, ಆರೋಗ್ಯವನ್ನು ಕಾಪಾಡಿಕೊಳ್ಳಲು ಅಗತ್ಯ ಇರುವ ಮಾರ್ಗದರ್ಶನವನ್ನು ನೀಡುವುದು. ಐದನೆಯದಾಗಿ, ವ್ಯಕ್ತಿಯ ದೈಹಿಕ, ಮಾನಸಿಕ, ಭಾವನಾತ್ಮಕ, ಆನುವಂಶಿಕ, ಪರಿಸರ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಅಂಶಗಳನ್ನು ಪರಿಗಣಿಸಿ ಚಿಕಿತ್ಸೆ ನೀಡುವುದು. ಆರನೆಯದಾಗಿ, ಭವಿಷ್ಯದಲ್ಲಿ ರೋಗಗಳು ಬಾರದಂತೆ ಜೀವನಕ್ರಮವನ್ನು ಪಾಲಿಸುವುದು.

ಪ್ರಕೃತಿ ಚಿಕಿತ್ಸಾ ಪದ್ಧತಿಯ ತತ್ವಗಳು ಹೊಸದೇನಲ್ಲ. ಅದನ್ನು ಪ್ರಾಚೀನ ಗ್ರೀಕ್ ವೈದ್ಯ ಹಿಪ್ಪೊಕ್ರೇಟ್ಸ್ ಮೊದಲು ಗುರುತಿಸಿದ್ದ. ಈ ಪ್ರಕೃತಿ ಚಿಕಿತ್ಸೆ ಎಂಬ ಪದ ಪ್ರಯೋಗವನ್ನು 1895ರಲ್ಲಿ ಜರ್ಮನಿಯ ಡಾ.ಜಾನ್‌ಶೀಲ್ ಮಾಡಿದ್ದರು. ತದನಂತರ ಪ್ರಕೃತಿ ಚಿಕಿತ್ಸೆ ಪದವನ್ನು ಡಾ.ಬೆನೆಡಿಕ್ಟ್ ಲಸ್ಟ್ ಹೆಚ್ಚು ಬಳಕೆಗೆ ತರುವ ಮೂಲಕ ಅಮೆರಿಕದಲ್ಲಿ ವಿಸ್ತರಿಸಿದರು ಮತ್ತು 1902ರಲ್ಲಿ ಅಮೆರಿಕದಲ್ಲಿ ಸ್ಕೂಲ್ ಆಫ್ ನ್ಯಾಚುರೋಪಥಿಯನ್ನು ಸ್ಥಾಪಿಸಿದರು. ಭಾರತದಲ್ಲಿ ಪ್ರಕೃತಿ ಚಿಕಿತ್ಸೆಯ ಆಗಮನ ಮತ್ತು ಬೆಳವಣಿಗೆಯ ಮೇಲೆ ಮಹಾತ್ಮ ಗಾಂಧಿ ಅವರು ಗಮನಾರ್ಹವಾಗಿ ಪ್ರಭಾವ ಬೀರಿದರು. ಅಲ್ಲದೇ ಅವರು ಸ್ವತಃ ಪ್ರಕೃತಿ ಚಿಕಿತ್ಸೆಯ ಪ್ರಬಲ ಪ್ರತಿಪಾದಕರಾಗಿದ್ದರು.

ಆಧುನಿಕ ವೈದ್ಯಕೀಯ ಔಷಧಿಗಳನ್ನು ಬಳಸಿಕೊಳ್ಳದೆ ನೈಸರ್ಗಿಕವಾಗಿಯೇ ತಮ್ಮ ದೇಹ ಚೈತನ್ಯವನ್ನು ಮರಳಿ ಪಡೆಯುವ ಉದ್ದೇಶದಿಂದ ಇಂದು ವಿಶ್ವದಾದ್ಯಂತ ಲಕ್ಷಾಂತರ ಮಂದಿ ಪ್ರಕೃತಿ ಚಿಕಿತ್ಸೆಗೆ ಮರಳುತ್ತಿದ್ದಾರೆ. ಹೀಗಾಗಿಯೆ ದೇಶದೆಲ್ಲೆಡೆ ಪ್ರಕೃತಿ ಚಿಕಿತ್ಸಾ ಶಿಕ್ಷಣ ಸಂಸ್ಥೆಗಳು ತಲೆ ಎತ್ತುತ್ತಿವೆ. ಪಾರಂಪರಿಕ ಪದ್ಧತಿಯನ್ನು ಶಾಸ್ತ್ರೀಯವಾಗಿ ಕಲಿತು ಪ್ರಚುರಪಡಿಸುವ ಕಾರ್ಯ ಸ್ವಾಗತಾರ್ಹ. ಈ ನೆಲೆಗಟ್ಟಿನಲ್ಲಿ ಪ್ರತಿ ವರ್ಷ ನವೆಂಬರ್ 18ರಂದು 'ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ದಿನ'ವನ್ನು ಆಚರಿಸಲಾಗುತ್ತದೆ. ಈ ದಿನ ಬರಿಯ ಆಚರಣೆಯಾಗದೆ, ಪ್ರಕೃತಿ ಚಿಕಿತ್ಸೆಯು ಉಳ್ಳವರ ಆಯ್ಕೆಯಾಗದೆ ಜನಸಾಮಾನ್ಯರ ದೈನಂದಿನ ಜೀವನಕ್ರಮವಾಗಬೇಕು.

ಪ್ರಸ್ತುತ ಗಂಭೀರ ಹಾಗೂ ತುರ್ತು ಚಿಕಿತ್ಸೆಗಾಗಿ ವೈದ್ಯರ ಮೊರೆಹೋಗುವ ಕಾಲ ಬದಲಾಗಿ ಜೀವನಶೈಲಿ ಸಂಬಂಧಿತ ಅನಾರೋಗ್ಯಗಳನ್ನು ಹೊತ್ತು ಆಸ್ಪತ್ರೆಗಳಲ್ಲಿ ಬೀಡುಬಿಡುವಂತಾಗಿದೆ. ಪ್ರತಿಯೊಬ್ಬರ ಶರೀರಕ್ಕೂ ಭಿನ್ನ ಅಗತ್ಯಗಳಿರುತ್ತವೆ. ಅದರಲ್ಲೂ ಪ್ರಕೃತಿಯಿಂದ ದೂರವಾಗಿ ಅನಾರೋಗ್ಯಕ್ಕೆ ಒಳಗಾದವರಲ್ಲಿ ಈ ಭಿನ್ನತೆಯನ್ನು ಹೆಚ್ಚಾಗಿ ಕಾಣಬಹುದು. ಈ ಸಮಸ್ಯೆಗಳಿಂದ ಜನರನ್ನು ಹೊರತಂದು ಅರಿವು ಮೂಡಿಸಲು ಸಾಂಸ್ಥಿಕ ಪ್ರಯತ್ನ ಅವಶ್ಯಕ. ವ್ಯಕ್ತಿಯು ತನ್ನ ಆರೋಗ್ಯ ಪರಿಸ್ಥಿತಿಗೆ ತಕ್ಕ ಹಾಗೆ ಆಹಾರ ಕ್ರಮಗಳನ್ನು ರೂಪಿಸಿಕೊಳ್ಳಬೇಕು. ಪ್ರಾಕೃತಿಕ ಆಹಾರದ ಸೇವನೆಯಿಂದಾಗಿ ಜಡತ್ವ ದೂರವಾಗಿ ಗ್ರಹಿಕೆ ಹೆಚ್ಚುತ್ತದೆ. ಉನ್ನತ ಸ್ಥಿತಿಯ ಗ್ರಹಿಕೆಯಿಂದ ಮನುಷ್ಯನಿಗೆ ತನ್ನ ಶರೀರದ ಅಗತ್ಯವೇನು ಎಂಬುದರ ಅರಿವು ಮೂಡುತ್ತಾ ಮುಂದೊಂದು ದಿನ ಇದೇ ಅರಿವು ಜೀವನಕ್ರಮವಾಗಿ ಬದಲಾಗುತ್ತದೆ.

ಲೇಖಕ: ಧರ್ಮಸ್ಥಳದ ಧರ್ಮಾಧಿಕಾರಿ, ರಾಜ್ಯಸಭಾ ಸದಸ್ಯ




8ನೇ ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ದಿನ

ಮನುಷ್ಯನ ಮಾನಸಿಕ ಆರೋಗ್ಯ ಮತ್ತು ದೈಹಿಕ ಆರೋಗ್ಯವನ್ನು ಔಷಧ ರಹಿತವಾಗಿ ಸುಧಾರಿಸುವ ಸಾಮರ್ಥ್ಯವಿರುವ ಪ್ರಕೃತಿ ಚಿಕಿತ್ಸಾ ಪದ್ಧತಿಗೆ ಉತ್ತೇಜನ ನೀಡುವ ಸಲುವಾಗಿ ಕೇಂದ್ರ ಆಯುಷ್ (ಆಯುರ್ವೇದ, ಯೋಗ, ಪ್ರಕೃತಿ ಚಿಕಿತ್ಸೆ, ಯುನಾನಿ, ಸಿದ್ಧ ಮತ್ತು ಹೋಮಿಯೋಪಥಿ) ಸಚಿವಾಲಯವು ನವೆಂಬರ್ 18 ಅನ್ನು ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ದಿನ ಎಂದು 2018ರಲ್ಲಿ ಘೋಷಿಸಿತು. ಈ ಬಾರಿಯದ್ದು ಎಂಟನೇ ವರ್ಷದ ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ದಿನ.

ಭಾರತದಲ್ಲಿ ಪ್ರಕೃತಿ ಚಿಕಿತ್ಸೆಯ ಸಂಸ್ಥಾಪಕ ಎಂದು ಮಹಾತ್ಮ ಗಾಂಧಿ ಅವರನ್ನು ಗುರುತಿಸಲಾಗುತ್ತದೆ. ಯುರೋಪ್ ಮೂಲದ ಈ ಚಿಕಿತ್ಸಾ ಕ್ರಮವು ಭಾರತದಲ್ಲಿ ಹೆಚ್ಚು ಪ್ರಸಿದ್ಧಿಗೆ ಬರುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಗಾಂಧೀಜಿಯವರು.

1945ರಲ್ಲಿ ಗಾಂಧೀಜಿ ಅವರು ಆಲ್ ಇಂಡಿಯಾ ನೇಚರ್ ಕ್ಯೂರ್ ಫೌಂಡೇಷನ್ ಟ್ರಸ್ಟ್‌ನ ಅಧ್ಯಕ್ಷರಾದರು. ಪ್ರಕೃತಿದತ್ತವಾದ ಈ ಚಿಕಿತ್ಸಾ ಕ್ರಮದ ಪ್ರಯೋಜನವು ಎಲ್ಲ ಜನರಿಗೆ ಲಭ್ಯವಾಗಬೇಕು ಎಂಬ ದಿಸೆಯಲ್ಲಿ ಅವರು ಒಪ್ಪಂದವೊಂದಕ್ಕೆ ಸಹಿಯನ್ನೂ ಹಾಕಿದರು.

ಪ್ರತಿ ವರ್ಷ ರಾಷ್ಟ್ರೀಯ ದಿನದಂದು ಪ್ರಕೃತಿ ಚಿಕಿತ್ಸೆಗೆ ಸಂಬಂಧಿಸಿದ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.



ವಿಶೇಷಗಳು

- ನ್ಯಾಚುರೋಪಥಿಯು, ಭಾರತದ ಸಾಂಪ್ರದಾಯಿಕ ವಿಧಾನಗಳು ಮತ್ತು ಯುರೋಪ್‌ನ ಚಿಕಿತ್ಸಾ ಪದ್ಧತಿಗಳ ಸಮ್ಮಿಲನ
- ದೇಹದ ಆರೋಗ್ಯವನ್ನು ದೀರ್ಘಕಾಲ ಕಾಪಾಡಲು ಸಹಾಯ ಮಾಡುತ್ತದೆ
- ಬಹುತೇಕ ಸಂದರ್ಭಗಳಲ್ಲಿ ಉಪವಾಸದ ಮೂಲಕವೇ ಕಾಯಿಲೆಗಳನ್ನು ಗುಣಪಡಿಸಲಾಗುತ್ತದೆ
- ಜೀರ್ಣಕ್ರಿಯೆಗೆ ಸಂಬಂಧಿಸಿದ ಸಮಸ್ಯೆಗಳು, ತಲೆನೋವು, ಅಲರ್ಜಿಗಳು, ಶೀತ ಮುಂತಾದ ಕಾಯಿಲೆಗಳನ್ನು ನ್ಯಾಚುರೋಪಥಿಯ ಮೂಲಕ ಗುಣಪಡಿಸಬಹುದು
- ಇದು ಯಾವುದೇ ಅಡ್ಡಪರಿಣಾಮಗಳಿಲ್ಲದ, ಪರಿಣಾಮಕಾರಿ ಚಿಕಿತ್ಸಾ ಪದ್ಧತಿಯಾಗಿದೆ ಎಂಬುದು ತಜ್ಞರ ವಾದ

ರಾಷ್ಟ್ರೀಯ

ತೆಲಂಗಾಣ ಸ್ಪೀಕರ್‌ಗೆ 'ಸುಪ್ರೀಂ' ನ್ಯಾಯಾಂಗ ನಿಂದನೆ ನೋಟಿಸ್

ನವದೆಹಲಿ(ಪಿಟಿಐ): ಆಡಳಿತಾರೂಢ ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಿದ ಬಿಆರ್‌ಎಸ್ ಪಕ್ಷದ 10 ಶಾಸಕರ ಅನರ್ಹತೆಗೆ ಸಂಬಂಧಿಸಿದಂತೆ ನೀಡಿದ ನಿರ್ದೇಶನವನ್ನು ಪಾಲಿಸದಿದ್ದಕ್ಕಾಗಿ ತೆಲಂಗಾಣದ ಸ್ಪೀಕರ್ ಗದ್ದಂ ಪ್ರಸಾದ್ ಕುಮಾರ್ ಅವರಿಗೆ ಸುಪ್ರೀಂ ಕೋರ್ಟ್ ಸೋಮವಾರ ನ್ಯಾಯಾಂಗ ನಿಂದನೆ ನೋಟಿಸ್ ಜಾರಿ ಮಾಡಿದೆ.



ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಪೀಠ ಜುಲೈ 31ರಂದು ಭಾರತ ರಾಷ್ಟ್ರ ಸಮಿತಿ(ಬಿಆರ್‌ಎಸ್) ಪಕ್ಷದ 10 ಶಾಸಕರ ಅನರ್ಹತೆಯ ವಿಷಯವನ್ನು ಮೂರು ತಿಂಗಳಲ್ಲಿ ನಿರ್ಧರಿಸುವಂತೆ ವಿಧಾನಸಭಾ ಸ್ಪೀಕರ್‌ಗೆ ನಿರ್ದೇಶನ ನೀಡಿತ್ತು.

ಸಿಜೆಐ ನೇತೃತ್ವದ ಪೀಠವು ನೀಡಿದ್ದ ನಿರ್ದೇಶನಗಳನ್ನು ಪಾಲಿಸದಿರುವುದು 'ಅತ್ಯಂತ ಗಂಭೀರ ರೀತಿಯ ನ್ಯಾಯಾಂಗ ನಿಂದನೆ' ಎಂದು ಹೇಳಿದ ನ್ಯಾಯಾಲಯ, ಬಿಆರ್‌ಎಸ್ ನಾಯಕರು ಸಲ್ಲಿಸಿದ ಅರ್ಜಿಗಳ ಕುರಿತು ಸ್ಪೀಕರ್ ಮತ್ತು ಇತರರಿಗೆ ನೋಟಿಸ್ ನೀಡಿದೆ. ಆದರೆ, ಮುಂದಿನ ಆದೇಶದವರೆಗೆ ತೆಲಂಗಾಣದ ಸ್ಪೀಕರ್ ಮತ್ತು ಇತರರಿಗೆ ಖುದ್ದು ಹಾಜರಾತಿಯಿಂದ ವಿನಾಯಿತಿ ನೀಡಿದೆ.

ಅನರ್ಹತೆ ಅರ್ಜಿಗಳನ್ನು ನಿರ್ಧರಿಸಲು ಎಂಟು ವಾರಗಳ ಕಾಲಾವಕಾಶ ನೀಡಬೇಕು ಎಂದು ವಿಧಾನಸಭಾಧ್ಯಕ್ಷರ ಕಚೇರಿಯ ಪರವಾಗಿ ಸಲ್ಲಿಸಲಾದ ಪ್ರತ್ಯೇಕ ಅರ್ಜಿ ಬಗ್ಗೆಯೂ ನ್ಯಾಯಪೀಠ ನೋಟಿಸ್ ಜಾರಿ ಮಾಡಿದೆ.

ಶಬರಿಮಲೆ ಚಿನ್ನ ನಾಪತ್ತೆ ಪ್ರಕರಣ ವೈಜ್ಞಾನಿಕ ಪರೀಕ್ಷೆ ಆರಂಭ

ಪತ್ತನಂತಿಟ್ಟ (ಪಿಟಿಐ): ಶಬರಿಮಲೆ ದೇವಸ್ಥಾನದಿಂದ ಚಿನ್ನ ನಾಪತ್ತೆ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಸೋಮವಾರ ಶ್ರೀಕೋವಿಲ್‌ನಿಂದ (ಗರ್ಭಗುಡಿ) ಚಿನ್ನ ಲೇಪಿತ ಕವಚವನ್ನು ವೈಜ್ಞಾನಿಕ ಪರೀಕ್ಷೆಗಾಗಿ ಹೊರತೆಗೆದಿದೆ.



ಕೇರಳ ಹೈಕೋರ್ಟ್ ಸೂಚನೆಯಂತೆ, ಈ ಪ್ರಕ್ರಿಯೆಯು 'ದೇವ ಅನುಜ್ಞೆ' (ದೈವಿಕ ಅನುಮತಿ) ಆಚರಣೆ ಮತ್ತು ಅಗ್ರ ಪೂಜೆ ಬಳಿಕ ದೇವಾಲಯವನ್ನು ಮುಚ್ಚಿದ ನಂತರ ಮಧ್ಯಾಹ್ನ 1.15ಕ್ಕೆ ಪ್ರಾರಂಭವಾಗಿ 3 ಗಂಟೆವರೆಗೆ ನಡೆಯಿತು.

ಇದಕ್ಕಾಗಿ ತನಿಖಾಧಿಕಾರಿ ಡಿವೈಎಸ್‌ಪಿ ಎಸ್. ಶಶಿಧರನ್ ನೇತೃತ್ವದ ತಂಡವು ಭಾನುವಾರದಿಂದ ಶಬರಿಮಲೆಯಲ್ಲಿ ಬೀಡುಬಿಟ್ಟಿದೆ.

ಪೊಲೀಸ್ ಸಿಬ್ಬಂದಿ, ವಿಧಿವಿಜ್ಞಾನ ತಜ್ಞರು ಮತ್ತು ರಾಸಾಯನಿಕ ವಿಶ್ಲೇಷಕರು ಸೇರಿದಂತೆ 20 ಮಂದಿ ಎಸ್‌ಐಟಿಯೊಂದಿಗೆ ಸೇರಿಕೊಂಡಿದ್ದಾರೆ. ಇಡೀ ಕಾರ್ಯವಿಧಾನವನ್ನು ವಿಡಿಯೊ ಚಿತ್ರೀಕರಣ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಿರುವಾಂಕೂರು ದೇವಸ್ವಂ ಮಂಡಳಿಯ (ಟಿಡಿಬಿ) ಶಿಲ್ಪಿಗಳು ಪಕ್ಕದ ಕಂಬಗಳಿಂದ ಚಿನ್ನ ಲೇಪಿತ ಕವಚ, ದ್ವಾರಪಾಲಕ ಮೂರ್ತಿಗಳ ಪೀಠಗಳು ಮತ್ತು ಶ್ರೀಕೋವಿಲ್‌ನ ಬಾಗಿಲಿನ ಚೌಕಟ್ಟುಗಳನ್ನು ತೆಗೆಯಲು ಎಸ್‌ಐಟಿಗೆ ಸಹಾಯ ಮಾಡಿದರು. ಅವುಗಳನ್ನು ಮತ್ತೊಂದು ಕೋಣೆಗೆ ವರ್ಗಾಯಿಸಲಾಯಿತು. ಅಲ್ಲಿ ಅವುಗಳ ತೂಕವನ್ನು ದಾಖಲಿಸಲಾಯಿತು. ವಿಧಿವಿಜ್ಞಾನ ವಿಶ್ಲೇಷಣೆಗಾಗಿ ಮಾದರಿಗಳನ್ನು ಸಂಗ್ರಹಿಸಲಾಯಿತು. ಈ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಇವುಗಳನ್ನು ಶೀಘ್ರದಲ್ಲೇ ಮರುಸ್ಥಾಪಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಎರಡನೇ ಬಾರಿಯೂ ಇ.ಡಿ. ಮುಂದೆ ಹಾಜರಾಗದ ಅನಿಲ್ ಅಂಬಾನಿ



ಅನಿಲ್ ಅಂಬಾನಿ

ನವದೆಹಲಿ (ಪಿಟಿಐ): ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಉಲ್ಲಂಘನೆ ಪ್ರಕರಣದಲ್ಲಿ ರಿಲಯನ್ಸ್ ಸಮೂಹದ ಮುಖ್ಯಸ್ಥ ಅನಿಲ್ ಅಂಬಾನಿ ಎರಡನೇ ಬಾರಿಯೂ ಜಾರಿ ನಿರ್ದೇಶನಾಲಯದ (ಇ.ಡಿ) ಎದುರು ವಿಚಾರಣೆಗೆ ಹಾಜರಾಗಲು ಸೋಮವಾರ ನಿರಾಕರಿಸಿದ್ದಾರೆ.

'ವರ್ಚುವಲ್ ಮೂಲಕ ವಿಚಾರಣೆಗೆ ಹಾಜರಾಗಲು ಸಿದ್ಧ' ಎಂದು ಇ.ಡಿ.ಗೆ ಅವರು ಮತ್ತೊಮ್ಮೆ ತಿಳಿಸಿದ್ದಾರೆ.

ನವೆಂಬರ್ 14ರಂದು ಮೊದಲ ಸಮನ್ಸ್ ಉಲ್ಲಂಘಿಸಿದ್ದ ಅನಿಲ್ ಅಂಬಾನಿ, ವರ್ಚುವಲ್ ಮೂಲಕ ಹಾಜರಾಗುವುದಾಗಿ ಲಿಖಿತವಾಗಿ ತಿಳಿಸಿದ್ದರು. ಆದರೆ, ಅವರಿಗೆ ಸೋಮವಾರ ಖುದ್ದು ಹಾಜರಾಗುವಂತೆ ಇ.ಡಿ.ಎರಡನೇ ಬಾರಿ ಸಮನ್ಸ್ ನೀಡಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ನದಿಯನ್ನು ದಾಟಲು ನೂರಾರು ಜನ ಕಿಕ್ಕಿರಿದು ತುಂಬಿದ್ದು, ಕೆಲವರು ದೋಣಿಗಳನ್ನು ಹತ್ತಿ ಹೋಗುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅವರೆಲ್ಲಾ ಅಕ್ರಮ ವಲಸಿಗರಾಗಿದ್ದು, ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಘೋಷಣೆಯಾದ ನಂತರ ಅದಕ್ಕೆ ಹೆದರಿ ಪಶ್ಚಿಮ ಬಂಗಾಳವನ್ನು ತೊರೆದು ಹೋಗುತ್ತಿದ್ದಾರೆ (ಘರ್ ವಾಪ್ಸಿ) ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ವಿಡಿಯೊದ ಕೀಫ್ರೇಮ್ ಅನ್ನು ಪ್ರತ್ಯೇಕಿಸಿ, ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, 'ಬಾಂಗ್ಲಾದೇಶ್ ಟೆಲಿವಿಷನ್'ನಲ್ಲಿ ಇದೇ ಚಿತ್ರ ಪ್ರಕಟವಾಗಿರುವುದು ಕಂಡಿತು. ಚಿತ್ರದೊಂದಿಗೆ, ಬಾಂಗ್ಲಾದೇಶದ ಖುಲ್ನಾದಲ್ಲಿರುವ ಮೊಂಗ್ಲಾ ಘಾಟ್ ಅನ್ನು ಜನ ದಾಟಲು ಹರಸಾಹಸ ಮಾಡುತ್ತಿರುವ ಬಗ್ಗೆ ವರದಿ ಪ್ರಕಟವಾಗಿತ್ತು. 'ಬಾಂಗ್ಲಾದೇಶ್ ಟೆಲಿವಿಷನ್'ನ ವರದಿಗಾರ ಮೊಹಮ್ಮದ್ ಜಸೀಮುದ್ದೀನ್ ಅವರನ್ನು ಸಂಪರ್ಕಿಸಿದಾಗ, ಅವರು ಇದು ಮೊಂಗಲ್ ಘಾಟ್‌ನ ವಿಡಿಯೊ ಎನ್ನುವುದನ್ನು ಖಚಿತಪಡಿಸಿದರು. ಆ ಚಿತ್ರವನ್ನು ಹಂಚಿಕೊಳ್ಳುವ ಮೂಲಕ ಕೆಲವರು ಸುಳ್ಳು ಸುದ್ದಿ ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಸತ್ಯವೆಂದರೆ ಸರಳತೆ



ದೀಪಾ ಹಿರೇಗುತ್ತಿ

ಬಹಳ ಹಿಂದೆ ಒಂದೂರಲ್ಲಿ ಮಡಕೆ ಮಾಡುವ ಒಬ್ಬ ಪ್ರಸಿದ್ಧ ಕಲಾವಿದರಿದ್ದರು. ಅವರ ಸೂಕ್ಷ್ಮವಾದ ಕಲೆ ಬಹಳ ಪ್ರಸಿದ್ಧವಾಗಿತ್ತು. ದೂರದ ಊರುಗಳಿಂದಲೂ ಜನರು ಅವರು ಮಾಡುವ ಮಡಕೆಗಳನ್ನು, ಹೂದಾನಿಗಳನ್ನು ಕೊಳ್ಳಲು ಬರುತ್ತಿದ್ದರು. ಹೀಗಿರುವಾಗ ಒಮ್ಮೆ ಅವರು ತನಗೆ ಒಬ್ಬ ಸಹಾಯಕ ಬೇಕೆಂದೂ ಈ ಕೆಲಸ ಮಾಡಲು ಇಷ್ಟವಿರುವವರ ಕಲೆಯನ್ನು ಪರೀಕ್ಷಿಸಿ ಸಹಾಯಕನನ್ನಾಗಿ ತೆಗೆದುಕೊಳ್ಳುವುದಾಗಿಯೂ ಹೇಳಿದರು. ಬಹಳ ಮಂದಿ ಪ್ರತಿಭಾವಂತರು ಮಣ್ಣು, ಮಣ್ಣಿನ ಪಾತ್ರೆಗಳನ್ನು ಅಲಂಕರಿಸುವ ವಿವಿಧ ಸಾಧನಗಳು ಮತ್ತು ಬಣ್ಣಗಳನ್ನು ಹಿಡಿದುಕೊಂಡು ಬಂದರು.

ಅವರಲ್ಲಿ ಒಬ್ಬ ವಿದ್ಯಾಧರ. ಆತ ಸರಳವಾದ ಮತ್ತು ಶುಚಿಯಾದ ಬಟ್ಟೆ ತೊಟ್ಟಿದ್ದ. ಅವನ ಕೈಲಿ ಸಾಧಾರಣ ಉಪಕರಣಗಳಿದ್ದವು. ಉಳಿದ ಯುವಕರು ವಿದ್ಯಾಧರನನ್ನು ನೋಡಿ ನಕ್ಕರು. ಇವನು ಇಷ್ಟು ದೊಡ್ಡ ಕಲಾವಿದರ ಸಹಾಯಕನಾಗಲು ಲಾಯಕ್ಕೇ ಇಲ್ಲ ಅಂದುಕೊಂಡು ವ್ಯಂಗ್ಯವಾಡಿದರು.

ಕಲಾವಿದರು ಬಂದು ಎಲ್ಲ ಯುವಕರಿಗೂ ಒಂದೇ ಸವಾಲನ್ನಿಟ್ಟರು: 'ನೀವೆಲ್ಲ ಒಂದೊಂದು ಮಡಕೆ ಮಾಡಬೇಕು, ಮತ್ತು ಅದು ಸತ್ಯವನ್ನು ಪ್ರತಿನಿಧಿಸುತ್ತಿರಬೇಕು'. ಸ್ಪರ್ಧೆ ಶುರುವಾಯಿತು.

ಹುಡುಗರು ಚಕಚಕನೆ ಮಡಕೆ ಮಾಡತೊಡಗಿದರು. ಅದರ ಮೇಲೆ ಹೂವು ಬೆಟ್ಟ ಎಲ್ಲವನ್ನೂ ಕೊರೆದರು. ಬಣ್ಣ ಹಾಕಿದರು. ಬೇಗಬೇಗ ಮುಗಿಸಿ ಸಾಲಾಗಿ ಇಟ್ಟರು. ಆದರೆ ವಿದ್ಯಾಧರನ ಕೆಲಸ ನಿಧಾನವಾಗಿ ಸಾಗಿತ್ತು. ಅವನು ಮಾಡಿದ ಮಡಕೆ ಸಾಮಾನ್ಯ ಸ್ವರೂಪದ್ದಾಗಿತ್ತು. ಅದರ ಮೇಲೆ ಯಾವ ವಿನ್ಯಾಸವೂ ಇರಲಿಲ್ಲ. ಬಣ್ಣವೂ ಇರಲಿಲ್ಲ. ಅಚ್ಚ ಮಣ್ಣಿನ ಬಣ್ಣದ ಮಡಕೆ ಸರಳವಾಗಿತ್ತು. ಉಳಿದ ಹುಡುಗರು ಇವನ ಮಡಕೆಯ ಕಥೆ ಅಷ್ಟೇ ಎಂದು ನಕ್ಕರು.

ಕಲಾವಿದರು ಬಂದು ಪ್ರತೀ ಮಡಕೆಯನ್ನೂ ಪರೀಕ್ಷಿಸಿದರು. ಅಲಂಕಾರ ಮಾಡಿಟ್ಟ ಮಡಕೆಗಳು ಬೆರಳಿನಿಂದ ಹೊಡೆದು ಪರೀಕ್ಷಿಸಿದಾಗ ಬಿರುಕು ಬಿಟ್ಟವು, ಕೆಲವು ಒಡೆದೇ ಹೋದವು. ಕೊನೆಯಲ್ಲಿಟ್ಟ ವಿದ್ಯಾಧರನ ಮಡಕೆಯನ್ನು ಪರೀಕ್ಷಿಸಿದಾಗ ದೇವಾಲಯದ ಗಂಟೆಯಂತಹ ಆಳವಾದ ಸದ್ದು ಬಂದಿತು, ಮಡಕೆ ಬಿರುಕು ಬಿಡಲಿಲ್ಲ.

'ಈ ಮಡಕೆಯು ಏನನ್ನು ಸೂಚಿಸುತ್ತದೆ?' ಕೇಳಿದರು ಕಲಾವಿದರು.


ವಿದ್ಯಾಧರ ತಲೆಬಾಗಿ ಹೇಳಿದ: 'ನೀವು ಹೇಳಿದಂತೆ ಇದು ಸತ್ಯವನ್ನು ಸೂಚಿಸುತ್ತದೆ ಗುರುಗಳೇ. ಸತ್ಯಕ್ಕೆ ಯಾವುದೇ ಅಲಂಕಾರ ಬೇಕಿಲ್ಲ. ಆದರೆ ಅದಕ್ಕೆ ಬಲ ಬೇಕು. ಅಪಾರ ತಾಳ್ಮೆ, ಸಾಮರ್ಥ್ಯ ಬೇಕು'.

ಗುರುಗಳು ಮುಗುಳ್ನಕ್ಕು ಹೇಳಿದರು: 'ಯಾರನ್ನೂ ಅವರ ಬಟ್ಟೆ ಮತ್ತು ಹೊರಗಿನ ನೋಟದಿಂದ ಅಳೆಯಬೇಡಿ. ಚಿನ್ನದ ಮೇಲೆ ದೂಳು ಕೂತರೂ ಅದು ಚಿನ್ನವೇ ಆಗಿರುತ್ತದೆ. ಈ ಹುಡುಗನ ಕೆಲಸ ಪ್ರಾಮಾಣಿಕವಾಗಿದೆ. ಆದರೆ ಅಷ್ಟೇ ಶಕ್ತಿಯುತವಾಗಿದೆ. ಈತ ನನ್ನ ಸಹಾಯಕನಾಗಿ ಆಯ್ಕೆಯಾಗಿದ್ದಾನೆ'.

ಪುಸ್ತಕವನ್ನು ಅದರ ಮುಖಪುಟದಿಂದ ಅಳೆಯಬಾರದೆನ್ನುತ್ತಾರೆ, ನಿಜ. ಆದರೆ ಈಗಿನ ಕಾಲದಲ್ಲಿ ಹೊರಗಿನ ವ್ಯಕ್ತಿತ್ವವನ್ನು ಆಕರ್ಷಕವಾಗಿರಿಸಿಕೊಳ್ಳಲು ನಾವೆಲ್ಲರೂ ಬಹಳ ಪ್ರಯತ್ನಪಡುತ್ತೇವೆ, ತಪ್ಪೇನಲ್ಲ. ಜತೆಗೆ ನಮ್ಮ ಅಂತರಂಗವೂ ಆಕರ್ಷಕವಾಗಿರಬೇಕು. ಓದು, ಒಳ್ಳೆಯ ಆಲೋಚನೆಗಳು, ಕರುಣೆ, ಸಹಾನುಭೂತಿಯಂತಹ ಸ್ವಭಾವಗಳಿಂದ ನಮ್ಮ ಅಂತರಂಗವು ಸುಂದರವಾಗುತ್ತದೆ. ಆಗ ಮಾತ್ರ ನಾವು ಹೊರಗಿನ ವ್ಯಕ್ತಿತ್ವಕ್ಕಷ್ಟೇ ಬೆಲೆ ಕೊಡದೇ, ವ್ಯಕ್ತಿಗಳ ಸಂಪೂರ್ಣ ವ್ಯಕ್ತಿತ್ವಕ್ಕೆ ಮನ್ನಣೆ ನೀಡಲು ಸಾಧ್ಯ. ❖

ಪದಬಂಧ 6227

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಜರೂರಾಗಿ ಮಾಡಿದ ಪಂಚನಾಮೆ ಉಲ್ಟಾ ಕಾಣುತ್ತಿದೆ (4)
4.ಕಡಲ ಹತ್ತಿರ ಪಡೆದ ಸಾಲ (2)
5.ಸ್ಮಶಾನವನ್ನು ಹೀಗೂ ಹೇಳುತ್ತಾರೆ (4)
6.ಸೇವಕಿ ಇಲ್ಲಿದ್ದಾಳೆ (2)
7.ಆಹಾರ ತೆಗೆದುಕೊಳ್ಳದೆ ಮಾಡಿದ ಮುಷ್ಕರ (8)
9.ಎಲೆಕ್ಟ್ರಾನ್ ವೋಟಿಂಗ್ ಮಿಷಿನ್ ಅನ್ನು ಕನ್ನಡೀಕರಿಸಿ (8)
12.ರಾಯಭಾರಿಯಿಲ್ಲಿ ಉಲ್ಟಾ ನಿಂತಿದ್ದಾನಲ್ಲಾ! (2)
13.ನಿಂಬೆ ಹಣ್ಣಿನ ಪಾನಕ (4)
15.ಶುನಕದ ಹತ್ತಿರ ಹಾರಿ ಬಂದಿರುವ ಗಿಳಿ (2)
16.ಈತ ದಿಕ್ಕಿಲ್ಲದವನು (4)

ಮೇಲಿಂದ ಕೆಳಕ್ಕೆ

1.ಬರೀ ಉಪ್ಪು ಹಾಕಿ ಮಾಡಿದ ಸಾರು ಉಲ್ಟಾ ಆಗಿದೆ (4)
2.ತಿರುಗಿದರೆ ವಾಗ್ವಾದ ಕಾಣುತ್ತಿದೆಯಲ್ಲ! (4)
3.ಜಾಲಾಡುವಾಗ ಸುಳಿವು ಸಿಕ್ಕಿತಲ್ಲಾ! (2)
4.ಅತಿಯಾದ ಬಾಯಾರಿಕೆ (4)
8.ದನವಿರುವ ಮನೆ (3)
9.ವಿನೋದಗಾರನಿವನು (4)
10.ಊರಿನ ಕಾವಲುಗಾರ (4)
11.ಪಕ್ಷದ ಹದಿಮೂರನೆಯ ದಿನ (4)
14.ಸಾಲದ ಮೇಲೆ ಕೊಡುವ ಹೆಚ್ಚಿನ ಹಣ (2)

6226ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚಿಪ್ಪಿಗ 6.ದಂತಮಂಜನ
7.ವಾಲಗ 8.ಸಖ
10.ಕಣ 11.ನಿನಾದ
13.ಅಜ 14.ಪುತ್ರ
18.ಯೋಜಕ 19.ಗಗನಮಣಿ
20.ಶಿಕ್ಷಣ

ಮೇಲಿಂದ ಕೆಳಕ್ಕೆ:
1.ಚಿನಿವಾರ 2.ಗರಗಸ
3.ವದಂತಿ 4.ಆಮಂತ್ರಣ
5.ಮನಸಾಕ್ಷಿ 9.ಖನಿಜ
10.ಕದಪು 12.ಆರೋಗಣೆ
13.ಅವನತಿ 15.ತ್ರಯೋದಶಿ
16.ಪ್ರಕರಣ 17.ಹಣಿಗೆ

ಸುಡೊಕು 6611

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3		2	1		4		6	7
				8				
7	9		6		2	5		4
2					3			5
				4		2	9	
			9					1
	4	1	2				8	
9				7	8			
	6			5		4		9

ಸುಡೊಕು 6610

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

18 ನವೆಂಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ತ್ರಯೋದಶಿ ಗಂ 7-13 ನಕ್ಷತ್ರ: ಸ್ವಾತಿ ಅಹೋರಾತ್ರ ಯೋಗ: ಆಯುಷ್ಮಾನ್ ಗಂ. 8-09 ಕರಣ: ವಣಿಜ ಗಂ. 7-13 ವೃಶ್ಚಿಕ ಮಾಸದ 02 ನೇ ದಿನ. ಮಳೆ ನಕ್ಷತ್ರ : ವಿಶಾಖ 4 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30 ಸೂರ್ಯೋದಯ : 06-35 ಸೂರ್ಯಾಸ್ತ : 05-57, ಮುಸ್ಲಿಂ ದಿನಾಂಕ : 26 ಜುಮಾದುಲ್ಲಾವಲ್, ಅದೃಷ್ಟ ಸಂಖ್ಯೆ : 2, 12

ಮೇಷ: ಅದ್ಭುತವಾದ ಉಪನಿಷತ್ ವಾಕ್ಯಗಳ ಬಳಕೆಯನ್ನು ಮಾಡಿ ಪತ್ರಿಕೆಗೆ ಬರೆದ ಲೇಖನಕ್ಕೆ ಓದುಗರಿಂದ ಉತ್ತಮ ಪ್ರತಿಕ್ರಿಯೆ ಪಡೆಯುವಿರಿ. ಮೇಲಧಿಕಾರಿಗಳು ನಿರ್ಧಾರಗಳನ್ನು ಕೈಗೊಳ್ಳಲು ನಿಮ್ಮ ಇಚ್ಛೆಗೆ ಬಿಡುವರು.

ವೃಷಭ: ಕೆಲಸಗಳು ಸುಲಭವಾಗಿಸಲು ಸ್ನೇಹಿತರೊಬ್ಬರು ಆರ್ಥಿಕವಾಗಿ ನೆರವಾಗಲಿದ್ದಾರೆ. ಕರಕುಶಲ ವಸ್ತುಗಳ ತಯಾರಕರು ಉತ್ತಮ ಕೆಲಸಗಳಿಂದ ಆದಾಯ ಹೆಚ್ಚಿಸಿಕೊಳ್ಳಬಹುದು.

ಮಿಥುನ: ಹಿರಿಯರ ಆಶೀರ್ವಾದದ ಮೇರೆಗೆ ವೈದ್ಯ ವೃತ್ತಿಯನ್ನು ಆರಂಭಿಸುವ ಸಲುವಾಗಿ ಸ್ನೇಹಿತರೊಂದಿಗೆ ಸ್ಥಳದ ಅನ್ವೇಷಣೆ ಮಾಡುವಿರಿ. ಬಂಧುಗಳು ಮತ್ತು ಸ್ನೇಹಿತರಿಂದ ಮಾರ್ಗದರ್ಶನಕ್ಕೆ ಕೊರತೆ ಇರದು.

ಕರ್ಕಾಟಕ: ಅಂದುಕೊಂಡಿರುವ ಕೆಲಸಗಳು ಉತ್ತಮವಾಗಿ ನೆರವೇರುವುದರಿಂದ ನೆಮ್ಮದಿ ಇರುವುದು. ಪದವಿ ವಿದ್ಯಾರ್ಥಿಗಳ ಅತಿರೇಕದ ವರ್ತನೆಗಳನ್ನು ಹಲವು ಬಾರಿ ಶಿಕ್ಷಕರು ಗಮನಿಸಿ ಕಠಿಣ ಕ್ರಮವನ್ನು ಕೈಗೊಳ್ಳುವ ಸಾಧ್ಯತೆ ಇದೆ.

ಸಿಂಹ: ನ್ಯಾಯಾಂಗ ವಿಭಾಗದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಇಂದಿನಿಂದ ವಿಶೇಷ ಆಸಕ್ತಿ ಮೂಡುವುದು. ಮುಗ್ಧವಾದ ಮಕ್ಕಳಂತಹ ನಿಮ್ಮ ವರ್ತನೆಯಿಂದಾಗಿ ಇಂದು ಹಲವರಿಗೆ ಸಹಾಯವಾಗುವುದು.

ಕನ್ಯಾ: ದಾಂಪತ್ಯದಲ್ಲಿ ಬಿರುಕು ಬಾರದಂತೆ ಅನ್ಯೋನ್ಯತೆ ಕಾಪಾಡಿಕೊಳ್ಳುವ ಜವಾಬ್ದಾರಿಯಾಗಿರುತ್ತದೆ. ಹೊಸ ಜಾಗಕ್ಕೆ ಬಂದು ಸಾಮಾಜಿಕ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ಆಗುತ್ತದೆ.

ತುಲಾ: ಯೋಜನೆಗಳು ಕಾರ್ಯಗತಗೊಳ್ಳಲು ಪ್ರಯತ್ನ ನಡೆಸಬೇಕಾಗುವುದು. ಕಾರ್ಯಕ್ಷೇತ್ರದಲ್ಲಿ ಸಹವರ್ತಿಗಳ ಜತೆ ಉತ್ತಮ ಸಂಪರ್ಕವನ್ನು ಬೆಳೆಸಿಕೊಳ್ಳುವುದು ಸುಲಭ ಸಾಧ್ಯವಾಗುವುದು.

ವೃಶ್ಚಿಕ: ಮನುಷ್ಯ ಪ್ರಯತ್ನದ ಜತೆ ಮಹಾಗಣಪತಿಯ ಮೊರೆ ಹೋಗುವುದರಿಂದ ಕಾರ್ಯಸಿದ್ಧಿಯಾಗಲಿದೆ. ನೀವೇ ವಿಮರ್ಶಿಕೊಂಡರೆ ನಿಮ್ಮ ನಡವಳಿಕೆಯ ತಪ್ಪುಗಳ ಅರಿವಾಗುವುದು.


ಧನು: ಸಂಗೀತ ಕ್ಷೇತ್ರದಲ್ಲಿ ನೀವಂದುಕೊಂಡ ಸಾಧನೆಯನ್ನು ಮಾಡಲಾಗದೆ ಮನಸ್ಸಿನಲ್ಲಿ ದುಃಖವನ್ನು ಅನುಭವಿಸುವಿರಿ. ಮನೆಯಲ್ಲಿ ಶುಭ ಕಾರ್ಯಗಳ ತಯಾರಿ ಉತ್ತಮ ರೀತಿಯಲ್ಲಿ ನಡೆಯುವುದು.

ಮಕರ: ದನ, ಕರುಗಳ ಅಥವಾ ಮನೆಯಲ್ಲಿ ಸಾಕಿರುವ ಪ್ರಾಣಿಗಳ ಆರೋಗ್ಯ ತಪಾಸಣೆ ಮಾಡಿಸುವಿರಿ. ಮಂದಿರದ ಭೇಟಿ ಹಾಗೂ ದೇವರ ದರ್ಶನವನ್ನು ಮಾಡುವಿರಿ. ಕುಟುಂಬ ನಿರ್ವಹಣೆಗೆ ಒಡಹುಟ್ಟಿದವರಿಂದ ಸಹಕಾರ.

ಕುಂಭ: ಸಮಸ್ಯೆಗಳು ಏನೇ ಇದ್ದರೂ ಸಮಾಧಾನವಾಗಿ ಎಲ್ಲರ ಬಳಿ ನಗುಮೊಗದಿಂದ ವರ್ತಿಸಿ. ವ್ಯವಹಾರದಲ್ಲಿ ತಪ್ಪುಗಳಾಗದಂತೆ ಜಾಗರೂಕತೆ ವಹಿಸಿರಿ.

ಮೀನ: ಹವಾಮಾನ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಕೆಲಸವನ್ನು ಉಳಿಸಿಕೊಳ್ಳಲು ಸಾಹಸ ಮಾಡಬೇಕಾಗಬಹುದು. ಹವ್ಯಾಸಿ ಬರಹಗಾರರಿಗೆ ಉತ್ತಮ ವೇದಿಕೆ ದೊರಕುವುದು.


ಗುಂಡಣ್ಣ



ಅಡಿಕೆ ಧಾರಣೆ

ಕುಮಟಾ	
ಚಿಪ್ಪು	30189-36269
ಕೋಕ	11569-31019
ಫ್ಯಾಕ್ಟರಿ	8389-23129
ಹಳೆಚಾಲಿ	40999-48169
ಹೊಸಚಾಲಿ	33089-36509
ಸಾಗರ	
ಬಿಳಿಗೋಟು	17219-34599
ಚಾಲಿ	30199-43333
ಕೋಕ	12569-35299
ಕೆಂಪುಗೋಟು	11129-38619
ರಾಶಿ	35599-60870
ಸಿಪ್ಪೆಗೋಟು	8099-23099
ಶಿವಮೊಗ್ಗ	
ಬೆಟ್ಟೆ	51000-74432
ಗೊರಬಲು	19001-41699
ಹೊಸತು	54199-60499
ರಾಶಿ	43009-60309
ಸರಕು	57069-85019
ಸಿದ್ದಾಪುರ	
ಬಿಳಿಗೋಟು	25899-36499
ಚಾಲಿ	41209-48199
ಕೋಕ	22019-32899
ಕೆಂಪುಗೋಟು	31399-32500
ರಾಶಿ	45199-56699
ತಟ್ಟಿಬೆಟ್ಟೆ	32900-46899
ಯಲ್ಲಾಪುರ	
ಆಪಿ	62009-70899
ಬಿಳಿಗೋಟು	15900-37800
ಚಾಲಿ	39109-48820
ಕೋಕ	15009-23990
ರಾಶಿ	44619-59599
ತಟ್ಟಿಬೆಟ್ಟೆ	38009-48900

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,910
ಇಂದಿನ ಅಂತ್ಯ:	26,013
ದಿನದ ಗರಿಷ್ಠ:	26,024
	103

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹660
12 ಕ್ಕೆ	₹91
ಮೈಸೂರು: 100 ಕ್ಕೆ	₹662

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹182
ಆರ್‌ಎಸ್‌ಎಸ್-5	₹177
ಗುಡ್ ಲಾಟ್	₹164

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹400-725
ದ್ವಿತಳಿ (ಬಿ.ವಿ)	₹455-845

ಮುದ್ರೆಮನೆ ಕಾಫಿ (50 ಕೆ.ಜಿಗೆ)

ಎಪಿ	₹28250
ಎಸಿ	₹15540
ಆರ್‌ಪಿ	₹18900
ಆರ್‌ಸಿ	₹10425

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹26000-26000
ತಿಪಟೂರು	₹26100-27850

ಮುಂಬೈ ಖಾದ್ಯ ತೈಲ
(ಆವರಣದಲ್ಲಿ ಕಳೆದ ವಹಿವಾಟಿನ ದರ)

(10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1515 (1530)
ಸೋಯಾ (ರಿಫೈನ್ಡ್)	₹1260 (1270)
ಸೂರ್ಯಕಾಂತಿ (ರಿಫೈನ್ಡ್)	₹1470 (1470)
ಪಾಮೋಲಿನ್	₹1250 (1255)

ಹೊಸ ಐಟಿಆರ್ ಫಾರ್ಮ್ ಜನವರಿಯಲ್ಲಿ ಅಧಿಸೂಚನೆ ಪ್ರಕಟ

ನವದೆಹಲಿ (ಪಿಟಿಐ): 'ಆದಾಯ ತೆರಿಗೆ ಇಲಾಖೆಯು 'ಆದಾಯ ತೆರಿಗೆ ಕಾಯ್ದೆ–2025'ರ ಅಡಿಯಲ್ಲಿ ಸರಳೀಕೃತ ಐಟಿಆರ್ ಫಾರ್ಮ್ ಹಾಗೂ ನಿಯಮಗಳ ಜಾರಿ ಕುರಿತು ಜನವರಿಯಲ್ಲಿ ಅಧಿಸೂಚನೆ ಹೊರಡಿಸಲಿದೆ' ಎಂದು ಕೇಂದ್ರ ನೇರ ತೆರಿಗೆಗಳ ಮಂಡಳಿಯ (ಸಿಬಿಡಿಟಿ) ಅಧ್ಯಕ್ಷ ರವಿ ಅಗರ್ವಾಲ್ ತಿಳಿಸಿದ್ದಾರೆ.

ಭಾರತ ಅಂತರರಾಷ್ಟ್ರೀಯ ವ್ಯಾಪಾರ ಮೇಳ (ಐಐಟಿಎಫ್) ದಲ್ಲಿ ಸೋಮವಾರ ಮಾತನಾಡಿದ ಅವರು,'ಇದು ಮುಂದಿನ ಆರ್ಥಿಕ ವರ್ಷ ಏಪ್ರಿಲ್ 1ರಿಂದಲೇ ಜಾರಿಗೆ ಬರಲಿದೆ. ಹೊಸ ಕಾನೂನಿನ ಅಡಿಯಲ್ಲಿ ಐಟಿಆರ್ ರಿಟರ್ನ್ ಫಾರ್ಮ್‌ಗಳನ್ನು ಮತ್ತಷ್ಟು ಸರಳಗೊಳಿಸಲಿದೆ. 1961ರಿಂದ ಜಾರಿಗೆಯಲ್ಲಿರುವ ಆದಾಯ ತೆರಿಗೆ ಕಾಯ್ದೆಯನ್ನು ಬದಲಾಯಿಸಲಿದೆ' ಎಂದು ಅವರು ಹೇಳಿದ್ದಾರೆ.

'ಹೊಸ ಫಾರ್ಮ್ ಹಾಗೂ ವಿನ್ಯಾಸ ರಚನೆಯ ಕುರಿತ ಪ್ರಕ್ರಿಯೆ ನಡೆಯುತ್ತಿದೆ. ಜನವರಿ ವೇಳೆಗೆ ಇದು ತೆರಿಗೆ ಪಾವತಿದಾರರಿಗೆ ಲಭ್ಯವಾಗಲಿದ್ದು, ಹೊಸ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಸಾಕಷ್ಟು ಸಮಯವೂ ದೊರಕಲಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಆಗಸ್ಟ್ 12ರಂದು 'ಆದಾಯ ತೆರಿಗೆ ಕಾಯ್ದೆ–2025' ಅನ್ನು ಸಂಸತ್ ಅಂಗೀಕರಿಸಿತ್ತು. ಹೊಸ ಕಾಯ್ದೆಯು ಯಾವುದೇ ಹೊಸ ತೆರಿಗೆಯನ್ನು ವಿಧಿಸುತ್ತಿಲ್ಲ, ಬದಲಾಗಿ ತೆರಿಗೆ ಕಾಯ್ದೆಯನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ಸರಳ ಭಾಷೆಯಲ್ಲಿ ವಿವರಿಸಲಾಗಿದೆ.

ನೇರ ಸಂಗ್ರಹದ ಗುರಿ ತಲುಪುವ ವಿಶ್ವಾಸ



'ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು ನೇರ ತೆರಿಗೆ ಮೂಲಕ ₹25.20 ಲಕ್ಷ ಕೋಟಿ ಸಂಗ್ರಹದ ಗುರಿ ಹೊಂದಿದೆ. ಈ ಗುರಿಯನ್ನು ತಲುಪುವ ವಿಶ್ವಾಸ ಹೊಂದಲಾಗಿದೆ' ಎಂದು ರವಿ ಅಗರ್ವಾಲ್ ಸೋಮವಾರ ಹೇಳಿದ್ದಾರೆ.

ಮರುಪಾವತಿಗೆ ಸಂಬಂಧಿಸಿದ ಕ್ಲೇಮ್‌ಗಳಲ್ಲಿ ಕೆಲವು ಹೆಚ್ಚಿನ ಮೌಲ್ಯವನ್ನು ಹೊಂದಿವೆ. ಅಲ್ಲದೆ, ಯಾವುದಾದರೂ ವಿಷಯ ನಮೂದಿಸದಿದ್ದರೆ, ಪರಿಷ್ಕರಿಸಿದ ಮರುಪಾವತಿ (ರೀಫಂಡ್) ವಿವರ ಸಲ್ಲಿಸುವಂತೆ ತೆರಿಗೆ ಪಾವತಿದಾರರಿಗೆ ತಿಳಿಸಲಾಗಿದೆ. ಇದಕ್ಕಾಗಿ ಮರುಪಾವತಿಯಲ್ಲಿ ವಿಳಂಬ ಆಗುತ್ತಿದೆ ಎಂದು ಹೇಳಿದ್ದಾರೆ.

ಸಣ್ಣ ಮೊತ್ತ ಹೊಂದಿರುವ ಮರುಪಾವತಿಯನ್ನು ಬಿಡುಗಡೆ ಮಾಡಲಾಗುತ್ತಿದೆ. ಮರುಪಾವತಿಗೆ ಸಲ್ಲಿಕೆ ಆಗುತ್ತಿರುವ ಕ್ಲೇಮ್‌ಗಳಲ್ಲಿ ಹಲವು ತಪ್ಪಾದ ನಮೂದುಗಳಿವೆ ಎಂಬುದನ್ನು ಪತ್ತೆ ಹಚ್ಚಲಾಗಿದೆ ಎಂದರು.

ನವೆಂಬರ್ ಅಥವಾ ಡಿಸೆಂಬರ್ ವೇಳೆಗೆ ಬಾಕಿ ಇರುವ ಮರುಪಾವತಿ ಬಿಡುಗಡೆ ಮಾಡಲಾಗುವುದು ಎಂದು ಹೇಳಿದ್ದಾರೆ.

ಪ್ರಸಕ್ತ ಆರ್ಥಿಕ ಏಪ್ರಿಲ್ 1ರಿಂದ ನವೆಂಬರ್ 12ರ ವರೆಗೆ ₹12.92 ಲಕ್ಷ ಕೋಟಿ ನೇರ ತೆರಿಗೆ ಸಂಗ್ರಹವಾಗಿದೆ. ಇದು ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 6.99ರಷ್ಟು ಹೆಚ್ಚಳ. ಮರುಪಾವತಿ ಹಂಚಿಕೆಯಲ್ಲಿ ಶೇ 18ರಷ್ಟು ಇಳಿಕೆ ಆಗಿದ್ದು, ₹2.42 ಲಕ್ಷ ಕೋಟಿ ಆಗಿದೆ ಎಂದು ಹೇಳಿದ್ದಾರೆ.

ಪ್ರಧಾನಿ ಎದುರು ಐದು ಬೇಡಿಕೆ

ಒಂದನೇ ಪುಟದಿಂದ...

ಕಬ್ಬು ಬೆಳೆಗಾರರಿಗೆ ತುರ್ತು ಆರ್ಥಿಕ ನೆರವು ನೀಡಲು ಮತ್ತು ಹೆಚ್ಚಿನ ನಿವ್ವಳ ದರ ಖಚಿತಪಡಿಸಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಆದರೆ, ಸಕ್ಕರೆಯ ಕನಿಷ್ಠ ಬೆಂಬಲ ಬೆಲೆ ಪ್ರತಿ ಕೆ.ಜಿಗೆ ₹31ರಲ್ಲಿ ಸ್ಥಗಿತಗೊಂಡಿರುವುದೇ ಸಕ್ಕರೆ ಕಾರ್ಖಾನೆಗಳು ಈ ನಿಗದಿತ ಬೆಲೆಯನ್ನು ರೈತರಿಗೆ ನೀಡಲು ಸಾಧ್ಯವಾಗಿಲ್ಲ. ಈ ಸಂಕಷ್ಟಕ್ಕೆ ಶಾಶ್ವತ ಮತ್ತು ಸಮರ್ಥ ಪರಿಹಾರ ಒದಗಿಸಲು ಸಕ್ಕರೆಯ ಎಂಎಸ್‌ಪಿಯನ್ನು ತಕ್ಷಣವೇ ಪರಿಷ್ಕರಣೆ ಮಾಡಬೇಕು ಎಂದು ಒತ್ತಾಯಿಸಿದರು.

ಕರ್ನಾಟಕದ ಸಕ್ಕರೆ ಆಧಾರಿತ ಡಿಸ್ಟಿಲರಿಗಳಿಂದ ಎಥೆನಾಲ್ ಖರೀದಿ ಮಂಜೂರಾತಿಯ ಹೆಚ್ಚಳ, ರಾಜ್ಯಗಳಿಗೆ ಕಬ್ಬಿನ ಬೆಲೆಯನ್ನು ನಿಗದಿಪಡಿಸಲು ಅಥವಾ ಅನುಮೋದಿಸಲು ಅಧಿಕಾರ ನೀಡುವಂತಹ ಅಧಿಸೂಚನೆಯನ್ನು ಕೇಂದ್ರ ಹೊರಡಿಸಬೇಕು ಎಂದು ಅವರು ಮನವಿ ಮಾಡಿದರು.

ಮುಂಬೈ ಧಾರಣೆ (ಶೇಂಗಾ)

17-11-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7800-7900
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1525 (1540)
ಒಂದು ವಾರದ ಡೆಲಿವರಿ	1520 (1535)
ಪಾಮ್ ವಾರದ ಡೆಲಿವರಿ	1248 (1253)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1400)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,22,600 (1,26,600)
ಬೆಳ್ಳಿ ಕೆ.ಜಿಗೆ	1,54,900 (1,55,600)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದೇಶದ ಕಂಪನಿಗಳು ಉತ್ತಮ ಗಳಿಕೆ ಕಂಡಿರುವುದು ಮತ್ತು ದೇಶೀಯ ಹೂಡಿಕೆದಾರರಿಂದ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 388 ಅಂಶ ಹೆಚ್ಚಳವಾಗಿ, 84,950ಕ್ಕೆ ವಹಿವಾಟು ಕೊನೆಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 103 ಅಂಶ ಏರಿಕೆಯಾಗಿ, 26,013ಕ್ಕೆ ಅಂತ್ಯಗೊಂಡಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಶುಕ್ರವಾರದ ವಹಿವಾಟಿನಲ್ಲಿ ₹4,968 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಆದರೆ, ಇದೇ ವೇಳೆ ದೇಶೀಯ ಹೂಡಿಕೆದಾರರು ₹8,461 ಕೋಟಿ ಮೌಲ್ಯದ ಷೇರುಗಳನ್ನು ಖರೀದಿ ಮಾಡಿದ್ದಾರೆ.

ಕಾಫಿ ಬೆಳೆ: ಅಂದಾಜಿಗಿಂತ ಕಡಿಮೆ?

ಕಾಫಿ ಬೆಳೆ ಮೇಲೆ ಹವಾಮಾನ ಬದಲಾವಣೆ ನಕಾರಾತ್ಮಕ ಪರಿಣಾಮ: ಕೆಪಿಎ ಅಧ್ಯಕ್ಷ ಅರವಿಂದ ರಾವ್

● ವಿಜಯ್ ಜೋಷಿ

ಚಿಕ್ಕಮಗಳೂರು: ಹವಾಮಾನ ಬದಲಾವಣೆಯ ಪರಿಣಾಮವಾಗಿ ಕಾಫಿ ಬೆಳೆಯು ಈ ಬಾರಿ ತೀರಾ ಹೆಚ್ಚಾಗುವ ಸಾಧ್ಯತೆ ಇಲ್ಲ ಎಂದು ಕರ್ನಾಟಕ ಬೆಳೆಗಾರರ ಸಂಘವು (ಕೆಪಿಎ) ಅಂದಾಜು ಮಾಡಿದೆ.

ಹಿಂದಿನ ವರ್ಷದಲ್ಲಿ (2024–25) ದೇಶದಲ್ಲಿ ಒಟ್ಟು 3.63 ಲಕ್ಷ ಟನ್ ಕಾಫಿ ಉತ್ಪಾದನೆ ಆಗಿತ್ತು. ಈ ಬಾರಿ ಕಾಫಿ ಮಂಡಳಿ ಮಾಡಿರುವ ಆರಂಭಿಕ ಅಂದಾಜಿನ ಪ್ರಕಾರ ದೇಶದಲ್ಲಿ ಒಟ್ಟು 4.03 ಲಕ್ಷ ಟನ್ ಕಾಫಿ ಉತ್ಪಾದನೆ ಆಗಲಿದೆ. ಆದರೆ ವಾಸ್ತವದಲ್ಲಿ ಇಳುವರಿಯು ಅದಕ್ಕಿಂತ ಕಡಿಮೆ ಆಗುವ ಸಾಧ್ಯತೆ ಇದೆ ಎಂದು ಕೆಪಿಎ ಅಧ್ಯಕ್ಷ ಅರವಿಂದ ರಾವ್ ಅವರು ಹೇಳಿದರು.

ಕೆಪಿಎ ವಾರ್ಷಿಕ ಮಹಾ ಅಧಿವೇಶನಕ್ಕೆ ಮೊದಲು ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ಹವಾಮಾನ ಬದಲಾವಣೆಯು ಬೆಳೆ ಕಡಿಮೆ ಆಗುತ್ತಿರುವುದಕ್ಕೆ ಬಹುಮುಖ್ಯ ಕಾರಣ' ಎಂದು ಹೇಳಿದರು. ಈ ಬಾರಿಯ ಕಾಫಿ ಉತ್ಪಾದನೆಯು ಕಳೆದ ವರ್ಷದ ಉತ್ಪಾದನೆಯಾದ 3.63 ಲಕ್ಷ ಟನ್ ಆಸುಪಾಸಿನಲ್ಲಿ ಇರಲಿದೆ ಎಂದು ರಾವ್ ತಿಳಿಸಿದರು.



ವಾತಾವರಣದಲ್ಲಿ ತಾಪಮಾನವು ಒಂದು ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾದರೆ ಕಾಫಿ ಬೆಳೆಯು ಶೇಕಡ 5ರಷ್ಟು ಕಡಿಮೆ ಆಗುತ್ತದೆ
ಅರವಿಂದ ರಾವ್, ಕೆಪಿಎ ಅಧ್ಯಕ್ಷ

ಕರ್ನಾಟಕದಲ್ಲಿ ಕಳೆದ ವರ್ಷ ಕಾಫಿ ಉತ್ಪಾದನೆಯು 2.56 ಲಕ್ಷ ಟನ್ ಆಗಿತ್ತು. ಈ ಬಾರಿ ಅದು 2.80 ಲಕ್ಷ ಟನ್ ಆಗಬಹುದು ಎಂಬುದು ಕಾಫಿ ಮಂಡಳಿಯ ಆರಂಭಿಕ ಅಂದಾಜು ಆಗಿದೆ.

ಹವಾಮಾನ ಬದಲಾವಣೆಯ ಪರಿಣಾಮವು ಕರ್ನಾಟಕದಲ್ಲಿಯೂ ತೀವ್ರವಾಗಿದೆ. ಜಾಗತಿಕ ಮಟ್ಟದಲ್ಲಿನ ಹವಾಮಾನ ಬದಲಾವಣೆಯು ಮಳೆ ಅಕಾಲಿಕವಾಗಿ ಸುರಿಯುವಂತೆ ಮಾಡುತ್ತಿದೆ. ಬರ ತೀವ್ರವಾಗುತ್ತಿದೆ, ಮಣ್ಣಿನ ಸವಕಳಿ ಹಾಗೂ ಭೂಕುಸಿತಕ್ಕೆ ಕೂಡ ಇದು ಕಾರಣವಾಗುತ್ತಿದೆ. ಬೆಳೆಯ ಕುಸಿತಕ್ಕೆ ಇದು ದಾರಿ ಮಾಡಿಕೊಡುತ್ತಿದ್ದು, ದೀರ್ಘಾವಧಿಯಲ್ಲಿ ಕಾಫಿ ಎಸ್ಟೇಟ್‌ಗಳ ಉಳಿವಿನ ಮೇಲೆಯೂ ಇದು ಪರಿಣಾಮ ಉಂಟುಮಾಡುತ್ತದೆ ಎಂದು ರಾವ್ ಅವರು ಕಳವಳ ವ್ಯಕ್ತಪಡಿಸಿದರು.

'ರಾಸಾಯನಿಕ ಗೊಬ್ಬರದ ಬಳಕೆಯು ಮುಂದುವರಿದಿರುವುದು ಹಾಗೂ ಅತಿಯಾದ ಮಳೆಯಿಂದಾಗಿ ಮಣ್ಣಿನ ಸವಕಳಿ ಉಂಟಾಗುತ್ತಿದೆ. ಇದರ ಪರಿಣಾಮವಾಗಿ ಮಣ್ಣಿನ ಆರೋಗ್ಯವು ಕುಸಿದಿದೆ. ಈ ಸಮಸ್ಯೆಯನ್ನು ಪರಿಹರಿಸಲು ನಮಗೆ ಮಾರ್ಗದರ್ಶನದ ಅಗತ್ಯ ಇದೆ' ಎಂದು ಅವರು ಹೇಳಿದರು.

'ತೋಟಗಾರಿಕಾ ಬೆಳೆಗಳಿಗೆ ಹಾಗೂ ಕೃಷಿ ಬೆಳೆಗಳಿಗೆ ಲಭ್ಯವಿರುವ ವಿಮಾ ಸೌಲಭ್ಯವು ಈಗ ಕಾಫಿ ಬೆಳೆಗೆ ಲಭ್ಯವಿಲ್ಲ. ಆದರೆ ಹವಾಮಾನ ಬದಲಾವಣೆಯ ಪರಿಣಾಮವನ್ನು ಗಮನದಲ್ಲಿ ಇರಿಸಿಕೊಂಡು ಕಾಫಿ ಬೆಳೆಗೆ ಕೂಡ ವಿಮಾ ಸೌಲಭ್ಯವನ್ನು ನೀಡಬೇಕು. ಹವಾಮಾನ ಬದಲಾವಣೆಯ ತೀವ್ರ ಪರಿಣಾಮಗಳಿಗೆ ಪರಿಹಾರ ರೂಪದಲ್ಲಿ ವಿಮೆಯ ನೆರವು ಬೇಕು' ಎಂದು ಅವರು ಒತ್ತಾಯಿಸಿದರು.

ಮಾನವ ಮತ್ತು ವನ್ಯಜೀವಿ ಸಂಘರ್ಷವನ್ನು ತಡೆಯಲು ಕೂಡ ಪ್ರಯತ್ನ ಆಗಬೇಕಿದೆ. ಕಾಫಿ ಬೆಳೆಗಾರರು ಮಾನವ–ವನ್ಯಜೀವಿ ಸಂಘರ್ಷದಿಂದಾಗಿ ತಮ್ಮವರನ್ನು ಕಳೆದುಕೊಳ್ಳುತ್ತಿದ್ದಾರೆ, ಬೆಳೆಗಳಿಗೆ ಹಾನಿ ಆಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಜಾಗತಿಕ ಮಟ್ಟದಲ್ಲಿ ಕಾಫಿ ಮಾರುಕಟ್ಟೆಯಲ್ಲಿ ಸ್ಪರ್ಧೆ ತೀವ್ರವಾಗುತ್ತಿದೆ. ಹೀಗಾಗಿ ಕಾಫಿಯ ಮೌಲ್ಯವರ್ಧನೆಯ ಅಗತ್ಯ ಹೆಚ್ಚಿದೆ. ಈಗ ಕಾಫಿಗೆ ಹೆಚ್ಚಿನ ಬೆಲೆ ಸಿಗುತ್ತಿದ್ದರೂ, ಇದು ಹೆಚ್ಚಿನ ಅವಧಿಗೆ ಮುಂದುವರಿಯುತ್ತದೆ ಎನ್ನಲಾಗದು ಎಂದು ಅವರು ಬೆಳೆಗಾರರಿಗೆ ಕಿವಿಮಾತು ಹೇಳಿದರು.

'ಸರ್ಫೇಸಿ ಕಾಯ್ದೆ: ತಿದ್ದುಪಡಿ ಅಗತ್ಯ'

ಕಾಫಿ ತೋಟಗಳ ಅಭಿವೃದ್ಧಿಗಾಗಿ ಪಡೆದ ಸಾಲವನ್ನು ಸರ್ಫೇಸಿ ಕಾಯ್ದೆಯ ಅಡಿ ವಸೂಲು ಮಾಡಲು ಅಧಿಕಾರಿಗಳು ಮುಂದಾಗುತ್ತಿರುವ ಪರಿಣಾಮವಾಗಿ ಅಂದಾಜು ಎರಡು ಸಾವಿರ ಬೆಳೆಗಾರರಿಗೆ ರಾಜ್ಯದಲ್ಲಿ ತೊಂದರೆ ಆಗಿದೆ ಎಂದು ಕೆಪಿಎ ಉಪಾಧ್ಯಕ್ಷ ಸಲ್ಮಾನ್ ಬಸೀರ್ 'ಪ್ರಜಾವಾಣಿ'ಗೆ ತಿಳಿಸಿದರು.

ಕಾಫಿ ಬೆಳೆಗಾರರಿಗೆ ನೀಡಿರುವ ಬೆಳೆ ಸಾಲದ ವಸೂಲಿಗೆ ಈ ಕಾಯ್ದೆಯ ಅಂಶಗಳನ್ನು ಬಳಸಿಕೊಳ್ಳುತ್ತಿರುವುದರಿಂದಾಗಿ ಸಮಸ್ಯೆ ಆಗುತ್ತಿದೆ. ಇದರಿಂದ ಬೆಳೆಗಾರರನ್ನು ರಕ್ಷಿಸಲು ಕಾಯ್ದೆಗೆ ತಿದ್ದುಪಡಿ ಅಗತ್ಯ. ಕೇಂದ್ರ ಸರ್ಕಾರವೇ ಈ ವಿಚಾರವಾಗಿ ಮುಂದಡಿ ಇರಿಸಬೇಕು ಎಂದು ದಕ್ಷಿಣ ಭಾರತದ ಬೆಳೆಗಾರರ ಒಕ್ಕೂಟದ (ಉಪಾಸಿ) ಅಧ್ಯಕ್ಷ ಅಜಯ್ ತಿಪ್ಪಯ್ಯ ಹೇಳಿದರು.

ವ್ಯಾಪಾರ ಕೊರತೆ ₹3.69 ಲಕ್ಷ ಕೋಟಿ


ಅಮೆರಿಕದ ಶೇ 50ರಷ್ಟು ಸುಂಕ ಹೇರಿಕೆಯು ರಫ್ತು ಇಳಿಕೆಗೆ ಕಾರಣ: ಕೇಂದ್ರ

ನವದೆಹಲಿ (ಪಿಟಿಐ): ಅಕ್ಟೋಬರ್ ತಿಂಗಳಿನಲ್ಲಿ ದೇಶದ ವ್ಯಾಪಾರ ಕೊರತೆಯ ಅಂತರವು ₹3.69 ಲಕ್ಷ ಕೋಟಿಯಷ್ಟಾಗಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಅಕ್ಟೋಬರ್ ತಿಂಗಳಿನಲ್ಲಿ ಭಾರತದಿಂದ ಆಗಿರುವ ರಫ್ತು ಶೇ 11.8ರಷ್ಟು ಇಳಿಕೆ ಆಗಿದ್ದು, ₹3 ಲಕ್ಷ ಕೋಟಿಯಷ್ಟು ಆಗಿದೆ. ಅಮೆರಿಕವು ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ 50ರಷ್ಟು ಸುಂಕ ವಿಧಿಸಿರುವುದೇ ರಫ್ತು ಇಳಿಕೆಗೆ ಕಾರಣ ಎಂದು ತಿಳಿಸಿದೆ.

ದೇಶದ ಆಮದು ಶೇ 16.63ರಷ್ಟು ಏರಿಕೆಯಾಗಿದ್ದು, ₹6.73 ಲಕ್ಷ ಕೋಟಿಯಷ್ಟಾಗಿದೆ. ಚಿನ್ನ, ಬೆಳ್ಳಿ, ಕಚ್ಚಾ ಹತ್ತಿ, ರಸಗೊಬ್ಬರ ಆಮದು ಹೆಚ್ಚಳವಾಯಿತು. ಇದರಿಂದ ದೇಶದ ವ್ಯಾಪಾರ ಕೊರತೆ ಅಂತರವು ₹3.69 ಲಕ್ಷ ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಿದ್ದರೆ ಅದನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ.



ಸೆಪ್ಟೆಂಬರ್ ತಿಂಗಳಿನಲ್ಲಿ ವ್ಯಾಪಾರ ಕೊರತೆ ₹2.76 ಲಕ್ಷ ಕೋಟಿಯಷ್ಟಾಗಿತ್ತು.

ಕಳೆದ ವರ್ಷದ ಅಕ್ಟೋಬರ್‌ನಲ್ಲಿ ₹1.67 ಲಕ್ಷ ಕೋಟಿ ಮೌಲ್ಯದಷ್ಟು ಕಚ್ಚಾ ತೈಲ ಆಮದಾಗಿತ್ತು. ಈ ಬಾರಿ ₹1.31 ಲಕ್ಷ ಕೋಟಿಗೆ ಇಳಿಕೆಯಾಗಿದೆ.

ಪ್ರಸಕ್ತ ವರ್ಷದ ಏಪ್ರಿಲ್‌ನಿಂದ ಅಕ್ಟೋಬರ್ ಅವಧಿಯಲ್ಲಿ ದೇಶದ ರಫ್ತು ಶೇ 0.63ರಷ್ಟು ಏರಿಕೆಯಾಗಿದ್ದು, ₹22.52 ಲಕ್ಷ ಕೋಟಿಯಷ್ಟಾಗಿದೆ. ಆಮದು ಶೇ 6.37ರಷ್ಟು ಹೆಚ್ಚಳವಾಗಿದ್ದು, ₹39.96 ಲಕ್ಷ ಕೋಟಿಯಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ತಿಳಿಸಿದ್ದಾರೆ.

ಎಂಜಿನಿಯರಿಂಗ್ ಸರಕುಗಳು, ಪೆಟ್ರೋಲಿಯಂ ಉತ್ಪನ್ನಗಳು, ಹರಳು ಮತ್ತು ಆಭರಣಗಳು, ಸಿದ್ಧ ಉಡುಪುಗಳು ಮತ್ತು ಜವಳಿ, ಔಷಧಗಳ ರಫ್ತು ಇಳಿಕೆಯು, ಒಟ್ಟಾರೆ ರಫ್ತು ಇಳಿಕೆಗೆ ಕಾರಣ ಆಗಿವೆ. ಪೆಟ್ರೋಲಿಯಂ ಉತ್ಪನ್ನಗಳ ರಫ್ತು ಶೇ 10.5ರಷ್ಟು ಇಳಿಕೆ ಆಗಿದ್ದರೆ, ಎಂಜಿನಿಯರಿಂಗ್ ಸರಕುಗಳ ರಫ್ತು ಶೇ 16.71ರಷ್ಟು ಕಡಿಮೆ ಆಗಿದೆ ಎಂದು ತಿಳಿಸಿದ್ದಾರೆ.

'ಜಾಗತಿಕ ರಾಜಕೀಯ ಅನಿಶ್ಚಿತತೆಯು, ಪ್ರಮುಖ ಮಾರುಕಟ್ಟೆಗಳಲ್ಲಿ ದೇಶದ ಸರಕುಗಳಿಗೆ ಬೇಡಿಕೆಯಲ್ಲಿ ಮಂದಗತಿ ಆಗಿರುವುದು, ಸರಕುಗಳ ಬೆಲೆಯಲ್ಲಿನ ಏರಿಳಿತದಿಂದ ರಫ್ತು ಇಳಿಕೆ ಆಗಿದೆ' ಎಂದು ಭಾರತೀಯ ರಫ್ತುದಾರರ ಸಂಘಟನೆಗಳ ಒಕ್ಕೂಟದ (ಎಫ್‌ಐಇಒ) ಅಧ್ಯಕ್ಷ ಎಸ್.ಸಿ. ರಾಲ್ಹಾನ್ ಹೇಳಿದ್ದಾರೆ.

ಚಿನ್ನದ ಆಮದು ಶೇ 200ರಷ್ಟು ಹೆಚ್ಚಳ



ದೇಶದ ಚಿನ್ನದ ಆಮದು ಅಕ್ಟೋಬರ್ ತಿಂಗಳಿನಲ್ಲಿ ಶೇ 200ರಷ್ಟು ಹೆಚ್ಚಳವಾಗಿದ್ದು, ₹1.30 ಲಕ್ಷ ಕೋಟಿಯಷ್ಟಾಗಿದೆ. ಬೆಳ್ಳಿಯ ಆಮದು ಶೇ 528ರಷ್ಟು ಏರಿಕೆಯಾಗಿದ್ದು, ₹24 ಸಾವಿರ ಕೋಟಿಯಾಗಿದೆ ಎಂದು ಸರ್ಕಾರ ತಿಳಿಸಿದೆ.

ಹಬ್ಬದ ಋತು ಮತ್ತು ಮದುವೆ ಅಂಗವಾಗಿ ಚಿನ್ನ ಮತ್ತು ಬೆಳ್ಳಿಗೆ ಬೇಡಿಕೆ ಹೆಚ್ಚಳವಾಯಿತು. ಇದರಿಂದ ಆಮದು ಏರಿಕೆಯಾಗಿದೆ ಎಂದು ತಿಳಿಸಿದೆ. 2024ರ ಅಕ್ಟೋಬರ್‌ನಲ್ಲಿ ₹43,588 ಕೋಟಿಯಷ್ಟು ಮೌಲ್ಯದ ಚಿನ್ನ ಆಮದಾಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಮೂರು ಪಟ್ಟು ಆಮದು ಹೆಚ್ಚಳವಾಗಿದೆ.

ಪ್ಲಾಟಿನಂ ಆಭರಣಕ್ಕೆ ಆಮದು ನಿರ್ಬಂಧ

ಮುಂದಿನ ವರ್ಷದ ಏಪ್ರಿಲ್‌ವರೆಗೆ ಕೆಲವು ಮಾದರಿಯ ಪ್ಲಾಟಿನಂ ಆಭರಣಗಳ ಆಮದಿನ ಮೇಲೆ ಕೇಂದ್ರ ಸರ್ಕಾರ ನಿರ್ಬಂಧ ವಿಧಿಸಿದೆ.

ಪ್ಲಾಟಿನಂ ಆಭರಣಗಳಿಗೆ ಈ ಮೊದಲು ಆಮದಿಗೆ ಮುಕ್ತ ಅವಕಾಶ ಇತ್ತು. ಈಗ ಅದನ್ನು ನಿರ್ಬಂಧಿಸಲಾಗಿದೆ. ಈ ಆದೇಶ ತಕ್ಷಣದಿಂದಲೇ ಜಾರಿಗೆ ಬರಲಿದ್ದು, 2026ರ ಏಪ್ರಿಲ್ 30ರ ವರೆಗೆ ಇರಲಿದೆ ಎಂದು ವಿದೇಶಿ ವ್ಯಾಪಾರಗಳ ಮಹಾನಿರ್ದೇಶನಾಲಯ ತಿಳಿಸಿದೆ.

ಅಮೆರಿಕಕ್ಕೆ ರಫ್ತು ಶೇ 8ರಷ್ಟು ಇಳಿಕೆ

ಅಕ್ಟೋಬರ್ ತಿಂಗಳಿನಲ್ಲಿ ಅಮೆರಿಕಕ್ಕೆ ದೇಶದ ರಫ್ತು ಶೇ 8.58ರಷ್ಟು ಇಳಿಕೆಯಾಗಿದ್ದು, ₹55,822 ಕೋಟಿಯಷ್ಟಾಗಿದೆ. ಸತತ ಎರಡನೇ ತಿಂಗಳು ದೇಶದ ರಫ್ತು ಅಮೆರಿಕಕ್ಕೆ ಇಳಿಕೆ ಆಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಹೇಳಿದೆ.

ಆಮದು ಪ್ರಮಾಣ ಶೇ 13.89ರಷ್ಟು ಹೆಚ್ಚಾಗಿದ್ದು, ₹39,515 ಕೋಟಿಯಾಗಿದೆ ಎಂದು ತಿಳಿಸಿದೆ. ಏಪ್ರಿಲ್‌ನಿಂದ ಅಕ್ಟೋಬರ್ ಅವಧಿಯಲ್ಲಿ ದೇಶದ ರಫ್ತು ಶೇ 10.15 ರಷ್ಟಿದ್ದರೆ, ಆಮದು ಶೇ 9.73ರಷ್ಟಿತ್ತು. ಚೀನಾಗೆ ದೇಶದ ರಫ್ತು ಅಕ್ಟೋಬರ್‌ನಲ್ಲಿ ಶೇ 42.35ರಷ್ಟು ಮತ್ತು ಆಮದು ಶೇ 15.63ರಷ್ಟು ಹೆಚ್ಚಾಗಿದೆ.

ಅಮೆರಿಕ ಜೊತೆ ಎಲ್‌ಪಿಜಿ ಖರೀದಿಗೆ ಒಪ್ಪಂದ

ನವದೆಹಲಿ (ಎಎಫ್‌ಪಿ / ಪಿಟಿಐ): ದೇಶದ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು, 2026ರಲ್ಲಿ ಅಮೆರಿಕದಿಂದ 22 ಲಕ್ಷ ಟನ್ ಎಲ್‌ಪಿಜಿ ಆಮದು ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿವೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಇದು ಒಂದು ವರ್ಷದ ಅವಧಿಯ ಒಪ್ಪಂದವಾಗಿದೆ. ಅಮೆರಿಕದ ಕಂಪನಿಗಳು ಈ ಎಲ್‌ಪಿಜಿಯನ್ನು ಸರಬರಾಜು ಮಾಡಲಿವೆ. ಇದು ಭಾರತದ ಒಟ್ಟು ವಾರ್ಷಿಕ ಆಮದಿನ ಶೇ 10ರಷ್ಟಾಗಿದೆ ಎಂದು ತಿಳಿಸಿದೆ.




ಹರದೀಪ್ ಸಿಂಗ್ ಪುರಿ

'ಅಮೆರಿಕದಿಂದ ಭಾರತವು ವಾರ್ಷಿಕ 22 ಲಕ್ಷ ಟನ್ ಎಲ್‌ಪಿಜಿ ಆಮದು ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿದೆ' ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರದೀಪ್ ಸಿಂಗ್ ಪುರಿ 'ಎಕ್ಸ್'ನಲ್ಲಿ ಹೇಳಿದ್ದಾರೆ.

ಇದು ಅಮೆರಿಕದೊಂದಿಗೆ ಮಾಡಿಕೊಂಡ ಐತಿಹಾಸಿಕ ಒಪ್ಪಂದವಾಗಿದೆ. ಈ ಪೂರೈಕೆಯಿಂದ ದೇಶದಲ್ಲಿ ಗೃಹ ಬಳಕೆಯ ಎಲ್‌ಪಿಜಿ ಲಭ್ಯತೆ ಹೆಚ್ಚಲಿದೆ ಎಂದು ತಿಳಿಸಿದ್ದಾರೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್), ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಒಪ್ಪಂದ ಮಾಡಿಕೊಂಡಿವೆ.

ಪಿಒಕೆ 'ಪ್ರಧಾನಿ'ಯಾಗಿ ರಜಾ ಫೈಸಲ್ ಆಯ್ಕೆ



ರಜಾ ಫೈಸಲ್

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಪೀಪಲ್ಸ್ ಪಕ್ಷದ ಸಂಸದ ರಜಾ ಫೈಸಲ್ ಮುಮ್ತಾಜ್ ರಾಥೋರ್ ಅವರು ಪಾಕ್ ಆಕ್ರಮಿತ ಕಾಶ್ಮೀರದ (ಪಿಒಕೆ)ನೂತನ 'ಪ್ರಧಾನಿ'ಯಾಗಿ ಆಯ್ಕೆಯಾಗಿದ್ದಾರೆ. ಹಾಲಿ ಪ್ರಧಾನಿಯಾಗಿದ್ದ ತೆಹ್ರೀಕ್–ಇ–ಇನ್ಸಾಫ್ ಪಕ್ಷದ ಚೌಧರಿ ಅನ್ವರುಲ್ ಹಕ್ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಅಂಗೀಕರಿಸಿದ ನಂತರ ಹೊಸ ಆಯ್ಕೆ ನಡೆದಿದೆ.

2021ರಲ್ಲಿ ಸರ್ಕಾರ ರಚನೆಯಾದ ಬಳಿಕ ನಾಲ್ಕನೇ ಬಾರಿ ಹೊಸ ಪ್ರಧಾನಿಯ ಆಯ್ಕೆ ನಡೆದಿದೆ. ಸೋಮವಾರ ನಡೆದ ಆಯ್ಕೆ ಪ್ರಕ್ರಿಯೆಯ ವೇಳೆ ಪಿಪಿಯ 27 ಸಂಸದರು ಹಾಗೂ ಪಾಕಿಸ್ತಾನ್ ಮುಸ್ಲಿಂ ಲೀಗ್– ನವಾಜ್ ಪಕ್ಷದ 9 ಸಂಸದರು ಮತ ಚಲಾಯಿಸಿದರು.

ಸದನವು 52 ಸದಸ್ಯರನ್ನು ಹೊಂದಿದ್ದು, ನೂತನ ನಾಯಕರ ಆಯ್ಕೆಗೆ 27 ಸದಸ್ಯರ ಬೆಂಬಲದ ಅಗತ್ಯವಿದೆ.

ರಷ್ಯಾ ಜತೆ ವ್ಯವಹರಿಸುವ ದೇಶಕ್ಕೆ ಕಠಿಣ ನಿರ್ಬಂಧ: ಟ್ರಂಪ್

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): 'ರಷ್ಯಾದೊಂದಿಗೆ ವ್ಯವಹರಿಸುವ ಎಲ್ಲ ದೇಶಗಳ ಮೇಲೆ ಕಠಿಣ ನಿರ್ಬಂಧ ವಿಧಿಸಲಾಗುವುದು' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಟ್ರಂಪ್ ಆಡಳಿತ ಮತ್ತು ರಿಪಬ್ಲಿಕನ್ ಸದಸ್ಯರು ರಷ್ಯಾವನ್ನು ಗುರಿಯಾಗಿಸಿಕೊಂಡು ಕಠಿಣ ಕಾನೂನನ್ನು ಜಾರಿಗೆ ತರಲು ಮುಂದಾಗಿದ್ದಾರೆ.

'ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ಮೇಲೆ ಒತ್ತಡ ಹೇರುವ ಗುರಿ ಹೊಂದಿರುವ ಕ್ರಮಗಳನ್ನು ಕಾಂಗ್ರೆಸ್ ಅಂಗೀಕರಿಸುವ ಸಮಯ ಬಂದಿದೆಯೇ' ಎಂಬ ಸುದ್ದಿಗಾರರ ಪ್ರಶ್ನೆಗಳಿಗೆ ಭಾನುವಾರ ಪ್ರತಿಕ್ರಿಯಿಸಿದ ಟ್ರಂಪ್, 'ಅವರು ಹಾಗೆ ಮಾಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ಅದು ನನಗೂ ಸರಿ ಎನಿಸಿದೆ' ಎಂದರು.

'ಅವರು ಕಾನೂನನ್ನು ಅಂಗೀಕರಿಸಲಿದ್ದು, ರಿಪಬ್ಲಿಕನ್ನರು ಅದನ್ನು ಜಾರಿಗೆ ತರಲಿದ್ದಾರೆ. ರಷ್ಯಾದೊಂದಿಗೆ ವ್ಯವಹಾರ ಮಾಡುವ ಯಾವುದೇ ದೇಶದ ಮೇಲೆ ಕಠಿಣ ನಿರ್ಬಂಧಗಳನ್ನು ವಿಧಿಸಲಿದ್ದಾರೆ. ಆ ಪಟ್ಟಿಗೆ ಇರಾನ್ ಅನ್ನೂ ಸೇರಿಸುವಂತೆ ಸೂಚಿಸಿದ್ದೇನೆ' ಎಂದರು.

ಸೆನೆಟರ್ ಲಿಂಡ್ಸೆ ಗ್ರಹಾಂ ಮಂಡಿಸಿದ ಮಸೂದೆಯು ರಷ್ಯಾದಿಂದ ತೈಲದ ಎರಡನೇ ಹಂತದ ಖರೀದಿ ಮತ್ತು ಮರು ಮಾರಾಟದ ಮೇಲೆ ಶೇಕಡ 500ರಷ್ಟು ಸುಂಕ ವಿಧಿಸುವುದನ್ನು ಪ್ರಸ್ತಾಪಿಸಿದೆ. ಈ ಪ್ರಸ್ತಾವಕ್ಕೆ ಸೆನೆಟ್‌ನ ವಿದೇಶಾಂಗ ವ್ಯವಹಾರಗಳ ಸಮಿತಿಯಿಂದ ಸರ್ವಾನುಮತದ ಬೆಂಬಲ ದೊರೆತಿದೆ.

ಸ್ಮರಣ್ ದ್ವಿಶತಕ; ಕರ್ನಾಟಕ ಬಿಗಿ ಹಿಡಿತ

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ
ಶ್ರೇಯಸ್ ಗೋಪಾಲ್ ಆಲ್‌ರೌಂಡ್ ಆಟ

• ಸತೀಶ ಬಿ.

ಹುಬ್ಬಳ್ಳಿ: ಅಮೋಘ ಲಯದಲ್ಲಿರುವ ಸ್ಮರಣ್ ರವಿಚಂದ್ರನ್ ಅವರ ಅಜೇಯ ದ್ವಿಶತಕ ಮತ್ತು ಶ್ರೇಯಸ್ ಗೋಪಾಲ್ ಅವರ ಅರ್ಧಶತಕ ಮತ್ತು ಚುರುಕಿನ ಬೌಲಿಂಗ್‌ನಿಂದಾಗಿ (18ಕ್ಕೆ 3) ಕರ್ನಾಟಕ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಚಂಡೀಗಢ ವಿರುದ್ಧ ಬಿಗಿ ಹಿಡಿತ ಸಾಧಿಸಿದೆ.

ಎಡಗೈ ಬ್ಯಾಟರ್ ಸ್ಮರಣ್ ಪ್ರಸಕ್ತ ರಣಜಿ ಋತುವಿನಲ್ಲಿ ತಮ್ಮ ಎರಡನೇ ದ್ವಿಶತಕ ದಾಖಲಿಸಿದರು. ಇದರಿಂದಾಗಿ ಕರ್ನಾಟಕ ಮೊದಲ ಇನಿಂಗ್ಸ್‌ನಲ್ಲಿ 160 ಓವರ್‌ಗಳಲ್ಲಿ 8 ವಿಕೆಟ್‌ಗೆ 547 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು.

ಇದಕ್ಕೆ ಉತ್ತರವಾಗಿ ಇನಿಂಗ್ಸ್ ಆರಂಭಿಸಿದ ಚಂಡೀಗಢ ತಂಡವು ಎರಡನೇ ದಿನದಾಟದ ಅಂತ್ಯಕ್ಕೆ 17.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 72 ರನ್ ಗಳಿಸಿತು. ಪ್ರವಾಸಿ ತಂಡವು ಫಾಲೋ ಆನ್ ತಪ್ಪಿಸಲು ಇನ್ನೂ 325 ರನ್ ಗಳಿಸಬೇಕು.

ಮೊದಲ ದಿನದಾಟದಲ್ಲಿ ಕರ್ನಾಟಕ 5 ವಿಕೆಟ್‌ಗೆ 298 ರನ್ ಗಳಿಸಿತ್ತು. 110 ರನ್ ಗಳಿಸಿದ್ದ ಸ್ಮರಣ್, 38 ರನ್ ಗಳಿಸಿದ್ದ ಶ್ರೇಯಸ್ ಕ್ರೀಸ್‌ನಲ್ಲಿದ್ದರು. ಸೋಮವಾರ ಆಟ ಮುಂದುವರಿಸಿದ ಈ ಜೋಡಿ, ಎದುರಾಳಿ ತಂಡದ ಬೌಲರ್‌ಗಳನ್ನು ಇನ್ನಿಲ್ಲದಂತೆ ಕಾಡಿತು. ಹೀಗಾಗಿ ಮೊದಲ ಒಂದೂವರೆ ಗಂಟೆ ಅವಧಿಯಲ್ಲಿ ಯಾವುದೇ ವಿಕೆಟ್ ಬೀಳಲಿಲ್ಲ.

ಆರನೇ ವಿಕೆಟ್‌ಗೆ 88 ರನ್‌ಗಳ ಜತೆಯಾಟವಾಡಿದ್ದ ಸ್ಮರಣ್ ಮತ್ತು ಶ್ರೇಯಸ್ ಸೋಮವಾರ ಆ ಮೊತ್ತವನ್ನು 141ಕ್ಕೆ ಹಿಗ್ಗಿಸಿದರು. ಟೂರ್ನಿಯಲ್ಲಿ ನಾಲ್ಕನೇ ಅರ್ಧಶತಕ ಗಳಿಸಿದ ಶ್ರೇಯಸ್ (62) ಅವರನ್ನು ವಿಶು ಕಶ್ಯಪ್ ಎಲ್‌ಬಿ ಬಲೆಗೆ ಕೆಡವಿ ಜತೆಯಾಟ ಮುರಿದರು.

ತಾಳ್ಮೆಯಿಂದ ಆಡಿದ ಸ್ಮರಣ್ ಬಾಲಂಗೋಚಿಗಳ ಜತೆ ಇನಿಂಗ್ಸ್ ಕಟ್ಟಿ, ತಂಡದ ಮೊತ್ತವನ್ನು 500ರ ಗಡಿ ದಾಟಿಸಿದರು. ಅವಕಾಶ ಸಿಕ್ಕಾಗ ಚೆಂಡನ್ನು ಬೌಂಡರಿ ಗೆರೆ ದಾಟಿಸಿದರು. ಶುಂಕ್ ಬಿರ್ಲಾ ಅವರ ಎಸೆತದಲ್ಲಿ ಒಂದು ರನ್ ಗಳಿಸಿದ ಸ್ಮರಣ್ ದ್ವಿಶತಕ ಪೂರೈಸಿದರು. ಆ ನಂತರವೂ ಅಜೇಯ ಆಟವಾಡಿದ ಅವರು ವೈಯಕ್ತಿಕ ಗರಿಷ್ಠವನ್ನು 227ಕ್ಕೆ (362 ಎ, 4X16, 6X2) ಹೆಚ್ಚಿಸಿದರು. ಕೇರಳ ಎದುರು ಅವರು 220 ರನ್ ಗಳಿಸಿ ಅಜೇಯರಾಗಿ ಉಳಿದಿದ್ದರು.

ಎರಡು ಜೀವದಾನಗಳ ಲಾಭ ಪಡೆದ 20 ವರ್ಷದ ಸ್ಪಿನ್ನರ್ ಶಿಖರ್ ಶೆಟ್ಟಿ ಚೊಚ್ಚಲ ಅರ್ಧಶತಕ (59, 122ಎ, 4X7) ಗಳಿಸಿದರು. ಇದು ಅವರಿಗೆ ಮೂರನೇ ಪಂದ್ಯ. ಶಿಖರ್ ಮತ್ತು ಸ್ಮರಣ್ ಜೋಡಿಯ ಎಂಟನೇ ವಿಕೆಟ್ ಜತೆಯಾಟದಲ್ಲಿ 111 (191ಎ) ರನ್ ಹರಿದು ಬಂದವು. ವಿದ್ಯಾಧರ ಪಾಟೀಲ (30) ಸಹ ಉಪಯುಕ್ತ ಕಾಣಿಕೆ ನೀಡಿದರು. ಪ್ರಥಮ ಇನಿಂಗ್ಸ್ ಆರಂಭಿಸಿದ ಚಂಡೀಗಢ ತಂಡಕ್ಕೆ ಶಿವಂ ಭಾಂಬ್ರಿ, ಅರ್ಜುನ್ ಆಜಾದ್ ಉತ್ತಮ ಆರಂಭ ನೀಡಲು ಯತ್ನಿಸಿದರು. ವೇಗವಾಗಿ ರನ್ ಗಳಿಸುತ್ತಿದ್ದ ಅರ್ಜುನ್ (32, 29ಎ, 4X3, 6X1) ಅವರನ್ನು ಆಫ್ ಸ್ಪಿನ್ನರ್ ಮೊಹ್ಸಿನ್ ಖಾನ್ ಬೌಲ್ಡ್ ಮಾಡಿದರು.

ನಂತರ ಶ್ರೇಯಸ್ ಗೋಪಾಲ್ ಕೈಚಳಕ ತೋರಿದರು. 12 ಮತ್ತು 14ನೇ ಓವರ್‌ನಲ್ಲಿ ಅವರು ಕ್ರಮವಾಗಿ ಶಿವಂ (16) ಮತ್ತು ವಿಶು ಕಶ್ಯಪ್ (5) ಅವರ ವಿಕೆಟ್ ಕಿತ್ತರು. ಅವರು ಎಸೆದ ದಿನದಾಟದ ಕೊನೆಯ ಓವರ್‌ನ ನಾಲ್ಕನೇ ಎಸೆತದಲ್ಲಿ ನಿಖಿಲ್ ಠಾಕೂರ್ (1) ಕೀಪರ್ ಕೆ.ಎಲ್.ಶ್ರೀಜಿತ್‌ಗೆ ಕ್ಯಾಚಿತ್ತು ನಿರ್ಗಮಿಸಿದರು. 14 ರನ್ ಗಳಿಸಿರುವ ನಾಯಕ ಮನನ್ ವೋಹ್ರಾ ಕ್ರೀಸ್‌ನಲ್ಲಿದ್ದಾರೆ.



ಅಜೇಯ ದ್ವಿಶತಕ ದಾಖಲಿಸಿದ ಕರ್ನಾಟಕ ತಂಡದ ಸ್ಮರಣ್ ರವಿಚಂದ್ರನ್ ಚಿತ್ರ: ಗೋವಿಂದರಾಜ ಜವಳಿ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಕರ್ನಾಟಕ: 8 ವಿಕೆಟ್‌ಗೆ 547 ಡಿಕ್ಲೇರ್ (160 ಓವರ್‌ಗಳಲ್ಲಿ) (ಭಾನುವಾರ 90 ಓವರ್‌ಗಳಲ್ಲಿ 5ಕ್ಕೆ 298)
ಸ್ಮರಣ್ ಔಟಾಗದೇ 227 (362 ಎ, 4X16, 6x2)
ಶ್ರೇಯಸ್ ಎಲ್‌ಬಿಡಬ್ಲ್ಯು ವಿಶು 62 (147ಎ, 4x5)
ವಿದ್ಯಾಧರ ಪಾಟೀಲ ಬಿ ಜಗಜೀತ್ ಸಿಂಗ್ 30 (51ಎ, 4x4)
ಶಿಖರ್ ಶೆಟ್ಟಿ ಸಿ ಆ್ಯಂಡ್ ಬಿ ವಿಶು 59 (122ಎ,4x7)
ಮೊಹ್ಸಿನ್ ಖಾನ್ ಔಟಾಗದೇ 5 (3 ಎ, 4x1)
ಇತರೆ: 30 (ನೋಬಾಲ್ 2, ಬೈ 24, ಲೆಗ್ ಬೈ 4)
ವಿಕೆಟ್ ಪತನ: 6-351 (ಶ್ರೇಯಸ್; 110.6), 7-427 (ವಿದ್ಯಾಧರ; 127.1) 8-538 (ಶಿಖರ್; 158.6)
ಬೌಲಿಂಗ್: ಜಗಜೀತ್ ಸಿಂಗ್ ಸಿಂಧು 24-4-70-2; ರಾಜನಗಡ ಬಾವಾ 16-4-49-1; ವಿಶು ಕಶ್ಯಪ್ 50-6-141-2; ನಿಶುಂಕ್ ಬಿರ್ಲಾ 46-1-159-2; ತರಣ್ ಪ್ರೀತ್ ಸಿಂಗ್ 20-0-80-1; ಅರ್ಜುನ್ ಆಜಾದ್ 3-0-16-0; ಅಂಕಿತ್ ಕೌಶಿಕ್ 1-0-4-0.

ಚಂಡೀಗಢ: 4 ವಿಕೆಟ್‌ಗೆ 72 (17.4 ಓವರ್)
ಶಿವಂ ಬಾಂಭ್ರಿ ಬಿ ಶ್ರೇಯಸ್ 16 (30ಎ, 6X2)
ಅರ್ಜುನ್ ಬಿ ಮೊಹ್ಸಿನ್ ಖಾನ್ 32 (29ಎ, 4X3, 6X1)
ವಿಶು ಎಲ್‌ಬಿಡಬ್ಲ್ಯು ಶ್ರೇಯಸ್ 5 (14ಎ)
ಮನನ್ ವೋಹ್ರಾ ಔಟಾಗದೇ 14 (22ಎ, 4X1)
ನಿಖಿಲ್ ಸಿ ಶ್ರೀಜಿತ್ ಬಿ ಶ್ರೇಯಸ್ 1 (11ಎ)
ಇತರೆ: 4 (ಬೈ4)
ವಿಕೆಟ್ ಪತನ: 1-41 (ಅರ್ಜುನ್ ಆಜಾದ್; 8.4), 2-53 (ಶಿವಂ ಬಾಂಭ್ರಿ; 11.3), 3-58 (ವಿಶು; 13.3), 4-72 (ನಿಖಿಲ್ ಠಾಕೂರ್; 17.4).
ಬೌಲಿಂಗ್: ವಿದ್ವತ್ ಕಾವೇರಪ್ಪ 2-1-4-0; ವಿದ್ಯಾಧರ ಪಾಟೀಲ 4-1-23-0; ಮೊಹ್ಸಿನ್ ಖಾನ್ 6-0-23-1; ಶ್ರೇಯಸ್ ಗೋಪಾಲ್ 4.4-0-18-3; ಶಿಖರ್ ಶೆಟ್ಟಿ 1-1-0-0

‘ಟ್ರೋಫಿ ಗೆಲ್ಲುವ ಗುರಿ’: ‘ದೀರ್ಘ ಇನಿಂಗ್ಸ್ ಆಡಲು ನಿರ್ಧರಿಸಿದ್ದೆ. ಹೀಗಾಗಿ ಟೂರ್ನಿಯಲ್ಲಿ ಎರಡನೇ ದ್ವಿಶತಕ ಗಳಿಸಲು ಸಾಧ್ಯವಾಯಿತು. ತಂಡ ಬೃಹತ್ ಮೊತ್ತ ಗಳಿಸಲು ಕೊಡುಗೆ ನೀಡಿದ್ದಕ್ಕೆ ಖುಷಿಯಾಗಿದೆ’ ಎಂದು ಸ್ಮರಣ್ ರವಿಚಂದ್ರನ್ ಹೇಳಿದರು.

‘ಕರ್ನಾಟಕ ತಂಡ ಕಳೆದ ಒಂದು ದಶಕದಿಂದ ರಣಜಿ ಟ್ರೋಫಿ ಗೆದ್ದಿಲ್ಲ. ಈ ಬಾರಿಯಾದರೂ ಟ್ರೋಫಿ ಗೆಲ್ಲಬೇಕು ಎಂಬುದು ನಮ್ಮ ಗುರಿ. ಅದರತ್ತ ಹೆಚ್ಚು ಗಮನ ಹರಿಸಿದ್ದೇವೆ’ ಎಂದರು.

ಭಾರತ ತಂಡದಲ್ಲಿ ಪದೇ ಪದೇ ಬದಲಾವಣೆ

ಆಟಗಾರರಲ್ಲಿ ಹೆಚ್ಚಿದ ಅಭದ್ರತೆ

• ಮಧು ಜವಳಿ

ಕೋಲ್ಕತ್ತ: ಭಾರತ ತಂಡದ ಸಾರಥ್ಯ ವಹಿಸಿದ್ದ ಅವಧಿಯಲ್ಲಿ ಸಾಕಷ್ಟು ಹೆಸರು ಮಾಡಿದ್ದರೂ ವಿರಾಟ್ ಕೊಹ್ಲಿ ಅವರು ಒಂದು ವಿಷಯದಲ್ಲಿ ಅಪಥ್ಯವಾಗುವ ನಡೆ ಅನುಸರಿಸಿದ್ದರು. ಅದು–ನಾಯಕರಾಗಿದ್ದ 38 ಟೆಸ್ಟ್‌ಗಳಲ್ಲಿ ಅವರು ಸತತ ಎರಡು ಪಂದ್ಯಗಳಲ್ಲಿ ಒಮ್ಮೆಯೂ ಒಂದೇ ತಂಡ ಉಳಿಸಿಕೊಂಡಿರಲಿಲ್ಲ.

ಪರಿಸ್ಥಿತಿಗೆ ಅನುಗುಣವಾಗಿ, ಎದುರಾಳಿ ತಂಡದ ಸಾಮರ್ಥ್ಯ, ದೌರ್ಬಲ್ಯಗಳನ್ನು ಗಮನಿಸಿ ತಂಡ ಆಯ್ಕೆ ಮಾಡುವುದು ಸಾಮಾನ್ಯ. ಆದರೆ ಕೊಹ್ಲಿ ಅವರ ವರ್ತನೆ ಆಟಗಾರರಲ್ಲಿ ಪ್ರಶ್ನಾರ್ಥಕ ಚಿಹ್ನೆ ಮೂಡಿಸುತ್ತಿತ್ತು. ಕೆಲವೊಮ್ಮೆ ಅದು ಮೂಢನಂಬಿಕೆ ಎನಿಸಿದ್ದೂ ಇದೆ. ಇದರಿಂದ ಅವರ ಅವಧಿಯಲ್ಲಿ ಟೆಸ್ಟ್ ಪಂದ್ಯ ನಡೆಯುವ ಮೊದಲು ಅಭಿಮಾನಿಗಳಿಗೆ ಕುತೂಹಲ ಇರುತ್ತಿತ್ತು.

ಈಗ ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಅವರ ಅವಧಿಯಲ್ಲೂ ಆಟಗಾರರು ತಮ್ಮ ಮುಂದಿನ ಪಂದ್ಯ ಅಥವಾ ಸರಣಿ ಯಾವಾಗ ಎಂದು ಆತಂಕದಿಂದ ಕಾಯುವಂತಾಗಿದೆ.

ವರ್ಷದಿಂದ ಆಡುವ ಇಲೆವೆನ್‌ನಲ್ಲಿ ಪದೇ ಪದೇ ಬದಲಾವಣೆಗಳಾಗುತ್ತಿವೆ. ಆಟಗಾರರನ್ನು ಆಯ್ಕೆ ಮಾಡಲಾಗುತ್ತದೆ; ಬೆಂಚ್‌ಗೆ ಸೀಮಿತಗೊಳಿಸಲಾಗುತ್ತಿದೆ. ಸ್ಪಷ್ಟತೆಯಿಲ್ಲದೇ ಕೈಬಿಡಲಾಗುವ ಪರಿಪಾಟ ಹೆಚ್ಚುತ್ತಿದೆ. ಹಾಗೆ ನೋಡಿದರೆ, ಗಂಭೀರ್ ಮತ್ತು ಅಗರಕರ್ ಇಬ್ಬರೂ ಅಂತರರಾಷ್ಟ್ರೀಯ ಆಟಗಾರರಾಗಿ ಹೆಸರು ಮಾಡಿದವರು. ಆದರೆ ಅವರು ತಮ್ಮ ಪಾತ್ರಗಳನ್ನು ನಿರ್ವಹಿಸುತ್ತಿರುವ ರೀತಿ ನೋಡಿದರೆ, ತಂಡದೊಳಗಿರುವ ಮತ್ತು ತಂಡದ ಕದ ತಟ್ಟುತ್ತಿರುವ ಆಟಗಾರರಿಗೆ ಸ್ಥಾನದ ಖಚಿತತೆ ಇಲ್ಲ. ಭವಿಷ್ಯದಲ್ಲಿ ತಮ್ಮ ಸ್ಥಾನವೇನು ಎಂಬ ಅಭದ್ರತೆಯೂ ಕಾಡುತ್ತಿದೆ. ತಂಡದ ಆಡಳಿತ ನೀಡುವ ಸಂದೇಶಗಳೂ ಒಂದೇ ರೀತಿ ಇರುವುದಿಲ್ಲ.

ನಿತೀಶ್ ಕುಮಾರ್ ರೆಡ್ಡಿ ಅವರು ವೇಗದ ಬೌಲಿಂಗ್ ಆಲ್‌ರೌಂಡರ್ ಆಗಿ ಸ್ಥಾನ ಪಡೆದಿದ್ದರು. ಆದರೆ ಅವರಿಗೆ ಯಾವುದೇ ವಿಭಾಗಗಳಲ್ಲಿ ಪಾತ್ರ ನಿಭಾಯಿಸುವ ಅವಕಾಶ ದೊರೆಯಲಿಲ್ಲ. ಬೌಲಿಂಗ್ ಕೋಚ್ ಮಾರ್ನೆ ಮಾರ್ಕೆಲ್ ಅವರ ಬಗ್ಗೆ ಅನುಕಂಪ ತೋರಿದ್ದರು. ಆದರೆ ಗಂಭೀರ್ ಅಂಥ ವ್ಯಕ್ತಿಯಲ್ಲ. ತಂಡದ ಭಾಗವಾಗಿದ್ದರೂ ಅದರಿಂದ ಬೆಳವಣಿಗೆ ಕಂಡುಕೊಳ್ಳಬಹುದು ಎನ್ನುವ ಅನಿಸಿಕೆಯುಳ್ಳವರು.

ಪರಿಣತ ಸ್ಪಿನ್ನರ್ ಕುಲದೀಪ್ ಯಾದವ್ ಅವರಿಗೆ ಇಂಗ್ಲೆಂಡ್‌ನಲ್ಲಿ ನಡೆದ ಟೆಸ್ಟ್ ಸರಣಿಯಲ್ಲಿ ಅವಕಾಶವೇ ಸಿಗಲಿಲ್ಲ. ಅವರನ್ನು ನಿರ್ಲಕ್ಷಿಸಿ, ಎರಡು ಮತ್ತು ನಾಲ್ಕನೇ ಟೆಸ್ಟ್‌ಗಳಲ್ಲಿ ದಿಢೀರನೇ ಶಾರ್ದೂಲ್ ಠಾಕೂರ್ ಅವರಿಗೆ ಅವಕಾಶ ಕೊಟ್ಟರೂ, ಸರಿಯಾಗಿ ದುಡಿಸಿಕೊಳ್ಳಲಿಲ್ಲ.

ತಂಡದ ಚಿಂತಕರ ಚಾವಡಿಯ ಯೋಚನಾ ಕ್ರಮ ಮತ್ತು ನಿರ್ಧಾರಗಳು ನಿರಂಕುಶ ರೀತಿಯಲ್ಲಿದ್ದು, ಆಟಗಾರರಲ್ಲಿ ಅನಿಶ್ಚಿತತೆಯ ವಾತಾವರಣ ಮೂಡಿಸಿದೆ. 34ರ ವಯಸ್ಸಿನಲ್ಲಿ ಕರುಣ್ ನಾಯರ್ ಅವರು ದೀರ್ಘಾವಧಿಯ ಆಯ್ಕೆಯಾಗಿರ–ಲಿಲ್ಲ. ಆದರೆ ಅವರನ್ನು ಆಡಿಸುವಾಗಲೂ ಅವರ ಕ್ರಮಾಂಕಗಳನ್ನು ಪದೇ ಪದೇ ಬದಲಾಯಿಸಲಾಯಿತು. ಕೊನೆಯ ಅವಕಾಶದಲ್ಲಿ ಅವರು ಅರ್ಧ ಶತಕ ಹೊಡೆದರೂ ಅಷ್ಟರಲ್ಲಿ ತಡವಾಗಿತ್ತು. ರಾಜ್ಯ ತಂಡಕ್ಕೆ ಮರಳಿದ ನಂತರ ಅವರು ಮತ್ತೆ ಶತಕಗಳನ್ನು ಬಾರಿಸುತ್ತಿದ್ದಾರೆ.

ಸಾಯಿ ಸುದರ್ಶನ್ ಕಥೆ ಬೇರೆಯಲ್ಲ. ಅವರು ಮೂರನೇ ಕ್ರಮಾಂಕಕ್ಕೆ ಯೋಗ್ಯ ಆಟಗಾರ ಎಂದು ಅವರಿಗೆ ವೆಸ್ಟ್ ಇಂಡೀಸ್ ವಿರುದ್ಧದ ಈ ಹಿಂದಿನ ಸರಣಿಯವರೆಗೆ ಅವಕಾಶ ನೀಡಲಾಯಿತು. ಆದರೆ ಕೋಲ್ಕತ್ತದಲ್ಲಿ ಅವರು ಆಡುವ ತಂಡದಿಂದ ಹೊರಬಿದ್ದರು. ಕೋಲ್ಕತ್ತದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಮೊದಲ ಟೆಸ್ಟ್‌ನಲ್ಲಿ ತಂಡದ ಆಡಳಿತವು ನಾಲ್ವರು ಸ್ಪಿನ್ನರ್‌ಗಳನ್ನು ಆಡಿಸಲು ತೀರ್ಮಾನಿಸಿತು. ನಾಲ್ಕನೇ ಸ್ಪಿನ್ನರ್–ಆಲ್‌ರೌಂಡರ್ ಆಗಿ ಅವಕಾಶ ಪಡೆದ ವಾಷಿಂಗ್ಟನ್ ಸುಂದರ್ ಅವರು ಇಡೀ ಪಂದ್ಯದಲ್ಲಿ ಮಾಡಿದ್ದು ಒಂದೇ ಓವರ್! ಬಯಸಿದಂಥ ಪಿಚ್‌ನಲ್ಲಿ ನಾಲ್ವರು ಸ್ಪಿನ್ನರ್‌ಗಳನ್ನು ನೀಡಿದರೆ, ನಾಯಕನಾದವರು ಏನು ತಾನೇ ಮಾಡಬಹುದು?

ಇನ್ನು ಸರ್ಫರಾಜ್ ಖಾನ್ ಅವರನ್ನು ಆಸ್ಟ್ರೇಲಿಯಾ ಪ್ರವಾಸದಲ್ಲಿ ಒಂದೂ ಪಂದ್ಯ ಆಡಿಸದೇ ಹೊರಗಿಡಲಾಯಿತು. ಶಮಿ ಅವರ ಅಂತರರಾಷ್ಟ್ರೀಯ ಪುನರಾಗಮನ ಬಗ್ಗೆಯೂ ತಂಡ ಏನೂ ಹೇಳುತ್ತಿಲ್ಲ. ಆಗುಹೋಗುಗಳು ಒಬ್ಬಿಬ್ಬರ ಮರ್ಜಿಯಲ್ಲಿದ್ದರೆ, ಅದು ಭಾರತದ ಕ್ರಿಕೆಟ್ ಭವಿಷ್ಯದ ದೃಷ್ಟಿಯಿಂದ ಸಕಾರಾತ್ಮಕ ಬೆಳವಣಿಗೆಯಲ್ಲ.



ಭಾರತ ತಂಡದ ಕೋಚ್ ಗಂಭೀರ್, ನಾಯಕ ಗಿಲ್ ಪಿಟಿಐ ಸಂಗ್ರಹ ಚಿತ್ರ

ಎರಡನೇ ಟೆಸ್ಟ್: ಗಿಲ್ ಅನುಮಾನ

ಕೋಲ್ಕತ್ತ (ಪಿಟಿಐ): ಭಾರತ ತಂಡದ ನಾಯಕ ಶುಭಮನ್ ಗಿಲ್ ಅವರು ಗುವಾಹಟಿಯಲ್ಲಿ ನಡೆಯಲಿರುವ ಎರಡನೇ ಟೆಸ್ಟ್ ಪಂದ್ಯದಲ್ಲಿ ಆಡುವುದು ಅನುಮಾನವಾಗಿದೆ. ಅವರು ತಂಡದ ಜೊತೆ ಬುಧವಾರ ಗುವಾಹಟಿಗೆ ಹೋಗುತ್ತಿಲ್ಲ ಎಂದು ಬಂಗಾಳ ಕ್ರಿಕೆಟ್ ಸಂಸ್ಥೆ ಮೂಲಗಳು ದೃಢಪಡಿಸಿವೆ.

‘ಗಿಲ್ ಅವರಿಗೆ ಕತ್ತು ನೋವು ತೀವ್ರವಾಗಿದೆ. ಅವರು ‘ನೆಕ್ ಕಾಲರ್’ ಬಳಕೆ ಮುಂದುವರಿಸಿಕೊಂಡು ಹೋಗಬೇಕಾಗಿದೆ’ ಎಂದು ಮೂಲವೊಂದು ಪಿಟಿಐಗೆ ತಿಳಿಸಿದೆ. ‘ಅವರಿಗೆ ಮೂರರಿಂದ ನಾಲ್ಕು ದಿನಗಳ ವಿಶ್ರಾಂತಿ ಪಡೆಯಲು ಮತ್ತು ವಿಮಾನ ಪ್ರಯಾಣ ಮಾಡದಂತೆ ಸಲಹೆ ನೀಡಲಾಗಿದೆ. ಈ ಸನ್ನಿವೇ–ಶದಲ್ಲಿ ಅವರು ಗುವಾಹಟಿಗೆ ಪ್ರಯಾಣ ಮಾಡುವುದು ಸೂಕ್ತವಲ್ಲ. ಆದರೆ ನಾವು ಅವರ ಸ್ಥಿತಿಯ ಮೇಲೆ ನಿಗಾ ಇಟ್ಟಿದ್ದೇವೆ. ಮಂಗಳವಾರ ಸ್ಪಷ್ಟ ಚಿತ್ರಣ ಸಿಗಬಹುದು’ ಎಂದೂ ತಿಳಿಸಿದೆ.

ಶನಿವಾರ ಎರಡನೇ ಟೆಸ್ಟ್ ಆರಂಭವಾಗಲಿದೆ. ಗಿಲ್ ಆಡದಿದ್ದಲ್ಲಿ ಬಿ.ಸಾಯಿ ಸುದರ್ಶನ್ ಅಥವಾ ದೇವದತ್ತ ಪಡಿಕ್ಕಲ್ ಅವಕಾಶ ಪಡೆಯಲಿದ್ದಾರೆ.

ಪ್ರಶಸ್ತಿ ಮೇಲೆ ಸಾತ್ವಿಕ್–ಚಿರಾಗ್ ಕಣ್ಣು

ಸಿಡ್ನಿ (ಪಿಟಿಐ): ಭಾರತದ ಅಗ್ರಮಾನ್ಯ ಡಬಲ್ಸ್ ಆಟಗಾರರಾದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಅವರು ಮಂಗಳವಾರ ಆರಂಭವಾಗಲಿರುವ ಆಸ್ಟ್ರೇಲಿಯನ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ವಿಶ್ವಾಸದಲ್ಲಿದ್ದಾರೆ.

ಆದರೆ, ಈ ವರ್ಷ ಅಷ್ಟೇನೂ ಗಮನಾರ್ಹ ಪ್ರದರ್ಶನ ನೀಡದ ಭಾರತದ ಸಿಂಗಲ್ಸ್ ಆಟಗಾರರು ತಮ್ಮ ಆಟವನ್ನು ಸುಧಾರಿಸಿಕೊಳ್ಳುವ ಛಲದಲ್ಲಿದ್ದಾರೆ.

ಒಟ್ಟು ₹4.21 ಕೋಟಿ ಬಹುಮಾನ ಮೊತ್ತವನ್ನು ಒಳಗೊಂಡಿರುವ ಈ ಟೂರ್ನಿಯಲ್ಲಿ ಸಾತ್ವಿಕ್–ಚಿರಾಗ್ ಜೋಡಿಯು ಅಗ್ರ ಶ್ರೇಯಾಂಕ ಪಡೆದಿದೆ. ಈ ಜೋಡಿಯು ತೈವಾನ್‌ನ ಚಾಂಗ್ ಕೊ–ಷಿ ಹಾಗೂ ಪೊ ಲಿ–ವಿ ಅವರನ್ನು ಎದುರಿಸುವುದರೊಂದಿಗೆ ಅಭಿಯಾನ ಆರಂಭಿಸಲಿದೆ.



ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ

ಸಿಂಗಲ್ಸ್ ವಿಭಾಗದಲ್ಲಿ ಅನುಭವಿ ಲಕ್ಷ್ಯ ಸೇನ್ ಅವರು ಮೊದಲ ಸುತ್ತಿನಲ್ಲಿ ಸು ಲಿ ಯಾಂಗ್ (ತೈವಾನ್) ವಿರುದ್ಧ ಕಣಕ್ಕಿಳಿಯಲಿದ್ದಾರೆ. ಎಚ್.ಎಸ್. ಪ್ರಣಯ್ ಅವರು ಕೆನಡಾದ ಬ್ರಯಾನ್ ಯಾಂಗ್ ವಿರುದ್ಧ ಹಾಗೂ ಕಿದಂಬಿ ಶ್ರೀಕಾಂತ್ ಅವರು ತೈವಾನ್‌ನ ಲಿನ್ ಷುನ್–ಯಿ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ. ಕರ್ನಾಟಕದ ಆಯುಷ್ ಶೆಟ್ಟಿ, ಮಲೇಷ್ಯಾದ ಜಸ್ಟಿನ್ ಹೋ ಎದುರು ಕಣಕ್ಕಿಳಿಯಲಿದ್ದಾರೆ.

ಕೆಎಸ್‌ಸಿಎ ಚುನಾವಣೆ ಪ್ರಕ್ರಿಯೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ನವೆಂಬರ್ 30ರಂದು ನಿಗದಿಯಾಗಿದ್ದ ಚುನಾವಣೆ ಪ್ರಕ್ರಿಯೆಯನ್ನು ಚುನಾವಣಾಧಿಕಾರಿ ಬಿ. ಬಸವರಾಜು ಅವರು ಡಿಸೆಂಬರ್ 30ಕ್ಕೆ ಮುಂದೂಡಿದ್ದಾರೆ.

‘ಸದಸ್ಯರಲ್ಲಿರುವ ಕೆಲವು ಸಂದೇಹಗಳನ್ನು ನಿವಾರಿಸದೇ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಯನ್ನು ನಡೆಸಲು ಸಾಧ್ಯವಿಲ್ಲ. ಸದಸ್ಯರ ನಡುವೆ ಯಾವುದೇ ಗೊಂದಲಕ್ಕೆ ಅವಕಾಶ ನೀಡದೇ, ಕಾನೂನಿನ ಪ್ರಕಾರ ನ್ಯಾಯಸಮ್ಮತ ಮತ್ತು ಮುಕ್ತ ರೀತಿಯಲ್ಲಿ ಚುನಾವಣೆಯನ್ನು ನಡೆಸುವುದು ನನ್ನ ಜವಾಬ್ದಾರಿಯಾಗಿದೆ’ ಎಂದು ಬಸವರಾಜು ಅವರು ಕೆಎಸ್‌ಸಿಎಗೆ ಸೋಮವಾರ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

‘ಕೆಎಸ್‌ಸಿಎಯಲ್ಲಿ ಪದಾಧಿಕಾರಿಗಳ ಅಧಿಕಾರಾವಧಿ ನಿಯಮವನ್ನು ರಾಜ್ಯ ಕ್ರಿಕೆಟ್ ಸಂಸ್ಥೆಯು ತಪ್ಪಾಗಿ ವ್ಯಾಖ್ಯಾನಿಸಿದೆ’ ಎಂದು ಆಕ್ಷೇಪವೆತ್ತಿದ್ದ ಕೆಎಸ್‌ಸಿಎ ಸದಸ್ಯ ಎ.ವಿ. ಶಶಿಧರ್ ಅವರು ಸಿವಿಲ್ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರು. ನಿಯಮ ಜಾರಿಗೆ ಮಧ್ಯಂತರ ತಡೆಯಾಜ್ಞೆಯನ್ನೂ (ಪ್ರತಿವಾದಿಗಳ ಗೈರುಹಾಜರಿಯಲ್ಲಿ) ಪಡೆದಿದ್ದರು.

ಈ ತಡೆಯಾಜ್ಞೆಯನ್ನು ಪ್ರಶ್ನಿಸಿದ್ದ ಕೆಎಸ್‌ಸಿಎ ಹೈಕೋರ್ಟ್ ಮೆಟ್ಟಿಲೇರಿತ್ತು. ಸಿವಿಲ್ ನ್ಯಾಯಾಲಯದ ಆದೇಶವನ್ನು ಸೋಮವಾರ ಹೈಕೋರ್ಟ್ ತಳ್ಳಿಹಾಕಿತು. ಇದರ ಬೆನ್ನಲ್ಲೇ ಚುನಾವಣಾಧಿಕಾರಿಗೆ ಪತ್ರ ಬರೆದಿರುವ ಕೆಎಸ್‌ಸಿಎ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭೇಂದು ಘೋಷ್ ಅವರು, ‘ಚುನಾವಣೆಯನ್ನು ಪೂರ್ವನಿಗದಿಯಂತೆಯೇ ನಡೆಸಬೇಕು. ಅಭ್ಯರ್ಥಿಗಳ ನಾಮಪತ್ರ ಪರಿಶೀಲನೆಯ ದಿನಾಂಕವನ್ನು ಮಾತ್ರ ಬದಲಿಸಬೇಕು’ ಎಂದು ಮನವಿ ಮಾಡಿದ್ದಾರೆ.

ಕಣದಲ್ಲಿರುವ ಟೀಮ್ ಬ್ರಿಜೇಶ್ ಬಣ ಮತ್ತು ವೆಂಕಟೇಶ್ ಪ್ರಸಾದ್ ಅವರ ಗೇಮ್ ಚೇಂಜರ್ಸ್ ತಂಡಗಳು ಚುನಾವಣೆಯ ಮುಂದೂಡಿಕೆಯ ಕುರಿತು ಅಸಮಾಧಾನ ವ್ಯಕ್ತಪಡಿಸಿವೆ. ಪೂರ್ವ ನಿಗದಿಯಂತೆ ಚುನಾವಣೆ ಪ್ರಕ್ರಿಯೆ ನಡೆಸಬೇಕು ಎಂದೂ ಆಗ್ರಹಿಸಿವೆ.

ಟೆಸ್ಟ್ ಕ್ರಿಕೆಟ್‌ನ ನಾಶ: ಹರಭಜನ್ ಸಿಂಗ್ ಆಕ್ರೋಶ



ಹರಭಜನ್

ನವದೆಹಲಿ (ಪಿಟಿಐ): ಈಡನ್‌ಗಾರ್ಡನ್‌ನಲ್ಲಿ ಬಳಕೆಯಾದ ಪೂರ್ಣವಾಗಿ ಸಿದ್ಧಪಡಿಸದಂಥ ಮತ್ತು ಬೌಲರ್ ಸ್ನೇಹಿ ಪಿಚ್‌ಗಳು, ಆಟಗಾರರ ನೈಜ ಅಭಿವೃದ್ಧಿಗೆ ತಡೆಯಾಗುತ್ತವೆ ಎಂದು ಭಾರತ ತಂಡದ ಮಾಜಿ ಸ್ಪಿನ್ನರ್ ಹರಭಜನ್ ಸಿಂಗ್ ಅಭಿಪ್ರಾಯಪಟ್ಟಿದ್ದಾರೆ. ‘ಇದು ಟೆಸ್ಟ್ ಕ್ರಿಕೆಟ್‌ನ ವಿನಾಶ’ ಎಂದೂ ಟೀಕಿಸಿದ್ದಾರೆ.

ಇಂಥ ಪಿಚ್ ಸಿದ್ಧಪಡಿಸಿ ‘ಅವರು ಟೆಸ್ಟ್ ಕ್ರಿಕೆಟ್‌ಅನ್ನು ಸಂಪೂರ್ಣ ನಾಶಗೊಳಿಸಿದ್ದಾರೆ. ರೆಸ್ಟ್ ಇನ್ ಪೀಸ್ (ಚಿರವಿಶ್ರಾಂತಿ) ಟೆಸ್ಟ್ ಕ್ರಿಕೆಟ್’ ಎಂದು ಸಿಂಗ್ ಯೂಟ್ಯೂಬ್ ಚಾನೆಲ್‌ನಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಹಲವು ವರ್ಷಗಳಿಂದ ಈ ರೀತಿಯಾಗುತ್ತಿದೆ. ಇದನ್ನು ನೋಡುತ್ತ ಬಂದಿದ್ದೇನೆ. ತಂಡ ಗೆಲ್ಲುತ್ತಿದ್ದ ಕಾರಣ, ಬೌಲರ್‌ಗಳು ವಿಕೆಟ್ ಪಡೆಯುತ್ತಿದ್ದ ಕಾರಣ ಯಾರೂ ಇದರ ವಿರುದ್ಧ ಮಾತನಾಡುತ್ತಿಲ್ಲ. ಇಂಥ ಪಿಚ್‌ಗಳಲ್ಲಿ ವಿಕೆಟ್‌ಗಳನ್ನು ಪಡೆಯುವ ಮೂಲಕ ಬೌಲರ್ ಮಹಾನ್ ಎನಿಸಿಕೊಳ್ಳುತ್ತಿದ್ದಾರೆ’ ಎಂದು ಲೇವಡಿ ಮಾಡಿದ್ದಾರೆ.

ಭಾರತ ಇದೇ 22ರಿಂದ ಗುವಾಹಟಿಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಎರಡನೇ ಟೆಸ್ಟ್ ಪಂದ್ಯ ಆಡಲಿದೆ.



ಎಟಿಪಿ ಫೈನಲ್ಸ್ ಟ್ರೋಫಿ ಗೆದ್ದ ಇಟಲಿಯ ಯಾನಿಕ್ ಸಿನ್ನರ್ (ಬಲ) ಮತ್ತು ರನ್ನರ್ ಅಪ್ ಕಾರ್ಲೋಸ್ ಅಲ್ಕರಾಜ್ ಎಪಿ/ಪಿಟಿಐ ಚಿತ್ರ

ಎಟಿಪಿ ಫೈನಲ್ಸ್ ಟ್ರೋಫಿ ಉಳಿಸಿಕೊಂಡ ಸಿನ್ನರ್

ಟ್ಯೂರಿನ್, ಇಟಲಿ (ಎಎಫ್‌ಪಿ): ಎರಡನೇ ಶ್ರೇಯಾಂಕದ ಯಾನಿಕ್ ಸಿನ್ನರ್ ಅವರು ಭಾನುವಾರ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಅಗ್ರ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ ಅವರನ್ನು ಮಣಿಸಿ ಎಟಿಪಿ ಫೈನಲ್ಸ್ ಟ್ರೋಫಿಯನ್ನು ತನ್ನಲ್ಲೇ ಉಳಿಸಿಕೊಂಡರು.

2024ರ ಚಾಂಪಿಯನ್ ಆಗಿರುವ ಸಿನ್ನರ್ 7-6 (4), 7-5ರ ನೇರ ಸೆಟ್‌ಗಳಿಂದ ಸ್ಪೇನ್ ಆಟಗಾರನನ್ನು ಹಿಮ್ಮೆಟ್ಟಿಸಿದರು. ಬದ್ಧ ಎದುರಾಳಿಗಳ ಈ ಸೆಣಸಾಟದಲ್ಲಿ ತವರಿನ ಪ್ರೇಕ್ಷಕರ ಮುಂದೆ ಇಟಲಿಯ ಆಟಗಾರ ಪ್ರಭುತ್ವ ಸಾಧಿಸಿದರು.

ಉತ್ತಮ ಲಯದಲ್ಲಿರುವ ಉಭಯ ಆಟಗಾರರಿಗೆ ಪ್ರಸಕ್ತ ಋತುವಿನಲ್ಲಿ ಇದು ಆರನೇ ಬಾರಿ ಮುಖಾಮುಖಿಯಾಗಿತ್ತು. ಅದರಲ್ಲಿ ನಾಲ್ಕು ಬಾರಿ ಅಲ್ಕರಾಜ್ ಗೆದ್ದರೆ, ಎರಡು ಸಲ ಇಟಲಿಯ ಆಟಗಾರ ಗೆಲುವು ಸಾಧಿಸಿದಂತಾಗಿದೆ. ಒಟ್ಟಾರೆ ಇದು 16ನೇ ಮುಖಾಮುಖಿಯಾಗಿದ್ದು, ಅದರಲ್ಲಿ 10 ಬಾರಿ ಅಲ್ಕರಾಜ್ ಜಯ ಸಾಧಿಸಿದ್ದಾರೆ.

24 ವರ್ಷದ ಸಿನ್ನರ್ ಅವರು ಕಳೆದ ಆವೃತ್ತಿಯಲ್ಲಿ ಅಮೆರಿಕದ ಟೇಲರ್ ಫ್ರಿಟ್ಜ್ ಅವರನ್ನು ಮಣಿಸಿ ಮೊದಲ ಬಾರಿ ಎಟಿಪಿ ಫೈನಲ್ ಟ್ರೋಫಿ ಗೆದ್ದುಕೊಂಡಿದ್ದರು. 22 ವರ್ಷದ ಅಲ್ಕರಾಜ್ ಟೂರ್ನಿಯಲ್ಲಿ ಇದೇ ಮೊದಲ ಬಾರಿ ಫೈನಲ್ ಪ್ರವೇಶಿಸಿದ್ದರು

ಡಬ್ಲ್ಯುಪಿಎಲ್: 26ರಂದು ವೇಳಾಪಟ್ಟಿ, ತಾಣಗಳು ಅಂತಿಮಗೊಳ್ಳುವ ನಿರೀಕ್ಷೆ

ಮುಂಬೈ (ಪಿಟಿಐ): ಮುಂದಿನ ಮಹಿಳಾ ಪ್ರೀಮಿಯರ್ ಲೀಗ್‌ನ ವೇಳಾಪಟ್ಟಿ ಮತ್ತು ಪಂದ್ಯಗಳ ತಾಣಗಳನ್ನು ಇದೇ 26ರಂದು ಅಂತಿಮಗೊಳಿಸುವ ನಿರೀಕ್ಷೆಯಿದೆ.

27ರಂದು ನವದೆಹಲಿಯಲ್ಲಿ ಮೆಗಾ ಹರಾಜು ಪ್ರಕ್ರಿಯೆ ನಡೆಯಲಿದೆ. ಅದಕ್ಕೂ ಮುನ್ನ ದಿನ ಬಿಸಿಸಿಐ ಆಡಳಿತ ಸಮಿತಿ ಸಭೆ ಸೇರಿ ವೇಳಾಪಟ್ಟಿ ಮತ್ತು ತಾಣಗಳನ್ನು ಅಂತಿಮಗೊಳಿಸಲಿದೆ.

ಮುಂದಿನ ಫೆಬ್ರುವರಿ ಮತ್ತು ಮಾರ್ಚ್‌ನಲ್ಲಿ ಭಾರತ ಮತ್ತು ಶ್ರೀಲಂಕಾ ಜಂಟಿ ಆತಿಥ್ಯದಲ್ಲಿ ಪುರುಷರ ಟಿ20 ವಿಶ್ವಕಪ್ ನಡೆಯಲಿದೆ. ಅದರ ನಂತರ ಎರಡು ತಿಂಗಳು ಐಪಿಎಲ್ ಟೂರ್ನಿ ನಡೆಯಲಿರುವುದರಿಂದ ಈ ಬಾರಿ ಡಬ್ಲ್ಯುಪಿಎಲ್ ಎಂದಿಗಿಂತ ಮುಂಚಿತವಾಗಿ ನಡೆಸುವ ನಿರೀಕ್ಷೆಯಿದೆ.

2026ರ ಡಬ್ಲ್ಯುಪಿಎಲ್ ಟೂರ್ನಿಯನ್ನು ಜನವರಿ 7ರಿಂದ ಫೆಬ್ರುವರಿ 3ರವರೆಗೆ ನವಿ ಮುಂಬೈ ಮತ್ತು ವಡೋದರಾದ ಕ್ರೀಡಾಂಗಣಗಳಲ್ಲಿ ಆಯೋಜಿಸುವ ನಿರೀಕ್ಷೆಯಿದೆ ಎಂದು ‘ಕ್ರಿಕ್‌ಬಜ್’ ವರದಿ ಮಾಡಿದೆ.

ಯುಪಿ ವಾರಿಯರ್ಸ್ ತಂಡವು ₹ 14.5 ಕೋಟಿಗಳ ಅತಿ ಹೆಚ್ಚು ಮೊತ್ತದೊಂದಿಗೆ ಹರಾಜಿನಲ್ಲಿ ಭಾಗವಹಿಸಲಿದೆ. ಗುಜರಾತ್ ಜೈಂಟ್ಸ್ ₹ 9 ಕೋಟಿ ಮೊತ್ತದೊಂದಿಗೆ ಎರಡನೇ ಸ್ಥಾನದಲ್ಲಿದೆ. ಆರ್‌ಸಿಬಿ ₹ 6.15 ಕೋಟಿ ಮೊತ್ತ ಹೊಂದಿದ್ದರೆ, ಮುಂಬೈ ಇಂಡಿಯನ್ಸ್ ₹ 5.75 ಕೋಟಿ, ಡೆಲ್ಲಿ ಕ್ಯಾಪಿಟಲ್ಸ್ ₹5.7 ಕೋಟಿ ಉಳಿಸಿಕೊಂಡಿವೆ.

ಕರ್ನಾಟಕ ತಂಡಕ್ಕೆ ಯಶಿಕಾ ನಾಯಕಿ

ಬೆಂಗಳೂರು: ಕಿಕ್‌ಸ್ಟಾರ್ಟ್ ಫುಟ್‌ಬಾಲ್ ಕ್ಲಬ್‌ನ ಯಶಿಕಾ ಹರಿಬಾಬು ಅವರು ಬುಧವಾರ ಆರಂಭವಾಗಲಿರುವ ಡಾ.ತಾಲಿಮೆರೆನ್ ಆವೊ ಜೂನಿಯರ್ ಬಾಲಕಿಯರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.

ತಂಡ ಇಂತಿದೆ: ಪ್ರಯುಕ್ತಾ ಆರ್ಯ, ಯಶಿಕಾ ಹರಿಬಾಬು (ನಾಯಕಿ), ಉಮಾ ಡಿ., ದಿವ್ಯಾ ಶ್ರೀರಾಮ್, ಚಾರ್ವಿ ಆನಂದ್, ಟಿ.ಚರಿಷ್ಮಾ ಲೂಯಿಸ್, ಪೂಜಿತಾ ರೆಡ್ಡಿ, ನೀದಾ ಶೇಖ್, ವೈಷ್ಣವಿ ಎಂ., ಸುಮೇರಾ ಸುಜಿತ್, ರಚನಾ ಡಿ.ಕೆ., ಸಿಂಚನಾ ವಿ.ಎನ್., ಅನನ್ಯಾ ಗುಪ್ತ, ಸಂಜನಾ ನಾಯರ್, ಕ್ಯಾಥರಿನ್ ಥಂಗಾ, ಶ್ರಾವಣಿ ಮಹಾಜನ್, ದಿಯಾ ಮೂರ್ತಿ, ಅವಿಕಾ ದೇಶಮುಖ್, ಮಮತಾ ಎಂ. ಹಾಗೂ ಸುರ್ಖಾನೆ ಕ್ಷೇತ್ರಿಮಯೂನ್.

ರಾಯಲ್ಸ್ ತಂಡಕ್ಕೆ ಸಂಗಕ್ಕಾರ ಕೋಚ್



ನವದೆಹಲಿ (ಪಿಟಿಐ): ಶ್ರೀಲಂಕಾದ ದಿಗ್ಗಜ ಆಟಗಾರ ಕುಮಾರ ಸಂಗಕ್ಕಾರ ಅವರು ರಾಜಸ್ಥಾನ ರಾಯಲ್ಸ್ ತಂಡದ ಮುಖ್ಯ ಕೋಚ್ ಆಗಿ ಮರುನೇಮಕಗೊಂಡಿದ್ದಾರೆ.

ಸಂಗಕ್ಕಾರ ಅವರು 2021ರಿಂದ ರಾಜಸ್ಥಾನ ರಾಯಲ್ಸ್ ಫ್ರ್ಯಾಂಚೈಸಿಯ ನಿರ್ದೇಶಕರಾಗಿದ್ದು, 2026ರ ಆವೃತ್ತಿಯಲ್ಲಿ ಕೋಚ್ ಜವಾಬ್ದಾರಿಯನ್ನೂ ನಿಭಾಯಿಸಲಿದ್ದಾರೆ. ಫ್ರ್ಯಾಂಚೈಸಿಯು ಈ ಬಗ್ಗೆ ‘ಎಕ್ಸ್’ನಲ್ಲಿ ಸೋಮವಾರ ತಿಳಿಸಿದೆ.

ಸಂಗಕ್ಕಾರ ಅವರು 2021ರಿಂದ 2024ರ ವರೆಗೆ ಕೋಚ್ ಆಗಿಯೂ ಕಾರ್ಯನಿರ್ವಹಿಸಿದ್ದರು. ಕನ್ನಡಿಗ ರಾಹುಲ್ ದ್ರಾವಿಡ್ ಅವರು ಈ ವರ್ಷದ ಆಗಸ್ಟ್‌ನಲ್ಲಿ ರಾಯಲ್ಸ್ ತಂಡದ ಮುಖ್ಯ ಕೋಚ್ ಹುದ್ದೆಯನ್ನು ತೊರೆದಿದ್ದರು.

ಸಂಕ್ಷಿಪ್ತ ಸುದ್ದಿ

ಚೆಸ್ ಟೂರ್ನಿ ಪ್ರಣವ್‌ಗೆ ಪ್ರಶಸ್ತಿ



ಬೆಂಗಳೂರು: ಗ್ರ್ಯಾಂಡ್‌ಮಾಸ್ಟರ್ ಪ್ರಣವ್ ಆನಂದ್ ಅವರು ಕಿರ್ಗಿಸ್ತಾನದ ಬಿಷ್ಕೆಕ್‌ನಲ್ಲಿ ಭಾನುವಾರ ಮುಕ್ತಾಯಗೊಂಡ ‘ಪ್ರೆಸಿಡೆಂಟ್ಸ್ ಕಪ್’ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ಬೆಂಗಳೂರಿನ ಆಟಗಾರ 9 ಸುತ್ತುಗಳಿಂದ 7 ಪಾಯಿಂಟ್ಸ್ ಗಳಿಸಿ ಅಜೇಯ ಸಾಧನೆಯೊಡನೆ ವಿಜೇತರಾದರು.

19 ವರ್ಷದ ಪ್ರಣವ್ 5 ಪಂದ್ಯಗಳನ್ನು ಗೆದ್ದು, ನಾಲ್ಕನ್ನು ಡ್ರಾ ಮಾಡಿಕೊಂಡರು. 15 ದೇಶಗಳ 91 ಆಟಗಾರರು ಕಣದಲ್ಲಿ ದ್ದರು. ಸ್ಥಿರ ಮತ್ತು ಕೌಶಲದ ಆಟವಾಡಿದ ಅವರು ಟೂರ್ನಿಯುದ್ದಕ್ಕೂ ಮುನ್ನಡೆ ಸಾಧಿಸಿದ್ದರು.

ಅಗ್ರಶ್ರೇಯಾಂಕ ಪಡೆದಿದ್ದ ಅವರು ಚಾಂಪಿಯನ್‌ಷಿಪ್ ಟ್ರೋಫಿ ಜೊತೆ ₹8.87 ಲಕ್ಷ ಬಹುಮಾನ ಪಡೆದರು. ಎಂಟು ಮಂದಿ ಆಟಗಾರರು 6.5 ಅಂಕ ಗಳಿಸಿ ನಂತರದ ಎರಡರಿಂದ ಒಂಬತ್ತರವರೆಗಿನ ಸ್ಥಾನಗಳನ್ನು ಪಡೆದರು. ಭಾರತದ ಗ್ರ್ಯಾಂಡ್‌ಮಾಸ್ಟರ್‌ಗಳಾದ ಭರತ್ ಸುಬ್ರಮಣಿಯಮ್ ಎಚ್. ಮತ್ತು ಸಂಕಲ್ಪ್ ಗುಪ್ತಾ ಅವರು ಕ್ರಮವಾಗಿ ಆರು ಮತ್ತು ಎಂಟನೇ ಸ್ಥಾನಗಳನ್ನು ಪಡೆದರು.

ವಿಶ್ವ ಶೂಟಿಂಗ್: ಗುರುಪ್ರೀತ್ ಸಿಂಗ್‌ಗೆ ಬೆಳ್ಳಿ ಪದಕ

ಕೈರೊ (ಪಿಟಿಐ): ಒಲಿಂಪಿಯನ್ ಗುರುಪ್ರೀತ್ ಸಿಂಗ್ ಅವರು ಸೋಮವಾರ ಮುಕ್ತಾಯಗೊಂಡ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವ ಚಾಂಪಿಯನ್‌ಷಿಪ್ಸ್‌ನ ಪುರುಷರ 25 ಮೀ. ಸೆಂಟರ್ ಫೈರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸಿದರು.

ಅದರೊಂದಿಗೆ, 13 ಪದಕಗಳನ್ನು (3 ಚಿನ್ನ, 6 ಬೆಳ್ಳಿ, 4 ಕಂಚು) ಗೆದ್ದ ಭಾರತ ತಂಡವು ಪದಕಪಟ್ಟಿಯಲ್ಲಿ ಮೂರನೇ ಸ್ಥಾನದೊಂದಿಗೆ ಅಭಿಯಾನ ಮುಗಿಸಿತು. 21 ಪದಕ (12 ಚಿನ್ನ, 7 ಬೆಳ್ಳಿ, 2 ಕಂಚು) ಗೆದ್ದ ಚೀನಾ ಅಗ್ರಸ್ಥಾನ ಗಳಿಸಿದರೆ, ಕೊರಿಯಾ 14 ಪದಕಗಳೊಂದಿಗೆ (7 ಚಿನ್ನ, 3 ಬೆಳ್ಳಿ, 4 ಕಂಚು) ಎರಡನೇ ಸ್ಥಾನ ತನ್ನದಾಗಿಸಿಕೊಂಡಿತು.

ಸ್ಪರ್ಧೆಯಲ್ಲಿದ್ದ ಭಾರತದ ಮತ್ತೊಬ್ಬ ಶೂಟರ್ ಹರ್‌ಪ್ರೀತ್ ಸಿಂಗ್ (577 ಪಾಯಿಂಟ್ಸ್) ಒಂಬತ್ತನೇ ಸ್ಥಾನ ಪಡೆದು, ಪದಕ ಸುತ್ತಿಗೆ ಅರ್ಹತೆ ಗಳಿಸಲು ವಿಫಲರಾದರು.

ರೋಹಿತ್ ಶತಕ: ಕರ್ನಾಟಕಕ್ಕೆ ಮುನ್ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯಮ ಕ್ರಮಾಂಕದ ಬ್ಯಾಟರ್ ರೋಹಿತ್ ಎ.ಎ (101; 204ಎ, 11ಬೌಂಡರಿ) ಬಾರಿಸಿದ ಶತಕದ ನೆರವಿನಿಂದ ಕರ್ನಾಟಕ ತಂಡ 19 ವರ್ಷದೊಳಗಿನವರ ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಉತ್ತರಾಖಂಡ ವಿರುದ್ಧದ ಪಂದ್ಯದಲ್ಲಿ ಇನಿಂಗ್ಸ್ ಮುನ್ನಡೆ ಗಳಿಸಿದೆ.

ಇಲ್ಲಿನ ಆಲೂರಿನ ಕೆಎಸ್‌ಸಿಎ ಮೈದಾನದಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಆತಿಥೇಯರು 90 ಓವರ್‌ಗಳಲ್ಲಿ 235ರನ್ ಕಲೆಹಾಕಿದರು. ಉತ್ತರಾಖಂಡ ತಂಡವು ಪ್ರಥಮ ಇನಿಂಗ್ಸ್‌ನಲ್ಲಿ ಭಾನುವಾರ 81.2 ಓವರ್‌ಗಳಲ್ಲಿ 202ರನ್‌ಗಳನ್ನು ಗಳಿಸಿತ್ತು.

ಮೊದಲ ದಿನದಾಟದ ಅಂತ್ಯಕ್ಕೆ 16 ರನ್ ಗಳಿಸಿ 1 ವಿಕೆಟ್ ಕಳೆದುಕೊಂಡಿದ್ದ ರಾಜ್ಯ ತಂಡ, ಸೋಮವಾರದ ಮೊದಲ ಅವಧಿಯಲ್ಲಿ ಬೇಗನೆ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. 37 ರನ್ ಆಗುವಷ್ಟರಲ್ಲಿ ಆದೇಶ್ ಡಿ.ಅರಸ್ (7) ಮತ್ತು ಧ್ರುವ್ ಕೃಷ್ಣನ್ (5) ಪೆವಿಲಿಯನ್ ಸೇರಿದರು.

ಈ ಹಂತದಲ್ಲಿ ವೈಭವ್ ಶರ್ಮಾ (45; 107ಎ, 4ಬೌಂ) ಹಾಗೂ ನಾಯಕ ಮಣಿಕಂಠ ಶಿವಾನಂದ್ (24; 45 ಎ, 1ಬೌಂ) ತಂಡಕ್ಕೆ ಆಸರೆಯಾದರು. ನಾಲ್ಕನೇ ವಿಕೆಟ್‌ಗೆ 68 ರನ್‌ಗಳನ್ನು ಸೇರಿಸಿದರು. 31ನೇ ಓವರ್‌ನ ಮೊದಲ ಎಸೆತದಲ್ಲಿ ಮಣಿಕಂಠ ಔಟಾದರು. ಆಗ ಮೈದಾನಕ್ಕಿಳಿದ ದಾವಣಗೆರೆಯ ರೋಹಿತ್ ಜವಾಬ್ದಾರಿಯುತ ಇನಿಂಗ್ಸ್ ಕಟ್ಟಿದರು.



ರೋಹಿತ್

ಒಂದು ಹಂತದಲ್ಲಿ ರಾಜ್ಯ ತಂಡ 194 ರನ್‌ಗಳಿಗೆ 9 ವಿಕೆಟ್ ಕಳೆದುಕೊಂಡು ಇನಿಂಗ್ಸ್ ಹಿನ್ನಡೆಯ ಭೀತಿ ಎದುರಿಸಿತ್ತು. ಈ ಹಂತದಲ್ಲಿ ರೋಹಿತ್ ಕೆಚ್ಚೆದೆಯ ಆಟ ಆಡಿದರು. ಕೊನೆಯ ವಿಕೆಟ್‌ಗೆ ರತನ್ ಬಿ.ಆರ್ (ಔಟಾಗದೆ 3; 17 ಎ) ಜೊತೆ 41 ರನ್ ಸೇರಿಸಿ ಆತಿಥೇಯರ ಆತಂಕ ದೂರ ಮಾಡಿದರು. 90ನೇ ಓವರ್‌ನ ಕೊನೆಯ ಎಸೆತದಲ್ಲಿ ರೋಹಿತ್ ರನ್‌ಔಟ್ ಆದರು.

ಸಂಕ್ಷಿಪ್ತ ಸ್ಕೋರು: ಉತ್ತರಾಖಂಡ; ಮೊದಲ ಇನಿಂಗ್ಸ್: 81.2 ಓವರ್‌ಗಳಲ್ಲಿ 202. ಎರಡನೇ ಇನಿಂಗ್ಸ್: 1 ಓವರ್‌ನಲ್ಲಿ ವಿಕೆಟ್ ನಷ್ಟವಿಲ್ಲದೆ 0. ಕರ್ನಾಟಕ ಪ್ರಥಮ ಇನಿಂಗ್ಸ್: 90 ಓವರ್‌ಗಳಲ್ಲಿ 235 (ವೈಭವ್ ಶರ್ಮಾ 45, ಮಣಿಕಂಠ ಶಿವಾನಂದ್ 24, ರೋಹಿತ್ ಎ.ಎ. 101, ರೆಹಾನ್ ಮೊಹಮ್ಮದ್ 11; ಪ್ರಿಯಾಂಶು ಸಿಂಗ್ 44ಕ್ಕೆ3, ಚೇತನ್ ಸಿಂಗ್ 56ಕ್ಕೆ2, ಆಕಾಶ್ ಕುಮಾರ್ 55ಕ್ಕೆ2, ನಿಶು ಪಟೇಲ್ 28ಕ್ಕೆ2).

ವಿಶ್ವಕಪ್ ಚೆಸ್: ಡ್ರಾ ಆಟದಲ್ಲಿ ಅರ್ಜುನ್, ವೀ ಯಿ

ಪಣಜಿ (ಪಿಟಿಐ): ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆಯುವ ಯತ್ನದಲ್ಲಿರುವ ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ, ವಿಶ್ವಕಪ್ ಚೆಸ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಚೀನಾದ ವೀ ಯಿ ವಿರುದ್ಧ ಮೊದಲ ಕ್ಲಾಸಿಕಲ್ ಆಟವನ್ನು ಡ್ರಾ ಮಾಡಿಕೊಂಡರು. ದಿನದ ನಾಲ್ಕು ಮುಖಾಮುಖಿಗಳಲ್ಲಿ ಮೂರು ಡ್ರಾ ಆದವು.

ಉಜ್ಬೇಕಿಸ್ತಾನದ ನದಿರ್ಬೆಕ್ ಯಾಕುಬುಯೇವ್ ಅವರು ಮೊದಲ ಕ್ಲಾಸಿಕಲ್ ಆಟದಲ್ಲಿ ಜರ್ಮನಿಯ ಅಲೆಕ್ಸಾಂಡರ್ ಡೊನ್ಚೆಂಕೊ ಅವರನ್ನು ಸೋಲಿಸಿ 1-0 ಮುನ್ನಡೆ ಪಡೆದರು. ಡೊನ್ಚೆಂಕೊ ಈ ಟೂರ್ನಿಯಲ್ಲಿ ಅಮೋಘವಾಗಿ ಆಡಿ ಗಮನಸೆಳೆದಿದ್ದು, ಎಂಟರ ಘಟ್ಟದ ಮೊದಲ ಆಟದಲ್ಲಿ 44 ನಡೆಗಳಲ್ಲಿ ಸೋಲು ಕಂಡರು. ಮಂಗಳವಾರ ಎರಡನೇ ಆಟ ಡ್ರಾ ಆದರೂ ಉಜ್ಬೇಕ್ ಆಟಗಾರ ಸೆಮಿಫೈನಲ್ ತಲುಪಬಹುದು.

ಬಿಳಿ ಕಾಯಿಗಳಲ್ಲಿ ಆಡಿದ ಚೀನಾ ಆಟಗಾರ ಎದುರು ಅರ್ಜುನ್ 31 ನಡೆಗಳಲ್ಲಿ (59 ನಿಮಿಷಗಳಲ್ಲಿ) ಡ್ರಾ ಮಾಡಿಕೊಂಡು ಹಸ್ತಲಾಘವದೊಡನೆ ನಿರ್ಗಮಿಸಿದರು. ಮಹತ್ವದ ಘಟ್ಟವಾದ ಕಾರಣ ಉಭಯ ಆಟಗಾರರು ಯಾವುದೇ ಸಾಹಸಕ್ಕೆ (ರಿಸ್ಕ್) ಕೈಹಾಕಲಿಲ್ಲ. ಅರ್ಜುನ್ ನಿಖರತೆ ಶೇ 99.5 ಇದ್ದರೆ, ವೀ ಯಿ ಅವರೂ (ನಿಖರತೆ ಶೇ 99) ಹಿಂದೆ ಬೀಳಲಿಲ್ಲ.

ಉಜ್ಬೇಕಿಸ್ತಾನದ ಇನ್ನೊಬ್ಬ ಆಟಗಾರ ಜಾವೊಖಿರ್ ಸಿಂದರೋವ್ ಇನ್ನೊಂದು ಮುಖಾಮುಖಿಯಲ್ಲಿ ಮೆಕ್ಸಿಕೊದ ಹೊಸೆ ಎಡ್ವಾರ್ಡೊ ಮಾರ್ಟಿನೆಝ್ ಅಲ್ಕಂತಾರ ಜೊತೆ ಡ್ರಾ ಮಾಡಿಕೊಂಡರು. ಅಮೆರಿಕದ ಸ್ಯಾಮ್ ಶಂಕ್ಲಾಂಡ್ ಮತ್ತು ರಷ್ಯಾದ ಆ್ಯಂಡ್ರಿ ಇಸಿಪೆಂಕೊ ನಡುವಣ ಮೊದಲ ಆಟವೂ ಡ್ರಾ ಆಯಿತು.



ಚೀನಾದ ವೀ ಯಿ (ಎಡ) ಎದುರು ಆಡಿದ ಅರ್ಜುನ್ ಇರಿಗೇಶಿ ಫಿಡೆ ಚಿತ್ರ

22ರಂದು ಮಲ್ನಾಡ್ ಅಲ್ಟ್ರಾ ಮ್ಯಾರಥಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಕೃತಿಸೊಬಗಿನ ಚಿಕ್ಕಮಗಳೂರು ಸುತ್ತುಮುತ್ತಲ ಕಾಫಿ ತೋಟಗಳಲ್ಲಿ ನಡೆಯುವ 9ನೇ ವರ್ಷದ ಮಲ್ನಾಡ್ ಅಲ್ಟ್ರಾ ಮ್ಯಾರಥಾನ್ ಇದೇ ತಿಂಗಳ 22ರಂದು ನಡೆಯಲಿದೆ. ಚಿಕ್ಕಮಗಳೂರು ತಾಲ್ಲೂಕಿನ ಮಲ್ಲಂದೂರಿನಿಂದ ಈ ಸ್ಪರ್ಧೆ ಆರಂಭವಾಗಲಿದ್ದು 1200ಕ್ಕೂ ಹೆಚ್ಚು ಓಟಗಾರರು ಭಾಗವಹಿಸುವ ನಿರೀಕ್ಷೆಯಿದೆ.

ಚಿಕ್ಕಮಗಳೂರು ಗಾಲ್ಫ್ ಕ್ಲಬ್ (ಸಿಜಿಸಿ) ಪ್ರಾಯೋಜಿಸುತ್ತಿರುವ ಈ ಮ್ಯಾರಥಾನ್ 30 ಕಿ.ಮೀ., 50 ಕಿ.ಮೀ. ಮತ್ತು 100 ಕಿ.ಮೀ. (ಹಗಲು- ರಾತ್ರಿ ಅವಧಿ) ವಿಭಾಗದಲ್ಲಿ ನಡೆಯಲಿದೆ. ಸ್ಪರ್ಧೆಗಳು ಮಲ್ಲಂದೂರು ದೇವಸ್ಥಾನ ಮೈದಾನದಿಂದ ಬೆಳಿಗ್ಗೆ 6 ಗಂಟೆಗೆ ಆರಂಭವಾಗಲಿದ್ದು, ಅಲ್ಲಿಯೇ ಕೊನೆಗೊಳ್ಳಲಿದೆ.

ಈ ಮ್ಯಾರಥಾನ್ ವಿಭಿನ್ನ ರೀತಿಯದಾಗಿದ್ದು, ಮಧ್ಯ ನಿರ್ದಿಷ್ಟ ತಾಣದಲ್ಲಿ ಇಂತಿಷ್ಟೇ ಅವಧಿಯಲ್ಲಿ ಗುರಿತಲುಪಬೇಕಾಗುತ್ತದೆ. ಕಾಫಿ ತೋಟಗಳಲ್ಲಿ ಜೀಪುಗಳು ಸಂಚರಿಸುವಂಥ ಹಾದಿಯಲ್ಲಿ ಓಟಗಾರರು ಓಡಬೇಕಾಗುತ್ತದೆ. ಐಟಿಆರ್‌ಎ (ಇಂಟರ್‌ನ್ಯಾಷನಲ್ ಟ್ರೇಲ್ ರನ್ನಿಂಗ್ ಅಸೋಸಿಯೇಷನ್) ಮಾನ್ಯತೆಯನ್ನು ಈ ಮ್ಯಾರಥಾನ್ ಪಡೆದಿದೆ.

'ಪಶ್ಚಿಮ ಘಟ್ಟ ಉಳಿಸಲು ಓಟ' ಈ ಬಾರಿಯ ಧ್ಯೇಯವಾಕ್ಯವಾಗಿದೆ. ಜಿಲ್ಲೆ ಆರು ನದಿಗಳ (ತುಂಗಾ, ಭದ್ರಾ, ನೇತ್ರಾವತಿ, ಹೇಮಾವತಿ, ಯಗದಿ ಮತ್ತು ವೇದಾವತಿ) ಉಗಮ ಸ್ಥಾನವಾಗಿದ್ದು, ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ಮ್ಯಾರಥಾನ್‌ಗೆ ಕೈಜೋಡಿಸಿದ್ದೇವೆ' ಎಂದು ಸಿಜಿಸಿ ಸ್ಥಾಪಕರಾದ ಎ.ಬಿ.ಸುದರ್ಶನ್ 'ಪ್ರಜಾವಾಣಿ'ಗೆ ತಿಳಿಸಿದರು.